ವಿಶ್ವಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಹಂಸಗೀತೆ

ತ.ರಾ.ಸು

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಹಂಸಗೀತೆ

.(ಐತಿಹಾಸಿಕ ಕಾದಂಬರಿ)

ತ.ರಾ.ಸು

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**HAMSAGITE** : (A Historical Novel by **Ta.Ra.Su. [T.R. Subba Rao]** Published by **Manu Baligar,** Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧

ಪ್ರತಿಗಳು : ೧೦೦೦

ಪುಟಗಳು : ಥಾ + ೨೦೯

ಬೆಲೆ : ರೂ. ೫೫.೦೦

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಪ್ರಗತಿ ಪ್ರಿಂಟ್ ಕಮ್ಯೂನಿಕೇಷನ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೪೧೨೪೧೨೯

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ದಿನಾಂಕ ೧೬.೧೨.೨೦೧೦ ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಅರ್ಪಣೆ

ನನ್ನಲ್ಲಿ ಚಿತ್ರದುರ್ಗದ ಇತಿಹಾಸ
ಕೋಟೆಕೊತ್ತಲಗಳ ಬಗ್ಗೆ ಅಭಿಮಾನ ಮೂಡಿಸಿದ
ಚಿತ್ರದುರ್ಗಕ್ಕಾಗೇ ಬದುಕೆಂಬಂತೆ ಬಾಳಿದ
ಹಿರಿಯರೂ, ಇತಿಹಾಸ ಸಂಶೋಧನಪ್ರಸಕ್ತರೂ ಆದ

**ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ**

## ಎರಡು ಮಾತು
### (ಮೊದಲನೆಯ ಮುದ್ರಣ)

ನನ್ನ ಕಾದಂಬರಿಗಳನ್ನೋದಿ, ಮೆಚ್ಚಿದ ವಾಚಕವೃಂದದ ಉತ್ಸಾಹ ಈ ಹೊಸ ಕಾದಂಬರಿಯ ರಚನೆಗೆ ಪ್ರೇರೇಪಕ. ಸಂಗೀತಗಾರನೊಬ್ಬನ ಬಾಳಿನ ಹಂದರದ ಮೇಲೆ ಹಿಂದಿನ ಮತ್ತು ಇಂದಿನ ಸಂಸ್ಕೃತಿಯನ್ನು ನಾನಿಲ್ಲಿ ಚಿತ್ರಿಸಲೆಳಸಿದ್ದೇನೆ. ಕಾದಂಬರಿಯ ಲೇಖನದಲ್ಲಿ ಬಳಸಿರುವ ತಂತ್ರಕ್ಕೆ ಅದು ಕಾರಣ. ಇದರಲ್ಲಿ ಬರುವ ಎಲ್ಲ ಪಾತ್ರಗಳು ಕಲ್ಪನಾಸೃಷ್ಟಿ; ಯಾವ ಜೀವಂತ ವ್ಯಕ್ತಿಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದುದಲ್ಲ. ರಾಗಸಾಕ್ಷಾತ್ಕಾರ, ರಾಗವನ್ನು ಒತ್ತೆ ಇಡುವುದು, ಹೂವಿನಿಂದ ಪಾಠ ಕಲಿಯುವುದು–ಇವು ನಾನು ಕೇಳಿದ ಹಿರಿಯರ ಕಥೆಗಳಿಂದ ಪ್ರೇರೇಪಿತ.

ಈ ಕಾದಂಬರಿಯನ್ನು ಬರೆಯುವಲ್ಲಿ ಇತಿಹಾಸ ಮತ್ತು ಸಂಗೀತದ ಬಗ್ಗೆ ಹೆಚ್ಚು ವಿವರಗಳನ್ನು ತಿಳಿಸಿ ನೆರವಾದ ಹಿರಿಯರೂ ನನ್ನ ಗುರುಗಳೂ ಆದ ಡಾ. ಎಸ್. ಶ್ರೀಕಂಠಶಾಸ್ತ್ರಿ, ಎಂ.ಎ., ಡಿ.ಲಿಟ್. ಅವರಿಗೂ, ಆತ್ಮೀಯ ಮಿತ್ರ ಶ್ರೀ ಅ.ನ. ಕೃಷ್ಣರಾಯರಿಗೂ ನಾನು ಋಣಿ.

ಈ ಕಾದಂಬರಿಯನ್ನು ಬರೆದ ಕಾಲ, ನನ್ನ ಜೀವನದ ಕತ್ತಲ ಕಾಲ. ಈ ಕಾಲದಲ್ಲಿ ತಮ್ಮ ಸ್ನೇಹದಿಂದ, ನನ್ನ ಬಾಳಿನಲ್ಲಿ ಜಾರುತ್ತಿದ್ದ ನೆಚ್ಚಿಗೆಯನ್ನು ಬಲವಾಗಿ ಹಿಡಿದು ನಿಲ್ಲಿಸಿದ ಮಿತ್ರರಾದ ಹಾ.ಮಾ. ನಾಯಕ, ಬಿ.ಎಸ್. ವಿಶ್ವನಾಥ್, ಚಂ.ನ. ರಾಜಾರಾವ್, ಚಂ.ನ. ಮೂರ್ತಿರಾವ್, ಎಂ.ಎಸ್. ದೊರೆಸ್ವಾಮಿ, ಎಸ್. ರಾಮಕೃಷ್ಣ ಇವರ ಸ್ನೇಹಋಣ ಮರೆಯಲಾಗದ ಮಧುರಸ್ಮೃತಿ.

ಕಾದಂಬರಿಯನ್ನು ಬರೆಯುವಾಗ ಕೇಳಿ, ಮುಂದೆ ಬರೆಯಲು ಉತ್ಸಾಹವಿತ್ತ ಮಿತ್ರ 'ಚದುರಂಗ;, ಮ. ಗೋ. ಅಡಿಗರಿಗೂ ನಾನು ಋಣಿ.

ಮೈಸೂರು **ತ.ರಾ.ಸು.**

ಫೆಬ್ರವರಿ ೨೩, ೧೯೫೭

# ಹನ್ನೆರಡನೆಯ ಮುದ್ರಣ

ಇತ್ತೀಚೆಗೆ ಪ್ರಕಟವಾದ ಹನ್ನೊಂದನೆಯ ಮುದ್ರಣದ ಪ್ರತಿಗಳು ಮಾರಾಟವಾಗಿ ತ.ರಾ.ಸು.–ಅಭಿಮಾನಿ ಓದುಗರಿಂದ ಇನ್ನೂ ಬೇಡಿಕೆಯಿದೆಯಾಗಿ 'ಹಂಸಗೀತೆ'ಯ ಹನ್ನೆರಡನೆಯ ಮುದ್ರಣ ಇಷ್ಟು ಬೇಗ ಸಾಧ್ಯವಾಗಿದೆ.

ಈ ಹೆಸರಾಂತ ಕೃತಿಯನ್ನು ನಮ್ಮ ಪ್ರಕಾಶನ ಸಂಸ್ಥೆಯಿಂದ ಪ್ರಕಟಿಸಲು ಅನುಮತಿ ನೀಡಿದ ಶ್ರೀ ತ.ರಾ.ಸು. ಅವರಿಗೂ, ಕರಡಚ್ಚುಗಳನ್ನು ಶ್ರದ್ಧೆಯಿಂದ ತಿದ್ದಿಕೊಟ್ಟ ಶ್ರೀರಂಗರಾವ್ ರೋಹಿಡೇಕರ್ ಅವರಿಗೂ, ಅತ್ಯಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್‌ನ ಶ್ರೀ ಜಿ.ಹೆಚ್. ಕೃಷ್ಣಮೂರ್ತಿಯವರಿಗೂ ನಮ್ಮ ಕೃತಜ್ಞತೆಗಳು.

ಮೈಸೂರು **ಪ್ರಕಾಶಕರು**
ಆಗಸ್ಟ್ ೨೧, ೧೯೮೨

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ಅರ್ಪಣೆ | x |
| ಎರಡು ಮಾತು | xi |
| ಹನ್ನೆರಡನೆಯ ಮುದ್ರಣ | xii |
| ಹಂಸಗೀತೆ | ೧–೨೦೯ |

# ಹಂಸಗೀತೆ

# ಹಂಸಗೀತೆ

೧

ಚಿತ್ರದುರ್ಗದಲ್ಲಿ ಇಪ್ಪತ್ತುನಾಲ್ಕು ಗಂಟೆಯ ಕಾಲವೂ ನಡೆಯುವ ಸಂಸ್ಥೆಯೆಂದರೆ, ನಮ್ಮ ಕ್ಲಬ್ ಒಂದೇ. ಬರುವವರು ಬರುತ್ತಿರುತ್ತಾರೆ, ಹೋಗುವವರು ಹೋಗುತ್ತಿರುತ್ತಾರೆ – ಆದರೆ ಟೆನಿಸನ್ ಕವಿಯ ಝುರಿಯಂತೆ ಇಸ್ಪೇಟಾಟ ಮಾತ್ರ, ಸದಾ ನಡೆಯುತ್ತದೆ. ಇಸ್ಪೇಟಾಟ, ಅಲ್ಲಿ ಬರುವ ಕೆಲವರಿಗೆ ಹೊತ್ತು ಕಳೆಯಲು ಸಾಧನವಾದರೆ, ಎಷ್ಟೋ ಜನಕ್ಕೆ ಜೀವನೋಪಾಯಕ್ಕೆ ದಾರಿ. ಆಟದ ಶುದ್ಧ 'ಥ್ರಿಲ್'ಗಾಗಿ ಆಡುವ ಕಲಾವಿದರೂ ಉಂಟು. ಅವರಿಗೆ ಸೋಲು ಗೆಲವು ಮುಖ್ಯವಲ್ಲ; ಗೆಲ್ಲಬೇಕೆಂದು ಎರಡಾಣೆ ನಾಲ್ಕಾಣೆ ಆಸೆಗೆ ಕೆಟ್ಟ ಆಟ ಆಡುವುದಿಲ್ಲ, ತಾವು ಸೋತರೂ ಆಟ ಕೆಡಿಸುವುದಿಲ್ಲ. ಹಾಗೆ ದುಡ್ಡಿಗಾಗಿ ಆಡುವವರನ್ನು ಕಂಡರೆ, ಈ ಜನಕ್ಕೆ ಇನ್ನಿಲ್ಲದಷ್ಟು ತಾತ್ಸಾರ. ಸಾಧಾರಣವಾಗಿ ಈ ಬಗೆಯ ಜನ ಹಣಕ್ಕಾಗಿ ಆಟವಾಡುವವರೊಂದಿಗೆ ಕಲೆಯುವುದಿಲ್ಲ. ತಮ್ಮ ಜಾತಿಯ ಜನ ಬರುವವರೆಗೂ ಕಾದು ಕುಳಿತಿರುತ್ತಾರೆ. ಯಾರೂ ಬರದೆ ಹೋದರೆ, ಬೇರೆಯವರಿಗೆ ಆಟದ ರೀತಿನೀತಿಗಳನ್ನು ತಿಳಿಸುತ್ತಾ ಹೊತ್ತು ಕಳೆದು ಮನೆಗೆ ಹಿಂದಿರುಗುತ್ತಾರೆ. ಇದು ನಮ್ಮ ಕ್ಲಬ್ಬಿನಲ್ಲಿ ಕಲೆಯುವ ಎರಡು ಬಗೆಯ ಆಟಗಾರರು. ಮೂರನೆಯ ಜಾತಿಯೂ ಒಂದುಂಟು; ಅವರಿಗೆ ಆಟ ಗೊತ್ತಿಲ್ಲ; ಆಡಬೇಕೆಂಬ ಚಪಲವೂಇಲ್ಲ. ಆಟವಾಡುವವರು ಆಡುತ್ತಿದ್ದರೆ, ಅವರ ಸಂಭಾಷಣೆ ಕೇಳುತ್ತಾ, ಅಲ್ಲಿ ಜನಿಸುವ ಈರ್ಷ್ಯೆ, ಕ್ರೋಧ, ಸ್ಪರ್ಧೆ, ಹರ್ಷ, ನಿರಾಶೆಗಳ ಭಾವಸಂಗ್ರಾಮವನ್ನು ನೋಡುತ್ತಾ, ಬೇಕೆನಿಸಿದಷ್ಟು ಹೊತ್ತು ಕೂತಿದ್ದು, ಸಾಕಾದಾಗ ಎದ್ದು ಹೋಗುತ್ತಾರೆ. ಇಂಥ ನಿರೀಕ್ಷಕರ ಗುಂಪಿಗೆ ಸೇರಿದವನು ನಾನು.

ಕಳಾವರ್ ಎಂದರೇನು, ನಹಿಲಾ ಎಂದೆರೇನು ಎಂದು ತಿಳಿಯದ ನನಗೆ, ದಿನವೂ ಕ್ಲಬ್ಬಿಗೆ ಹೋಗಲು ಇದ್ದ ಬಲವಾದ ಆಕರ್ಷಣೆ, ಲಾಯರು ರಾಘವೇಂದ್ರರಾಯರು. ರಾಯರು ದಿನವೂ ಕೋರ್ಟಿಗೆ ಹೋಗುವುದನ್ನಾದರೂ ತಪ್ಪಿಸಿಯಾರು, ಕ್ಲಬ್ಬಿಗೆ ಹಾಜು ಹಾಕುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಇಸ್ಪೇಟು ಅವರಿಗೆ ಬರೀ ಹವ್ಯಾಸವಾಗಿರದೆ, ಜೀವನದ ಹಾಸುಹೊಕ್ಕಿನಲ್ಲಿ ಒಂದಾಗಿತ್ತು.

ರಾಯರು ಬೇರೆಲ್ಲಿ ಸಿಗದಿದ್ದರೂ, ಸಂಜೆಗೆ ಕ್ಲಬ್ಬಿನಲ್ಲಿ ಸಿಕ್ಕೇಸಿಗುತ್ತಾರೆಂಬ ವಿಷಯ ಎಲ್ಲರಿಗೂ ಗೊತ್ತು. ಎಷ್ಟೋ ವೇಳೆ ಅವರ ಕಕ್ಷಿಗಾರರು, ಅವರನ್ನು ಹುಡುಕಿಕೊಂಡು ಕ್ಲಬ್ಬಿಗೇ ಬಂದು, ಆ ದಿನದ ಆಟದ ಖರ್ಚನ್ನು ಒಪ್ಪಿಸಿ ಹೋದುದೂ ಉಂಟು! ನಾನು ಕ್ಲಬ್ಬಿಗೆ ಹೋಗುತ್ತಿದ್ದುದೂ, ಬೇರೆಲ್ಲೂ ಸಿಗದ ರಾಯರು ಖಂಡಿತವಾಗಿ ಅಲ್ಲಿ ಸಿಕ್ಕೇಸಿಗುತ್ತಾರೆಂದು.

ಚಿತ್ರದುರ್ಗದ ಬೆಟ್ಟ, ಆದರ ಮೇಲಿನ ಹತ್ತಾರು ಬತೇರಿಗಳು, ಕೋಟೆ ದೇವಾಲಯಗಳು, ಅಲ್ಲಲ್ಲಿ ಒರಗಿದ, ಬೇರಾರಿಗೂ ಬೇಡವಾದ, ಕಾಲಕಸವಾದ ಶಾಸನಗಳು – ಇವು ನನ್ನನ್ನೂ ರಾಯರನ್ನೂ ಬೆಸೆದ ಸ್ನೇಹದ ಕೊಂಡಿ.

ರಾಯರಿಗೆ ಇಸ್ಪೇಟಿನಷ್ಟೇ ಉತ್ಸಾಹ ಚಿತ್ರದುರ್ಗದ ಇತಿಹಾಸದಲ್ಲಿ. ಉಹೂ; ಇಸ್ಪೇಟಗಿಂತ ಹೆಚ್ಚು ಉತ್ಸಾಹ ಇತಿಹಾಸವೆಂದರೆ. ಚಿತ್ರದುರ್ಗದ ಕೋಟೆಯಲ್ಲಿ ಅವರ ಹಸ್ತಸ್ಪರ್ಶದಿಂದ ಪುಲಕಿತವಾಗದ ಕಲ್ಲು ಒಂದೂ ಇಲ್ಲ. ಬೇರೆಯವರ ಪಾಲಿಗೆ ಮೂಕಶಿಲೆಯಾದ ಒಂದೊಂದುಬೋಳು ಕಲ್ಲೂ, ರಾಯರಿಗೆ ತಮ್ಮ ಕಥೆಯನ್ನುಸಿರಿ, ನಿಟ್ಟುಸಿರಿಡುತ್ತದೆ. 'ನಾನು ಭೀಮ–ಹಿಡಿಂಬಾಸುರ ಕಾಳಗದ ಕಣವಾಗಿದ್ದ ಕಲ್ಲು. ಈಗ ನೋಡು, ನನ್ನಗತಿ' ಎಂದು ಒಂದು ಕಲ್ಲು ಕಂಬನಿಗರೆದರೆ, ಇನ್ನೊಂದು 'ನಾನು ಭರಮಣ್ಣನಾಯಕ ತನ್ನ ಬಿಚ್ಚುಗತ್ತಿಯನ್ನು ಮಸೆದ ಶಿಲೆ, ಈಗ ಸೌದೆ ಕಡಿಯುವವರ ಕೊಡಲಿಯ ಮಸೆಗಲ್ಲಾಗಿದ್ದೇನೆ'ಎಂದು ನಿಟ್ಟುಸಿರಿಡುತ್ತದೆ. ಮೂಕರಾಗಿ ನಿಂತು, ರಾಯರು ಒಂದೊಂದು ಶಿಲೆಯ ಹೃದಯವೇದನೆಯನ್ನೂ ಕಣ್ಣೀರಿಡುತ್ತಾ ಆಲಿಸುತ್ತಾರೆ. ಬೆಟ್ಟದ ಒಂದೊಂದು ಕಲ್ಲೂ ಚಿತ್ರದುರ್ಗದ ವೀರ ಇತಿಹಾಸದ ಒಂದೊಂದು ಅಧ್ಯಾಯ, ಅವರ ದೃಷ್ಟಿಯಲ್ಲಿ. ಊರಲ್ಲಿ ರಾಯರು ಇಲ್ಲದಿದ್ದರೆ, ಕೋಟೆಯ ಕಲ್ಲುಗಳು ಎಷ್ಟು ಮನೆಗಳ ಬುನಾದಿಗಳಾಗಿ ಕೊಳೆಯಬೇಕಾಗಿತ್ತೋ ಏನೋ. ರಾಯರಿಂದಾಗಿ, ಅವು ಇನ್ನೂ ಬಯಲು ಬಿಸಿಲನ್ನುಂಡು ಬಾಳುತ್ತಿವೆ. ಕೋಟೆಯಲ್ಲಾಗಲಿ, ಚಿತ್ರದುರ್ಗದ ಸುತ್ತಮುತ್ತಲ ಪ್ರದೇಶದಲ್ಲಾಗಲಿ, ಅವರು ನೋಡದೆ ಇರುವ ಸ್ಥಳ ಒಂದೂ ಇಲ್ಲ. ಎಲ್ಲಾದರೂ ಒಂದು ಹೊಸ ಶಾಸನವೋ, ಶಿಲಾವಿಗ್ರಹವೋ ಕಣ್ಣಿಗೆ ಬಿದ್ದಿತೆಂಬ ಸುದ್ದಿ ಕೇಳಿದರೆ ಉರಿ ಬಿಸಿಲಾಗಲಿ, ಹತ್ತಾರು ಮೈಲಿ ದೂರ ನಡೆಯಬೇಕಾಗಿ ಬಂದರೂ ಸರಿಯೆ, ತಮ್ಮ ಸ್ಥೂಲಕಾಯದ ಕೊರಗನ್ನೂ ಲೆಕ್ಕಿಸದೆ ನಡೆಯುತ್ತಾರೆ. ಅಷ್ಟೇ ಉತ್ಸಾಹ ಹೊರಗಿನಿಂದ ಬಂದವರಿಗೆ ಚಿತ್ರದುರ್ಗದ ಇತಿಹಾಸವನ್ನು ಹೇಳುವಾಗ; ಅಲ್ಲಿನ ಐತಿಹಾಸಿಕ ಸ್ಥಳಗಳನ್ನು ತೋರುವಾಗ, ನಡುರಾತ್ರಿಯಾದರೂ ಬೆಟ್ಟದ ತುದಿಯೇರಲು ಸಿದ್ಧ.



ಈ ಉತ್ಸಾಹದಿಂದಾಗಿಯೇ ರಾಯರು ಅಲ್ಲಿ–ಇಲ್ಲಿ, ಕಾಡಿ–ಬೇಡಿ, ಚಿತ್ರದುರ್ಗದ ಇತಿಹಾಸಕ್ಕೆ ಸಂಬಂಧಿಸಿದ ಕಡತಗಳು, ತಾಳೆಯೋಲೆಗ್ರಂಥಗಳು, ಶಾಸನಗಳು, ನಾಣ್ಯಗಳು ಮೊದಲಾದುವುಗಳನ್ನು ಶೇಖರಿಸಿದ್ದಾರೆ. ಪಾಳೆಯಗಾರರ ಮನೆತನದವರ ಬಳಿ ಇದ್ದ ಹಳೆಯ ಕಾಲದ ಕತ್ತಿ–ಕವಚ, ಒಂದೆರಡು ತೈಲಚಿತ್ರಗಳ ಫೋಟೋ ತೆಗೆಸಿಟ್ಟುಕೊಂಡಿದ್ದಾರೆ. ಹತ್ತಾರು ವರ್ಷದ ಶ್ರಮದ ಫಲವಾಗಿ ಇಂದವರ ಮನೆಯೊಂದು ಸಣ್ಣ ಪ್ರಾಚ್ಯವಸ್ತು ಸಂಗ್ರಹಾಲಯವಾಗಿದೆ.

ರಾಯರ ಈ ಇತಿಹಾಸಾಭಿಮಾನ ಸಾಂಕ್ರಾಮಿಕವಾದುದು. ತಮಗೆ ಪರಿಚಿತರಾದ ಪ್ರತಿಯೊಬ್ಬರಲ್ಲೂ ತಮ್ಮ ಉತ್ಸಾಹವನ್ನು ಬೆಳೆಸುತ್ತಾರೆ. ಹಾಡು ಬಲ್ಲವರಾಗಿದ್ದರೆ, ಅವರಿಂದ ತಾವು ಸಂಗ್ರಹಿಸಿದ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಲಾವಣಿಗಳನ್ನು ಹಾಡಿಸುತ್ತಾರೆ. ಚಿತ್ರ ಬರೆಯಬಲ್ಲವರಿಂದ ಕೋಟೆಯ ಚಿತ್ರ ಬರೆಯಿಸುತ್ತಾರೆ. ಕಥೆ ಬರೆಯುವವರಾದರೆ, ಚಿತ್ರದುರ್ಗದ ಇತಿಹಾಸದ ಬಗ್ಗೆ ಕಥೆ ಬರೆಯಿಸುತ್ತಾರೆ. ಇನ್ನೇನೂ ಇಲ್ಲದೆ ಲಕ್ಷಣವಾಗಿ, ಗುಂಡಗೆ ಅಕ್ಷರ ಬರೆಯುವ ಶಕ್ತಿ ಇದ್ದವನಿಂದ ತಮ್ಮ ಲೇಖನದ ಪ್ರತಿಯನ್ನಾದರೂ ಮಾಡಿಸುತ್ತಾರೆ. ಯಾರನ್ನೂ ಬಿಡುವುದಿಲ್ಲ. ಅವರ ಸರಳ ಸಹಜ ಆತ್ಮೀಯತೆಗೆ ಮಾರುಹೋಗದವರೊಬ್ಬರೂ ಇಲ್ಲ, ಚಿತ್ರದುರ್ಗದಲ್ಲಿ.

ಮೊದಮೊದಲು ರಾಯರ ಈ ಅಭಿಮಾನವನ್ನು ಕಂಡು ನಗದವರೂ ಇಲ್ಲದೆ ಹೋಗಿರಲಿಲ್ಲ, ಊರಿನಲ್ಲಿ. ಗೋಲ್ಡ್‌ಸ್ಮಿತ್ ಕವಿಯ 'ಹಾಳುಹಳ್ಳಿ' ಎಂಬ ಕವನದಲ್ಲಿ ಚರ್ಚಿನ ಪಾದ್ರಿಯೊಬ್ಬರ ವರ್ಣನೆ ಬರುತ್ತದೆ. ಅವನನ್ನು ಕಂಡು ನಕ್ಕು ಅಣಕವಾಡಬೇಕೆಂದು ಬಂದ ಜನ, ಕಡೆಗೆ ಮಣಿದು ಪ್ರಾರ್ಥನೆ ಸಲ್ಲಿಸಿ ಹೋಗುತ್ತಿದ್ದರಂತೆ. ಮೊದಮೊದಲು ರಾಯರನ್ನು ಕಂಡು ನಕ್ಕವರ ಪಾಡೂ ಈಗೀಗ ಹಾಗೇ ಆಗಿದೆ. ರಾಯರು, ಅವರ ಸ್ಥೂಲಕಾಯ, ಸದಾ ಅವರ ಮೈಮೇಲಿರುವ ಕಪ್ಪು ನಿಲುವಂಗಿ, ಮೂಗಿನ ತುದಿಯ ಸಿಂಹಾಸನದ ಮೇಲೆ ವಿರಾಜಿಸುವ ಬೆಳ್ಳಿಕಟ್ಟಿನ ಕನ್ನಡಕ, ದಪ್ಪನಾದ ಕೋಲು – ಒಂದೊಂದೂ ಬೆಟ್ಟದ ಮೇಲೆ ನಿಂತ ಬುರುಜು, ಬತೇರಿಗಳಂತೆ, ಚಿತ್ರದುರ್ಗದ ಜನಕ್ಕೆ ಪ್ರೀತಿಪಾತ್ರವಾಗಿವೆ, ನಿತ್ಯದ ನೋಟವಾಗಿವೆ.

ರಾಯರದು ಕೊಂಚ ಸಿಡುಕಿನ ಸ್ವಭಾವ. ಚುರುಕಾದ ನಾಲಗೆ, ಗಂಟುಮೋರೆ ದೇವರು ಕೊಟ್ಟ ವರ. ಮನಸ್ಸಿಗೆ ಬೇಸರವಾದಾಗ ತಟಕ್ಕನೆ ಆಡಿಬಿಡುತ್ತಾರೆ. ಆದರೆ ಮರುಗಳಿಗೆಯೇ ಸ್ನೇಹದ ಮೋಡಿ. ಇದರಿಂದಾಗಿ ಕೆಲಕಾಲ ರಾಯರಿಂದ ದೂರವಾದರೂ, ಮರುದಿನವೇ ಮಿತ್ರರಾಗುತ್ತಾರೆ. ಅವರ ಸ್ವಭಾವ ತಿಳಿದವರು,

ಸಿಟ್ಟಾಗುವ ತೊಂದರೆಯನ್ನೇ ತೆಗೆದುಕೊಳ್ಳುವುದಿಲ್ಲ. ಅವರ ಪರಿಚಯ ಬೆಳೆದನಂತರ ನನಗೂ ಅದರ ಅನುಭವವಾಗಿತ್ತು.

ರಾಯರಿಗೂ ನನಗೂ ಮಿತ್ರತ್ವ ಬೆಳೆದದ್ದು, ನಾನು ಅವರ ಆಪ್ತ ಮಿತ್ರರ ಮಗನೆಂಬ ಅಭಿಮಾನದ ಅಸ್ತಿಭಾರದ ಮೇಲೆ. ಆ ಅಭಿಮಾನವೇ, ಅವರು ನನಗೆ ಚಿತ್ರದುರ್ಗದ ಇತಿಹಾಸವನ್ನು ಕಲಿಸಲು ಕಾರಣವಾಯಿತು. ಅವರ ಉತ್ಸಾಹ ಸಾಂಕ್ರಾಮಿಕ ಎಂದು ನಾನು ಮೊದಲೇ ಹೇಳಲಿಲ್ಲವೇ ? ಅದಕ್ಕೆ ನಾನೂ ಬಲಿಯಾದೆ. ನಾನು ದೊಡ್ಡವನಾದಮೇಲೆ ನನ್ನಲ್ಲಿ ಕಥೆ ಹೆಣೆಯುವ ಶಕ್ತಿಯಿದೆಯೆಂದು ಗೊತ್ತಾದಮೇಲೆ, ರಾಯರಿಗೆ ನನ್ನಲ್ಲಿ ಅಭಿಮಾನ ಮತ್ತಷ್ಟು ಬೆಳೆದು, ಆಗಾಗ –

"ಏನು ಬರಿ ಕಾಗಮ್ಮ, ಗುಬ್ಬಕ್ಕನ ಕಥೆ ಗೀಚ್ತೀಯ; ಚಿತ್ರದುರ್ಗದ ಮೇಲೊಂದು ಕಾದಂಬರಿ ಬರಿ" ಎನ್ನುತ್ತಿದ್ದರು; "ಸೋಮಾರಿ; ಬರೆಯುವುದಿಲ್ಲ" ಎಂದು ರೇಗುತ್ತಿದ್ದರು. ಎಷ್ಟೋ ವೇಳೆ ನಾನು ಬರೆದ ಕಥೆಯನ್ನು ಉತ್ಸಾಹದಿಂದ ತೆಗೆದುಕೊಂಡು ಹೋಗಿ ತೋರಿಸಿದರೆ – "ಇದನ್ನೇನು ಮಾಡಬೇಕು, ಬಾವುಟದ ಬತೇರಿ ಮೇಲೆ ನಿಂತು ಗಾಳೀಲಿ ತೂರಿಬಿಡು. ಇರಲಿಲ್ಲ, ಸಾಯಲಿಲ್ಲ – ಅಂಥವರ ಕಥೆಯಿಂದ ಯಾರಿಗೇನು ಉಪಯೋಗ?" ಎಂದು ನನ್ನ ಉಕ್ಕುವ ಉತ್ಸಾಹದ ಮೇಲೆ ತಣ್ಣೀರನ್ನೆರಚುತ್ತಿದ್ದರು. ಆದರೂ ನಾನು ಬರೆದುದನ್ನು ಓದದೇ ಇರುತ್ತಿರಲಿಲ್ಲ. ಓದಿ ಸಂತೋಷಪಡುತ್ತಲೂ ಇದ್ದರು. ಅದು ನನಗೆ ಗೊತ್ತು. ಆದರೂ ಅವರು ಟೀಕಿಸಿದಂತೆ ನಾನು ಸಿಟ್ಟಾಗುವ ಶಾಸ್ತ್ರಮಾಡಿ ಬರುತ್ತಿದ್ದೆ.

ನಾನು ಚಿತ್ರದುರ್ಗದ ಮೇಲೆ ಅದುವರೆಗೂ ಏನನ್ನೂ ಬರೆಯದೆ ಅವರ ಬಯಕೆಯನ್ನು ಬರಡಾಗಿಸಿದ್ದರೂ, 'ಇಂದಲ್ಲ ನಾಳೆ ಬರೆದಾನು' ಎಂಬ ಭರವಸೆ ಇದ್ದಿರಬೇಕು ಅವರಿಗೆ. ನಾನು ಸಿಟ್ಟಾಗಿ ಹೋದರೆ, ಅವರೇ ಮರುದಿನ ಬಂದು, ನಾರಾಯಣಪ್ಪನ ಹೋಟಲ ದೋಸೆಯ ರುಚಿಯಲ್ಲಿ, ಹಿಂದಿನ ದಿನದ ಕಹಿಯನ್ನು ಮರೆಸುತ್ತಿದ್ದರು. ನಾನು ಚಿತ್ರದುರ್ಗದ ಮೇಲೆ ಕಥೆ ಬರೆಯದಿದ್ದರೂ, ನನ್ನಲ್ಲಿ ಅದರ ಬಗ್ಗೆ ಅಭಿಮಾನವಿತ್ತು. ಅದರ ನೂರಾರು ಕಥೆಗಳನ್ನು ರಾಯರ ಬಾಯಿಂದ ಕೇಳಲು ಬೇಕಾದ ಬೆಲೆ ಕೊಡಲು ಸಿದ್ಧನಿದ್ದೆ. ಎಂತಲೇ ಪ್ರತಿದಿನವೂ ಸಂಜೆ ರಾಯರನ್ನು ನೋಡಲು ಕ್ಲಬ್ಬಿಗೆ ಹೋಗುತ್ತಿದ್ದೆ.

ಆ ದಿನ ನಾನು ಕ್ಲಬ್ಬಿಗೆ ಹೋಗಲು, ಬೇರೇನೋ ಕೆಲಸವಿದ್ದುದರಿಂದ ದಿನಕ್ಕಿಂತಲೂ ಕೊಂಚ ತಡವಾಯಿತು. ದಿನವೂ ಹೋದಾಗ ಇಸ್ಪೇಟಾಟದಲ್ಲಿ



ತಲ್ಲೀನರಾಗಿದ್ದು, ಹತ್ತಾರು ನಿಮಿಷಗಳ ನಂತರ ಎಚ್ಚರವಾಗಿ, ನೋಡಿ, 'ಓ! ಬಂದೆಯಾ, ಕೂತುಕೊ. ಬೇಸ್ತಿನಾಟ ಮುಗಿಸಿ ಎದ್ದು ಬಿಡುತ್ತೇನೆ' ಎಂದು ಹೇಳಿ, ಮತ್ತೆ ಆಟದಲ್ಲಿ ಮಗ್ನರಾಗುತ್ತಿದ್ದ ರಾಯರು, ಆ ದಿನ ನನ್ನನ್ನೇ ಕಾದು ಕುಳಿತಂತಿತ್ತು. ನಾನು ಕಣ್ಣಿಗೆ ಬಿದ್ದ ಕೂಡಲೇ –

"ಏನಯ್ಯ, ಮಹಾಸಾಹಿತಿ! ಬಿಡುವಾಯಿತೇ ಬರಲಿಕ್ಕೆ ?" ಎಂದರು.

ಅವರ ಬಿರುಸಾದ ಮಾತಿನ ರೀತಿಯಲ್ಲಿ, ಏನೋ ಉತ್ಸಾಹ ತುಳುಕುತ್ತಿತ್ತು.

"ಮನೆಯಲ್ಲೇನೋ ಕೆಲಸವಿತ್ತು. ಅದಕ್ಕೇ ತಡವಾಯಿತು."

"ಮನೆಕೆಲಸ! ನೀನೂ ಮನೆಕೆಲಸ ಮಾಡುತ್ತೀಯೇನು ? ಪರವಾಯಿಲ್ಲ. ಏನೋ ಬರೆಯುತ್ತಾ ಪ್ರಪಂಚವನ್ನೇ ಮರೆತುಬಿಟ್ಟಿಯೇನೋ ಎಂದಿದ್ದೆ. ಹೋಗಲಿ – ಈಗಲಾದರೂ ಬಿಡುವಾಗಿದೀಯ ತಾನೇ?"

"ಬಿಡುವೇ ? ಏನಾದರೂ ಕೆಲಸವಿತ್ತೇನೆ?"

"ಇದೆ. ನಡಿ, ನಮ್ಮ ಮನೆಗೆ ಹೋಗೋಣ."

"ಏನು ಸಮಾಚಾರ, ರಾಯರೇ ?"

"ಇಲ್ಲೇನೂ ಕೇಳಬೇಡ. ಒಂದು ವಿಶೇಷ ವಸ್ತು ಪತ್ತೆಯಾಗಿದೆ, ಮನೇಲಿ ಹೇಳ್ತಿನಿ"– ಎಂದವರೇ, ನನಗೆ ಪ್ರತ್ಯುತ್ತರ ಕೊಡಲೂ ಅವಕಾಶ ಕೊಡದೆ ತಮ್ಮ ಬೆತ್ತವನ್ನು ಹಿಡಿದು ಹೊರಟೇಬಿಟ್ಟರು.

ದಾರಿಯಲ್ಲಿ ಹೋಗುವಾಗ, ಏನು ಸಮಾಚಾರವೆಂದು ತಿಳಿಯಲು ಪ್ರಯತ್ನಿಸಿದೆ. ಆದರೆ ಏನೂ ಹೊರಬರಲಿಲ್ಲ. ಮೊದಲ ದೀಪಾವಳಿಗೆ ಅತ್ತೆಯ ಮನೆಗೆ ಹೋಗುವ ಅಳಿಯನ ಉತ್ಸಾಹದಿಂದ ರಾಯರು ಹೆಜ್ಜೆ ಹಾಕುತ್ತಿದ್ದರು. ನನ್ನ ಪ್ರಶ್ನೆಯತ್ತ ಲಕ್ಷ್ಯವಾಗಲೀ ಅದಕ್ಕೆ ಉತ್ತರ ಕೊಡಬೇಕೆಂಬ ಮನಸ್ಸಾಗಲೀ ಅವರಿಗೆ ಇದ್ದಂತಿರಲಿಲ್ಲ. ತಮ್ಮ ಪಾಡಿಗೆ ತಾವು ಏನೋ ಯೋಚಿಸುತ್ತಾ, ಅದಕ್ಕೆ ಸಾಧನವೆಂಬಂತೆ, ಸಣ್ಣ ಧ್ವನಿಯಲ್ಲಿ ಏನೋ ಹಾಡು ಕುರುಕುತ್ತಾ ನಡೆಯುತ್ತಿದ್ದರು. ಅಂಥ ಸ್ಥಿತಿಯಲ್ಲಿ ಅವರನ್ನು ಪ್ರಶ್ನಿಸಿ ಉತ್ತರ ಪಡೆಯಲೆತ್ನಿಸುವುದು ವ್ಯರ್ಥವೆಂದು ಹಿಂದಿನ ಅನುಭವಗಳಿಂದ ಅರಿತ ನಾನು, ಮತ್ತೆ ಅವರನ್ನು ಪ್ರಶ್ನಿಸದೆ, ಏನು ವಿಶೇಷವಿರಬಹುದೆಂದು ಚಿಂತಿಸುತ್ತಾ, ಮೌನವಾಗಿ ಹಿಂಬಾಲಿಸಿದೆ.

೨

ಮನೆಗೆ ಹೋದ ಕೂಡಲೇ, ರಾಯರು ನನಗೆ ಕುಳಿತುಕೊಳ್ಳಲು ಕೂಡ ಹೇಳದೆ, ತಮ್ಮ ಮೇಜಿನ ಡ್ರಾ ಎಳೆದು ಅದರೊಳಗಿನಿಂದ, ಸಾಧಾರಣವಾಗಿ ಕೇಸಿನ ಕಾಗದಗಳನ್ನಿಡುವ ಬಾದಾಮಿ ಕಾಗದ ಕವರು ತೆಗೆದು, ನನ್ನ ಮುಂದಿಟ್ಟು–

"ಅದರೊಳಗಿರೋದನ್ನು ಓದು"– ಎಂದರು. ಕವರಿನ ಬಾಯಿ ಬಿಡಿಸಿ ನೋಡಿದೆ. ಅದರೊಳಗೊಂದು ಹಳೆಯದಾದ ಕರಡಿನ ಕಾಗದವಿತ್ತು. ಅದನ್ನು ಹೊರಗೆ ತೆಗೆಯಲೆಂದು ಕೈಹಾಕಿದೆ.

"ಹುಷಾರ್! ಸಿಕ್ಕಾಬಟ್ಟೆ ಎಳೆಯಬೇಡ, ಹಳೇ ಕಾಗದ, ಪುಡಿಪುಡಿ ಯಾಗಿಹೋಗುತ್ತೆ"– ಎಂದು ನನ್ನನ್ನು ರಾಯರು ಎಚ್ಚರಿಸಿದರು.

ರಾಯರು ಹೇಳಿದಂತೆಯೇ ಕವರೊಳಗಿದ್ದ ಕಾಗದವನ್ನು ಎಚ್ಚರಿಕೆಯಿಂದ ಹೊರತೆಗೆದು ನೋಡಿದೆ. ಅದೊಂದು ಬಹು ಹಳೆಯ ಕಾಗದ. ದಪ್ಪನಾಗಿ, ಒರಟಾಗಿ ಉತ್ತು. ಅದರ ಮೇಲೆ ಮೋಡಿ ಅಕ್ಷರದಲ್ಲಿ, ರಾಗಿ ಮಸಿಯಲ್ಲಿ ಏನೋ ಬರೆದಿತ್ತು. ಕಾಗದವನ್ನು ಅಲ್ಲಲ್ಲಿ ಹುಳು ತಿಂದುದರಿಂದ ಅಕ್ಷರಪಾತವಾಗಿತ್ತು. ಅದರ ಜೊತೆಗೆ, ಕಾಗದ ತುಂಬಾ ಹಳೆಯಾದುದರಿಂದ, ಒಂದು ಕಾಲಕ್ಕೆ ಬಿಳಿದಾಗಿದ್ದಿರಬಹುದಾದ ಕಾಗದ ಈಗ ಹಳದಿಯಾಗಿ, ಬಾದಾಮಿ ಬಣ್ಣವಾಗಿ ವಿವರ್ಣವಾಗಿತ್ತು.

ರಾಯರು ಸುಮ್ಮನೆ ಕುಳಿತು, ನನ್ನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರ ಹೃದಯದ ಉತ್ಸಾಹ ಅವರ ಕಣ್ಣ ಕಾತರತೆಯಲ್ಲಿ ಹೊರಸೂಸುತ್ತಿದ್ದಂತೆಯೇ ಮೇಜನ್ನು ತಬಲದಂತೆ ಬಾರಿಸುತ್ತಿದ್ದ ಕೈ ಬೆರಳುಗಳಿಂದಲೂ ವ್ಯಕ್ತವಾಗುತ್ತಿತ್ತು. ಏನನ್ನೋ ಹೇಳಬೇಕೆಂಬ ಆತುರ ಇರುವುದನ್ನು ಅವರ ಮುಖಭಾವ ಸೂಸುತ್ತಿತ್ತು. ಆದರೂ ಮಾತನಾಡದೆ, ಅವರು ನನ್ನನ್ನೇ ನೋಡುತ್ತಿದ್ದರು.

ನಾನು ಕಾಗದವನ್ನು ಓದಲು ಯತ್ನಿಸಿದೆ. ಮೋಡಿಯ ಅಕ್ಷರದ ಪರಿಚಯವಿಲ್ಲದ ನನಗೆ, ಆ ಕಾಗದದಲ್ಲಿನ ಬರಹ ಕನ್ನಡವೆಂದು ಅಲ್ಲೊಂದು ಇಲ್ಲೊಂದು ತಿಳಿಯುವ ಅಕ್ಷರದಿಂದ ಗೊತ್ತಾಯಿತೇ ವಿನಾ, ಸಂಪೂರ್ಣವಾಗಿ ಓದಲು ಆಗಲಿಲ್ಲ. ನಾಲ್ಕಾರು ನಿಮಿಷ ಪ್ರಯತ್ನಪಟ್ಟು ವಿಫಲನಾಗಿ, ಕಡೆಗೆ ರಾಯರಿಗೇ ಶರಣುಹೋದೆ.

"ಇದೇನು ಕಾಗದ, ರಾಯರೇ ?"

"ಏಕೆ ? ಓದಲಿಕ್ಕಾಗಲಿಲ್ಲವೇ ?"



"ಅದೇನು ಅಕ್ಷರವೋ ಸರಪಣಿಯೋ ? ಈ ಬರಹ ಓದಲಿಕ್ಕೆ ಬ್ರಹ್ಮ ಪ್ರತ್ಯೇಕ ಕಣ್ಣನ್ನೇ ಸೃಷ್ಟಿಮಾಡಬೇಕು. ಅದೇನು ನೀವೇ ಹೇಳಿಬಿಡಿ."

"ಇದೊಂದು ದಾನ ಶಾಸನದ ನಕಲು. ಇವತ್ತು ಬೆಳಿಗ್ಗೆ ತಾನೇ ಅಕಸ್ಮಾತ್ತಾಗಿ ನನ್ನ ಕೈಗೆ ಸಿಕ್ಕಿತು– ಯಾರೋ ಒಬ್ಬ ಕಕ್ಷಿಗಾರ ತಂದು ಕೊಟ್ಟ ಕಾಗದದ ಕಟ್ಟಿನಲ್ಲಿ ಇತ್ತು. ಇದು ಬಹಳ ಮುಖ್ಯವಾದ ದಾನ ಶಾಸನ. ಈ ನಕಲು ತೆಗೆದೇ ನೂರು ವರ್ಷಗಳ ಮೇಲೆ ಆಗಿದೆ. ಹೈದರನ ಕಾಲದ್ದು ಇದು. ಅವನ ಮಗ ಟಿಪ್ಪುಸುಲ್ತಾನ, ಚಿತ್ರದುರ್ಗದಲ್ಲಿದ್ದ ಭೈರವಿ ವೆಂಕಟಸುಬ್ಬಯ್ಯ ಎನ್ನುವವರಿಗೆ ದಾನ ಕೊಟ್ಟ ವಿಚಾರ ಇದರಲ್ಲಿ ಬರೆದಿದೆ."

"ಇರಬಹುದು. ಇಂಥವು ಎಷ್ಟೋ ಇವೆ. ನೀವು ನನ್ನನ್ನು ಕರೆತಂದ ರೀತಿ ನೋಡಿ, ಏನೋ ವಿಚಿತ್ರವನ್ನು ತೋರಿಸುತ್ತೀರಿ ಎಂದಿದ್ದೆ. ಇದರಲ್ಲೇನು ಮಹತ್ವ?"– ನಿರುತ್ಸಾಹದಿಂದ ನಾನು ಕೇಳಿದೆ. ನನ್ನ ನಿರುತ್ಸಾಹದ ಸಣ್ಣ ಧ್ವನಿ ಅವರನ್ನು ರೇಗಿಸಿತು.

"ಮಹತ್ವವಿಲ್ಲವೇ ? ಅದಕ್ಕೇ ಅದನ್ನು ಓದು ಎಂದದ್ದು. ವೆಂಕಟ ಸುಬ್ಬಯ್ಯ ಭಾರಿ ಸಂಗೀತವಿದ್ವಾಂಸನಂತೆ. ಅವರು ಟೀಪುವಿನ ಎದುರಿಗೆ ಹಾಡಲೊಪ್ಪದೆ, ತಮ್ಮ ನಾಲಗೆಯನ್ನು ಕತ್ತರಿಸಿಕೊಂಡದ್ದರಿಂದ, ಟೀಪು ಮೆಚ್ಚಿ, ಅವರಿಗೆ ತೊರೆಯೂರಿನ ಬಳಿ ಜಮೀನು ಮಾನ್ಯ ಕೊಟ್ಟನಂತೆ. ಇಂಥ ಶಾಸನ ಓದುವಾಗ ಊಹಾಶಕ್ತಿ ಇರಬೇಕು. ಬರೀ ಅಕ್ಷರ ಓದಿದರೆ ಬಂತೆ ಭಾಗ್ಯ ? ನೀನೊಬ್ಬ ಸಾಹಿತಿ, ಊಹಾಶಕ್ತಿ ಇದ್ದವನು ಎಂದು ಕೊಂಡಿದ್ದೆ. ನಿನಗೂ ಗೊತ್ತಾಗಲಿಲ್ಲವಲ್ಲ. ಅಲ್ಲಯ್ಯ, ಹಾಡುಗಾರನೊಬ್ಬ ನಾಲಗೆಯನ್ನು ಕತ್ತರಿಸಿಕೊಂಡರೆ, ಎಂಥ ಪ್ರಸಂಗ ಒದಗಿರಬೇಕು – ಊಹಿಸಲಾರೆಯಾ ? ಈ ದಾನಪತ್ರದ ತಾರೀಖು ಚಿತ್ರದುರ್ಗದ ಕೋಟೆ ಹೈದರನ ವಶವಾದ ಒಂದು ತಿಂಗಳನಂತರದ್ದು. ಆಗ, ಇಂಥ ಘಟನೆ ನಡೆಯಲು ಏನೇನು ಕಾರಣಗಳೊದಗಿರಬೇಕು ? ಆಲೋಚನೆ ಮಾಡು. ಅಲ್ಲದೆ ಆತನ ಹೆಸರು ಭೈರವಿ ವೆಂಕಟಸುಬ್ಬಯ್ಯ ಅಂತ. ಆ ಮಾತಿನ ಅರ್ಥ ಏನು ಗೊತ್ತೆ ?"

"ಊಹೂ...... "

"ಊಹೂ! ಅಷ್ಟೇ ನಿನಗೆ ಗೊತ್ತಿರೋದು. ಭೈರವಿ ವೆಂಕಟಸುಬ್ಬಯ್ಯ ಎಂದರೆ, ಭೈರವಿ ಅವರಿಗೆ ಒಲಿದ ರಾಗ, ಅವರ ಹಾಗೆ ಆ ರಾಗವನ್ನು ಬೇರೆ ಯಾರೂ ಹಾಡುತ್ತಿರಲಿಲ್ಲ. ಅದಕ್ಕೇ ಆ ಕಾಲದ ಜನ ಮೆಚ್ಚಿ ಆ ರಾಗದ ಹೆಸರನ್ನೇ ಅವರಿಗೆ ಬಿರುದಾಗಿ ಕೊಡಿಸಿದ್ದರು. ಅಂಥವರು ಟೀಪುವಿನ ಇದಿರು

ಹಾಡಲೊಪ್ಪದೆ ತಮ್ಮ ನಾಲಗೆಯನ್ನೇ ಕತ್ತರಿಸಿಕೊಂಡರು. ಈ ಘಟನೆಯ ಹಿಂಬದಿಯಲ್ಲಿ, ಈ ದಾನಶಾಸನದ ಬರಡು ಮಾತುಗಳು ಬಣ್ಣಿಸಲಾಗದ ಎಂಥ ಮಹಾದುರಂತ ನಡೆದಿರಬೇಕೋ ನೀನು ಊಹಿಸಲಾರೆಯಾ ? ಚಿತ್ರದುರ್ಗದ ಗಂಡುಮೆಟ್ಟಿನ ಸಂಗೀತಗಾರ, ಕೋಟೆಬಿದ್ದರೂ ಟೀಪುವನ್ನು ಪ್ರತಿಭಟಿಸಿದ; ತನ್ನ ಪ್ರತಿಭಟನೆಯ ಬಲದಿಂದ ಟೀಪುವಿನ ಹೃದಯವನ್ನು ಸೋಲಿಸಿದ, ಎಂಬುದು ನಿನ್ನ ಮೈಯನ್ನು ಪುಲಕಿತಗೊಳಿಸುವುದಿಲ್ಲವೇ? ಚಿತ್ರದುರ್ಗದ ಇತಿಹಾಸದಲ್ಲಿ ಈ ರುದ್ರ ಘಟನೆ, ಬಂಗಾರದ ಅಧ್ಯಾಯವಲ್ಲವೇ ? ನಿನಗೆ ಯೋಚನೆ ಮಾಡುವ ಶಕ್ತಿಯೇ ಇಲ್ಲವೇ ? ನಿಮ್ಮಂಥವರನ್ನು ಕಟ್ಟಿಕೊಂಡು, ನಾನು ಹಾಳು ಬಾವಿಗೆ ಬೀಳಬೇಕು, ಅಷ್ಟೇ."

ಎಂದರು ರಾಯರು ಕಳಕಳಿಯಿಂದ. ಅವರ ಮಾತು ಕೇಳಿ ಒಂದು ನಿಮಿಷ ಸುಮ್ಮನಿದ್ದು, ಅವರು ಹೇಳಿದ ಮಾತನ್ನು ಮೆಲಕುಹಾಕಿದೆ. ಅವರು ಆಡಿದ ಮಾತು ನಿಜ ಎನಿಸಿತು. ಕೊಂಚ ಹೊತ್ತು ತಲೆ ಬಾಗಿಸಿ ಕುಳಿತಿದ್ದು, ಬಳಿಕ ಹೇಳಿದೆ :

"ನೀವಾಡಿದ ಮಾತು ನಿಜ, ರಾಯರೆ. ನಾನು ಅಷ್ಟೆಲ್ಲಾ ಯೋಚಿಸಲಿಲ್ಲ. ಯೋಚಿಸುವಷ್ಟು ಅವಕಾಶವೂ ನನಗೆ ಇರಲಿಲ್ಲ."

"ಹಾಗಲ್ಲ. ಯೋಚಿಸದೆ ಮಾತನಾಡುವುದು ನಿಮಗೆ ಅಭ್ಯಾಸವಾಗಿ ಹೋಗಿದೆ. ಅದಕ್ಕೇ ಬೇಸರವಾಯಿತು. ಹೋಗಲಿ, ಈಗಲಾದರೂ ಇದರ ಮಹತ್ವ ನಿನಗೆ ಅರ್ಥವಾಯಿತಲ್ಲ. ಈಗ ಒಂದು ಕೆಲಸ ಮಾಡಬೇಕು."

"ಏನು ?"

"ಈ ಕಾಗದ ನನಗೆ ಸಿಕ್ಕಿದ್ದು, ಹಿರಿಯೂರಿನ ಒಬ್ಬ ಕಕ್ಷಿಗಾರನ ಹಳೆಯ ಕಾಗದಗಳ ಕಟ್ಟಿನಲ್ಲಿ. ಅವನಿಗೆ ಇದು ಹೇಗೆ ಬಂತು ಎಂದು ವಿಚಾರಿಸಿದೆ. ನನಗೆ ಗೊತ್ತಿಲ್ಲ – ನಿಮ್ಮಜ್ಜೀನ ಕೇಳಿ ನೋಡ್ತೀನಿ ಅಂದ. ಅವನಿಗೆ ಒಂದು ಕಾಗದ ಬರೆದು ಕೊಡ್ತೀನಿ. ನೀನೇ ಹಿರಿಯೂರಿಗೆ ಹೋಗಿ ಎಲ್ಲಾ ವಿಚಾರಾನೂ ತಿಳಿದುಕೊಂಡು, ಸಾಧ್ಯವಿದ್ದರೆ, ಆ ವೆಂಕಟಸುಬ್ಬಯ್ಯನವರ ಮನೆತನದವರು ಯಾರಾದರೂ ಇದಾರೇನೋ, ಇದ್ದರೆ ಎಲ್ಲಿದಾರೆ ಅಂತ ಎಲ್ಲಾ ವಿಚಾರಿಸಿಕೊಂಡು ಬರಬೇಕು. ಆ ಜಾಡು ಸಿಕ್ಕಿದರೆ, ವೆಂಕಟಸುಬ್ಬಯ್ಯನವರ ವಿಚಾರ ಹೆಚ್ಚು ಹೊರಬೀಳಬಹುದು. ಅಷ್ಟು ಮಾಡ್ತೀಯಾ ?"

"ಆಗಲಿ, ವೆಂಕಟಸುಬ್ಬಯ್ಯನವರ ವಿಚಾರ ತಿಳಿದವರು ಈ ಊರಿನಲ್ಲಿ ಯಾರೂ ಇಲ್ಲವೇ ?"



"ಏನೋ, ವಿಚಾರಿಸಿ ನೋಡಬೇಕು. ಇಲ್ಲಿನವರಿಂದ ಹೆಚ್ಚು ತಿಳಿದೀತು ಎಂಬ ಆಸೆ ನನಗಿಲ್ಲ. ಒಂದೆರಡು ಹಳೆಯ ತಲೆ ಇವೆ. ಏನಾದರೂ ಗೊತ್ತಾದರೆ ಅವರಿಂದ ಗೊತ್ತಾಗಬೇಕು.ಏನಾದರೂ ತಿಳಿಯಲಿ ಬಿಡಲಿ, ನಾವು ಮಾಡುವ ಪ್ರಯತ್ನ ಮಾಡಬೇಕು."

"ಹೂ."

"ಬೇಕಾದರೆ ನೀನೇ ವಿಚಾರಿಸು, ಏಕನಾಥೇಶ್ವರೀ ದೇವಾಲಯದ ಅರ್ಚಕಂದಾರಲ್ಲಾ...."

"ಯಾರು, ವೀರಭದ್ರಪ್ಪನವರೆ....."

"ಹೂ........ ಅವರ ತಂದೆಯವರಿದಾರೆ. ತುಂಬಾ ವೃದ್ಧರು. ದುರ್ಗದ ಎಷ್ಟೋ ವಿಚಾರ ನನಗೆ ಅವರಿಂದ ತಿಳಿಯಿತು. ಈ ವಿಷಯವಾಗಿ ಇದುವರೆಗೂ ಏನೂ ಹೇಳಿಲ್ಲ. ನಾವೇ ವಿಚಾರಿಸಿದರೆ ಏನಾದರೂ ಗೊತ್ತಾಗಬಹುದು. ಹಾಗೇ ಮಠದ ರಂಗನಾಥ ಜೋಯಿಸರ ತಂದೆ, ಲಿಂಗಾಜೋಯಿಸರನ್ನೂ ವಿಚಾರಿಸು. ಯಾರನ್ನು ಕೇಳುತ್ತೀಯೋ, ಹೇಗೆ ಮಾಡುತ್ತೀಯೋ, ಅಂತೂ ಈ ವಿಚಾರದಲ್ಲಿ ನೀನು ಕೊಂಚ ಆಸಕ್ತಿ ತೆಗೆದುಕೊಂಡು ಕೆಲಸ ಮಾಡಬೇಕು"– ಎಂದರು ರಾಯರು. ಆ ವೇಳೆಗೆ ರಾಯರಷ್ಟೇ ಆಸಕ್ತಿ ನನಗೂ ಹುಟ್ಟಿತ್ತು – ವೆಂಕಟಸುಬ್ಬಯ್ಯನವರ ವಿಚಾರದಲ್ಲಿ. ಅವರು ಹೇಳಿದ ಜನರಲ್ಲಿ ವಿಚಾರಿಸುವುದಾಗಿ ಮಾತು ಕೊಟ್ಟೆ .

"ಅದಾಯಿತು. ನೀನು ಹಿರಿಯೂರಿಗೆ ಹೊರಡುವುದು ಯಾವಾಗ?"

"ನಾಳೆ, ನಾಡಿದ್ದು ಇಲ್ಲಿ ವಿಚಾರಿಸಿ, ಬಳಿಕ ಹಿರಿಯೂರಿಗೆ ಹೋಗುತ್ತೇನೆ."

"ಹಾಗೇ ಮಾಡು. ನೀನು ಹೋಗುವಾಗ ತಿಳಿಸಿದರೆ, ನನ್ನ ಕಕ್ಷಿಗಾರ ಭೀಮಣ್ಣನಿಗೆ ಕಾಗದ ಬರೆದುಕೊಡುತ್ತೀನಿ. ಅಂತೂ ವೆಂಕಟಸುಬ್ಬಯ್ಯನವರ ವಿಚಾರ ಸಂಪೂರ್ಣವಾಗಿ ಪತ್ತೆ ಹಚ್ಚಬೇಕು."

"ಖಂಡಿತವಾಗಿಯೂ."

ರಾಯರಿಗೆ ಮಾತು ಕೊಟ್ಟು ಮನೆಗೆ ಹಿಂತಿರುಗಿದೆ. ಅವರು ಹೇಳಿದ ನಾಲ್ಕು ಮಾತು ನನ್ನ ಊಹಾಯಂತ್ರಕ್ಕೆ ಕೀಲು ಕೊಟ್ಟಿತ್ತು. ಮನೆಗೆ ಹಿಂದಿರುಗಿ, ಊಟ ಮಾಡಿ ಮಲಗಿದಮೇಲೂ, ರಾಯರು ನಾನು ಮನೆಗೆ ಹೊರಟಾಗ ಹೇಳಿದ ಮಾತು ಕಿವಿಯಲ್ಲಿ ಮಾರ್ದನಿಗೊಡುತ್ತಿತ್ತು.

"ಎಂತೆಂತಹ ಮಹನೀಯರು ಅಗಿಹೋದರೋ ಏನೋ ಈ ಸೀಮೆಯಲ್ಲಿ, ಅವರ ಹೆಸರು ಕೂಡ ತಿಳಿಯದಷ್ಟು ನಿರ್ಭಾಗ್ಯರಾಗಿ ಹೋಗಿದೇವೆ ನಾವು."

ಭಾರವಾದ ಎದೆಯಾಳದಿಂದ ಹೊರಹೊಮ್ಮಿದ ನಿಟ್ಟುಸಿರಿನೊಂದಿಗೆ ಆ ಮಾತು ಆಡಿದ್ದರವರು. ಆ ಮಾತು ನನ್ನದೆಯಲ್ಲಿ ಕೊರೆಯುತ್ತಿತ್ತು.

ನಿಜ. ನಾವು ನಿರ್ಭಾಗ್ಯರು. ನಮಗೆ ನಮ್ಮ ನಾಡಿನ ಇತಿಹಾಸ, ನಮ್ಮ ನೆಲವನ್ನು ಪವಿತ್ರಗೊಳಿಸಿದ ಮಹನೀಯರ ವಿಚಾರ, ಏನೂ ತಿಳಿಯದು. ಅವರ ತ್ಯಾಗ, ಬಲಿದಾನ, ಸಾಹಸಗಳು ನಮ್ಮ ಮರೆವಿನ ಜಾಡ್ಯದಲ್ಲಿ ಕಣ್ಣು ಮರೆಯಾಗಿಹೋಗಿವೆ......

ನಾಲಿಗೆಯನ್ನೇ ಬಲಿಕೊಟ್ಟ ಹಾಡುಗಾರ! ನಮ್ಮ ಊರಿನವನು, ನಮ್ಮವನು! ಆದರೂ ಆತನ ವಿಚಾರ ನಮಗೆ ತಿಳಿಯದು. ಅಂದಿನವರೆಗೆ ಆತನ ಹೆಸರೇ ನಮಗೆ ಗೊತ್ತಿರಲಿಲ್ಲ....

ಯೋಚಿಸುತ್ತಾ, ಯೋಚಿಸುತ್ತಾ, ಹೇಗಾದರೂ ಮಾಡಿ, ಭೈರವಿ ವೆಂಕಟಸುಬ್ಬಯ್ಯನವರ ವಿಚಾರ ಪತ್ತೆಹಚ್ಚಲೇಬೇಕೆಂಬ ಹಟ ಮೂಡಿತು ನನ್ನಲ್ಲಿ. ಅದರೊಂದಿಗೆ, ಬೆಳಿಗ್ಗೆ ವಿಚಾರಿಸಿದಾಗ ಏನು ತಿಳಿಯುವುದೋ, ಇನ್ನೇನೇನು ಆ ಹಿರಿಜೀವನದ ಭವ್ಯಘಟನೆಗಳು ಬೆಳಕಿಗೆ ಬರುವುದೋ ಎಂದು ಚಿಂತಿಸುತ್ತಾ, ಹಗಲಾಗುವುದನ್ನೇ ಕಾದು, ಹಾಸಿಗೆಯಲ್ಲಿ ಹೊರಳಾಡಿದೆ.

ನನ್ನ ಕನಸಿನಲ್ಲೂ ಯಾರೋ ಭೈರವಿ ರಾಗವನ್ನು ಹಾಡುತ್ತಿದ್ದರು. ಹಾಡು ಕೇಳುತ್ತಿದೆ, ಮುಖ ಮಾತ್ರ ಕಾಣಿಸದು.

## ೩

ಮರುಪ್ರಾತಃಕಾಲ ಎದ್ದವನೇ, ನಾನು ನನ್ನ ಶೋಧವನ್ನು ಆರಂಭಿಸಿದೆ. ಮೊದಲು ರಾಯರು ಹೇಳಿದಂತೆ,ಲಿಂಗಾಜೋಯಿಸರನ್ನು ನೋಡಲು ರಂಗನಾಥ ಜೋಯಿಸರ ಮನೆಗೆ ಹೋದೆ. ಜೋಯಿಸರು ಆಗತಾನೇ ಸ್ನಾನವನ್ನು ಮಾಡಿ ಮಡಿ ಉಟ್ಟುಕೊಳ್ಳುವುದರಲ್ಲಿದ್ದರು. ನನ್ನ ಕರೆಯನ್ನು ಕೇಳಿ ಹೊರಬಂದು–

"ಯಾರು;ನೀನೆ – ಸುಬ್ರಹ್ಮಣ್ಯ, ಏನಾಗಬೇಕು?" ಎಂದು ಕೇಳಿದರು.

"ನಿಮ್ಮ ತಂದೆಯವರನ್ನು ಕೊಂಚ ನೋಡಬೇಕಾಗಿತ್ತು, ಜೋಯಿಸರೆ."

"ಏಕೆ?"

"ಅವರ ಹಿಂದಿನ ಕಾಲದವರೊಬ್ಬರ ವಿಷಯ ಕೊಂಚ ತಿಳಿದು ಕೊಳ್ಳಬೇಕಾಗಿತ್ತು. ಅದಕ್ಕೇ ಎದ್ದವನೇ ಬಂದೆ. ಇದಾರೇನು?"

"ಹೂ, ಇದಾರೆ, ಹಿತ್ತಲಲ್ಲ ಬಿಸಿಲು ಕಾಯಿಸುತ್ತಾ ಕೂತುಕೊಂಡಿರಬೇಕು. ಅಲ್ಲಿಗೇ ಬಾ" ಎಂದು ಹೇಳಿ, ರಂಗನಾಥ ಜೋಯಿಸರು ನನ್ನನ್ನು ತಮ್ಮ ತಂದೆಯ ಬಳಿ ಕರೆದುಕೊಂಡು ಹೋದರು.



ಮನೆ, ಊರ ಬಹುಭಾಗದ ಶೈವ ದೇವಾಲಯಗಳು ಪೂಜಾಧಿಕಾರ ಪಡೆದ ದೊಡ್ಡ ಜೋಯಿಸರದಾದರೂ, ಕಾಲಿಡಲು ಕೊಂಚ ಧೈರ್ಯವೇ ಬೇಕಾಯಿತು. ಆಂಧ್ರ ಕವಿಸಾರ್ವಭೌಮ ಶ್ರೀನಾಥ, ಒಂದು ಪುರೋಹಿತರ ಮನೆಯನ್ನು ಬಣ್ಣಿಸಿದ್ದಾನೆ – 'ಮಕ್ಕಳ ಹೇಸಿಗೆ, ಮೂಲೆಮೂಲೆಯಲ್ಲಿ ಮಾಸಿದ ಬಟ್ಟೆ , ಮಂಡೆ ಬೋಳಿಸಿದ ವಿಧವೆಯರ ತಂಡ, ಬೈಗುಳದ ಧ್ವನಿ – ಪುರೋಹಿತರ ಮನೆಯನ್ನು ನೋಡಬಾರದು, ಆಡಬಾರದು ಎಂದು. ರಂಗನಾಥ ಜೋಯಿಸರ ಮನೆಯೊಳಗೆ ಪ್ರವೇಶಿಸುವಾಗ, ಕೊಂಚ ಹೆಚ್ಚು ಕಡಿಮೆ, ಇದನ್ನೇ ನೋಡಿ ಶ್ರೀನಾಥ ವರ್ಣಿಸಿರಬಾರದೇ ಎನಿಸಿತು. ಆದರೂ ಕಾರ್ಯವಿದ್ದುದರಿಂದ ಅದಾವುದನ್ನೂ ಲೆಕ್ಕಿಸದೆ ಕಣ್ಣು ಮುಚ್ಚಿಕೊಂಡು ಒಳಗೆ ಹೋದೆ.

ಲಿಂಗಾಜೋಯಿಸರು, ಹಿತ್ತಲಲ್ಲಿ ವೃಂದಾವನದ ಕಟ್ಟೆಯ ಬಳಿ ಬಿಸಿಲು ಕಾಯಿಸಿಕೊಳ್ಳುತ್ತಾ ಕೂತಿದ್ದರು. ವಯಸ್ಸು ಎಪ್ಪತ್ತರ ಗೆರೆ ಮೀರಿದ್ದರಿಂದ ಅವರ ಕಿವಿ, ಕಣ್ಣು ಎರಡೂ ಮಂಜಾಗಿತ್ತು. ಜೋಯಿಸರು ಅವರಿಗೆ ಗಟ್ಟಿಯಾಗಿ ಕೂಗಿ ಹೇಳಿದರು–

"ಅಪ್ಪಾ , ಲಾಯರು ರಾಮಚಂದ್ರಯ್ಯನ ಮಗ ಸುಬ್ರಹ್ಮಣ್ಯ ಬಂದಿದಾನೆ, ನಿಮ್ಮನ್ನು ನೋಡಲಿಕ್ಕೆ" ಎಂದು. ಬಿಸಿಲಿಗೆ ಅಡ್ಡವಾಗಿ ಕಣ್ಣ ಮೇಲೆ ಕೈ ಹಿಡಿದು ನನ್ನನ್ನು ದಿಟ್ಟಿಸಿ ನೋಡಿ, ಲಿಂಗಾಜೋಯಿಸರು–

"ನೀನೇನೋ ರಾಮಚಂದ್ರಯ್ಯನ ಮಗ, ಚೆನ್ನಾಗಿದೀಯ? ಏನು ಬಂದದ್ದು?"– ಎಂದು ಕೇಳಿ, ನಾನು ಉತ್ತರ ಕೊಡಲು ಅವಕಾಶ ಕೊಡದೆ ನನ್ನ ಹಿಂದಿನ ಎರಡು ತಲೆಮಾರಿನ ನೆಂಟರಿಷ್ಟರು, ಅವರು ಮಕ್ಕಳು ಮೊಮ್ಮಕ್ಕಳು ಮೊದಲಾದವರ ಆರೋಗ್ಯ, ಮದುವೆ, ನೌಕರಿ, ಸಂತಾನಸೌಭಾಗ್ಯ ಮೊದಲಾದ ವಿಚಾರವನ್ನೆಲ್ಲಾ ಕೂಲಂಕಷವಾಗಿ ತಿಳಿದುಕೊಂಡು, ಬಳಿಕ ಆಗತಾನೇ ಏನೋ ಕೆಲಸದ ಮೇಲೆ ಬಂದಿರುವುದು ನೆನಪಾದಂತೆ – "ಏನಾಗ ಬೇಕಾಗಿತ್ತು?" ನಾನೀಗ ಜ್ಯೋತಿಷ್ಯ ಹೇಳೊಲ್ಲ. ಎಲ್ಲಾ ರಂಗನಿಗೇ ಬಿಟ್ಟು ಬಟ್ಟಿದ್ದೀನಿ"– ಎಂದರು.

"ಜ್ಯೋತಿಷ್ಯ ಕೇಳಲಿಕ್ಕೆ ಬರಲಿಲ್ಲ." – ಅವರಿಗೆ ಕೇಳಿಸುವಷ್ಟು ಗಟ್ಟಿಯಾದ ಧ್ವನಿಯಲ್ಲಿ ಹೇಳಿದೆ ನಾನು.

"ಮೆತ್ತಗೆ ಹೇಳು. ಕೇಳುತ್ತೆ. ಅಷ್ಟೇನೂ ಕಿವಿ ಮುಚ್ಚಿಕೊಂಡಿಲ್ಲ. ಮತ್ತೆ ಯಾಕೆ ಬಂದದ್ದು!"

"ಕಡೇ ಪಾಳೇಗಾರ ಮದಕರಿನಾಯಕರ ಕಾಲದಲ್ಲಿ.... "

"ಸರಿ, ಸರಿ.. ಅದೆಲ್ಲಾ ನಾನು ಹುಟ್ಟೋದಕ್ಕೆ ನೂರು ವರ್ಷ ಮುಂಚಿನ ಮಾತು...."

"ಹೂ, ಆಗ ದುರ್ಗದಲ್ಲಿ ಯಾರೋ ಒಬ್ಬ ಸಂಗೀತವಿದ್ವಾಂಸರಿದ್ದರಂತೆ, ಭೈರವಿ ವೆಂಕಟಸುಬ್ಬಯ್ಯಾಂತ. ಅವರ ವಿಷಯ ನಿಮಗೇನಾದರೂ ಗೊತ್ತೇ!"

"ಸಂಗೀತಗಾರನೇ... ಹೆಸರು ಏನೆಂದೆ... ?"

"ಭೈರವಿ ವೆಂಕಟಸುಬ್ಬಯ್ಯಾಂತ."

"ಭೈರವಿ ವೆಂಕಟಸುಬ್ಬಯ್ಯಾಂತಾಲೇ...ಅ...ಹೂ....ಆ ಹೆಸರೆಲ್ಲೋ ಕೇಳಿದ ಹಾಗಿದೆ...." ಎಂದು ಹೇಳಿ ಲಿಂಗಾಜೋಯಿಸರು, ಮರೆವಿನ ತುಕ್ಕುಹಿಡಿದ ತಮ್ಮ ಮೆದುಳನ್ನು ಚುರುಕು ಮಾಡಿಕೊಳ್ಳಲು, ತಲೆ ಕೆರೆದುಕೊಳ್ಳಲಾರಂಭಿಸಿದರು. ಅವರು ಹೇಳುವುದನ್ನು ಕೇಳಬೇಕೆಂಬ ಕುತೂಹಲವಿದ್ದರೂ ಅಡ್ಡ ಮಾತನಾಡಿ, ಅವರ ಚಿತ್ತಚಂಚಲತೆಗೆ ಕಾರಣವಾಗಲು ಇಚ್ಛೆ ಇಲ್ಲದೆ, ಅವರೇ ಜ್ಞಾಪಿಸಿಕೊಂಡು ಮಾತು ಮುಂದುವರಿಸುವವರೆಗೂ ಸುಮ್ಮನೆ ಕುಳಿತಿದ್ದೆ. ಲಿಂಗಾಜೋಯಿಸರು ಕೊಂಚ ಹೊತ್ತು, ಹಲ್ಲು ಹೋದ ಬಾಯನ್ನು ಚಪ್ಪರಿಸುತ್ತಾ, ಜ್ಞಾಪಿಸಿಕೊಂಡು ಹೇಳಿದರು –

"ಅಂದಹಾಗೆ ಆ ಹೆಸರೇ ನನಗೆ ಮರೆತುಹೋಗಿತ್ತು ನೋಡು, ಈಚೆಗೆ ಯಾರ ಬಾಯಲ್ಲೂ ನಾನವರ ಹೆಸರು ಕೇಳಿರಲಿಲ್ಲ. ನಿನಗೆ ಯಾಕೆ ಬೇಕಾಯಿತು ಆ ವಿಚಾರ ಈಗ?"

ಮನಸ್ಸಿಲ್ಲವಾದರೂ, ನಾನು ಅವರಿಗೆ, ವೆಂಕಟಸುಬ್ಬಯ್ಯನವರ ಹೆಸರು ಪರಿಚಯವಾದ ರೀತಿಯನ್ನು ವಿವರಿಸಬೇಕಾಯಿತು; ಹೇಳಿದೆ.

"ಓ! ಹಾಗೋ ಸಮಾಚಾರ. ಅವರು ನಾಲಿಗೆ ಕತ್ತರಿಸಿಕೊಂಡದ್ದು , ಕಿವಿ ಕೊಯ್ಯಿಸಿಕೊಂಡಿದ್ದು, ಅದೊಂದೂ ನನಗೆ ಗೊತ್ತಿಲ್ಲ. ನಮ್ಮ ಕಾಲಕ್ಕೆ ವೆಂಕಟಸುಬ್ಬಯ್ಯನವರು ಹಾಗೆ ಹಾಡುತ್ತಾ ಇದ್ದರು, ಹೀಗೆ ಹಾಡುತ್ತಾ ಇದ್ದರು ಅಂತ ಹೊಗಳೋದನ್ನು, ಹಳೇ ತಲೆಗಳ ಬಾಯಲ್ಲಿ ಕೇಳ್ತಾ ಇದ್ದೆ. ಅವರು ದೇವೀ ಉಪಾಸಕರಂತೆ, ಸರಸ್ವತಿಯೇ ಅವರ ನಾಲಿಗೆಯಲ್ಲಿ ಕೂತು ನುಡಿತಾ ಇದ್ದಳಂತೆ. ಅವರು ದೇವರ ಕೋಣೇಲಿ ಒಬ್ಬರೇ ಹಾಡುತ್ತಾ ಇದ್ದರೆ ತಾಯಿ ಕೂತು ಕೇಳ್ತಾ ಇದ್ದಳಂತೆ. ಪುಣ್ಯವಿದ್ದ ಜನ ಅದನ್ನು ನೋಡಿದ್ದರಂತೆ. ಈಗಿನ ಕಾಲದಲ್ಲಿ ಅದೆಲ್ಲಾ ಎಲ್ಲಿ ? ಜನಕ್ಕೆ ದೇವರೂ ಬೇಡ, ದಿಂಡರೂ ಬೇಡ"

– ಎಂದು ಲಿಂಗಾಜೋಯಿಸರು, ಸಿಕ್ಕ ಅವಕಾಶವನ್ನು ಉಪಯೋಗಿಸಿ



ಕೊಂಡು ಈಗಿನವರ ನಾಸ್ತಿಕತೆಯ ಮೇಲಿನ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

"ನಿಜ ಜೋಯಿಸರೆ, ಈಗಿನ ಕಾಲದಲ್ಲಿ ಜನಕ್ಕೆ ದೇವರು ಬೇಡ, ದೇವರಿಗೆ ಜನವೂ ಬೇಡವಾಗಿದೆ...."

"ಜನಕ್ಕೆ ದೇವರು ಬೇಕಾದರೆ ತಾನೇ ದೇವರಿಗೆ ಜನ ಬೇಕಾಗೋದು. ಆ ವೆಂಕಟಸುಬ್ಬಯ್ಯಾಂದೆಯಲ್ಲ. ಆತ ಪ್ರತಿ ಶುಕ್ರವಾರ ಸಂಜೆ ಬೆಟ್ಟದ ಮೇಲಿರೋ ಅಮ್ಮನವರ ಗುಡಿಯಲ್ಲಿ ಹಾಡ್ತಾ ಇದ್ದರಂತೆ. ಅವರು ಕುಳಿತು ಕೊಳ್ಳುತ್ತಿದ್ದ ಜಾಗವನ್ನು 'ವೆಂಕಟಸುಬ್ಬಯ್ಯನವರ ಕಲ್ಲು' ಎಂದು ಏಕನಾಥಮ್ಮನ ಗುಡೀಲಿ ನಮ್ಮ ಕಾಲದಲ್ಲಿ ತೋರಿಸುತ್ತಾ ಇದ್ದರು. ಈಗಿನವರಿಗೆ ಆದಾದರೂ ನೆನಪಿದೆಯೋ ಇಲ್ಲವೋ. ಅಷ್ಟೇಕೆ, ರಾಘವೇಂದ್ರರಾಯರಂಥವರು ಒಬ್ಬಿಬ್ಬರು ಇಲ್ಲದೇ ಹೋಗಿದ್ದರೆ, ಊರಿನ ಜನಕ್ಕೆ ಬೆಟ್ಟ ಇರೋದೂ ಮರೆತುಹೋಗ್ತಾಯಿತ್ತೋ, ಏನೊ."

ಗಳಿಗೆಗೊಂದು ಬಾರಿ ಅವರ ಮಾತಿನ ರಥ ಜಾಡು ತಪ್ಪುತ್ತಿತ್ತು. ನೆತ್ತಿಯ ಮೇಲೆ ಬಿಸಿಲು ಬಡಿಯುತ್ತಿದ್ದರೂ, ಅವಸರ ಮಾಡಿದರೆ, ಮತ್ತೆ ಎಲ್ಲಿ ನಿಲ್ಲಿಸಿಬಿಡುತ್ತಾರೋ ಎಂದು ಹೆದರಿ, ಸುಮ್ಮನೆ ಕುಳಿತು ಕೇಳುತ್ತಿದ್ದೆ.

"ಅವರು ಸಂಗೀತ ಎಲ್ಲಿ ಕಲಿತರು ಅನ್ನುವುದೇನಾದರೂ ನಿಮಗೆ ಗೊತ್ತೇ, ಜೋಯಿಸರೆ ?"

"ಉಹೂ. ನಮ್ಮ ಕಾಲಕ್ಕೇ ಅದೆಲ್ಲಾ ನೂರು ವರ್ಷದ ಹಿಂದಿನ ವಿಚಾರ...."

"ಅವರ ಮನೆತನದವರು ಯಾರಾದರೂ ಇದಾರೆಯೇ ?"

"ಏನೋ ನನಗೆ ಗೊತ್ತಿಲ್ಲ. ಹಿರಿಯೂರಿನ ಹತ್ತಿರ ತೊರೆಯೂರು ಅಂತ ಇದೆಯಲ್ಲ, ಅಲ್ಲಿ ಯಾರೋ ಇದಾರೆ ಅಂತ ಹೇಳ್ತಾ ಇದ್ದರು. ಈಗ ಇದಾರೋ ಇಲ್ಲವೋ ಯಾರಿಗೆ ಗೊತ್ತು. ಕಲಿಕಾಲ ಬಂದು ಬ್ರಾಹ್ಮಣ್ಯವೆಲ್ಲಾ ದಿಕ್ಕಾಪಾಲಾಗಿ ಹೋಗಿದೆ. ತೊರೆಯೂರಿನಲ್ಲೇ ವಿಚಾರಿಸಿದರೆ ಏನಾದರೂ ಗೊತ್ತಾಗಬಹುದು, ಆದರೆ ಅದೆಲ್ಲಾ ಯಾರಿಗೆ ಬೇಕು? ಒಬ್ಬೊಬ್ಬರಿಗೂ ಅವರದೇ ಹಾಸಿ ಹೊದ್ದುಕೊಳ್ಳುವಷ್ಟು ತಾಪತ್ರಯ, ಇನ್ನು ಇದೆಲ್ಲಾ ಕಟ್ಟಿಕೊಂಡು ಅಳೋರು ಯಾರು?"

"ಹಾಗಂತ ಎಲ್ಲವನ್ನೂ ಮರೆತುಬಿಡಬೇಕೇ, ಜೋಯಿಸರೆ?"

"ಮರೆಯದೆ–ನೆನಪಿಟ್ಟುಕೊಂಡರೆ, ಅದೇನು ಉಪ್ಪಿಗಾಗುತ್ತದೆಯೇ, ಮೆಣಸಿನಕಾಯಿಗಾಗುತ್ತದೆಯೇ? ನಿನಗಿನ್ನೂ ಹುಡುಗಬುದ್ಧಿ, ಸಂಸಾರ ಮನೆಗೆ ಬಂದರೆ ಈ ಹುಚ್ಚೆಲ್ಲಾ ಬಿಟ್ಟುಹೋಗುತ್ತೆ."

‘‘ಅಲ್ಲ ಜೋಯಿಸರೆ, ನೀವೇ ಈಗ ಹೇಳಿದಿರಿ, ರಾಘವೇಂದ್ರರಾಯರಂಥವರು ಒಬ್ಬಿಬ್ಬರಾದರೂ ಇರೋ ಹೊತ್ತಿಗೆ, ಊರಿನ ಜನಕ್ಕೆ ಬೆಟ್ಟದ ನೆನಪು ಉಳಿದಿದೆ ಎಂತ. ಈಗ ನೀವೇ ನನಗೆ ಈ ಹುಚ್ಚು ಬೇಡ ಅಂತೀರಲ್ಲಾ ?"

"ಸರಿ, ಸರಿ, ಅವರದು ಹತ್ತು ಅವತಾರವೂ ಮುಗಿದು ಹೋಗಿದೆ. ಏನಾದರೂ ಮಾಡಿಕೊಳ್ಳಲಿ. ನೀನಿನ್ನೂ ಮುಂದೆ ಬರಬೇಕಾದ ಹುಡುಗ, ಈಗಲೇ ಇದೆಲ್ಲಾ ಕಟ್ಟಿಕೋಬೇಡ. ಯಾರೆಲ್ಲಾದರೂ ಸಾಯಲಿ!" ಎಂದು ನನಗೆ ಬದುಕುವ ರೀತಿಯ ಉಪದೇಶ ಮಾಡಿದರು ಜೋಯಿಸರು.

ಜೋಯಿಸರ ಮಾತು ನನ್ನ ಮನಸ್ಸಿನಲ್ಲಿ ಮುಳ್ಳಿನಂತೆ ಮುರಿಯಿತು. ನಮ್ಮ ಹಿಂದಿನ ಹಿರಿಯರ ವಿಚಾರ ತಿಳಿದುಕೊಳ್ಳುವ ಪ್ರಯತ್ನ ಮಾಡುವುದು ಹುಚ್ಚೇ ?

"ಜೋಯಿಸರೇ, ನೀವು ಸತ್ತಮೇಲೆ ನಿಮ್ಮನ್ನೂ ನಾವು ಮರೆತುಬಿಡ ಬೇಕೇ?" ಎಂದು ಕೇಳಬೇಕೆಂದು ನಾಲಿಗೆಯ ತುದಿಯವರೆಗೂ ಮಾತು ಬಂದಿತು, ಆದರೆ ಆದರಿಂದೇನು ಸಾರ್ಥಕ? ವೃಥಾ ಅಸಮಾಧಾನ ಕಟ್ಟಿಕೊಂಡ ಹಾಗಾಗುವುದಲ್ಲದೆ, ಬೇರೇನೂ ಪ್ರಯೋಜನವಿಲ್ಲವೆಂದುಕೊಂಡು–

"ಬಿಸಿಲು ಏರ್ತಾ ಬಂತು, ಜೋಯಿಸರೇ, ನಾನು ಬರ್ತೀನಿ. ನೀವು ಹೇಳಿದ್ದು ತುಂಬಾ ಉಪಕಾರವಾಯಿತು" ಎಂದು ಹೇಳಿ, ನಮಸ್ಕಾರ ಹಾಕಿ ಹೊರಬಂದೆ.

ಜೋಯಿಸರಿಂದ ನನಗೆ ಹೆಚ್ಚೇನೂ ವಿಷಯ ಗೊತ್ತಾಗಲಿಲ್ಲವಾದರೂ, ರಾತ್ರಿ ಉತ್ಸಾಹದ ಉಕ್ಕಿನಲ್ಲಿ ಸುಳಿಯುತ್ತಿದ್ದ ಸಂದೇಹದ ಎಳೆಯೊಂದು ಹರಿದ ಹಾಗಾಯಿತು.

ರಾಘವೇಂದ್ರರಾಯರು ನನಗೆ ತೋರಿಸಿದ್ದು ಮೂಲಶಾಸನವಲ್ಲ , ಅದರ ಕಾಗದದ ನಕಲು. ಅಂಥ ನಕಲುಗಳೆನಿಸಿಕೊಂಡವು ಎಷ್ಟೋ ಕೃತಕವಾದವು; ಯಾರೋ ಯಾವುದೋ ಜಮೀನಿನ ಮೇಲೆ ಹಕ್ಕು ಸ್ಥಾಪಿಸಲೆಂದೋ, ಬೇರೆಯವರ ಸ್ವತ್ತಿನ ಮೇಲೆ ತಮ್ಮ ಅಧಿಕಾರ ಹೂಡಲು ಸೃಷ್ಟಿತವಾದವೋ ಆಗಿರುತ್ತಿದ್ದವು. ಬರೀ ಕಾಗದದ ನಕಲೇನು, ತಾಮ್ರ ಶಾಸನವನ್ನೇ ಸೃಷ್ಟಿ ಮಾಡಿದ ಪ್ರಸಂಗಗಳೂ ನನಗೆ ಗೊತ್ತಿತ್ತು. ಎಂತಲೇ ರಾಯರು ತೋರಿದ ದಾನ ಶಾಸನದ ನಕಲು ಅಂಥ ವಿಶ್ವಾಮಿತ್ರಸೃಷ್ಟಿಯೇನೋ, ಅದರಲ್ಲಿದ ವಿಷಯವೆಲ್ಲಾ ಬರೀ ಕಟ್ಟು ಕಥೆಯೇನೋ ಎಂದು ಒಂದು ಗಳಿಗೆ ಅನುಮಾನವಾಗಿತ್ತು.



ಆದರೆ ಜೋಯಿಸರಿಂದ ಆ ಹೆಸರಿನ ಸಂಗೀತಗಾರನೊಬ್ಬನು, ಕಡೆಯ ಪಾಳೆಯಗಾರರ ಕಾಲದಲ್ಲಿ ಬದುಕಿದ್ದನೆಂಬುದು ಸ್ಥಾಪಿತವಾದದ್ದಲ್ಲದೆ, ಆ ಮನೆತನದವರು, ಈಗ ಅಲ್ಲಿರುವುದು ಅನುಮಾನಾಸ್ಪದವಾದರೂ ಹಿಂದೆ ಹಿರಿಯೂರಿನ ಬಳಿ ತೊರೆಯೂರಿನಲ್ಲಿ ವಾಸವಾಗಿದ್ದರೆಂದೂ ತಿಳಿದಿತ್ತು. ಏಕನಾಥೇಶ್ವರಿಯ ದೇವಾಲಯದಲ್ಲಿ, ಅವರು ಹಾಡಲು ಕುಳಿತುಕೊಳ್ಳುತ್ತಿದ್ದ ಸ್ಥಳವಿತ್ತೆಂದು ಗೊತ್ತಾಗಿತ್ತು. ಅಷ್ಟಾದರೂ ತಿಳಿಯಿತೆಂದು ಮನಸ್ಸಿಗೆ ಕೊಂಚ ಸಮಾಧಾನವಾದರೂ, ಜೋಯಿಸರು ಆ ವಿಷಯ ಹೇಳುವಾಗ ತೋರಿದ ತಾತ್ಸಾರ, ನಿರಾಸಕ್ತಿಯಿಂದ ಮನಸ್ಸು ಮುದುಡಿಕೊಂಡಿತ್ತು. ವಿಷಯಸಂಗ್ರಹಣೆಗೆ ಹೊರಟವನಿಗೆ ನೀಡುವ ಸ್ವಾಗತವೇ ಇದು? ಉಪ್ಪು ಮೆಣಸಿನಕಾಯಿಗಿಂತಲೂ ಹೀನಾಯವೇ ನಮ್ಮ ಪ್ರಾಚೀನ ಇತಿಹಾಸ?

ದಿನದ ಬದುಕೇ ಭಾರವಾದ ಜನಕ್ಕೆ ಅದೆಲ್ಲಾ ಏಕೆ ಬೇಕು ಎಂದು ಮತ್ತೊಂದು ಧ್ವನಿ ನನ್ನೊಳಗೇ ಸವಾಲು ಹಾಕಿತು.

ಹಾಗೇ ಈ ವಿಚಾರವನ್ನೇ ಮೆಲುಕು ಹಾಕುತ್ತಾ, ರಾಯರು ಹೇಳಿದ ಮನೆಯ ಕಡೆ ಹೆಜ್ಜೆ ಹಾಕಿದೆ.

## ೪

ಏಕನಾಥೇಶ್ವರೀ ದೇವಾಲಯದ ಪೂಜಾರಿ ವೀರಭದ್ರಪ್ಪನ ಮನೆ, ಗುಡ್ಡದ ಒತ್ತಿನಲ್ಲೇ ಇತ್ತು. ಬೆಟ್ಟದಿಂದ ಕೆಳಗೆ ಸರಿದು, ನೆಲದ ಮೇಲೆ ಹರಡಿದಂತಿದೆ, ಚಿತ್ರದುರ್ಗದ ಊರು. ಪೂರ್ವದ ಹೆಬ್ಬಾಗಿಲಾದ ರಂಗಯ್ಯನ ಬಾಗಿಲನ್ನು ದಾಟಿ, ನಗರ ಪ್ರವೇಶ ಮಾಡಿ, ನೇರವಾಗಿ ದೊಡ್ಡಪೇಟೆಯಲ್ಲಿ ನಡೆದರೆ, ಇದುರಿಗೇ ಉತ್ಸವಾಂಬಾ ದೇವಾಲಯ ಬೆಟ್ಟದ ಬುಡದಲ್ಲಿ ನಿಂತಿದೆ. ಪೇಟೆಯ ಇಬ್ಬದಿಯಲ್ಲೂ, ನೀಲನಭದಲ್ಲಿ ಹಸಿರು ಗರಿಯಾಡಿಸುವ ತೆಂಗಿನ ಮರದ ಸಾಲು, ಅದರ ನಡುವೆ ಉನ್ನತ ಗೋಪುರದ, ಭವ್ಯವಾದ ನಗರ ದೇವತೆಯ ಮಂದಿರ. ಅದರ ಹಿನ್ನೆಲೆಯಲ್ಲಿ ಕಿರಿದಾದ ಗುಡ್ಡದ ನೆತ್ತಿಯ ಮೇಲೆನಿಂತ, ಬಸವನ ಬುರುಜು. ಅದಕ್ಕೂ ಹಿಂದೆ, ಎಷ್ಟೋ ಎತ್ತರದ ಮೇಲೆ ನಿಂತ, ಬಿಸಿನಲ್ಲಿ ಎಳೆನೀಲಿಯ ಬಣ್ಣವಾಗಿ ಕಾಣುವ ಬಾವುಟದ ಬತೇರಿ. ಎಷ್ಟೋ ವರ್ಷಗಳಿಂದ ನಾನು ದಿನದಿನವೂ ನೋಡುತ್ತಿದ್ದ ದೃಶ್ಯ ಅದು. ಆದರೂ ಇಂದೂ ಅದೆಲ್ಲದರಲ್ಲೂ ಹೊಸದೇನೋ ಒಂದು ಕಾಣುತ್ತಿತ್ತು. ಅವು ನನ್ನಿಂದ ದೂರವಾದ ಪ್ರಕೃತಿವಸ್ತುಗಳಂತೆ ಕಾಣದೆ, ನಮ್ಮೀರ್ವರ ನಡುವೆ ಏನೋ ಒಂದು ಬಗೆಯ ಆತ್ಮೀಯತೆ ಬೆಳೆದಂತಿತ್ತು.

ಹಾಗೆ ಕನಸುಗಣ್ಣಿನಿಂದ ಎಲ್ಲವನ್ನೂ ನೋಡುತ್ತಾ ವೀರಭದ್ರಪ್ಪನ ಮನೆಯತ್ತ ನಡೆದೆ.

ಉತ್ಸವಾಂಬಾ ದೇವಾಲಯದ ಬಳಿಯ ಗಲ್ಲಿಯಲ್ಲಿ ತಿರುಗಿ, ಕೊಂಚ ಮೇಲುಭಾಗಕ್ಕೆ ಹೋದರೆ, ಅಲ್ಲೇ ವೀರಭದ್ರಪ್ಪನ ಮನೆ. ಮನೆ ಸಣ್ಣದಾದರೂ ಚೊಕ್ಕಟವಾಗಿತ್ತು. ಅಂಗಳದಲ್ಲಿ ಬೆಳೆದ ದೇವಗಣಗಿಲೆ ಮರ, ಅಂಗಳದ ತುಂಬಾ ನೆರಳು ಚೆಲ್ಲಿತ್ತು. ಅಗಲವಾದ ಹಸುರೆಲೆಗಳು ತುಂಬಿದ ಮರದಲ್ಲಿ ಅಲ್ಲಲ್ಲಿ ನಕ್ಷತ್ರದಂತೆ ಅರಳಿದ ದೇವಗಣಗಿಲೆಯ ಹೂವಿನ ಬಹು ನವಿರಾದ ಪರಿಮಳ, ಏರುಬಿಸಿಲಿನ ಹಗಲಿನಲ್ಲೂ ಹೃದಯಕ್ಕೆ ತಂಪುನೀಡುತ್ತಿತ್ತು. ಮರದ ನೆರಳಿನಲ್ಲಿ ಕಟ್ಟಿದ ಮುದ್ದಾದ ಕರುವೊಂದು ಹಸಿರು ಮೇಯುತ್ತಿತ್ತು.

ಮುಂದೆಮಾಡಿದ ಬಾಗಿಲನ್ನು ತಟ್ಟಿ ವೀರಭದ್ರಪ್ಪನನ್ನು ಕೂಗಿದೆ. ವೀರಭದ್ರಪ್ಪ ಒಳಗೇನೋ ಕೆಲಸದಲ್ಲಿದ್ದನೆಂದು ಕಾಣುತ್ತದೆ. ಒಂದೆರಡು ಬಾರಿ ಕೂಗಿದಮೇಲೆ ಬಂದು ಬಾಗಿಲು ತೆರೆದು ಏನೆಂದು ವಿಚಾರಿಸಿದ.

"ಮುರಗೇಂದ್ರಪ್ಪನವರನ್ನು ನೋಡೋಣಾಂತ ಬಂದೆ, ಇದಾರೇನು ?"

"ಇಲ್ಲ. ಬೆಟ್ಟದ ಮೇಲಿದಾರೆ"

"ಹೋಗಿ ಈಗಾಗಲೇ ಮೂರು ದಿನ ಆಯಿತು. ಯಾವಾಗ ಬರ್ತಾರೋ ಏನೋ."

"ಅಲ್ಲೆಲ್ಲಿ, ದೇವಸ್ಥಾನದಲ್ಲೇ ಇರ್ತಾರೆಯೇ?"

"ಊಹೂ, ಉಯ್ಯಾಲೆಕಂಬದ ಹತ್ತಿರ ಒಂದು ಸಣ್ಣ ಮನೆ ಇಲ್ಲವೆ, ಅಲ್ಲಿರ್ತಾರೆ. ಅಮ್ಮನೋರ ಪೂಜೇನೂ ಅವರೇ ಮಾಡ್ತಾ ಇದ್ದಾರೆ, ಈಗ ಮೂರು ದಿವಸದಿಂದ."

"ಈ ವಯಸ್ಸಿನಲ್ಲೂ ! ಹಾಯಾಗಿ ಮನೇಲಿರಬಾರದೇ?"

"ಅದು ಈ ಜಾಯಮಾನಕ್ಕೇ ಬಂದಿಲ್ಲ, ರಾಯರೆ. ನಾನೂ ಹಾಗೇ ಹೇಳಿದೆ, ಮುದುಕ ಕೇಳಲಿಲ್ಲ. ಈ ಭೂಮೀ ಮೇಲೆ ಇರೋದು ಎಷ್ಟು ದಿನಾನೋ ಏನೋ, ಇರೋ ಅಷ್ಟು ದಿನ ಅಮ್ಮನೋರ ಪೂಜೆ ಮಾಡಿಬಿಟ್ಟು ಕಣ್ಣು ಮುಚ್ಚಿಕೋತೀನಿ ಅಂತಾರೆ."

"ಬೆಟ್ಟದಲ್ಲಿ ಒಬ್ಬರೇ ಇರೋದಕ್ಕೆ ಕಷ್ಟವಾಗುವುದಿಲ್ಲವೇ?"

"ನನ್ನ ಮಗ, ರುದ್ರಮುನಿ ಅವರ ಜೊತೇಲೆ ಇದಾನೆ. ಅವನೇ ಬಂದು ಎರಡು ಹೊತ್ತೂ ಊಟ ತೆಗೆದುಕೊಂಡು ಹೋಗ್ತಾನೆ. ಹಣ್ಣೆಲೆ, ಚಿಗುರೆಲೆ ಎರಡೂ ಒಂದಾಗಿ ಕಾಲ ಹಾಕ್ತಿವೆ, ಬೆಟ್ಟದ ಮೇಲೆ."



"ಅಂತೂ ನಿಮ್ಮ ತಂದೆ ಗಟ್ಟಿಗರು. ನಮ್ಮಿಂದ ಆಗೋ ಕೆಲಸವಲ್ಲ ಅದು."

"ಬೆಟ್ಟ ಅಂದರೆ ಅವರಿಗೆ ಊರಿಗಿಂತ ಸಲೀಸು. ಇಲ್ಲಿದ್ರೆ ಅಗೋ ಅಷ್ಟು ಬೇಜಾರು ಕೂಡಾ ಅಲ್ಲಿದ್ರೆ ಅಗೋದಿಲ್ಲ ಅಂತಾರೆ. ನಾನು ಹೇಳೋ ಅಷ್ಟು ಹೇಳಿ ಸುಮ್ಮನಾಗಿಬಿಟ್ಟೆ."

"ಹಾಗಾದರೆ ಈಗ ಬೆಟ್ಟಕ್ಕೆ ಹೋದರೆ ಸಿಗ್ತಾರೆಯೆ?"

"ಹೂ. ಮನೇಲೋ, ಗುಡೀಲೋ ಇರ್ತಾರೆ."

"ಅಲ್ಲೇ ಹೋಗಿ ನೋಡ್ತೀನಿ."

ನನ್ನ ಮಾತು ಕೇಳಿ ವೀರಭದ್ರಪ್ಪನಿಗೆ ಆಶ್ಚರ್ಯವಾಯಿತು.

"ಅದೇನಾದ್ರೂ ಹೇಳೋದಿದ್ರೆ ನನಗೆ ಹೇಳಿ, ಈಗ ರುದ್ರಮುನಿ ಊಟ ತಗೊಂಡು ಹೋಗಲಿಕ್ಕೆ ಬರ್ತಾನೆ. ಅವನ ಕೈಲಿ ಹೇಳಿಕಳಿಸುತ್ತೀನಿ."

"ಇಲ್ಲ , ಅವರನ್ನೇ ನೋಡಿ ತಿಳಿದುಕೊಳ್ಳಬೇಕಾದ ವಿಷಯವಿತ್ತು."

"ಬಿಸಿಲು ಏರೋ ಹೊತ್ತು. ಸಂಜೆ ಹೋಗಬಹುದಲ್ಲ."

"ಏನೂ ಅಷ್ಟು ಬಿಸಿಲಿಲ್ಲ. ನೋಡಿಕೊಂಡೇ ಬಂದು ಬಿಡುತ್ತೀನಿ"– ಎಂದು ವೀರಭದ್ರಪ್ಪನಿಗೆ ನಮಸ್ಕಾರ ಹೇಳಿ, ಹಾಗೇ ಬೆಟ್ಟದ ಮೇಲೆ ಏರಿದೆ.

ಬಸವನ ಬುರುಜಿಗೆ ಹೋಗುವ ದಾರಿಯನ್ನು ಹಿಡಿದು ಮುರಿದ ಕೋಟೆಗೋಡೆಯ ನಡುವೆ ದಾಟಿ, ಕೋಡುಗಲ್ಲಿನ ನಡುವೆ ನುಸಿದು, ಸ್ವಲ್ಪದೂರ ಹೋಗಿ ಸುಮಾರು ನೂರು ಮೆಟ್ಟಲುಗಳನ್ನು ಹತ್ತಿದರೆ, ಕಸ್ತೂರಿ ರಂಗಪ್ಪನಾಯಕರು ಕಟ್ಟಿಸಿದ ಚಿತ್ರದ ಬಾಗಿಲು. ಅಲ್ಲಿಂದ ಮುಂದೆ, ಹಿಂದೆ ಅನೆಕುದುರೆಗಳು ನಡೆಯಲು ಅನುಕೂಲವಾಗಲೆಂದು ಗುಳಿ ತೆಗೆದು ನುಣುಪಾದ ಕಲ್ಲುಗಳನ್ನು ಏರಿ ನಡೆದರೆ ಇದುರಿಗೆ ಕಲ್ಲಿನ ಗರಡಿಯ ಮನೆ, ಅವರ ಬದಿಯಲ್ಲೇ ಗಣಪತಿಯ ದೇವಾಲಯ. ಅಲ್ಲಿಂದ ಕೊಂಚ ಮುಂದೆ ನಡೆದು, ಎಡಕ್ಕೆ ತಿರುಗಿದರೆ, ಇದುರಿಗೆ ಮತ್ತೊಂದು ಬಾಗಿಲು. ಆ ಬಾಗಿಲು ದಾಟಿದರೆ, ವಿಶಾಲವಾದ ದೇವಾಲಯದ ಬಯಲು. ಪಾಳೆಯಗಾರರ ಕಾಲದಲ್ಲಿ ಬಹುಮುಖ್ಯವಾದ ರಾಜಭವನಗಳಿದ್ದುದು, ಆ ಬಯಲಿನಲ್ಲೇ. ಎಡಪಕ್ಕಕ್ಕೆ ಸಂಪಿಗೆ ಸಿದ್ದೇಶ್ವರ ದೇವಾಲಯಕ್ಕೆ ಹೋಗುವ ದಾರಿ, ಟಂಕಸಾಲೆ, ಕಲ್ಲಿನ ಉಗ್ರಾಣಗಳಿವೆ. ಅವುಗಳ ಬೆನ್ನಿಗೇ ನಂದಿಯಂತೆ ಮೈನೀಡಿ ಮಲಗಿದ ಬಹು ದೊಡ್ಡ ಬಂಡೆಯ ಮೇಲೆ ಹಿಡಂಬೇಶ್ವರನ ದೇವಾಲಯ. ಬಲಪಾರ್ಶ್ವಕ್ಕೆ ಎತ್ತರವಾದ ಮಟ್ಟದಲ್ಲಿ ಏಕನಾಥೇಶ್ವರಿಯ ದೇವಾಲಯ. ಇದುರಿಗೆ ಬರೀ ಮಣ್ಣು ಗೋಡೆಗಳು ಕಾಣುವ ಕೋಶಾಗಾರ. ಇವುಗಳ ನಡುವೆ ಕಲ್ಲಿನ ಉಯ್ಯಾಲೆ, ಒಂದೇ ಕಲ್ಲಿನಲ್ಲಿ ಕಡೆದ ಹತ್ತಾಳು

ಎತ್ತರದ ಬಾಣಂತಿ ಕಂಬ. ಉಯ್ಯಾಲೆ ಕಂಬ ಕೋಶಾಗಾರಗಳ ನಡುವೆ, ಹಿಂದೆ ಪಾಳೆಯಗಾರರು ಕಾಮನ ಹಬ್ಬದಲ್ಲಿ ಓಕುಳಿಯಾಟವಾಡಲು ನಿರ್ಮಿಸಿದ್ದ ಮಣ್ಣು ಕಲ್ಲು ತುಂಬಿದ ಪುಟ್ಟ ಕೊಳದ ಬಳಿ, ಸಣ್ಣದೊಂದು ಕಲ್ಲಿನ ಮನೆ ಇದೆ. ಅದೇ ವೀರಭದ್ರಪ್ಪ ಹೇಳಿದ ಮನೆ.

ಮನೆಯ ಬಾಗಿಲಿಗೆ ಬೀಗ ಹಾಕಿದ್ದುದರಿಂದ, ಮುರುಗೇಂದ್ರಪ್ಪನವರು ದೇವಾಲಯದಲ್ಲಿರಬೇಕೆಂದು ತಿಳಿದು ದೇವಾಲಯಕ್ಕೆ ಹೋದೆ.

ಏಕನಾಥೇಶ್ವರಿಯ ದೇವಾಲಯ ಕೋಡುಗಲ್ಲಿನ ಅಡಿಯ ಗುಹೆಗೆ ಹೊಂದಿಕೊಂಡು ನಿರ್ಮಾಣವಾದ ದೇವಾಲಯ ಗುಹೆಯೇ ಅಮ್ಮನವರ ಗರ್ಭ ಗುಡಿ, ಮುಂದೆ ಎರಡಂಕಣದ ಕೈಸಾಲೆಯಿದೆ. ದೇವಾಲಯದ ಮುಂದೆ ನಿಂತು ನೋಡಿದರೆ ಕಾಣುವ ದೃಶ್ಯ ಚೇತೋಹಾರಿಯಾದದ್ದು. ಇದುರಿಗೆ ಅರ್ಧ ವೃತ್ತಾಕಾರದಲ್ಲಿ ಬೆಟ್ಟ ತನ್ನ ತೋಳು ಚಾಚಿದೆ. ಸಾಲಾಗಿ ಗೋಪುರವಿಟ್ಟಂತಿರುವ ಬೆಟ್ಟಗಳ ಕೋಡಿನ ಮೇಲೆ, ಕಹಳೆಬತೇರಿ, ರಣಬತೇರಿ, ತುಪ್ಪದ ಕೊಳದ ಬತೇರಿಗಳು; ಅದರ ಕೆಳಗೆ ಸಂಪಿಗೆ ಸಿದ್ಧೇಶ್ವರನ ದೇವಾಲಯ, ಮುರುಗಿ ಮಠ, ಪಾಂಡವರ ವಿಮಾನಗಳು, ತುಲಾಭಾರದ ಕಂಬಗಳು, ಬದಿಯಲ್ಲೇ ಅರಮನೆಯ ಬಯಲು.

ಒಂದು ಘಳಿಗೆ ಹಾಗೇ ನಿಂತು ನೋಡಿದೆ. ಅದೆಲ್ಲಾ ನನ್ನದು, ನನ್ನವರದು ಎಂಬ ಭಾವನೆ ಎದೆಯಲ್ಲಿ ತುಂಬಿಬಂತು. ವಿಚಾರಿಸುವವರು ದಿಕ್ಕಿಲ್ಲದೆ, ಬೆತ್ತಲೆ ನಿಂತ, ಬರಿ ಎಲುಬಿನ ಗೂಡಾದ ಬಂಧುಗಳಂತೆ ಕಾಣಿಸಿತು, ಬೋಳುಬೆಟ್ಟದ ಸಾಲಿನಲ್ಲಿ ಅಸ್ತವ್ಯವಸ್ತವಾಗಿ ಹರಡಿದ ಅವಶೇಷಗಳು. ಹಗಲಿನಲ್ಲೂ ನಿಡುಮೌನ ಅವರಿಸಿತ್ತು. ಹಕ್ಕಿ ಹಾರಿಹೋದ ಪಂಜರದಂತಿದ್ದ ಆ ಪರ್ವತಹೃದಯಲ್ಲಿ ಮೌನವೇ ಮಹಾ ಶೋಕಧ್ವನಿಯಾಗಿ ಮಿಡಿಯುತ್ತಿತ್ತು. ಕಲ್ಲಿನ ಮೇಲೆ ಕಲ್ಲು ಪೇರಿಸಿದಂತಿದ್ದ ಬೆಟ್ಟದಲ್ಲಿ ಕಾಣುವ ನೂರುಗವಿಗಳು ಕತ್ತಲು ತುಂಬಿದ ಕಂಕಾಳದ ಕಣ್ಣುಗಳಂತೆ ಜನವಿಹೀನವಾದ ಪಾಳನ್ನು ದಿಟ್ಟಿಸುತ್ತಿದ್ದವು. ಅದೆಲ್ಲವನ್ನು ನೋಡಿ ಏಕೋ ಹೃದಯವನ್ನು ಕಿವುಚಿದ ಹಾಗಾಯಿತು. ನೋಡಲಾರದೆ ದೃಷ್ಟಿಯನ್ನು ತಿರುಗಿಸಿ, ದೇವಾಲಯದ ಕಡೆ ತಿರುಗಿದೆ.

ದೊಡ್ಡ ಕಲ್ಲಿನ ಬೀಸುವಕಲ್ಲು, ಒಂದೆರಡು ಒಡೆದ ನಗಾರಿಗಳು, ಪಾಲಕಿಗಳನ್ನಿಟ್ಟ ದೇವಾಲಯದ ಕೈಸಾಲೆಯಲ್ಲಿ ಮುರುಗೇಂದ್ರಪ್ಪ ಮೊಮ್ಮಗನೊಡನೆ ಕುಳಿತಿದ್ದರು.



ಮುರುಗೇಂದ್ರಪ್ಪನವರಿಗೆ ಎಪ್ಪತ್ತೈದಕ್ಕೂ ಮಿಕ್ಕು ವಯಸ್ಸಾಗಿತ್ತು. ಸುಮಾರು ಆರು ಅಡಿ ಎತ್ತರದ ಅಳು. ಎತ್ತರಕ್ಕೆ ಹದನಾಗಿ ಬೆಳೆದ ಮೈ ಈಗ ಕೊಂಚ ಸುಕ್ಕಾಗಿ ಬಳಲಿದಂತೆ ಕಂಡರೂ, ದುರ್ಬಲವೆಂದು ತೋರುವುದಿಲ್ಲ. ತಲೆಯಲ್ಲಿ ಬಿಳಿಗೂದಲ ಗಂಟು. ನೋಡಿದವರಲ್ಲಿ ಗೌರವನ್ನು ಮೂಡಿಸುವಂಥ ವ್ಯಕ್ತಿತ್ವ. ಒಂದು ಕಾಲಕ್ಕೆ ಊರಿನ ಹಿರಿತಲೆಯಾಗಿ ಬಾಳಿದ ಜೀವ ಅದು. ಆದರೆ ಈಗ, ತನ್ನ ಉಪಯುಕ್ತತೆಯನ್ನು ಮಾತ್ರ ಉಳಿಸಿಕೊಂಡಿದೆ. ದೇವರ ಹೆಸರುಗಳನ್ನೇ ಕೇಳುವವರಿಲ್ಲವಾದ ಊರಿನಲ್ಲಿ ಅರ್ಚಕರನ್ನು ಕೇಳುವವರು ಯಾರು ?

ಎಂತಲೇ ನಾನು ಅವರನ್ನು ಹುಡುಕಿಕೊಂಡು ಹೋದುದನ್ನು ಕಂಡು ಮುರುಗೇಂದ್ರಪ್ಪನವರಿಗೆ ಆಶ್ಚರ್ಯವಾಯಿತು.

"ನನ್ನ ನೋಡಾಕಂತ್ಲೇ ಬಂದ್ರಾ ಈ ಬಿಸ್ಲಾಗೆ ? ಅಪ್ಪಯ್ಯ ಆರೋಗ್ಯವಾ?"

"ಹೂ. ನಿಮ್ಮನ್ನು ನೋಡಬೇಕೆಂದೇ ಬಂದೆ, ಮುರುಗೇಂದ್ರಪ್ಪ"

"ಏನಾರ ಕೇಳೋದಿತ್ತೇನು ?"

"ಹೂ."

"ಏನು ?"

"ಏಕನಾಥಮ್ಮನ ಗುಡೀಲಿ 'ವೆಂಕಟಸುಬ್ಬಯ್ಯನೋರ ಕಲ್ಲು' ಅಂತ ಇದೆಯಂತೆ. ಇವತ್ತು ಜೋಯಿಸರು ಹೇಳಿದರು....."

"ಜೋಯಿಸರ ರಂಗಪ್ಪನೋರಾ...."

"ಅಲ್ಲ, ಲಿಂಗಾಜೋಯಿಸರು....."

"ಹಂಗನ್ನಿ. ರಂಗಪ್ಪನೋರಿಗೆ ಅದೆಲ್ಲಾ ಏನು ಗೊತ್ತು ? ದೊಡ್ಡ ಜೋಯಿಸರೂ ಚಿಕ್ಕಂದಿನಾಗೆ ಕೇಳಿರಬೇಕು."

"ಆ ಕಲ್ಲು ಈಗಲೂ ಇದೆಯೇ, ಮುರುಗೇಂದ್ರಪ್ಪ ?"

"ಇದೆ. ಕಲ್ಲೆಲ್ಲಿ ಹೋಗ್ತದೆ ? ನೋಡೋರಿಲ್ಲ ಅಷ್ಟೆ."

"ಈಗ ನಾನು ನೋಡೋಕಾಗ್ತದೆಯೇ ಅದನ್ನ ? ನಿಮಗೆ ಶ್ರಮವಾಗೋದಾದರೆ ಬೇಡ."

"ಹೂ, ತೋರಿಸ್ತೀನಿ. ಶ್ರಮ ಎಂಥಾದ್ದು. ನೀವು ನೋಡಲೇಬೇಕೂನ್ನೋದೆ ಹೆಚ್ಚು"– ಎಂದು ಹೇಳಿ, ಮುರುಗೇಂದ್ರಪ್ಪ ದೇವಾಲಯದ ಒಳಗಿದ್ದ ಮೊಮ್ಮಗನನ್ನು ಕೂಗಿ–

"ರುದ್ರಮುನಿ, ಒಂದು ಹಣತೆ ಹಚ್ಕೊಂಡು ಬಾ" – ಎಂದು ಕೇಳಿ ಮೇಲೆದ್ದು ದೇವಾಲಯದ ಒಳಗೆ ಹೋದರು. ನಾನು ಅವರನ್ನು ಹಿಂಬಾಲಿಸಿದೆ.

ಗರ್ಭಗುಡಿಯ ಎದುರಿನ ಅಂಕಣದಲ್ಲೂ ಕತ್ತಲು ತುಂಬಿತ್ತು. ರುದ್ರಮುನಿ ಹಚ್ಚಿತಂದ ಹಣತೆಯ ಬೆಳಕಿನಲ್ಲೂ ಯಾವುದೂ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅಭ್ಯಾಸಬಲದಿಂದ ಮುರುಗೇಂದ್ರಪ್ಪನವರೇನೋ ಸಲೀಸಾಗಿ ಓಡಾಡಿದರೂ, ನನಗೆ ಮಾತ್ರ ಹೆಜ್ಜೆ ಹೆಜ್ಜೆಗೂ ಎಡಹುವಂತೆ ಆದುದರಿಂದ ಕಣ್ಣಿಗೆ ಆ ಕತ್ತಲು ಕೊಂಚ ಅಭ್ಯಾಸವಾಗಲೆಂದು ಒಂದು ಗಳಿಗೆ ಹಾಗೇ ನಿಂತಿದ್ದೆ. ಮುರುಗೇಂದ್ರಪ್ಪ, ರುದ್ರಮುನಿ, ಕತ್ತಲಲ್ಲಿ ಏನೋ ದೊಡ್ಡ ಮರದ ಪೆಟ್ಟಿಗೆಗಳನ್ನು ಸರಿಸುವ ಸದ್ದು ಕೇಳುತ್ತಿತ್ತು. ಐದಾರು ನಿಮಿಷಗಳಾದ ಮೇಲೆ, ರುದ್ರಮುನಿ, ಹಣತೆ ತೆಗೆದುಕೊಂಡು ಬಂದು, 'ಹೀಗೆ ಬನ್ನಿ' ಎಂದು ಕರೆದು, ಅವನು ಬೆಳಕು ತೋರಿಸಿದತ್ತ ನಡೆದೆ.

ಗರ್ಭಗುಡಿಯ ದ್ವಾರದ ಬಲಪಾರ್ಶ್ವಕ್ಕೆ ಹತ್ತು ಹೆಜ್ಜೆ ದೂರದಲ್ಲಿ ಮುರುಗೇಂದ್ರಪ್ಪ ಕುಳಿತಿದ್ದರು. ಅವರ ಬಳಿಯಲ್ಲೇ ರುದ್ರಮುನಿ ಹಣತೆಯನ್ನಿಟ್ಟ.

"ಇದೇ ನೋಡಿ ವೆಂಕಟಸುಬ್ಬಯ್ಯನೋರ ಕಲ್ಲು –" ಎಂದರು ಮುರುಗೇಂದ್ರಪ್ಪ. ಹಣತೆಯ ದೀಪದ ಮಂಕು ಬೆಳಕಿನಲ್ಲಿ , ಮುರುಗೇಂದ್ರಪ್ಪ ಕೈತಟ್ಟಿ ತೋರಿಸಿದ ಜಾಗವನ್ನು ನೋಡಿದೆ.

ದೇವಾಲಯದ ಬಂಡೆ ಹಾಸಿದ ನೆಲದಲ್ಲಿ ನಾಲ್ಕಾರು ಅಂಗುಲ ಎತ್ತರವಾಗಿ, ಹತ್ತು ಜನ ಕುಳಿತುಕೊಳ್ಳುವಷ್ಟು ವಿಶಾಲವಾದ, ನಯ ಮಾಡಿದ ಚೌಕಾಕಾರವಾದ ಅಖಂಡಶಿಲೆ. ಅದರ ನಾಲ್ಕು ಸುತ್ತಿನಲ್ಲೂ ಚಿತ್ರಗೆಲಸದ ಅಂಚು ಬಿಡಿಸಿ, ಅದರ ನಡುವೆ ಅಷ್ಟ ದಳದ ಪದ್ಮವನ್ನು ಕೆತ್ತಿದ್ದರು. ಬಂಡೆಯ ಹಲಗೆ ನಯವಾಗಿ ಹಣತೆಯ ಬೆಳಕಿನಲ್ಲಿ ಕಪ್ಪಾಗಿ ಹೊಳೆಯುತ್ತಿತ್ತು.

"ಇದರ ಮೇಲೆ ಕೃಷ್ಣಾಜಿನ ಹಾಸಿಕೊಂಡು, ಕೂತು ಹಾಡ್ತಾ ಇದ್ರಂತೆ ಅಯ್ನೋರು. ಆ ಪಕ್ಕಕ್ಕೆ ಎದುರಿಗೇ ಆ ಭಾಗದಲ್ಲಿ ಇನ್ನೊಂದು, ಇಂಥದೇ ಕಲ್ಲಿನ ಪೀಠ ಇದೆ. ಪಾಳೆಯಗಾರ್ರು ಕೂತ್ಕೊಳ್ತಾ ಇದ್ದದ್ದು" – ಎಂದು ವಿವರಿಸಿದರು ಮುರುಗೇಂದ್ರಪ್ಪ. ನಯವಾದ ಬಂಡೆಯವಾಗಿತ್ತು. ಹತ್ತು ನಿಮಿಷ ಮಾತನಾಡದೇ, ತುಂಬಿದ ಕತ್ತಲನ್ನೇ ದಿಟ್ಟಿಸುತ್ತಾ ಕುಳಿತಿದ್ದೆ. ಮನಸ್ಸು ಕಾಲದ ಕಟ್ಟನ್ನು ಮೀರಿ, ಗತಕಾಲದ ಗರ್ಭ ಪ್ರವೇಶಮಾಡಿ ಏನನ್ನೋ ನೋಡಲು ಹುಡುಕುತ್ತಿತ್ತು.

ಆಗ ಪಾಳೆಯಗಾರರ ಇದಿರು ಕುಳಿತು ವೆಂಕಟಸುಬ್ಬಯ್ಯನವರು ಹಾಡು ಹೇಳುತ್ತಿದ್ದಾಗ ಹೇಗಿದ್ದಿರಬೇಕು ? ಹೀಗೆ ಬಿಸಿಯುಸಿರಿಡುವ ಕಣ್ಣು ಕಪಟದ ಹಿಕ್ಕೆಯ ಮಣಕುವಾಸನೆ ತುಂಬಿದ ಕತ್ತಲು ಕವಿದಿತ್ತೆ ಇಲ್ಲಿ ? ಮಾತನಾಡಿದರೆ ಮಾತನಾಡಿದವನನ್ನೇ ಬೆದರಿಸುವ ಗಂಭೀರ ಮೌನದ ಸರ್ವಾಧಿಕಾರವಿತ್ತೆ ? ಹರಿದ ನಗಾರಿ, ಬಣ್ಣ ಗೆಟ್ಟ ಉತ್ಸವದ ಆನೆ ಕುದುರೆಗಳು, ಮುರಿದ ಪಾಲಕಿ – ಇನ್ನೂರು, ಕೇವಲ ನೂರೈವತ್ತು – ಇನ್ನೂರು ವರ್ಷಗಳ ಕಾಲದಲ್ಲಿ ಭಗ್ನತೆಯ ರಣತಾಂಡವ! ಮಾನವನ ಭಕ್ತಿ, ಪ್ರೇಮ, ಸಾಹಸ, ಕಲಾಭಿಮಾನ, ಶ್ರಮಗಳು ನಿರ್ಮಿಸಿದ ಸೌಂದರ್ಯದ ಮೇಲೆ, ಇಷ್ಟು ಬೇಗ ವಿನಾಶದ ಪತಾಕೆ ಹಾರಬೇಕೆ? ಕಟ್ಟಿದವರ ಶ್ರಮಕ್ಕೆ ಉಳಿಸುವ ಬೆಲೆ ಕೊಡುವ ಶಕ್ತಿಯೂ ನಮಗಿಲ್ಲವೇ ?



ಕಾಣುವ ಕಣ್ಣು ಕಂಬನಿಗರೆಯಲೆಳಸುತ್ತಿತ್ತು; ಮನಸ್ಸಿನ ಕಣ್ಣು ಕಣ್ಣಿಗೆ ಕಾಣದುದನ್ನು ಚಿತ್ರಿಸಲೆತ್ನಿಸುತ್ತಿತ್ತು.

ನಿಜ–ಅಂದು, ನೂರಾರು ಬೆಳ್ಳಿ, ಕಂಚಿನ ಸೊಡರುಗಳ ಬೆಳಕಿನ ಹರಿತವಾದ ಕೋಟಿ ಕಿರಣಗಳು ದೇವಾಲಯವನ್ನು ಸುತ್ತಿದ್ದ ಕತ್ತಲ ಬಲೆಯನ್ನು ಕತ್ತರಿಸಿ, ವೀಣೆ, ವೇಣು, ಮೃದಂಗಗಳ ಮಧುರ ವಾದ್ಯದಲ್ಲಿ ಮೌನವನ್ನು ಗೆದ್ದು, ಭವ್ಯತೆಯನ್ನು ದಿವ್ಯತೆಯನ್ನು ಮೂಡಿಸಿದ್ದಿರಬೇಕು. ನೂರಾರು ದೀವಟಿಗೆಗಳ ಬೆಳಕಿನಲ್ಲಿ, ದೇವಾಲಯದ ಹೊರವಲಯದಲ್ಲಿ, ಪಾಳೆಯಗಾರರ ಅಂಗರಕ್ಷಕರ ಪಡೆ ನೆರೆದು, ಅಂತಃಪುರದ ದಾಸಿಯರ ಸುಳಿದಾಟದ ಸೊಬಗಿಗೆ, ನಗೆಜೇನು ಬೆರೆಸಿರಬೇಕು. ದೇವಾಲಯದ ಅಗರು, ಚಂದನ, ಗಂಧ, ಕರ್ಪೂರದ ಪರಿಮಳದೊಂದಿಗೆ, ರಾಣೀವಾಸದವರ ಮುಡಿಯ ಹೂಮಾಲೆಯ ನರುಗಂಪು ಸ್ಪರ್ಧಿಸಿರಬೇಕು. ಮಂತ್ರಘೋಷದೊಂದಿಗೆ, ವಂದಿಮಾಗಧರ ಪರಾಕಿನ ದೃಢವಾದ ನೀಳ್ದನಿ ಬೆರೆತು, ಗುಹೆಯಲ್ಲಿ ಅವಿತ ಮೌನವನ್ನು ಕೆಣಕಿರಬೇಕು.

ಹಾಗಿದ್ದಿರಬೇಕು, ಹೀಗಿದ್ದಿರಬೇಕು–ಈಗ ಹೀಗಾಗಿದೆ! ಮಸಣ ಮೌನ ಎಲ್ಲವನ್ನೂ ನುಂಗಿ ನೊಣೆದಿದೆ. ಪಾಳು, ಮೌನ, ಬೋಳುಗಲ್ಲು–ನಮ್ಮ ಭವ್ಯ ಗತಜೀವನದ ಚೇತನರಹಿತ ಕಂಕಾಳ! ಗತಕಾಲಕ್ಕೇ ಭವ್ಯತೆಯನ್ನು ಒಪ್ಪಿಸಿ ಜಡವಾದ ನೀರಸವಾದ 'ಇಂದಿ'ನ ಸಂಕೇತ.

ದೇವಾಲಯದಲ್ಲಿ ಕವಿದ ಕತ್ತಲು, ನನ್ನನ್ನು ಕತ್ತು ಹಿಡಿದು ಹೊರತಳ್ಳಿತು. ಕತ್ತಲು ತುಂಬಿದ ಕಣ್ಣು ಘಾಟುಹೊಗೆ ಸೋಕಿದಂತೆ ಉರಿಯುತ್ತಿತ್ತು. ಹೊರಬಂದು, ಹಜಾರದ ಕಲ್ಲುಕಂಬವನ್ನೊರಗಿ ಕೊಂಡು ಆಕಾಶದ ಆಳದಲ್ಲಿ ಎಲ್ಲೋ ಮೇಲೆ ಸಿಳ್ಳುಹಾಕುತ್ತ ಹಾರುವ ಡೇಗೆಯನ್ನು ದಿಟ್ಟಿಸುತ್ತ ನಿಂತೆ.

ಸ್ವಲ್ಪ ಹೊತ್ತಿನಲ್ಲಿ ಮುರುಗೇಂದ್ರಪ್ಪನವರೂ ಹೊರಬಂದು ಇದಿರುಕಂಬಕ್ಕೊರಗಿ ಕುಳಿತರು. ಅವರ ಮನಸ್ಸು ಮರುಕಳಿಸಿದ ಸ್ಮರಣೆಗಳ ಹೊಯ್ದಾಟದಲ್ಲಿ ವಿಹ್ವಲವಾಗಿತ್ತೋ ಏನೋ. ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ.

"ಕಾಲ ಹೆಂಗಾಗೋಯ್ತು, ಬಿರುಗಾಳೀಲಿ ದೊಡ್ಡ ಮರ ಕೊಚ್ಚಿಹೋಗಿ ಮೋಟುಪೊದೆ ಉಳಿದಂಗಾಯ್ತು. ದೊಡ್ಡೋರೇಲ್ಲಾ ಶಿವನ ಸಾನ್ನಿಧ್ಯ ಸೇರಿಬಿಟ್ಟರು. ನನ್ನಂಥ ಪಾಪಿ ಪರದೇಶಿಗಳೇ ಉಳಕೊಂಡಿರೋದು!" – ಸ್ವಲ್ಪ ಹೊತ್ತು ಸುಮ್ಮನಿದ್ದು, ನಿಟ್ಟುಸಿರಿಟ್ಟು ಹೇಳಿದರು ಮುರುಗೇಂದ್ರಪ್ಪ. ಆ ಮಾತಿಗೆ ನಾನೇನೂ ಉತ್ತರ ಕೊಡಲಿಲ್ಲ.

"ಇಷ್ಟು ವರ್ಷಕ್ಕೆ, ನೀವೊಬ್ಬರು ಬಂದು 'ವೆಂಕಟಸುಬ್ಬಯ್ಯನೋರ ಕಲ್ಲು' ಅಂತ ಕೇಳಿದ್ರಿ. ಅದೆಲ್ಲಾ ನೆನೆಸಿಕೊಂಡ್ರೆ ಹೊಟ್ಟೇಲಿ ಕಸಿವಿಸಿ ಆದಂಗಾಗುತ್ತದೆ. ಎಂತೆಂಥ ಜನ ಆಗಿಹೋದ್ರು. ಅವರ ಹೆಸರು ಹೇಳೋಕೆ ಒಬ್ಬರೂ ಹುಟ್ಟಲಿಲ್ಲ. ಅಷ್ಟ್ಯಾಕೆ, ಅವರ ಹೆಸರೂ ಮರೆತುಬಿಟ್ಟಿದೆ ಈ ಜನ. ಇಂಥ ಜನ ಬದುಕೋದುಂಟಾ?"

– ಹಿಂದಿನ ಹಿರಿಮೆಯನ್ನು ಮರೆತ ಇಂದಿನವರ ಭವಿಷ್ಯದ ಬಗ್ಗೆ ಬೆದರು ಹೇಳಿದರು ಮುರುಗೇಂದ್ರಪ್ಪ.

"ವೆಂಕಟಸುಬ್ಬಯ್ಯನೋರ ವಿಚಾರ ನಿಮಗೆ ಗೊತ್ತೆ, ಮುರುಗೇಂದ್ರಪ್ಪ ?"

"ನಮ್ಮಜ್ಜ ಬಾಳ ಹೇಳೋನು. ಆಗ ಕೇಳಿದ್ದು ಈಗಲೂ ಕಲ್ಲಲ್ಲಿ ಕೊರೆದ ಹಾಗಿದೆ. ನಮಗೆ ಹಿಂದಿನೋರ ಕಥೆ ಕೇಳಬೇಕೂಂತ ಆಸೆನಾರ ಇತ್ತು. ಈಗಿನ ಹುಡುಗರಿಗೆ ಅದೂ ಇಲ್ಲ. ಜನ ದಿನದಿನಕ್ಕೆ ಕೆಡ್ತಾ ಇದ್ಯೇ ಹೊರತು, ಮೇಲಾಯ್ತು ಅನ್ನೋದೇ ಇಲ್ಲ. ನಮ್ಮಂಥೋರಿಗೆ ಇರೋದು ಸಾಕಾಗಿ, ಶಿವ ಯಾವತ್ತು ಕರೆಸಿಕೊಂಡಾನೋಂತ ಕಾಯೋದಾಗಿದೆ."

ಹೃದಯದಾಳದಲ್ಲಿ, ಬಹುದಿನದಿಂದ ಹುದುಗಿದ್ದ ದುಃಖ ಉರಿಯಾಗಿ ಹೊರಹೊಮ್ಮುವಂತಿತ್ತು ಅವರ ಮಾತು. ಸತ್ಯದ ನಿಷ್ಠುರ ನುಡಿ ಚಾಟಿಯ ಏಟಿನಂತೆ ಎರಗಿತು ನನ್ನ ಎದೆಯ ಮೇಲೆ.

"ನಿಮ್ಮ ಮಾತು ನಿಜ, ಮುರುಗೇಂದ್ರಪ್ಪ, ನಮ್ಮದು ನಿರ್ಭಾಗ್ಯರ ದೇಶವಾಗಿಹೋಗಿದೆ."

"ಹೋಗಲಿ ಬಿಡಿ, ಎಲ್ಲೀ ಮಾತು. ಮುದುಕ ಏನೋ ಅಂದಾಂತ ಅಸಮಾಧಾನ ಮಾಡಿಕೋಬೇಡಿ."

"ಅಸಮಾಧಾನವಿಲ್ಲ, ಮುರುಗೇಂದ್ರಪ್ಪ. ನೀವಾಡಿದುದು ಕಠೋರ ಸತ್ಯ. ಸತ್ಯ ಹೇಳಿದರೆ ಅದಕ್ಕೆ ಅಸಮಾಧಾನವೇಕೆ? ಈಗ ನಿಮ್ಮಿಂದ ಒಂದು ಉಪಕಾರವಾಗಬೇಕಲ್ಲ."



"ಏನು ಹೇಳಿ?"

"ನಿಮಗೆ ಗೊತ್ತಿರೋ ಅಷ್ಟು ವೆಂಕಟಸುಬ್ಬಯ್ಯನೋರ ವಿಚಾರ ಹೇಳ್ತೀರ? ಅದನ್ನು ಕೇಳಬೇಕೂಂತಲೇ ಬಂದೆ."

ನನ್ನ ಪ್ರಶ್ನೆ ಕೇಳಿ ಮುರುಗೇಂದ್ರಪ್ಪನವರಿಗೆ ಆಶ್ಚರ್ಯವಾದಂತೆ ತೋರಿತು. ವಿಷಾದಪೂರ್ಣವಾದ ನಗು ನಕ್ಕು ಕೇಳಿದರು–

"ನಿಜವಾಗಿಯೂ ಅದಕ್ಕೇ ಬಂದಿರಾ ?"

"ನಿಜವಾಗಿಯೂ" – ಎಂದು, ರಾಯರ ಕಕ್ಷಿಗಾರನ ಕಟ್ಟಿನಲ್ಲಿ ಟೀಪು ವೆಂಕಟಸುಬ್ಬಯನವರಿಗೆ ಕೊಟ್ಟ ದಾನಶಾಸನದ ನಕಲು ಸಿಕ್ಕಿದ್ದು, ಇಲ್ಲಿಂದ ರಾಯರ ಸಲಹೆಯಂತೆ, ವೆಂಕಟಸುಬ್ಬಯ್ಯನೋರ ವಿಚಾರ ತಿಳಿಯಲು, ಲಿಂಗಾಜೋಯಿಸರ ಬಳಿ ಹೋಗಿ, ಅಲ್ಲಿಂದ ಮುರುಗೇಂದ್ರಪ್ಪನವರ ಬಳಿಗೆ ಬಂದುದನ್ನೂ ತಿಳಿಸಿದೆ.

"ನಿಮ್ಮ ಮಾತು ಕೇಳಿ ಹೊಟ್ಟೆ ತಂಪಾಯ್ತು. ನಿಮ್ಮಂಥೋರು, ಹಳೆಯೋರ ವಿಷ್ಯ ತಿಳ್ಕೋಬೇಕು ಅನ್ನೋರು. ಒಬ್ಬಿಬ್ಬರಾದರೂ ಇದ್ದರೆ ಎಷ್ಟೋ ಆದಂಗಾಯ್ತು. ನನಗೆ ತಿಳಿದುದನ್ನೆಲ್ಲಾ ಹೇಳ್ತೀನಿ. ಮನೆಗೆ ಹೋಗಿ ಉಂಡು ಬರೋದಾದ್ರೆ ಬನ್ನಿ. ಹೊತ್ತಾಯ್ತು" ಎಂದರು ಮುರುಗೇಂದ್ರಪ್ಪ.

"ಊಟದ್ದೇನೂ ಆತುರವಿಲ್ಲ. ಅದೇನು ದಿನಾ ಇದ್ದದ್ದೇ. ವೆಂಕಟ ಸುಬ್ಬಯ್ಯನವರ ಕಥೆ ಹೇಳಿ."

"ರುದ್ರಮುನಿ, ಸ್ವಾಮಿಯೋರಿಗೆ ಎರಡು ಬಾಳೆಹಣ್ಣು, ಅಷ್ಟು ಕಾಯಿ ಚೂರು ಕೊಡು. ಏನಾರ ಸ್ವಲ್ಪ ಬಾಯಿಗೆ ಹಾಕಿಕೊಳ್ಳಿ. ಹೊಟ್ಟೇಲಿರೋ ಶಿವನ್ನ ಉಪವಾಸ ಹಾಕಬಾರದು"–ಎಂದರು. ನಾನು ಬೇಡವೆನ್ನದೆ ರುದ್ರಮುನಿ ತಂದುಕೊಟ್ಟ ಬಾಳೆಹಣ್ಣು, ತೆಂಗಿನಕಾಯಿ ಚೂರನ್ನು ತಿನ್ನುತ್ತಾ ಕುಳಿತೆ. ಮುರುಗೇಂದ್ರಪ್ಪ ರುದ್ರಮುನಿಯನ್ನು ಊಟ ತರಲು ಮನೆಗೆ ಕಳಿಸಿ, ದೇವಾಲಯದ ಬಾಗಿಲು ಹಾಕಿಕೊಂಡು ಬಂದು ಕುಳಿತು, ಸ್ವಲ್ಪ ಹೊತ್ತು, ಎದುರಿನ ಬಂಡೆಯ ನೆತ್ತಿಯ ಮೇಲೆ ಕಾಣುತ್ತಿದ್ದ ಹಿಡಂಬೇಶ್ವರನ ದೇವಾಲಯವನ್ನೇ ದಿಟ್ಟಿಸುತ್ತಾ ಕುಳಿತಿದ್ದು ಬಳಿಕ ವೆಂಕಟಸುಬ್ಬಯ್ಯನವರ ಕಥೆ ಹೇಳಲಾರಂಭಿಸಿದರು:

೫

"ಈಗ ವೆಂಕಟಸುಬ್ಬಯ್ಯನವರನ್ನು ನೆನೆಸುವ ಜನಕ್ಕಿಂತ ಮರೆತ ಜನವೇ ಹೆಚ್ಚು; ಎಲ್ಲೋ ನೂರಕ್ಕೊಬ್ಬರೋ ಸಾವಿರಕ್ಕೊಬ್ಬರೋ ನೆನೆಸುತ್ತಾರೆ. ಆದರೆ ವೆಂಕಟಸುಬ್ಬಯನವರಂಥ ಜನ ಹುಟ್ಟುವುದು ಎಷ್ಟು ಸಾವಿರ ವರ್ಷಕ್ಕೊಂದು ಬಾರಿಯೋ. ದೇಶದ ಪುಣ್ಯ ಫಲಿಸಿದಾಗ, ಅವತಾರ ಮಾಡುವ ಮಹಾತ್ಮರು ಅವರು. ಸಂಗೀತಗಾರರು ಈ ಕಾಲಕ್ಕೂ ಇದ್ದಾರೆ, ಆಗಲೂ ಇದ್ದರು. ಆದರೆ ಎಲ್ಲಿಗೆಲ್ಲಿಗೆ ಸಂಬಂಧ? ನೆಟ್ಟಗೆ ಸಾ–ಪಾ–ಸಾ ಹೇಳೋಕೆ ಬರದೋರೂ, ಮೂರು ಬೆಟ್ಟಂಚಿನ ಜರತಾರಿ ಶಲ್ಯ ಹೆಗಲ ಮೇಲೆ ಹಾಕಿ ಕೊಂಡು, ಆಸ್ಥಾನ ವಿದ್ವಾಂಸರೂಂತ ಮೆರೀತಾರೆ. ಹೊಲೆಯರ ಹಂದಿಹಾಗೆ ಕಿರುಚೋ ಹಾರ್ಮೋನೀಮು ಕುಟ್ಟೋರೂ ಸಂಗೀತಗಾರರೇ... ಪಾಪ! ಅವರು ತಾನೇ ಏನು ಮಾಡ್ತಾರೆ – ಹಾಡೋರಿದ್ರೂ ಕೇಳೋರಿಲ್ಲದೆ ಕಾಲ ಇದು. ಹೊಟ್ಟೆಪಾಡಿಗೆ ಹಾಡೋರಿಗೂ, ದೇವರನ್ನು ಕಾಣೋ ಯೋಗ ಅಂತ ಸಂಗೀತ ಕಲಿಯೋರಿಗೂ ಎಲ್ಲೀ ಹೋಲಿಕೆ....."– ಸ್ವಲ್ಪ ಖಾರವಾದ ಧ್ವನಿಯಲ್ಲಿ ಅಷ್ಟು ಹೇಳಿ ನಿಲ್ಲಿಸಿದರು, ಮುರುಗೇಂದ್ರಪ್ಪ. ನಾನೂ ಬೇರೆ ಮಾತನಾಡದೆ, ಅವರೇ ಮಾತು ಮುಂದುವರಿಸಲಿ ಎಂದು ಸುಮ್ಮನಿದ್ದೆ.

"ಮುದುಕರ ಮಾತು, ಕುಡಿದೋರ ನಡೆ ಹಾಗೆ. ಎಲ್ಲಿಂದ ಎಲ್ಲಿಗೋ ಓಡಾಡ್ತದೆ. ಬೇಸರ ಮಾಡ್ಕೋಬೇಡಿ" – ಎಂದು ಮುರುಗೇಂದ್ರಪ್ಪ ಮತ್ತೆ ಕಥೆ ಮುಂದುವರಿಸಿದರು:

"ವೆಂಕಟಸುಬ್ಬಯ್ಯನೋರ ಮನೇಗೂ, ನಮ್ಮ ಮನೇಗೂ ಬಹಳ ಸ್ನೇಹವಿತ್ತಂತೆ. ವೆಂಕಟಸುಬ್ಬಯ್ಯನವರ ಮನೆಯವರು, ಪಾಳೆಯಗಾರರ ಅರಮನೆ ಜೋಯಿಸರಾಗಿದ್ದರು. ನಮ್ಮದು ಅರ್ಚಕರ ಮನೆತನ. ಹಿಡಂಬೇಶ್ವರನ ಗುಡಿ, ಏಕನಾಥಮ್ಮ, ಸಂಪಿಗೆ ಸಿದ್ದೇಶ್ವರ, ಬೆಟ್ಟದ ಕೆಳಗಿರೋ ಉಚ್ಚಂಗಮ್ಮನ ಗುಡಿ ಪೂಜೆ ನಮಗೆ ಸೇರಿತ್ತು. ಜೋಯಿಸರು, ಅರ್ಚಕರು ಅಂದರೆ, ಆ ಕಾಲದ ಜನಕ್ಕೆ ದೇವರ ಸಮಾನ. ಅವರೂ ಹಾಗೇ ಇದ್ದರು. ದೇವರ ಕೈಲಿ ಸರಸ ಆಡೋ ಜನ. ಬೇಕೆಂದರೆ ತಲೇನೂ ದೇವರಿಗಾಗಿ ಕೊಡೋರು."

"ಅದೆಲ್ಲ ಬರಿ ಮಾತು, ಮುರುಗೇಂದ್ರಪ್ಪ. ಅಂಥೋರು ಯಾರಿದ್ರು ?"

ನನ್ನ ಮಾತು ಮುರುಗೇಂದ್ರಪ್ಪನವರನ್ನು ಕೊಂಚ ಕೆರಳಿಸಿತು.

"ಮಾತು, ಬಡಾಯಿ ಎಲ್ಲಾ ಈ ಕಾಲದ ಜನಕ್ಕೆ. ಆ ಕಾಲದ ಜನ ನಡೆದು ತೋರಿಸೋರು. ತಲೆ ಕೊಡೋರು ಯಾರಿದ್ರು ಅಂತ ಕೇಳ್ತೀರಲ್ಲಾ,



ವೆಂಕಟಸುಬ್ಬಯ್ಯನವರ ಕಾಲದ ವಿಚಾರವೇ ಒಂದು ಹೇಳ್ತೀನಿ. ಕೇಳಿ. ನೀವೂ ನೋಡಿರಬಹುದು, ಸಂಪಿಗೆ ಸಿದ್ದೇಶ್ವರನ ಗುಡಿಗೆ ಹೋಗೋ ದಾರೀಲಿ ಪಾಂಡವರ ವಿಮಾನದ ಹತ್ತಿರ ಒಂದು ಚಿತ್ರದ ಕಲ್ಲು ಇದೆ. ನೋಡಿದೀರಾ?"

"ಯಾವುದು ?"

"ತಲೆಹೋಯಿಕ ವೀರಣ್ಣನ ಕಲ್ಲು ಅಂತಾ...."

"ಹೂ. ನೋಡಿದೀನಿ"

ಆ ಕಲ್ಲನ್ನು ನಾನು ನೋಡಿದ್ದೆ. ಅಲ್ಲಲ್ಲಿ ಒಡೆದುಹೋದ ಕಲ್ಲುಹಲಗೆ ಅದು. ಅದರಲ್ಲಿ ಗಡ್ಡ, ಜಟೆ ಬಿಟ್ಟ ಒಬ್ಬಾತ, ಚೂರಿಯೊಂದರಿಂದ, ತನ್ನ ತಲೆಯನ್ನು ಕೊಯ್ದು, ಎಡಗೈಯಲ್ಲಿ ತಲೆ, ಬಲಗೈಯಲ್ಲಿ ಚೂರಿ ಹಿಡಿದು ನಿಂತ ಚಿತ್ರ ಕೊರೆದಿತ್ತು. ಆ ಕಲ್ಲಿನ ಬಗ್ಗೆ ಹೆಚ್ಚಿನ ವಿಚಾರ ಗೊತ್ತಿರಲಿಲ್ಲ.

"ಕಡೇ ಪಾಳೆಯಗಾರರು ಪಟ್ಟಕ್ಕೆ ಬಂದ ಹೊಸದರಲ್ಲಿ ನಡೆದದ್ದು ಅದು. ಆ ವೀರಣ್ಣ ನಮ್ಮ ಮುತ್ತಜ್ಜ, ವೀರಣ್ಣನೋರು ಹಿಡಂಬೇಶ್ವರನ ಗುಡಿಯ ಅರ್ಚಕರಾಗಿದ್ದರು. ಮನುಷ್ಯ ಚೊಕ್ಕ ಚಿನ್ನ. ಆದರೆ ಒಂದೇ ಐಬು–ಹೆಂಡತಿ ಜೊತೇಲಿ, ಮತ್ತೊಂದು ಹೆಣ್ಣು ಇತ್ತು ಅವರಿಗೆ, ಹೆಂಡತಿಗಿಂತ ಆ ಹೆಣ್ಣಿನ ಮೇಲೆ ಹೆಚ್ಚು ವ್ಯಾಮೋಹ. ಪ್ರತಿದಿನ ರಾತ್ರಿ ಪೂಜೆ ಮುಗಿದ ಕೂಡಲೇ ಅಲ್ಲಿದ್ದ ಹೂವು, ಹಣ್ಣು ಎಲ್ಲಾ ತೆಗೆದುಕೊಂಡು ಹೋಗಿ, ಆ ಹೆಣ್ಣಿಗೆ ಕೊಡ್ತಾ ಇದ್ದರು. ಎಷ್ಟೋ ವರ್ಷದಿಂದ ಹೀಗೇ ನಡೆದುಬಂದಿತ್ತು."

"ಪ್ರತಿದಿನ ಎರಡೂ ಹೊತ್ತಿನ ಪೂಜೆಗೆ ಪಾಳೆಯಗಾರರು ದೇವಸ್ಥಾನಕ್ಕೆ ಬರೋದು ವಾಡಿಕೆ, ಹಾಗೇ ಒಂದು ಸುತ್ತು ಬಂದು, ಎಲ್ಲಾ ಗುಡಿಗಳಲ್ಲೂ ದೇವರ ದರ್ಶನಮಾಡಿ, ಪ್ರಸಾದ ತೆಗೆದುಕೊಂಡು, ಅರಮನೆಗೆ ಹೋಗೋರು. ಅವರು ದೇವರ ದರ್ಶನಕ್ಕೇಂತ ಅರಮನೆ ಬಿಟ್ಟು ಹೊರಟ ಕೂಡಲೇ ಕಹಳೆ ಬತೇರಿಯಿಂದ ಕಹಳೆ ಊದುತ್ತಿದ್ದರು. ಅದು ಎಲ್ಲರಿಗೂ 'ಪಾಳೆಯಗಾರರು ಬರ್ತಾ ಇದಾರೆ, ಸಿದ್ಧವಾಗಿ' ಎನ್ನೋದಕ್ಕೆ ಗುರುತು. ದಿನವೂ ಹೀಗೇ ನಡೀತಾ ಇತ್ತು."

"ಹಿಡಂಬೇಶ್ವರನ ಗುಡೀಲಿ, ಪಾಳೆಯಗಾರರು, ಬರೋ ವೇಳೆಗೆ ಪೂಜೆ ಎಲ್ಲಾ ಮುಗಿಸಿ, ಅವರು ಬಂದಕೂಡಲೇ ಮಹಾಮಂಗಳಾರತಿ ಮಾಡಿ, ಅವರಿಗೆ ಮಂಗಳಾರತಿ, ಪ್ರಸಾದ ಕೊಡೋದು ಪದ್ಧತಿ. ಎಲ್ಲಾ ದೇವಸ್ಥಾನದಲ್ಲೂ ಹೀಗೇ."

"ಒಂದು ದಿನ ವೀರಣ್ಣಜ್ಜ ಪೂಜೆ ಎಲ್ಲಾ ಮುಗಿಸಿ, ಮಹಾ ಮಂಗಳಾರತಿಗೆ ಸಿದ್ಧ ಮಾಡಿಕೊಂಡಿದ್ದ, ಪಾಳೆಯಗಾರರು ಬರೋದು ತಡವಾಯಿತು. ಎಷ್ಟು

ಕಾದರೂ ಕಹಳೆಬತೇರಿಯಿಂದ ಸನ್ನೆಗಹಳೆ ಕೂಗಲೇ ಇಲ್ಲ. ಗುಡ್ಡದ ಮೇಲೆ ಚಳಿ. ದಿನವೂ ಹೋಗುವ ಹೊತ್ತಿಗೆ ಹೋಗದಿದ್ದರೆ ಆ ಹೆಣ್ಣೆಲ್ಲಿ ಸಿಟ್ಟಾಗ್ತಾಳೋ ಅನ್ನೋ ಚಿಂತೆ, ವೀರಣ್ಣಜ್ಜನಿಗೆ. ಹಾಗೂ ಆಗ ಬರಬಹುದು ಈಗ ಬರಹಬುದು ಎಂದು ಕಾದು ಕುಳಿತಿದ್ದರು. ಕೊತ್ವಾಲರ ಚಾವಡೀಲಿ ಜಾವದ ಗಂಟೆ ಮಧ್ಯರಾತ್ರಿ ಮುಗಿದದ್ದನ್ನು ಸಾರಿಸಿತು. ಆದರೂ ಪಾಳೆಯಗಾರರ ಪತ್ತೆ ಇಲ್ಲ. ಕಾದ ಕಣ್ಣು ಬೆಳ್ಳಗಾಯಿತು. ಇನ್ನೆಷ್ಟು ಹೊತ್ತು ಕಾಯೋದು ?"

"ಕಾದು ಕಾದು ಬೇಸತ್ತ ವೀರಣ್ಣಜ್ಜ ಕಡೆಗೆ ಆ ದಿನ ಪಾಳೆಯಗಾರರು ಏನೋ ಕಾರಣದ ಮೇಲೆ ದೇವಾಲಯಕ್ಕೆ ಬರಲಿಲ್ಲವೆಂದು ಯೋಚಿಸಿ, ಮನೆಗೆ ಹೊರಡುವ ಸಿದ್ಧತೆ ಮಾಡಿದರು. ಮನೆಗೆ ಹೋಗುವುದು ಎಂದುಕೊಂಡರೂ, ಊರಲ್ಲಿದ್ದರೆ, ಒಂದು ದಿವೂ ದೇವಾಲಯಕ್ಕೆ ಬರುವುದನ್ನು ತಪ್ಪಿಸದ ಪಾಳೆಯಗಾರರು, ಈ ದಿವಸ ಹೀಗೇಕೆ ಮಾಡಿದರು ಎಂಬ ಚಿಂತೆ. ರಾಜಕಾರ್ಯವೇ, ಅನಾರೋಗ್ಯವೇ... ಏನಾಗಿರಬಹುದು ?" ಎಂದು ಬಹಳ ಹೊತ್ತು ಆಲೋಚಿಸಿ ಕಡೆಗೆ ತಾವೇ 'ಪಾಳೆಯಗಾರನಿಗೆ ಒಳಿತಾಗಲಿ' ಎಂದು ಮಹಾಮಂಗಳಾರತಿ ಮುಗಿಸಿ, ಹೂವು, ಹಣ್ಣು, ಹಾಲುಗಳನ್ನೆತ್ತಿಕೊಂಡು, ತಮಗಾಗಿ ಕಾಯುತ್ತಿದ್ದ ಹೆಣ್ಣಿನ ಮನೆಗೆ ಹೋದರು.

"ಆ ಮನೆಯೂ, ದೇವಾಲಯಕ್ಕೆ ಹತ್ತಿರದಲ್ಲೇ ಇತ್ತು. ಮನೆಗೆ ಹೋದ ವೀರಣ್ಣಜ್ಜ ಹೂವನ್ನೆಲ್ಲಾ ತನ್ನ ಪ್ರೀತಿಯ ಹೆಣ್ಣಿಗೆ ಮುಡಿಸಿ, ಊಟ ಮಾಡಿ, ಆಕೆಯೊಂದಿಗೆ ಮಲಗುವ ಸಿದ್ಧತೆ ಮಾಡಿದ. ಇನ್ನೇನು ಕಣ್ಣು ಮುಚ್ಚಬೇಕು, ಆ ಹೊತ್ತಿನಲ್ಲಿ ನಡುರಾತ್ರಿಯ ನಿಶ್ಶಬ್ದವನ್ನು ಭೇದಿಸಿಕೊಂಡು ಕಹಳೆಯ ಬತೇರಿಯಿಂದ, ಕಾವಲವರು ಊದಿದ ಸನ್ನೆಗಹಳೆಯ ನೀಳ್ದನಿ ಕೇಳಿಸಿತು. ಆ ಸದ್ದನ್ನು ಕೇಳಿ ವೀರಣ್ಣಜ್ಜ ಗಡಗಡ ನಡುಗಿದ, ಪಾಳೆಯಗಾರರು ಬಂದು ಮಂಗಳಾರತಿ, ಪ್ರಸಾದ ತೆಗೆದುಕೊಂಡು ಹೋಗುವವರೆಗೂ ಅರ್ಚಕರು ದೇವಾಲಯದಲ್ಲಿರಬೇಕೆಂದು ಪಾಳೆಯಗಾರರ ಕಟ್ಟಾಜ್ಞೆ. ಪಾಳೆಯಗಾರರು ಎಷ್ಟು ಉದಾರಿಗಳಾಗಿದ್ದರೋ, ಅಷ್ಟೇ ಕ್ರೂರಿ. ಅರ್ಚಕರೆಂದರೆ, ನೆಲ್ಲದ ಮೇಲಿನ, ಓಡಾಡುವ ದೇವರು ಎಂಬಷ್ಟು ಭಕ್ತಿ. ಅವರಿಗೆ ಕೊಡುವಾಗ ಮುಕ್ತ ಹಸ್ತ. ಒಮ್ಮೆ ಪ್ರೀತಿಯ ಕಣ್ಣು ತೆರೆದರೆ, ನಾಲ್ಕು ತಲೆಮಾರು ಕೂತು ತಿನ್ನುವಷ್ಟು ಕೊಡುವರು, ತಪ್ಪಿ ನಡೆದರೆ ತಲೆದಂಡ! ಅರ್ಚಕರೂ ಹಾಗೇ ನಡೆದುಕೊಳ್ಳುವರು. ಈಗಿನ ಹಾಗೆ, ಆಗಿನವರು, ದೇವರಿಗೆ, ದೊರೆಗೆ ಎರಡುಬಗೆದು ಬದುಕುವ ಜನವಲ್ಲ. ಈಗ ಬಿಡಿ,ಬೇರೆಲ್ಲೂ ಹಿಟ್ಟು ಕಾಣದ ಜನ, ಹಾಳುಗುಡಿ, ದೇವರಿಗೆ ಗಂಟುಬೀಳುತ್ತಾರೆ. ದೇವರಿಗೆ ಇಡೋ ನಾಮಾನ ಜನಕ್ಕೆ ಇಟ್ಟು, ಹೊಟ್ಟೆ ಹೊರೆಯುತ್ತಾರೆ. ಅದು ಭಯಭಕ್ತಿಗಳ ಕಾಲ."



"ಸರಿ, ಮತ್ತೆ ಮಾತು ಎಲ್ಲೋ ಹೋಯಿತು. ಏನು ಹೇಳ್ತಾ ಇದ್ದೆ ? ಹೂ... ವೀರಣ್ಣಜ್ಜ ಮಲಗುವ ಸಿದ್ಧತೆ ಮಾಡುತ್ತಿದ್ದಾಗ, ಸನ್ನೆಗಹಳೆ ಊದಿದ ಧ್ವನಿ ಕೇಳಿಸಿತು. ವೀರಣ್ಣಜ್ಜ ಗಡಿಬಿಡಿಯಿಂದ ಮೇಲೆದ್ದು, ತನ್ನ ಹೆಂಗಸಿಗೆ ಮುಡಿಸಿದ ಹೂವನ್ನೆಲ್ಲಾ ತೆಗೆದುಕೊಂಡು ಒಂದೇ ಉಸಿರಿಗೆ ದೇವಾಲಯಕ್ಕೆ ಓಡಿಹೋದ. ಪಾಳೆಯಗಾರರ ಪರಿವಾರ ಸಂಪಿಗೆ ಸಿದ್ದೇಶ್ವರನ ದೇವಸ್ಥಾನದ ಬಳಿ ನೆರೆದಿದ್ದುದು ಕಾಣುತ್ತಿತ್ತು. ಅವರು ಅಲ್ಲಿಂದ ಹಿಡಂಬೇಶ್ವರನ ದೇವಾಲಯಕ್ಕೆ ಬರುವುದರೊಳಗಾಗಿ ಹೂವಿಟ್ಟು, ಮಂಗಳಾರತಿಗೆ ಸಿದ್ಧಮಾಡಿಕೊಂಡು ಕಾದ."

"ಸ್ವಲ್ಪ ಹೊತ್ತಿನಲ್ಲೇ ಪಾಳೆಯಗಾರರು ಪರಿವಾರದೊಂದಿಗೆ ಬಿಜಯ ಮಾಡಿದರು. ಮಾಮೂಲಿನಂತೆ ಅರ್ಚನೆ, ಮಹಾಮಂಗಳಾರತಿ, ಎಲ್ಲವೂ ನಡೆದು, ವೀರಣ್ಣಜ್ಜ ಪಾಳೆಯಗಾರರಿಗೆ ಮಂಗಳಾರತಿ, ತೀರ್ಥ ಪ್ರಸಾದಗಳನ್ನು ಕೊಟ್ಟ. ನೂರಾರು ಹಣತೆ, ಹತ್ತಾರು ಪಂಜುಗಳು ಹಚ್ಚಿದ ದೇವಾಲಯದಲ್ಲಿ ಹಗಲಿನಷ್ಟು ಬೆಳಕಾಗಿತ್ತು. ವೀರಣ್ಣಜ್ಜ ಕೊಟ್ಟ ಪ್ರಸಾದದ ಹೂವನ್ನು ಕಣ್ಣಿಗೆ ಒತ್ತಿಕೊಳ್ಳಲು ಹೋದಾಗ, ಪಾಳೆಯಗಾರರ ಕಣ್ಣಿಗೆ ನಿಚ್ಚಳವಾದ ಬೆಳಕಿನಲ್ಲಿ, ಹೂವಿನಲ್ಲಿ ಕೂದಲು ಕಾಣಿಸಿತು. ಬೆರಳಿನಿಂದ ಅವನ್ನು ನೋಡನೋಡುತ್ತಾ ಅವರ ಮುಖ ಗಡುಸಾಯಿತು. ಬದಲಾದ ಅವರ ಮುಖಭಾವ ಕಂಡು ವೀರಣ್ಣಜ್ಜ ಗಾಬರಿಯಾದ."

"ಪ್ರಸಾದದಲ್ಲಿ ಕೂದಲೆಲ್ಲಿಯದು, ವೀರಣ್ಣನವರೇ ?"

ಪಾಳೆಯಗಾರರು ಗಡುಸಾದ ಧ್ವನಿಯಲ್ಲಿ ಕೇಳಿದರು. ಒಂದು ಗಳಿಗೆ ಏನು ಉತ್ತರ ಕೊಡಬೇಕೆಂದು ತೋಚಲಿಲ್ಲ ವೀರಣ್ಣಜ್ಜನಿಗೆ, ಹಾಗೆಯೇ ಸುಮ್ಮನಿದ್ದು ಉಸಿರು ತಿರುಗಿಸಿಕೊಂಡು ಹೇಳಿದ–

"ದೇವರ ಮುಡಿಯದು, ಮಹಾಸ್ವಾಮಿ."

"ದೇವರ ಮುಡಿಯದೇ ? ಯಾವ ದೇವರು ?"

"ಹಿಡಂಬೇಶ್ವರನದು, ಮಹಾಸ್ವಾಮಿ."

"ಅರ್ಚಕರು ಸುಳ್ಳಾಡುವುದನ್ನು ಕಲಿತುದು ಯಾವಾಗ ?"

– ಕಠೋರವಾದ ಧ್ವನಿಯಲ್ಲಿ ಕೇಳಿದರು ಪಾಳೆಯಗಾರರು.

"ಸುಳ್ಳಾಡುವ ನಾಲಗೆಯನ್ನು ಸೀಳಿಸಿ ನಾಯಿಗೆ ಹಾಕಬೇಕು. ಮಹಾಸ್ವಾಮಿ! ದೇವರ ಅನ್ನವನ್ನು ಉಂಡು ಬೆಳೆದ ಈ ಮೈಗೆ, ಸುಳ್ಳು ತಟವಟ ತಿಳಿಯದು."

"ಸುಳ್ಳು ತಟವಟ ತಿಳಿಯದು; ಆದರೂ ದೇವರ ಮುಡಿಯಲ್ಲಿ ಜಡೆ ಇದೆ ಎನ್ನುತೀರ. ನೂರು ಕಡೆ ನೋಡುವ ಕಣ್ಣು, ಅರಿಯದೇ ಒಂದು ತಪ್ಪು ಮಾಡಬಹುದು, ಅರ್ಚಕರೆ; ಅಂಥ ತಪ್ಪನ್ನು ಕ್ಷಮಿಸಲೂ ಬಹುದು. ಆದರೆ ತಿಳಿದು ಆಡುವ ನಾಲಿಗೆ ಅನೃತವಾಡಿದರೆ, ಸಹಿಸುವುದು ಅಸಾಧ್ಯ."

"ಮಹಾಸ್ವಾಮಿಯವರಲ್ಲಿ ನಾನಾಗಲೇ ಬಿನ್ನವಿಸಿಕೊಂಡ – ಸುಳ್ಳಾಡುವುದು ನಾನರಿಯದ ವಿದ್ಯೆ."

"ಹಾಗಾದರೆ–ಕಲ್ಲುಲಿಂಗದ ತಲೆಯಲ್ಲಿ ಜಡೆ ಇದೆಯೆ ?"

"ನಿಮ್ಮ ಕಣ್ಣಿಗದು ಕಲ್ಲು; ನನ್ನ ಕಣ್ಣಲ್ಲಿ ಅಲ್ಲ."

"ಹಾಗಾದರೆ – ಕಲ್ಲುಲಿಂಗದ ತಲೆಯಲ್ಲಿ ಜಡೆ ಇದೆಯೆ?"

"ನಿಮ್ಮ ಕಣ್ಣಿಗದು ಕಲ್ಲು; ನನ್ನ ಕಣ್ಣಲ್ಲಿ ಅಲ್ಲ."

"ಹಾಗಾದರೆ ದೇವರ ಜಡೆಯನ್ನು ನಾವು ನೋಡಬಹುದೇ ?"

"ಪಾಳೆಯಗಾರರು ಸಿಟ್ಟಿನಲ್ಲೇ ಕೇಳಿದರು. ಇದೆಲ್ಲವೂ ನಡೆದಾಗ ವೆಂಕಟಸುಬ್ಬಯ್ಯನವರೂ ಪಾಳೆಯಗಾರರ ಜತೆಯಲ್ಲಿಯೇ ಇದ್ದರು". ಮಾತು ಪ್ರಕೋಪಕ್ಕೆ ಹೋದುದನ್ನು ಕಂಡು ಅವರು–

"ದೇವರ ವಿಷಯದಲ್ಲಿ ಪರೀಕ್ಷೆಗೆ ಹೋಗಬಾರದು, ಮಹಾಸ್ವಾಮಿ. ಅವರಿಗೆ ಕಂಡುದು ನಿಮಗೆ ಕಾಣದೆ ಹೋಗಬಹುದು. ಚರ್ಚೆ ಬೇಡವೆಂದು ತೋರುತ್ತದೆ" – ಎಂದರು.

"ದೇವರ ಕೂದಲು ನಮಗೆ ಕಾಣಬಹುದಾದರೆ, ಜಡೆಯೂ ಕಾಣಬಹುದು, ವೆಂಕಟಸುಬ್ಬಯ್ಯ. ನಮ್ಮ ವಿಷಯದಲ್ಲಿ ಅಪಚಾರವಾದರೆ, ಅಗಲಿ ಎನ್ನಬಹುದು. ದೇವರ ವಿಷಯದಲ್ಲೂ ಸುಳ್ಳಾಡಬಹುದೇ? ಅರ್ಚಕರು ಆ ಕೂದಲ ವಿಷಯಕ್ಕೆ ಅಷ್ಟು ಸಾಧಿಸುವುದೇಕೆ? ಹೂವು ತಂದ ಹೂವಾಡಗಿತ್ತಿಯ ಕೂದಲು ಅದರಲ್ಲಿದ್ದಿರಬಹುದು. ಕಣ್ಣು ತಪ್ಪಾಯಿತು ಎನ್ನಬಾರದೆ? ಹೂವಾಡಗಿತ್ತಿಯನ್ನು ಕರೆಸಿ, ದೇವರ ಹೂವಿನಲ್ಲಿ ಮೈಲಿಗೆ ಇರಬಾರದು ಎಂದು ಎಚ್ಚರಿಸಿ ಕಳಿಸುತ್ತಿದ್ದೆವು. ಅದು ಬಿಟ್ಟು ಹೀಗಾಡುವುದೇ ?"

"ಹೂವಾಡಗಿತ್ತಿಯ ದೋಷವಲ್ಲ, ಮಹಾಸ್ವಾಮಿ."

– ವೀರಣ್ಣಜ್ಜ ನಡುವೆ ಮಾತನಾಡಿ ಹೇಳಿದರು.

"ಅಂದರೆ–ನಿಮ್ಮದೇ ದೋಷ–"

"ಇರುವ ಮಾತು ನಾನಾಗಲೇ ಅರಿಕೆ ಮಾಡಿದೆ. ನಂಬಿದರೆ ನಂಬ ಬಹುದು, ಬಿಟ್ಟರೆ ಬಿಡಬಹುದು. ದೊರೆಯ ಚಿತ್ತ."



"ಹಾಗಾದರೆ ಪರೀಕ್ಷೆಯೇ ಆಗಿಹೋಗಲಿ."

"ಅಪ್ಪಣೆ, ಮಹಾಸ್ವಾಮಿ."

"ಲಿಂಗದ ತಲೆಯಲ್ಲಿ ಜಡೆ ಇಲ್ಲವಾದರೆ...."

"ಪ್ರಭುಗಳು ನನ್ನ ತಲೆ ತೆಗೆದುಕೊಳ್ಳಬಹುದು !"

"ವೀರಣ್ಣಜ್ಜ ಖಚಿತವಾಗಿ ಹೇಳಿದರು, ಅವರ ಮಾತಿನಲ್ಲಿ ಎಳ್ಳಷ್ಟೂ ಅಳುಕು ಇರಲಿಲ್ಲ. 'ಪಣ ಎಲ್ಲರಿಗೂ ತಿಳಿಯಿತೆ?' ಎಂದು ಪಾಳೆಯಗಾರರು ಸುತ್ತಲೂ ನೋಡಿದರು. ಎಲ್ಲರ ಮುಖಗಳೂ ಒಣಹೋಗಿದ್ದವು. ಮಾತು ಈ ಮಟ್ಟಕ್ಕೆ ಮುಟ್ಟುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ದೊರೆಗೆ ಇದಿರು ಆಡುವ ಧೈರ್ಯವೂ ಇರಲಿಲ್ಲ. ಎಲ್ಲಾ ಲೆಪ್ಪದ ಬೊಂಬೆಗಳ ಹಾಗೆ ನಿಂತಿದ್ದರು. ಮಾತು ಆಡಿದರೆ ವೆಂಕಟಸುಬ್ಬಯ್ಯನವರು ಆಡಬಹುದಾಗಿತ್ತು." ಪಾಳೆಯಗಾರರಲ್ಲಿ, ಅವರೊಬ್ಬರಿಗೆ ಸದರ. ಅವರೇ ಹೇಳಿದರು :

"ಈ ಪರೀಕ್ಷೆಯಿಂದ ಒಳಿತಾಗದು. ಹಾಡುವಾಗ ತಾಯಿ ನನ್ನ ಕಣ್ಣೆದುರು ಸುಳಿಯುತ್ತಾಳೆ. ನಾನು ನೋಡುತ್ತೇನೆ. ನಿಮಗೆ ಕಾಣಿಸುತ್ತಾಳೆಯೇ ? ನನಗೆ ತಾಯಿ ಕಾಣಿಸುತ್ತಾಳೆ ಎಂದರೆ ನನ್ನ ಮಾತು ನಂಬುತ್ತೀರ. ಇಲ್ಲೇಕೆ ಆ ನಂಬಿಕೆ ಇಲ್ಲ? ಪೂಜಿಸುವ ಅರ್ಚಕರಿಗೆ ಕಾಣದ ದೇವರೂ ಉಂಟೆ? ದೇವರಲ್ಲಿ, ಅರ್ಚಕರಲ್ಲಿ ಈ ಅಪನಂಬಿಕೆ ಬೇಡ. ಇದೇನೊ ವಿಷಗಳಿಗೆ ಎಂದು ತೋರುತ್ತದೆ. ಈ ಹೊತ್ತಿನಲ್ಲಿ ಮಾತು ಬೆಳೆಸುವುದು ಬೇಡ. ತಮಗೂ ಒಪ್ಪಿಗೆಯಾದರೆ, ಅಮ್ಮನವರ ಗುಡಿಗೆ ಹೋಗೋಣ. ಅಲ್ಲೂ ಅರ್ಚಕರು ಕಾದಿರಬೇಕು."

"ಅವರೇ ದೇವರ ಜಡೆಯನ್ನು ತೋರಿಸುತ್ತೇನೆ ಎಂದಾಗ ನಾವೇಕೆ ನೋಡಬಾರದು, ವೆಂಕಟಸುಬ್ಬಯ್ಯ?"– ಪಾಳೆಯಗಾರರೂ ಪಟ್ಟು ಹಿಡಿದು ಕೇಳಿದರು.

"ತೋರಿಸುತ್ತೇವೆ ಎಂದರು, ನಿಜ. ಅದವರ ದೊಡ್ಡತನ. ಆದರೆ ಅದನ್ನು ಪರೀಕ್ಷಿಸಿಯೇ ನೋಡುತ್ತೇನೆ ಎನ್ನುವುದು ಸರಿಹೋದೀತೇ ಎಂದು ಸಂಶಯ..."

"ಅದಾಗದು ವೆಂಕಟಸುಬ್ಬಯ್ಯ, ಪ್ರಭುಗಳು ಪರೀಕ್ಷಿಸಿ ನೋಡಬೇಕು, ಹಾಗೆ ಮಾಡದೆ, ನನ್ನ ಮೇಲಿನ ಮರ್ಯಾದೆಗೆಂದು ಸುಮ್ಮನಾದರೆ, ಅವರ ಮನಸ್ಸಿನಲ್ಲಿ ಕಸರು ಉಳಿಯುತ್ತದೆ. ಪ್ರಭುಗಳಿಗೆ ನನ್ನ ಮಾತಿನಲ್ಲಿ ಸಂಶಯ ಹುಟ್ಟಿದಾಗಲೇ ನಾನು ಸತ್ತೆ. ಅವರೀಗ ಮನಸ್ಸಿಗೆ ನೆಮ್ಮದಿ ಮಾಡಿಕೊಳ್ಳದಿದ್ದರೆ, ಕ್ಷುದ್ರ ಆಡುವ ನಾಲಿಗೆಗೆ ಕೀಲು ಕೊಟ್ಟಂತಾಗುತ್ತದೆ. ಆ ಬಳಿಕ ಬದುಕು ಬದುಕೇ? ಏನಿರುವುದು ಈಗಲೇ ಆಗಿಹೋಗಲಿ."

"ವೀರಣ್ಣಜ್ಜ ತಮ್ಮ ಮಾತನ್ನೇ ಸಮರ್ಥಿಸಿ ಆಡಿದರು. ಹಟಮಾರಿ ದೊರೆ, ಆಡಿದ ಮಾತು ಬದಲಿಸದ ಅರ್ಚಕ – ಇವರಿಬ್ಬರ ನಡುವೆ ವೆಂಕಟ ಸುಬ್ಬಯ್ಯನವರು ಏನು ಮಾಡಬೇಕು? ಜೊತೆಗೆ ಅವರ ಹೃದಯವೂ ಏನೋ ಆಚಾತುರ್ಯ ನಡೆದಿದೆ ಎಂದು ಹೇಳುತ್ತಿದೆ. ಈ ಹೊತ್ತು ತಪ್ಪಿದರೆ, ನೆತ್ತಿಯ ಮೇಲೆ ಕವಿದ ವಿಪತ್ತು ದೂರವಾದೀತೇನೋ ಎನಿಸಿತು. ಅದನ್ನೇ ಹೇಳಿದರು;"

"ಇಬ್ಬರಿಗೂ ಒಪ್ಪಿಗೆಯಾದರೆ ಪರೀಕ್ಷೆ ನಡೆದುಹೋಗಲಿ. ಆದರೆ ಈಗ ಬೇಡ. ಹಗಲು, ಹತ್ತೂ ಜನರ ಇದಿರಿನಲ್ಲಾಗಲಿ. ಹಾಗಾದರೆ ಕಣ್ಣು ಮರೆ ಏನು ನಡೆಯಿತೋ ಎಂದು ಯಾರೂ ಅನ್ನುವುದಕ್ಕೆ ಅವಕಾಶವೇ ಇರುವುದಿಲ್ಲ."

– ಎಂದರು. ಅವರು ಮಾತು ಎಲ್ಲರಿಗೂ ಸರಿ ಎನಿಸಿತು. ಪಾಳೆಯಗಾರರು ಅಸಮಾಧಾನವಾಗಿಯೇ ಅರಮನೆಗೆ ತೆರಳಿದರು. ಆ ರಾತ್ರಿ ಅಮ್ಮನವರ ಗುಡಿಗೆ ಕೂಡ ಹೋಗಲಿಲ್ಲ.

"ವೀರಣ್ಣಜ್ಜ, ದೊರೆಗಳು ಅರಮನೆಗೆ ಹಿಂದಿರುಗಿದ ಕೂಡಲೇ, ನೇರವಾಗಿ ಗೋಪಾಲಸ್ವಾಮಿಯ ಹೊಂಡಕ್ಕೆ ಹೋಗಿ ಮಿಂದು ಒದ್ದೆ ಮಡಿಯಲ್ಲೆ ದೇವಾಲಯಕ್ಕೆ ಬಂದು, ದೇವರ ಎದುರು ಕುಳಿತ. ಆ ವೇಳೆಗೆ ವೆಂಕಟ ಸುಬ್ಬಯ್ಯನವರೂ ಪಾಳೆಯಗಾರರನ್ನು ಅರಮನೆಯಲ್ಲಿ ಬಿಟ್ಟು, ಆತುರವಾಗಿ ವೀರಣ್ಣನನ್ನು ನೋಡಲು ಬಂದರು. ವೀರಣ್ಣಜ್ಜನ ವಿಷಯವೆಲ್ಲಾ ಅವರಿಗೆ ತಿಳಿದಿತ್ತು. ಇಬ್ಬರ ಬಾಳೂ ಇಬ್ಬರಿಗೂ ಅಂಗೈಯ ಕನ್ನಡಿ. ಈ ದಿನ ಪಾಳೆಯಗಾರರು ದೇವಾಲಯಕ್ಕೆ ಬರುವುದು ತುಂಬ ತಡವಾಗಿತ್ತು. ಆದುದರಿಂದ ಏನಾಗಿರಬೇಕೆಂದು ಅವರು ಊಹಿಸಿದ್ದರು". ಮುಂದೇನು ಮಾಡುವುದೆಂದು ಅವರಿಗೂ ತಿಳಿಯಲಿಲ್ಲ. ದೇವಾಲಯಕ್ಕೆ ಬಂದವರೇ–

"ವೀರಣ್ಣ, ಹೀಗಾಯಿತಲ್ಲ ?" ಎಂದರು.

"ಏನೋ, ಶಿವ ಆ ಹೊತ್ತಿನಲ್ಲಿ ಆ ಮಾತು ಆಡಿಸಿದ, ಆಡಿಬಿಟ್ಟೆ, ನಾನಾಡಿದೆನೆ? ಆಡಿಸಿದವನು ಶಿವ. ಆಡಿದ ಮಾತು ಉಳಿಸಿಕೊಡುತ್ತಾನೋ ಇಲ್ಲವೋ ನೋಡುತ್ತೇನೆ. ಇಷ್ಟು ದಿನ ನಂಬಿ ಸೇವೆಮಾಡಿದೆ. ಇವೊತ್ತು ಆತ ಮಗನನ್ನು ಕೈಬಿಟ್ಟರೆ, ತಲೆ ಹೋಗಲೇಳಿ!" – ನಿರ್ವಿಕಾರವಾದ ಧ್ವನಿಯಲ್ಲಿ ಹೇಳಿದ ವೀರಣ್ಣಜ್ಜ.

"ಮಾತು ಈಗ ಅಲ್ಲಿಗೇ ಬಂದಿದೆ, ಅದಕ್ಕೇ ನಾನೂ ಬಂದೆ."

"ಏಕೆ ?"

"ನಾನೂ ಅಷ್ಟು ಸ್ವಾಮಿಗೆ ಸೇವೆ ಮಾಡಿದ್ದೇನೆ. ನಾನೂ ಕೇಳಿ ನೋಡುತ್ತೇನೆ."



"ನನ್ನ ಕೆಲಸಕ್ಕೆ ನಿನ್ನ ಸೇವೆಸವೆಯುವುದು ಬೇಡ, ವೆಂಕಟಸುಬ್ಬಯ್ಯ."

"ಅದಾಗದು. ನೀನು ಶಿವನ ಭಕ್ತ, ನಾನು ಅಮ್ಮನವರ ಸೇವಕ. ಇಬ್ಬರೂ ಪ್ರಾರ್ಥಿಸೋಣ. ನೀನೂ ಪೂಜೆಗೆ ಕುಳಿತುಕೋ. ನಾನೂ ಮಿಂದು ಬರುತ್ತೇನೆ" ಎಂದು, ವೀರಣ್ಣಜ್ಜ ಎಷ್ಟು ಬೇಡವೆಂದರೂ ಕೇಳದೆ, ವೆಂಕಟಸುಬ್ಬಯ್ಯನವರೂ ಹೋಗಿ ಹೊಂಡದಲ್ಲಿ ಮಿಂದು ಬಂದರು. ವೀರಣ್ಣಜ್ಜ, ಕಠಾರಿಗೆ ಕುಂಕುಮಾರ್ಚನೆ ಮಾಡಿ, 'ಜಡೆ ತೋರಿಸು, ಇಲ್ಲವಾದರೆ ತಲೆ ತೆಗೆದುಕೋ' ಎಂದು ದೇವರಿಗೆ ಹೇಳಿ, ಧ್ಯಾನಕ್ಕೆ ಕುಳಿತ. ಒಂದು ಕಡೆ ಅವರು, ಇನ್ನೊಂದು ಕಡೆ ವೆಂಕಟಸುಬ್ಬಯ್ಯ. ಒಂದು ಕಡೆ ಧ್ಯಾನ – ಇನ್ನೊಂದು ಕಡೆ ಗಾನ. ಇರುಳೆಲ್ಲ ಸೇವೆ ನಡೆಯಿತು. ಇಬ್ಬರಿಗೂ ಮೈಮೇಲೆ ಎಚ್ಚರವಿರಲಿಲ್ಲ. ಮೂಡಲ ಕಪ್ಪು ಕರಗುವ ಹೊತ್ತಿನಲ್ಲಿ, ಯಾರೋ ಗಂಟೆ ಬಾರಿಸಿದ ಸದ್ದಾಯಿತು. ವೀರಣ್ಣಜ್ಜ ಕಣ್ಣು ತೆರೆದು ನೋಡಿದ. ಲಿಂಗದ ನೆತ್ತಿಯ ಮೇಲೆ ಸರ್ಪಾಕಾರದಲ್ಲಿ ದೇವರು ಪ್ರತ್ಯಕ್ಷನಾಗಿದ್ದಾನೆ ! 'ನಿನ್ನ ಅಭೀಷ್ಟ ಈಡೇರಿತು' ಎಂಬಂತೆ ಸರ್ಪ, ಬಲಭಾಗದ ಹೂವು ಕೆಡವಿ ಮಾಯವಾಯಿತು. ವೀರಣ್ಣಜ್ಜ ವಿಸ್ಮಯದಿಂದ ಮೂಕನಾದ. ಆ ವೇಳೆಗೆ ವೆಂಕಟ ಸುಬ್ಬಯ್ಯನವರೂ ನಗುತ್ತಾ ಕಣ್ಣುಬಿಟ್ಟರು.

"ವೀರಣ್ಣ, ನಿನ್ನ ಕೆಲಸವಾಯಿತು, ತಾಯಿ ಕಾಣಿಸಿಕೊಂಡು ತನ್ನ ಜಡೆ ತೋರುವುದಾಗಿ ಹೇಳಿದಳು" ಎಂದರು ಉತ್ಸಾಹದಿಂದ.

"ಹೂ, ಸ್ವಾಮಿ, ಸರ್ಪವಾಗಿ ಕಾಣಿಸಿಕೊಂಡು ಹೂವು ನೀಡಿದ!" ಎಂದು ವೀರಣ್ಣಜ್ಜ – "ನಿನ್ನ ಸೇವೆ ಸ್ವಾಮಿಗೆ ಒಪ್ಪಿಗೆಯಾಯಿತು."

"ಉಂಟೆ, ನಿನ್ನ ಪೂಜೆ ಸ್ವಾಮಿಗೆ ಒಪ್ಪಿಗೆಯಾಯಿತು. ಹೋಗಿ ಸ್ನಾನ ಮಾಡಿ ಬಂದು, ಪ್ರಾತಃ ಪೂಜೆಗೆ ಸಿದ್ಧಮಾಡು. ಸಣ್ಣದಾಗಿ ದೇಶಾಕ್ಷಿ ಹಾಡಿ ಉದಯಪೂಜೆ ಮಾಡಿ, ಮನೆಗೆ ಹೋಗಿ ಮಡಿ ಉಟ್ಟು ಬರುತ್ತೇನೆ" ಎಂದು ಹೇಳಿ ವೆಂಕಟಸುಬ್ಬಯ್ಯ, ದೇವರಿಗೆ ದೀರ್ಘದಂಡ ನಮಸ್ಕಾರ ಮಾಡಿ ಮನೆಗೆ ಹೋದರು.

"ಬೆಳಗಿನ ಪೂಜೆಯ ವೇಳೆಗೆ, ಪಾಳೆಯಗಾರರು ಹತ್ತಾರು ಜನ ಮುಖ್ಯಸ್ಥರೊಂದಿಗೆ ದೇವಾಲಯಕ್ಕೆ ಬಂದರು. ಯಾರ ಮನಸ್ಸಿನಲ್ಲೂ ದಿನದ ಉಲ್ಲಾಸವಿಲ್ಲ. ಏನಾಗುವುದೋ ಎಂಬ ಗಾಬರಿ, ಕಳವಳ, ವೀರಣ್ಣಜ್ಜನನ್ನು ನೋಡಿದ ಕೂಡಲೇ ಪಾಳೆಯಗಾರರು– ದೇವರ ದರ್ಶನ ಮಾಡಬಹುದೇ?" ಎಂದು ಕೇಳಿದರು.

"ಚಿತ್ತ, ಆಗಬಹುದು."

"ಆದರೆ ಗರ್ಭಗುಡಿಯೊಳಗೆ ಹೋಗುವವರು ಯಾರು? ಈ ಚರ್ಚೆ ನಡೆಸುತ್ತಿರುವಾಗಲೇ ವೆಂಕಟಸುಬ್ಬಯ್ಯನವರೂ ಬಂದರು. ಚರ್ಚೆಯ ವಿಚಾರ ಅವರಿಗೂ ತಿಳಿಯಿತು."

"ಪಾಳೆಯಗಾರರೇ ಖುದ್ದಾಗಿ ಪರಾಂಬರಿಸಬೇಕು"– ಗಡಸುಧ್ವನಿಯಲ್ಲಿ ಹೇಳಿದರು ವೆಂಕಟಸುಬ್ಬಯ್ಯ.

"ಆದರೆ ನಾವು ಪ್ರವೇಶಮಾಡಬಹುದೇ? ಮೈಲಿಗೆಯಾಗುವುದಿಲ್ಲವೇ ?"

"ಪ್ರಭುಗಳು ಸ್ವಾಮಿಯಲ್ಲಿ ಸಂದೇಹ ತೋರಿಸಿದಾಗಲೇ, ಮೈಲಿಗೆ ಯಾಯಿತು..." – ವೆಂಕಟಸುಬ್ಬಯ್ಯನವರ ಧ್ವನಿ ದಿನ ಏಕೋ ಚುರುಕಾಗಿತ್ತು. "ರಕ್ತಸ್ನಾನವಾಗಿ ಆ ಮೈಲಿಗೆ ಕಳೆಯಬೇಕೋ ಏನೋ."

"ಅವರು ಆ ಮಾತನಾಡಿದ ರೀತಿ, ಧ್ವನಿಯನ್ನು ಕೇಳಿ, ಹಗಲು ಮಂಕಾಯಿತು. ಪಾಳೆಯಗಾರರ ಮನಸ್ಸು ಗಾಳಿ ಸೋಕಿದ ದೀಪದ ಕುಡಿಯಂತೆ ಹೊಯ್ದಾಡಿತು."

"ಸ್ವಾಮಿಯಲ್ಲಿ ನಾವು ಸಂದೇಹಪಡಲಿಲ್ಲ...."

"ಸ್ವಾಮಿಯ ಸೇವಕರಲ್ಲಿ ಸಂದೇಹಪಟ್ಟಿರಿ. ಎರಡೂ ಒಂದೇ ಆಯಿತು. ಒಳಗೆ ನಡೆಯೋಣವಾಗಲಿ."– ಅಪ್ಪಣೆ ಮಾಡುವಂತೆ ಹೇಳಿದರು ವೆಂಕಟಸುಬ್ಬಯ್ಯ.

ಆ ಮಾತು ಕೇಳಿ ಪಾಳೆಯಗಾರರ ಎದೆಯೂ ಏಕೋ ನಡುಗಿತು.

"ನೀವು ನೋಡಿ ಹೇಳಿದಾರಾಗದೇ, ವೆಂಕಟಸುಬ್ಬಯ್ಯ?"

"ಆಗದು, ಮಹಾಸ್ವಾಮಿ, ಆಗದು, ಸಂದೇಹಪಟ್ಟ ಕಣ್ಣೇ, ಸಂದೇಹ ನಿವಾರಣೆ ಮಾಡಿಕೊಳ್ಳಬೇಕು. ಇಲ್ಲವಾದರೆ ಇಂದು ಅರ್ಚಕರಿಗೆ ತಗುಲಿದ ಅನುಮಾನದ ಸೋಂಕು ನಾಳೆ ನನಗೂ ತಗಲಬಹುದು."

"ವೆಂಕಟಸುಬ್ಬಯ್ಯನವರ ಮಾತನ್ನು ಯಾರೂ ಅಲ್ಲವೆನ್ನುವಂತಿರಲಿಲ್ಲ. ಉಳಿದವರೂ ಅದನ್ನೇ ಸಮ್ಮತಿಸಿದರು. ಬೇರೆ ದಾರಿಗಾಣದೆ, ಪಾಳೆಯಗಾರರು ಅವರೊಂದಿಗೆ ಗರ್ಭಗುಡಿಯ ಪ್ರವೇಶಮಾಡಿದರು, ಹುತ್ತದಲ್ಲಿ ಕೈಯಿಡಲೆತ್ನಿಸುವಂತೆ ಹೆದರುತ್ತಾ."

"ವೀರಣ್ಣಜ್ಜ, ದೇವರಿಗೆ ಅಡ್ಡ ಬಿದ್ದು, 'ಹಿಡಂಬೇಶ್ವರಾ, ನೀನೇ ದಿಕ್ಕು' ಎಂದು ಮುಡಿಯ ಮೇಲಿದ್ದ ಹೂಮಾಲೆಯನ್ನು ಸರಿಸಿದರು. ಪಾಳೆಯಗಾರರೇ ಸ್ವಾಮಿಯ ನೆತ್ತಿಯ ಮೇಲೆ ಕೈಯಿಟ್ಟು ನೋಡಿದರು. ತಲೆಯ ತುಂಬಾ ರೇಶಿಮೆಯಂತೆ ಮೃದು ಕೇಶರಾಶಿ! ಕೂದಲು ಮುಟ್ಟಿದ ಪಾಳೆಯಗಾರರು, ಬೆಂಕಿ ಮುಟ್ಟಿದವರಂತೆ ಗಾಬರಿಯಾಗಿ, ಹಿಂದೆ ಸರಿದರು."



"ಎಳೆದು ನೋಡಿ. ಕೃತಕವಾದ ಕೂದಲನ್ನು ಅಂಟಿಸಿರಬಹುದು"–ಎಂದು ವೆಂಕಟಸುಬ್ಬಯ್ಯ.

ಅವರ ಮಾತು ಚಾಟಿಯ ಏಟಿನಂತಿತ್ತು. ವೀರಣ್ಣಜ್ಜ ಮಾತಾಡದೆ ದೇವರೆದುರು 'ನನ್ನಪ್ಪಾ' ಎಂದು ಅಳುತ್ತಾ ನಿಂತು ಬಿಟ್ಟಿದ್ದ. ಪಾಳೆಯಗಾರರೂ ಗರ ಹೊಡೆದವರಂತೆ ನಿಂತಿದ್ದರು.

"ಮಹಾಸ್ವಾಮಿ, ಸುಮ್ಮನೆ ನಿಲ್ಲಬಾರದು, ಪರೀಕ್ಷೆ ಸಾಂಗವಾಗಲಿ, ನಿಮಗೆ ಧೈರ್ಯವಿಲ್ಲದಿದ್ದರೆ, ನೋಡಿ"–ಎಂದು ವೆಂಕಟಸುಬ್ಬಯ್ಯನವರೇ, ಸ್ವಾಮಿಯ ನೆತ್ತಿಯ ಮೇಲಿದ್ದ ಕೇಶರಾಶಿಯಲ್ಲಿ ಒಂದು ಹಿಡಿಯಷ್ಟನ್ನು ಹಿಡಿದು ಎಳೆದರು. ಕೂದಲು ಕಿತ್ತು ಬಂತು. ಅದರೊಂದಿಗೆ ರಕ್ತವೂ ಹರಿಯಿತು, ಲಿಂಗದ ನೆತ್ತಿಯಿಂದ.

"ಸ್ವಾಮಿಯ ನೆತ್ತಿಯಿಂದ ರಕ್ತವನ್ನು ಕಂಡು ವೀರಣ್ಣಜ್ಜ 'ಅಯ್ಯೋ!' ಎಂದು ಚೀರಿ ಕೆಳಗೆ ಬಿದ್ದುಬಿಟ್ಟ, ಪಾಳೆಯಗಾರರೂ ಚಳಿ ಬಂದವರಂತೆ ನಡುಗುತ್ತಿದ್ದರು. ವೆಂಕಟಸುಬ್ಬಯ್ಯ ದೇವರ ಅವಾಹನೆಯಾದಂತೆ ನಿಂತಿದ್ದರು."

"ಮನಸ್ಸಿಗೆ ನೆಮ್ಮದಿಯಾಯಿತೇ ?"

"ಅವರ ಪ್ರಶ್ನೆ ಕೇಳಿ, ಪಾಳೆಯಗಾರರು ಅದಕ್ಕೆ ಉತ್ತರವೆಂಬಂತೆ ಅಡ್ಡಬಿದ್ದರು. ಹೊರಗೆ ನೆರೆದವರಿಗೂ ಮೈಮೇಲೆ ಎಚ್ಚರವಿದ್ದಂತಿರಲಿಲ್ಲ."

"ಮನಸ್ಸಿಗೆ ಸಂದೇಹ ತೊಲಗಿ, ತೃಪ್ತಿಯಾಗಿದ್ದರೆ, ಪ್ರಭುಗಳು ಇನ್ನು ದಯಾಮಾಡಿಸಬಹುದು. ಈ ದಿನ ಪೂಜೆ ನಡೆಯದು"– ಎಂದು ವೆಂಕಟಸುಬ್ಬಯ್ಯ ಪಾಳೆಯಗಾರರನ್ನು ಹೊರಗೆ ಕಳಿಸಿ, ವೀರಣ್ಣಜ್ಜನ ಹಣೆಗೆ ಸ್ವಾಮಿಯ ವಿಭೂತಿ ತೊಡೆದು, ತಾವು ಗರ್ಭಗುಡಿಯ ಬಾಗಿಲು ಹಾಕಿಕೊಂಡು ಹೊರಬಂದರು. ಅವರ ಮುಖ ಸಿಡಿಲಿನಂತೆ ಉರಿಯುತ್ತಿತ್ತು. ದೇವಾಲಯದಿಂದ ಹೊರಬಂದ ವೆಂಕಟಸುಬ್ಬಯ್ಯ, ಹೊರಗಡೆಯ ಭೀಮನ ಕಲ್ಲಿನ ಮೇಲೆ, ಧ್ವಜಸ್ತಂಭದ ಇದಿರು ಕುಳಿತುಬಿಟ್ಟರು.

"ಅಷ್ಟು ಹೊತ್ತಿಗೆ, ಈ ಪರೀಕ್ಷೆಯ ಸುದ್ದಿ ಊರಿನಲ್ಲೆಲ್ಲಾ ಹರಡಿ, ಜನ ದೇವಾಲಯದ ಸುತ್ತ ಜಾತ್ರೆಯಂತೆ ನೆರೆಯಿತು. ಎಲ್ಲರಿಗೂ ವೀರಣ್ಣಜ್ಜನನ್ನು ನೋಡಬೇಕೆಂಬ ಕುತೂಹಲ. ಆದರೆ ವೆಂಕಟಸುಬ್ಬಯ್ಯ ಯಾರನ್ನೂ ಒಳಗೆ ಬಿಡಲಿಲ್ಲ. ಎಷ್ಟು ಹೊತ್ತಾದರೂ ನೋಡಿ ಹೋಗೋಣ ಎಂದು ಜನ ನಿಂತೇ ಇದ್ದರು. ವೆಂಕಟಸುಬ್ಬಯ್ಯ ವೀರಣ್ಣಜ್ಜನ ಮನೆಯವರನ್ನೂ ಒಳಗೆ ಬಿಡಲಿಲ್ಲ." ಮಧ್ಯಾಹ್ನವಾಯಿತು, ಸಂಜೆಯಾಯಿತು. ಪಾಳೆಯಗಾರರು ದೇವಾಲಯಕ್ಕೆ ತಪ್ಪು

ಗಾಣಿಕೆಯ ಸೇವೆ ಕಳಿಸಿದರು. ಅದನ್ನೂ 'ನಾಳೆಯಾಗಲಿ' ಎಂದು ಹಿಂದಕ್ಕೆ ಕಳಸಿಬಿಟ್ಟರು ವೆಂಕಟಸುಬ್ಬಯ್ಯ.

"ವೀರಣ್ಣಜ್ಜ ಗರ್ಭಗುಡಿಯೊಳಗೆ ಪ್ರಜ್ಞೆತಪ್ಪಿ ಬಿದ್ದಿದ್ದ. ಎಷ್ಟೋ ಹೊತ್ತಿನ ಮೇಲೆ ಆತನಿಗೆ ಎಚ್ಚರವಾಯಿತು. ಎಣ್ಣೆ ತೀರಿದ್ದರೂ ದೀಪಗಳು ಹಾಗೇ ಉರಿಯುತ್ತಿದ್ದವು. ಯಾರೂ ಬಾರಿಸದಿದ್ದರೂ ಗಂಟೆಗಳು ಹಾಗೆ ನುಡಿಯುತ್ತಿದ್ದವು." ದೇವಾಲಯದ ತುಂಬಾ ಕೇದಿಗೆಯ ವಾಸನೆ ತುಂಬಿತ್ತು. ಸ್ವಾಮಿಯ ನೆತ್ತಿಯಿಂದ ಸಣ್ಣಗೆ ನೆತ್ತರು ಒಸರುತ್ತಲೇ ಇತ್ತು.

"ಸ್ವಾಮಿ, ನನ್ನ ತಲೆಯನ್ನು ಕಾಯಲು, ನಿನ್ನ ತಲೆಗೆ ನೋವಾಯಿತೆ ? ನಿಗನಗೇನು ಸೇವೆ ಒಪ್ಪಿಸಲಿ?" ಎಂದು ವೀರಣ್ಣಜ್ಜ, "ನಮ್ಮಪ್ಪಾ, ನಾನಾಡಿದ ಸುಳ್ಳಿನಿಂದ, ನನ್ನ ತಲೆ ಉಳಿಸಿಕೊಂಡು, ನಿನ್ನ ತಲೆಯನ್ನು ಮರ್ತ್ಯರಿಗೆ ತೋರಿಸಿದೆ. ಪಾಪಿ, ನಾನು ಮಹಾಪಾಪಿ! ಸುಳ್ಳಾಡಿ ಸಾಕಿದ ಈ ತಲೆ ಇರಬಾರದು. ನೀನು ಕಾದ ತಲೆ ನಿನಗಾಗಲಿ" ಎಂದು ದೇವರೆದುರು ಅಡ್ಡಬಿದ್ದು, ಹಿಂದಿನ ರಾತ್ರಿ ಅರ್ಚಿಸಿ ಇಟ್ಟಿದ್ದ ಕಠಾರಿಯಿಂದ, ವೀರಣ್ಣಜ್ಜ ತನ್ನ ತಲೆಯನ್ನು ಕತ್ತರಿಸಿ ಇಟ್ಟ. ಗರ್ಭಗುಡಿಯೆಲ್ಲಾ ರಕ್ತದ ಮಡುವಾಗಿಹೋಯಿತು!

"ಹೊರಗೆ ಕುಳಿತು ವೆಂಕಟಸುಬ್ಬಯ್ಯ 'ಗೊಳೋ' ಎಂದು ಅಳುತ್ತಿದ್ದರು. ಹೀಗಾಗುವುದೆಂದು ಅವರಿಗೆ ತಿಳಿದಿತ್ತೇನೊ. ರಾತ್ರಿಯ ಮಾಮೂಲಿನ ಪೂಜೆಯ ವೇಳೆಗೆ ಪಾಳೆಯಗಾರರಿಗೆ ಹೇಳಿಕಳಿಸಿದರು. ಗರ್ಭಗುಡಿಯಲ್ಲಿ ರಕ್ತ ತುಂಬಿದ್ದರೂ ಗಮಗಮ ಕೇದಿಗೆ ಹೂವಿನ ವಾಸನೆ ಬರುತ್ತಿತ್ತು. ನೆತ್ತರೆಂದರೆ ನೀರಿನಷ್ಟು ಬಳಕೆಯಾದ ಪಾಳೆಯಗಾರರಿಗೂ ಗರ್ಭಗುಡಿಯಲ್ಲಿ ಮಡುಗಟ್ಟಿದ್ದ ರಕ್ತವನ್ನು ಕಂಡು ಬವಳಿಕೆ ಬರುವಂತಾಯಿತು, ಮೂಕರಂತೆ ನಿಂತು ಬಿಟ್ಟರು. ಅವರ ಕಣ್ಣಿನಿಂದಲೂ ನೀರು ಸುಮ್ಮನೆ ಹರಿಯುತ್ತಿತ್ತು."

"ಪ್ರಭುಗಳ ಸಂದೇಹ ನಿವಾರಣೆಯಾಯಿತೇ?" – ಮಸೆದ ಉಕ್ಕಿನಂತಿತ್ತು ವೆಂಕಟಸುಬ್ಬಯ್ಯನವರ ಮಾತು.

"ಹೀಗಾಗುವುದೆಂದು ನಾವು ಅರಿತಿರಲಿಲ್ಲ...."

"ಆದರೂ, ಬೇಡಬೇಡವೆಂದರೂ, ಹಟ ಮಾಡಿದಿರಿ. ಎಷ್ಟೋ ವರ್ಷಗಳಿಂದ ಸ್ವಾಮಿಯ ಸೇವೆ ಮಾಡಿದವರಲ್ಲೂ ನಂಬುಗೆ ತೋರಲಿಲ್ಲ. ಈ ದಿನ ತಾರ್ಕಣೆಯಾಯಿತು. ವೀರಣ್ಣ ತಲೆ ಕೊಟ್ಟು ತಾನು ಆಡಿದ ಮಾತು ನಿಜ ವೆಂದು ತೋರಿದ......"

"ನನ್ನದು ಮಹಾ ಅಪರಾಧವಾಯಿತು...."



"ನಿಜ, ಆಯಿತು ಮಹಾಸ್ವಾಮಿ. ಆದರೆ ಅದದ್ದು ಒಳಿತಾಗಲಿ ಎಂದಷ್ಟೇ ನನ್ನ ಹಾರೈಕೆ. ಅಪ್ಪಣೆಯಾದರೆ ನಾನು ಮನೆಗೆ ಹೋಗುತ್ತೇನೆ."

"ಅವರು ಆ ಮಾತನಾಡಿದ ರೀತಿಯನ್ನು ಕೇಳಿ ಪಾಳೆಯಗಾರರಿಗೆ ಮತ್ತೇನೋ ಅಶುಭಸೂಚನೆ ಕೊಟ್ಟಂತಾಗಿ ಗಾಬರಿಯಾಯಿತು. 'ಹೋಗಿ ಬರುತ್ತೇನೆ' ಎನ್ನುವುದು ಅವರ ದಿನದ ಮಾತು. ಆದರೆ ಈ ದಿನ ಏಕೋ 'ಹೋಗುತ್ತೇನೆ' ಎನ್ನುತ್ತಿದ್ದಾರೆ. ಏಕೋ ?"

"ಏನೋ ಒಂದು ರೀತಿ ಮಾತನಾಡುತ್ತಿದ್ದೀರ. ನಮ್ಮಿಂದ ತಪ್ಪಾಯಿತು. ಹಿರಿಯರು ಮನ್ನಿಸಿ, ದಾರಿ ತೋರಿ ಕಾಪಾಡಬೇಕು. ತಮಗೂ ನಮ್ಮಲ್ಲಿ ಬೇಸರವೇ?"

"ಈ ಮೈ, ದುರ್ಗದ ದೊರೆಗಳ ಕೈಯ ಹಾಲು ಕುಡಿದು ಬೆಳೆಯಿತು. ತಮ್ಮಲ್ಲಿ ಬೇಸರವೇ?"

"ಮತ್ತೆ ಹೋಗುತ್ತೇನೆ ಎಂದಿರಲ್ಲಾ !"

"ಅದೂ ನಿಜ."

"ಅಂದರೆ, ಮತ್ತೆ ನಮ್ಮನ್ನು ನೋಡುವುದಿಲ್ಲವೇ ?"

"ಉಂಟೆ, ಪ್ರಭುಗಳ ಭೇಟಿ ಮಾಡುತ್ತೇನೆ. ಅದನ್ನು ತಪ್ಪಿಸುವುದಿಲ್ಲ. ಆದರೆ ಮನಸಿನೊಳಗೆ ಒಂದನ್ನಿಟ್ಟುಕೊಂಡು, ಹೊರಗೊಂದು ಹೇಳುವುದು ನನಗೆ ಸಾಧ್ಯವೇನಿಲ್ಲ. ಮಹಾಸ್ವಾಮಿಗಳು ಬೇಸರ ಮಾಡಬಾರದು. ಈ ದಿನ ಒಂದು ಪಾಠ ಕಲಿತೆ."

"ಏನು ?"

"ವೀರಣ್ಣ ತನ್ನ ದೇವರಿಗೆ ಸಲ್ಲಿಸಿದಂತೆಯೇ ಇಷ್ಟು ವರ್ಷ ತಮಗೂ ಸೇವೆಸಲ್ಲಿಸಿದ. ಕೂದಲೆಳೆ ಕಾರಣಕ್ಕೆ ಮಹಾಸ್ವಾಮಿಗಳು, ನಂಬಿದವರನ್ನು ದೂರ ಮಾಡಿದಿರಿ. ದೊರೆ ತನ್ನವರನ್ನು ಮರೆತರೂ ದೇವರು ತನ್ನವರನ್ನು ಮರೆಯಲಿಲ್ಲ...."

"ನಿಜ, ಮರೆಯಲಿಲ್ಲ.......!"

"ಮನುಷ್ಯನ ನಂಬಿಕೆ ಗಾಳಿಗೊಡ್ಡಿದ ಸೊಡರು, ಮಹಾಸ್ವಾಮಿ. ದೇವರ ನಂಬಿಕೆ ಶಾಶ್ವತ ನಂದಾದೀಪ. ಇಷ್ಟು ಕಾಲ ಮಹಾಸ್ವಾಮಿಯವರ ಸೇವೆ ಮಾಡಿದೆ. ಇನ್ನು ನನ್ನ ಸೇವೆ, ದೇವರಿಗೆ ಮೀಸಲು."

"ಹಾ! – ಇನ್ನು ನಿಮ್ಮ ಹಾಡು ಕೇಳುವ ಭಾಗ್ಯ ನಮಗಿಲ್ಲವೆ ?"

"ಉಂಟು ಪ್ರಭು, ದೇವರ ಸನ್ನಿಧಿಯಲ್ಲಿ ಹಾಡುವಾಗ, ಯಾರೂ ಕೇಳ ಬಹುದು; ತಾವೂ ಕೇಳಬಹುದು. ಆದರೆ ತಮಗಾಗಿ, ಯಾವ ಮನುಷ್ಯನಿಗಾಗಿಯೂ, ಇನ್ನು ಹಾಡುವುದಿಲ್ಲ."

"ಇಷ್ಟು ಕ್ರೋಧವೇ ನಮ್ಮ ಮೇಲೆ"

"ಕ್ರೋಧವಿಲ್ಲ, ಎಂದಿಗಿಂತಲೂ ಹೆಚ್ಚಾದ ಪ್ರೀತಿಯಿದೆ. ತಮ್ಮ ಹಟ, ವೀರಣ್ಣನ ತ್ಯಾಗ, ನಮಗೆ 'ನೆರಳು ನಂಬಿ ಬದುಕಬೇಡ' ಎಂದು ಪಾಠ ಕಲಿಸಿದ ಗುರುವಾಯಿತು. ನನಗಿನ್ನು ಅಪ್ಪಣೆಯಾಗಬೇಕು."

"ಒಂದು ಗಳಿಗೆಯ ಕೋಪದಿಂದ ಇಬ್ಬರು ಹಿರಿಯರಿಗೆ ಎರವಾದೆವಲ್ಲಾ, ಎಂದು ಪಾಳೆಯಗಾರರು ತಳಮಳಿಸಿದರು. "ಬೇಕಾದ ತಪ್ಪು ಕಾಣಿಕೆ ಕೊಡುತ್ತೇನೆ, ಕ್ಷಮಿಸಿ" ಎಂದು ಬೇಡಿದರು. ಏನೆಂದರೂ ವೆಂಕಟಸುಬ್ಬಯ್ಯನವರು ಒಪ್ಪಲಿಲ್ಲ; ಆಡಿದ ಮಾತು ಬದಲಿಸಲಿಲ್ಲ. ಆ ದಿನ ದೇವಾಲಯದಿಂದ ಮನೆಗೆ ಮರಳಿದ ವೆಂಕಟಸುಬ್ಬಯ್ಯನವರು, ಮತ್ತೆ ಅರಮನೆಯಲ್ಲಿ ಕಾಲಿಡಲಿಲ್ಲ. ಎಂದೂ ದೊರೆಯ ಸನ್ನಿಧಿಯಲ್ಲಿ ಹಾಡಲಿಲ್ಲ.

"ಪಾಳೆಯಗಾರರು ಎಷ್ಟೋ ಜನರಿಂದ ಹೇಳಿಸಿದರು. ಕಡೆಗೊಂದು ದಿನ ವೆಂಕಟಸುಬ್ಬಯ್ಯನವರು 'ಮಹಾಸ್ವಾಮಿಯವರಿಗೆ ನಾನು ದುರ್ಗದಲ್ಲಿರುವುದು ಬೇಸರವಾದರೆ, ಊರು ಬಿಡುತ್ತೇನೆ' ಎಂದು ಹೇಳಿಕಳಿಸಿದ ಮೇಲೆ ಪಾಳೆಯಗಾರರು ಸುಮ್ಮನಾಗಿಬಿಟ್ಟರು."

"ಕಟ್ಟಳೆಯ ದಿನಗಳಲ್ಲಿ ವೆಂಕಟಸುಬ್ಬಯನವರು ಬಂದು, ಹಿಡಂಬೇಶ್ವರನ ಗುಡಿ, ಏಕನಾಥಮ್ಮನ ಗುಡಿ, ಉತ್ಸವಾಂಬಾ ಗುಡಿಗಳಲ್ಲಿ ಹಾಡಿ ಹೋಗುತ್ತಿದ್ದರು. ನೂರಾರು ಜನರೊಂದಿಗೆ, ಪಾಳೆಯಾಗರರೂ ಬಂದು ಕುಳಿತು, ಕೇಳಿ ಅವರ ಕೃಪೆಯಿಂದಲೇ ಪ್ರಸಾದ ತೆಗೆದುಕೊಂಡು ಕಣ್ಣೀರು ಹಾಕಿ ಹೋಗುತ್ತಿದ್ದರು. ಅವರಿಗೂ ಪಾಳೆಯಗಾರರ ಮೇಲೆ ಹೊಟ್ಟೆಯಿಲ್ಲಿ ಹುಟ್ಟಿದ ಮಗನ ಮೇಲಿರುವಷ್ಟು ಪ್ರೀತಿ ಇತ್ತು. ಆದರೂ ಇಟ್ಟ ಹೆಜ್ಜೆ ಕದಲಿಸಲಿಲ್ಲ."

"ಪಾಳೆಯಗಾರರು ವೀರಣ್ಣಜ್ಜನನ್ನು ಮರೆಯಲಿಲ್ಲ. ನೀವು ಈಗ ನೋಡುತ್ತೀರಲ್ಲಾ, ಆ ಕಲ್ಲುವಿಗ್ರಹ, ಅದನ್ನು ಪಾಳೆಯಗಾರರೇ ಕೆತ್ತಿಸಿದ್ದು. ಪ್ರತಿ ಸೋಮವಾರ, ಸ್ವಾಮಿಗೆ ವಿಶೇಷ ಪೂಜೆಯಾದಾಗ ಆ ಕಲ್ಲಿಗೂ ಪೂಜೆ ನಡೆಯಬೇಕೆಂದು ಕಟ್ಟಲೆ ಮಾಡಿದ್ದರು. ಜನ ತುಂಬ ಭಕ್ತಿಯಿಂದ ನಡೆದುಕೊಳ್ಳುತ್ತಿತ್ತು. ಆ ಕಲ್ಲಿಗೆ, ವರ್ಷಕ್ಕೊಂದು ಬಾರಿ, ವೀರಣ್ಣಜ್ಜ ತಲೆ ಕೊಟ್ಟ ದಿನ, ಆ ಕಲ್ಲಿಗೆ ವಿಶೇಷ ಪೂಜೆ, ಮರ್ಯಾದೆ ನಡೆಯುತ್ತಿತ್ತಂತೆ. ಪಾಳೆಯಗಾರರೇ



ಖುದ್ದಾಗಿ ಬಂದು ಪೂಜೆ ಮಾಡುತ್ತಿದ್ದರಂತೆ. ಆ ದಿನ ವೆಂಕಟಸುಬ್ಬಯ್ಯನವರೂ ಬಂದು ಅಲ್ಲಿ ಹಾಡುತ್ತಿದ್ದರಂತೆ. ಆ ಕಾಲ ಹಾಗಿತ್ತು."

"ಈಗ ಪಾಳೆಯಗಾರರೂ ಇಲ್ಲ, ವೆಂಕಟಸುಬ್ಬಯ್ಯನವರೂ ಇಲ್ಲ; ಆ ಕಲ್ಲೂ ಪುಡಿಪುಡಿಯಾಗಿದೆ. ಅಂಥ ಮಹಾತ್ಮರನ್ನು ನೆನೆಸುವ ಜನವೂ ಇಲ್ಲ; ಏನೋ ನಮ್ಮಂಥ ನಾಲ್ಕು ತರಗೆಲೆ ಇರೋವರೆಗೂ ಅವರ ಹೆಸರು ಹೇಳಿಕೊಂಡು ಕಣ್ಣೀರು ಹಾಕುತ್ತೇವೆ. ನಮ್ಮ ಕಾಲ ಮುಗಿಯಿತು ಅಂದರೆ ಅದೂ ಮುಗಿಯಿತು. ನೆನೆಸುವವರೂ ಇರುವುದಿಲ್ಲ. ವೀರಣ್ಣಜ್ಜನ ಕಲ್ಲಿಗೆ ಬಂದ ಗತಿಯೇ, ವೆಂಕಟಸುಬ್ಬಯ್ಯನವರ ಕಲ್ಲಿಗೂ ಎಲ್ಲಿ ಬಂದೀತೋ ಎಂದು, ಈಗ ಅದರ ಮೇಲೆ ಹಳೆ ಪೆಟ್ಟಿಗೆ ಹೇರಿಬಿಟ್ಟಿದ್ದೇನೆ – ಯೋಗ್ಯತೆ ಇಲ್ಲದ ಜನ, ಅದನ್ನು ಮೆಟ್ಟಿ ಅಪವಿತ್ರ ಮಾಡಿಯಾರು ಎಂತ. ನೀವೇ ಹೇಳಿ, ಈಗಿನ ಕಾಲದಲ್ಲಿ ಯಾರಿಗೆ ಆ ಕಲ್ಲಿನ ಮೇಲೆ ಕುಳಿತುಕೊಳ್ಳೋ ಯೋಗ್ಯತೆ ಇದೆ ?" – ಎಂದು ಮುರುಗೇಂದ್ರಪ್ಪ, ಅಷ್ಟು ಮಾತನಾಡಿದ ಆಯಾಸಕ್ಕೋ, ಎದೆಯಲ್ಲಿ ಮರುಕಳಿಸಿದ ಹಳೆಯ ನೆನಪಿನ ಕುದಿಗೋ ಏದುತ್ತ.

ನನಗಂತೂ ಏನೂ ಮಾತಾಡಲು ಬಾಯಿ ಬರಲಿಲ್ಲ. ನಾಲಿಗೆ ಮೂಕವಾಗಿತ್ತು; ಕಣ್ಣು ಇದುರಿಗಿದ್ದುದನ್ನು ನೋಡದೆ, ಯಾವುದೋ ಗತ ಕಾಲದ ಭವ್ಯತೆಯ ಕನಸು ಕಾಣುತ್ತಿತ್ತು.

ನಡುಮುಗಿಲಿಗೆ ಬಂದ ಸೂರ್ಯ. ಪಡುವಣದತ್ತ ಸರಿದು ಉರಿಬಿಸಿಲು ಕಾವಾರುತ್ತಿತ್ತು. ಎದೆಯಲ್ಲೇನೋ ಒಂದು ಬಗೆಯ ಮೂಕ ಕಳವಳ. ದಿನವೂ ನೋಡುತ್ತಿದ್ದ ಗುಡ್ಡ, ಬತೇರಿ, ದೇವಾಲಯಗಳು, ಏಕೋ ತಮ್ಮ ವೈಭವವನ್ನೆಲ್ಲಾ ಕಳೆದುಕೊಂಡು, ಸತ್ವಹೀನವಾಗಿ ನಿಂತಂತಿತ್ತು. ಬಾನಿನ ಮೇಘಶೂನ್ಯ ನೀಲಿಮೆಯಲ್ಲಾಗಲಿ, ನಿಟ್ಟುಸಿರಿನಂತೆ ಭಾರವಾಗಿ, ಬಿಸಿಯಾಗಿ ಗಂಟೆಗೊಂದು ಬಾರಿ, ಎಳೆ ಎಳೆಯಾಗಿ ಸುಳಿವ ಗಾಳಿಯಲ್ಲಾಗಲಿ, ಎಲೆಯಲಗದೆ ಚಿತ್ತಾರದಂತೆ ನಿಂತ ಮರದಲ್ಲಾಗಲಿ – ಯಾವುದರಲ್ಲೂ ಜೀವವಿದ್ದಂತೆ ಇರಲಿಲ್ಲ; ಚಲನೆಯಾಸಕ್ತಿ ಇರಲಿಲ್ಲ. ಎಲ್ಲಾ ಬೃಹದಾಘಾತವೊಂದನ್ನು ಕಂಡು ಮರವಟ್ಟಂತೆ, ಶೋಕವೇ ಹೆಪ್ಪುಗಟ್ಟಿದಂಥ ಮೌನದಲ್ಲದ್ದಿ ಮಲಗಿವೆ. ನನ್ನೆದೆಯಲ್ಲಿ ಹೊಯ್ದಾಡುವ ಭಾವದ ಅಲೆಗಳಲ್ಲೂ ಶಬ್ದ ಜೀವ ಇದ್ದಂತಿರಲಿಲ್ಲ. ಅಲ್ಲೂ ಮೌನ; ಆಪ್ತ ಜೀವದ ನಿರ್ಗಮನದನಂತರ ಮನೆಯಲ್ಲಿ ಕವಿವ, ಕೂರಲಗಿನಂತೆ ಎದೆ ಇರಿವ ಮೌನ; ನಾನು ಒರಗಿ ಕುಳಿತ ಕಲ್ಲಿನ ಕಂಬವೂ, ಸದ್ದುಮಾಡದೆ, ಹಾಗೇ ಕರಗಿ ಹೋಗುವುದೇನೋ ಎನಿಸಿತು, ನನಗೆ.

ಯಾವುದು ಸ್ಥಿರ? ಭವ್ಯತೆಯೇ ಬಾಳ ಉಸಿರಾಗಿ ಬಾಳಿದ ಜನ, ಇಬ್ಬನಿಯಂತೆ ಕರಗಿಹೋದಮೇಲೆ, ಅವರ ನಡೆದಾಟ ನಲಿದಾಟಕ್ಕೆ ಕಟ್ಟಿದ ಈ ಭವ್ಯಮಂದಿರಗಳು, ಉಸಿರಿಳಿದ ಮೈಯಂತೆ ಎಷ್ಟು ದಿನ ಬಾಳಿಯಾವು ? ಆ ಜನರನ್ನು ಕಾಣದೆ, ನಡೆದಾಡುವ ಬೆಳಕುಗಳಂತೆ ಬಾಳಿದ ಅವರ ಜೀವನದ ಕಥೆ ಕೇಳಿದ ನನಗೆ ಈ ದುಃಖವಾದರೆ, ಅವರ ನಡೆದಾಟಕ್ಕೆ ನೆಲವಾಗಿ, ನಗು–ನಿಟ್ಟುಸಿರುಗಳನ್ನು ಮಾರ್ದನಿಸಿದ, ಅವರ ಸಂತೋಷದಲ್ಲಿ ರೂಪುಗೊಂಡು ಈಗ ವಿಧವೆಯಂತಾದ ಅವಶೇಷಗಳಿಗೆ ಎಷ್ಟು ಕೊರಗಿರಬೇಡ; ಅವರು ಹೋದತ್ತ ಹೋಗುವ ಹಂಬಲವಿರಬೇಡ ? ನೋಡನೋಡುತ್ತಾ, ಒಂದು ದಿನ, ಅಂದಿನ ನೆನಪುಗಳ ಮುರಿದ ಹೊರೆಯನ್ನು ಹೊತ್ತ ಬೆಟ್ಟಕ್ಕೆ ಬೆಟ್ಟವೇ ತೇರಿನಂತೆ ದಿಗಂತದತ್ತ ಸರಿದು ಕಣ್ಮರೆಯಾಗಿ, ನಿಟ್ಟುಸಿರಿಡುವ ಶೂನ್ಯವನ್ನುಳಿಸಿ ತೆರಳುವುದೇನೋ ಎನಿಸಿ, ಎದೆಯಲ್ಲಿ ಧಿಗ್ಗನೆ ದಿಗಿಲು ಬೆಳೆಯಿತು.

"ಹೊತ್ತು ಬಹಳ ಆಯಿತು. ಮನೆಗೆ ಹೋಗಿ ಊಟ ಮಾಡಿ ಬನ್ನಿ. ಮನೇಲಿ ಎಲ್ಲಿ ಹೋದ್ರೋ ಅಂತ ಒದ್ದುಕೋತಾ ಇರಬೇಕು"– ಎಂದರು ಅದುವರೆಗೂ ನನ್ನೊಂದಿಗೆ ಸುಮ್ಮನೆ ಕುಳಿತಿದ್ದ ಮುರುಗೇಂದ್ರಪ್ಪ. ಅವರ ಮಾತು ಕೇಳಿ ನನಗೂ ನೆನಪಾಯಿತು – ರುದ್ರಮುನಿ ತಂದಿಟ್ಟ ಅವರ ಅನ್ನವೂ ತಣಿದಿತ್ತು.

"ನೀವು ಊಟ ಮಾಡಿ, ಮುರುಗೇಂದ್ರಪ್ಪ, ನನಗೆ ಕಥೆ ಕೇಳಿ ಹೊಟ್ಟೆ ತುಂಬಿದೆ. ನಿಮಗೆ ತುಂಬಾ ಶ್ರಮ ಕೊಟ್ಟೆ."

"ಶ್ರಮ ಎಲ್ಲೀದು ? ಆ ಕಾಲದ ವಿಚಾರವೇ ಈಗಿನೋರಿಗೆ ಬೇಕಿಲ್ಲವಲ್ಲಾ ಎಂಬ ಕೊರಗಿನ ಶ್ರಮ, ಇವತ್ತು ಎಷ್ಟೋ ಕಡಿಮೆಯಾಯಿತು. ಕೇಳೋರಿಗೆ ಎರಡು ಕಿವಿ ಆದರೆ ಹೇಳೋರಿಗೆ ನಾಲ್ಕು ನಾಲಿಗೆ ಆಗುತ್ತೆ."

"ಇಂಥ ಕಥೆಯಾದರೆ, ಕೇಳುವವರ ಕಿವಿಯೂ ಎಂಟಾಗುತ್ತದೆ. ನೀವು ಊಟ ಮುಗಿಸಿ, ಹೇಗೂ ಆಗುವ ಹೊತ್ತಾಯಿತು. ಆದಷ್ಟು ಕೇಳಿಕೊಂಡೇ ಹೋಗುತ್ತೇನೆ."

"ಬರೀ ಹೊಟ್ಟೇಲಿ ಕೇಳೋದು ಬೇಡ. ನೀವೂ ಹೋಗಿ ಊಟ ಮುಗಿಸಿ ಬನ್ನಿ."

"ಆಯಿತು. ವೆಂಕಟಸುಬ್ಬಯ್ಯನೋರ ವಿಚಾರ ತಿಳಿದೋರು, ಬೇರೆ ಯಾರೂ ಇಲ್ಲವೆ ಈ ಊರಲ್ಲಿ, ಮುರುಗೇಂದ್ರಪ್ಪ ?"

"ಇದ್ದಾರೆ, ನೀವೇ ಜ್ಞಾಪಿಸಿದ್ದು ಒಳ್ಳೆಯದಾಯಿತು. ಯಾರ ಕಥೆಯೋ ಅದನ್ನು ಅವರೇ ಹೇಳಿದರೆ ಚೆನ್ನು. ಗೋಪಾಲಾಚಾರ್‍ರು.... ಚನ್ನಕೇಶವಯ್ಯನವರ



ಛತ್ರದಲ್ಲಿ, ವೇದಪಾಠಶಾಲೆ ಇಟ್ಟುಕೊಂಡಿದಾರಲ್ಲಾ – ಅವರು."

"ಹೂ. ಚೆನ್ನಾಗಿ ಗೊತ್ತಿದೆ. ಅವರು ನಮ್ಮನ್ನು ಮರೆತರೂ, ಅವರ ಕೈಲಿ ಕಿವಿ ಹಿಂಡಿಸಿಕೊಂಡದ್ದು ಮರೆಯಲಿಕ್ಕೆ ನನಗೆ ಸಾಧ್ಯವೇ ಇಲ್ಲ !"

"ಅದವರ ಮನೆತನಕ್ಕೇ ಬಂದದ್ದು." – ಮುರುಗೇಂದ್ರಪ್ಪ ನಕ್ಕು ಹೇಳಿದರು – "ಅವರ ಹಿರಿಯರು ತಲೆತಲಾಂತರದಿಂದ ಇದೇ ವೃತ್ತಿಯಲ್ಲೇ ಇದ್ದರು."

"ಯಾವ ವೃತ್ತಿ.... ಕಿವಿ ಹಿಂಡುವುದೇ !"

"ಛೆ! ಅದಲ್ಲ. ಪಾಠಶಾಲೆಯ ವಿಚಾರ ಹೇಳಿದೆ. ಅವರ ಮನೆತನ ಐಯ್ಯನೋರ ಮನೆತನ. ಈಗಲೂ ಆ ಭೂಮಿ ಮಾತ್ರಾ ಅವರಿಗಿದೆ. ಅವರ ಮುತ್ತಜ್ಜನೋ, ಮುತ್ತಜ್ಜನ ಅಜ್ಜನೋ, ವೆಂಕಟಸುಬ್ಬಯ್ಯನೋರ ಕಿವಿ ಹಿಂಡಿದ್ದರಂತೆ."

"ಗೋಪಾಲಾಚಾರ್‍ರಿಗೆ ಅದು ನೆನಪುಳಿದಿದೆಯೇ ?"

"ಅದೆಲ್ಲಿ ಮರೆಯುತ್ತೆ , 'ಕೋಗಿಲೆ ಹಾಡು ಕೇಳ್ತೀಯಾ ?' ಅಂದರೇನು ಆಚಾರ್‍ರೆ, ಅಂತ ಕೇಳಿ – ಹೇಳ್ತಾರೆ."

ಓ ಆ ಮಾತನ್ನು, ಮೈಮರವಿಗೆ ಶಿಷ್ಯರಿಗೆ ಶಿಕ್ಷೆಕೊಡುವಾಗ ಆಚಾರ್ಯರು ಹೇಳುತ್ತಿದ್ದುದು, ಅವರ ವೇದಪಾಠಶಾಲೆಗೆ, ಅಮರಕೋಶ ಕಲಿಯಲು ಒಂದೆರಡು ತಿಂಗಳು ಮಣ್ಣುಹಾಕಿದ್ದ ನನಗೂ ನೆನಪಿಗೆ ಬಂತು ಆಗ ಹಾಗೇಕೆ ಹೇಳುತ್ತಾರೆಂದು ತಿಳಿದುಕೊಳ್ಳಬೇಕೆನ್ನುವ ಕುತೂಹಲವಿರಲಿಲ್ಲ; ಈಗ ತಿಳಿದುಕೊಳ್ಳಬೇಕೆನಿಸಿತು.

"ಹಾಗಂದರೇನು ಮುರುಗೇಂದ್ರಪ್ಪ ?"

"ಈ ಕಥೆ ಅವರೇ ಹೇಳಲಿ. ತುಂಬಾ ಸ್ವಾರಸ್ಯವಾಗಿದೆ. ಸಂಜೆಗೆ ಹೇಗೂ ಅವರ ಶಾಲೆ ಇರುತ್ತಲ್ಲ. ಹೋಗಿ ವಿಚಾರಿಸಿ. ಈಗ ಹೇಗೂ ಹೊತ್ತಾಯಿತು. ಊಟಕ್ಕೆ ಹೋಗಿ."

"ಹಾಗೇ ಮಾಡುತ್ತೇನೆ. ಮತ್ತೆ ಬರುತ್ತೇನೆ, ಮುರುಗೇಂದ್ರಪ್ಪ" – ಎಂದು ಹೇಳಿ, ನಾನು ಹೊರಡಲು ಎದ್ದೆ.

"ಒಂದು ಗಳಿಗೆ ತಡೀರಿ" ಎಂದು ಮುರುಗೇಂದ್ರಪ್ಪ ಎದ್ದು ಹೋಗಿ ರುದ್ರಮುನಿ ತಂದಿದ್ದ ಊಟದ ಪಾತ್ರೆಯಲ್ಲಿದ್ದ ಮಜ್ಜಿಗೆಯಲ್ಲಿ, ಒಂದು ಬಟ್ಟಲು ಮಜ್ಜಿಗೆ ತಂದುಕೊಟ್ಟು – "ಬರೀ ಹೊಟ್ಟೇಲಿ ಬೆಟ್ಟ ಇಳಿದರೆ, ತುಂಬಾ ದಣುವಾಗುತ್ತೆ, ಕುಡಿದು ಹೋಗಿ" ಎಂದರು.

ಮಜ್ಜಿಗೆ ಕುಡಿದು, ನಮಸ್ಕಾರ ಹೇಳಿ, ಬೆಟ್ಟದ ಕಲ್ಲಿಗೆ ಕೀಲಿಸಿದ ಕಾಲನ್ನು ಬಲವಾಗಿ ಕಿತ್ತು ಎತ್ತಿಡುತ್ತಾ, ಮನೆಯ ಕಡೆ ನಡೆದೆ. ಬೆಟ್ಟಕ್ಕೆ ಬೆಟ್ಟವೇ ನನ್ನೊಡನೆ

ಬರುತ್ತಿದ್ದಂತಿತ್ತು. ಎಲ್ಲಿ ಕಾಲಿಡುವಾಗಲೂ, 'ಏನೋ, ಎಂಥ ನೆಲವೋ, ಎಲ್ಲಿ ಕಾಲಿಟ್ಟರೆ ಏನು ಅಪಚಾರವೋ' ಎಂದು ಮನಸ್ಸು ಬೆದರುತ್ತಿತ್ತು. ಕಣ್ಣಿಗೆ ಯಾವುದೂ ಸ್ಪಷ್ಟವಾಗಿ ಕಾಣಿಸದು. ಹೆಬ್ಬಾಗಿಲುಗಳು, ಹುಲಿಮುಖಗಳು, ಒಣಹುಲ್ಲು ಬೆಳೆದು ವಿಕಾರವಾದ ಕೋಟೆಯ ಗೋಡೆಗಳು – ಎಲ್ಲವೂ ಕನಸಿನಲ್ಲೆಂಬಂತೆ ಹಿಂದೆ ಸರಿದವು, ಹೇಗೋ ಬಂದು ಮನೆ ಸೇರಿದೆ.

ಯಾರಾದರೂ ಆಪ್ತರು ಬರುವರೆಂದು ಹೋದ ದಿನ, ಬೇಕೆಂದೇ ತಡ ಮಾಡಿ ಬರುವ ರೈಲಿನಂತೆ, ಎಷ್ಟು ಹೊತ್ತಿಗೆ ಆಗುವುದೋ ಎಂದು ಆತುರ ಆತುರದಿಂದ ಕಾದ ಸಂಜೆಯೂ, ವಿರಾಮವಾಗಿ ನಡೆದು ಬರುವಂತಿತ್ತು. ಆ ದಿನ ಗಡಿಯಾರವನ್ನು ನೋಡಿ ಬೇಸತ್ತು, ಕಡೆಗೊಮ್ಮೆ ಅದು ಆಚಾರ್ಯರ ವೇದಪಾಠಶಾಲೆ ಆರಂಭವಾಗುವ ಹೊತ್ತನ್ನು ಸೂಚಿಸಿದ ಕೂಡಲೇ, ಚನ್ನಕೇಶವಯ್ಯನವರ ಛತ್ರದ ಕಡೆ ಹೊರಟೆ.

ಛತ್ರವನ್ನು ತಲುಪಿದಾಗ ಆಚಾರ್ಯರಿನ್ನೂ ಬಂದಿರಲಿಲ್ಲ. ನನ್ನ ಹಾಗೇ ಅವರ ಶಿಷ್ಯರು ಒಂದಿಬ್ಬರು ಬಂದು, ಶಾಲೆಯ ಜಾಗವನ್ನು ಗುಡಿಸಿ, ಆಚಾರ್ಯರು ಕುಳಿತುಕೊಳ್ಳುವ ಚಾಪೆ ಹಾಸಿ, ಅವರು ಬರುವುದನ್ನೇ ಕಾಯುತ್ತಿದ್ದರು. ಸ್ವಲ್ಪಹೊತ್ತು ಕಾದಮೇಲೆ ಆಚಾರ್ಯರೂ ಬಂದರು.

ನಾನು ಅವರ ಶಾಲೆಯನ್ನು ಬಿಟ್ಟು ಹತ್ತು ಹನ್ನೆರಡು ವರ್ಷವಾಗಿದ್ದರೂ ಆಚಾರ್ಯರು ಹೆಚ್ಚು ಬದಲಾಯಿಸಿರಲಿಲ್ಲ. ಅದೇ ಜೋಳದ ಕಡ್ಡಿಯಂಥ ಬಡಕಲು ಮೈ. ಬಲವಾಗಿ, ಅಷ್ಟು ದೂರಕ್ಕೆ ಕಾಣುವಂತೆ ನಾಮ ಧರಿಸಿದ ಒಣಗಿದ ಮುಖ, ನಾಲ್ಕು ಬೆಳ್ಳಿ ಕೂದಲು ಮಾತ್ರವೇ ಉಳಿದ ಬಟ್ಟ ತಲೆ, ಬಿಸಿನೀರಿನಲ್ಲಿ ತೊಯ್ದು ಕಾವಿಯ ಬಣ್ಣಕ್ಕೆ ತಿರುಗುತ್ತಿದ್ದ ಮೇಲು ಕೋಟೆ ಪಂಚೆ. ಅದೇ ಅಂಚು ಸವೆದು, ಚುಂಗುಚುಂಗಾದ ಕೆಂಪು ಕಾಲು. ಅವರ ವಯಸ್ಸಿನೊಂದಿಗೆ, ಅವಕ್ಕೂ ಅಷ್ಟು ವಯಸ್ಸಾಗಿದೆ. ಅಂದಿಗೂ ಇಂದಿಗೂ ಅಷ್ಟೇ ವ್ಯತ್ಯಾಸ. ತಟಕ್ಕನೆ ಅವರಿಗೆ ನನ್ನ ಗುರುತು ಹತ್ತಲಿಲ್ಲ. ಯಾರೋ ಶಿಷ್ಯರೇ ಇರಬೇಕೆಂದುಕೊಂಡು, "ಅಯ್ಯಾ ಗಾರ್ದಭ, ರಾಜ ಗಾರ್ದಭ! ಕೈಬೀಸಿಕೊಂಡು ಕುತ್ಕೊಳ್ಳೋ ಬದಲು ಕಂಠಪಾಠ ಮಾಡ್ತಾ ಕೂತಿದ್ರೆ, ನಿನ್ನ ನಾಲಿಗೇಲಿ ಹುಳಾಸುರೀತಿತ್ತೆ, ಶೋಂಭೇರಿ ಮುಂಡೇದೆ!" ಎಂದು ಮಾಮೂಲಿನ ನಾಂದಿ ಹಾಡಿದರು. ಅವರ ಮಾತು ಕೇಳಿ ನನಗೆ ನಗು ಬಂತು. ಹತ್ತಿರ ಅವರ ಕಣ್ಣಿಗೆ, ನನ್ನ ಮುಖ ಸರಿಯಾಗಿ ಕಾಣುವಷ್ಟು ಹತ್ತಿರ ಹೋಗಿ – "ಆರೋಗ್ಯವೇ, ಆಚಾರ್ರೇ ?" ಎಂದೆ.



ನನ್ನ ಗುರುತರಿತು, ಅವರಿಗೆ ಕೊಂಚ ಮುಖ ಮುರಿದಂತಾಯಿತು, ಹಾಗೇ ಸುಳ್ಳುನಗೆಯಲ್ಲಿ ಅದನ್ನು ಅಡಗಿಸಿಕೊಳ್ಳುತ್ತಾ –

"ಓ! ನೀನೋ, ನಾನು ಯಾರೋ ವೇದ ಕಲಿಯಲು ಬಂದ ಶಿಷ್ಯ ಕೋಣ ಅಂತ ಇದ್ದೆ. ಏನಪ್ಪ ಇಷ್ಟು ದೂರ ? ಇಂಗ್ಲೀಷ್ ಕಲಿತಮೇಲೆ ಹಳೇ ಮೇಷ್ಟರನ್ನು ಮರೆತುಬಿಟ್ಟೆಯೇನೋ ಅಂತಿದ್ದೆ. ಅಂತೂ ನೆನಪಿದೆಯಲ್ಲ, ಸಂತೋಷ" ಎಂದರು.

"ನಿಮ್ಮನ್ನು ಮರೆಯುವುದುಂಟೇ, ಆಚಾರ್ರೇ ?"

"ಮರಿದೆ, ನಮ್ಮನ್ನು ಕಟ್ಟಿಕೊಂಡು ಬಡುಕೋಬೇಕು ? ಯಾವ ಭಾಗ್ಯಕ್ಕೇಂತ ನೆನಪಿಟ್ಟುಕೋಬೇಕು? ಈ ಶಾಲೆ, ಈ ಪಾಠ, ಈ ಮೇಷ್ಟರು ಎಲ್ಲಾ – ಈಗಿನ ಜನಕ್ಕೆ ಕಾಲಕಸ. ಇಂಗ್ಲೀಷ್ ಕಲಿತರೆ ಊಟಕ್ಕುಂಟು, ಉಪಚಾರಕ್ಕುಂಟು; ಅಮರಕೋಶ ಯಾಕೆ ಬೇಕು, ಉರಲು ಹಾಕಿಕೊಳ್ಳೋಕೆ! ಏನೋ, ಮನೆತನಕ್ಕೆ ಬಂದದ್ದು ಅಂತ, ನಾನು ಉಸಿರಿರೋ ಅಷ್ಟು ದಿನ ಹುಯ್ಕೋತೀನಿ."

"ಉಂಟೇ ಆಚಾರ್ರೇ, ನೀವು ಕಲಿಸೋದು ಅಮರ ಅಲ್ಲ, ಅಮರ ವಿದ್ಯೆ!"

"ಮುಖಸ್ತುತಿ ಮಾತೆಲ್ಲಾ ಬೇಡ. ನಾನೇ ಇದು ಬದುಕಲ್ಲಾಂತ ಇದ್ದೊಬ್ಬ ಮಗನಿಗೆ ಅಷ್ಟು ಇಂಗ್ಲೀಷ್ ಓದಿಸಿ, ತಾಲ್ಲೂಕು ಕಛೇರಿ ಗುಮಾಸ್ತೆ ಕೆಲಸ ಮಾಡಿಸಿಕೊಟ್ಟೆ ."

"ಹಾಗಾದರೆ ಈ ಶಾಲೆ......"

"ನಾನು ಸತ್ತಮೇಲೆ ಇದರ ಬಾಗಿಲಿಗೂ ಮುಳ್ಳು ಬಡಿದುಬಿಡೋದು. ಇದು ಇದೆ ಅಂತ ನೋಡೋರೂ ಇಲ್ಲ, ಸತ್ತಿತು ಅಂತ ಅಳೋರೂ ಇಲ್ಲ." ಪ್ರಬಲವಾದ ವ್ಯಥೆ, ಅವರ ಮಾತುಗಳಲ್ಲಿ ತಾನೇತಾನಾಗಿತ್ತು.

"ನಿಮ್ಮ ಮಾತು ಕೇಳಿದರೆ ತುಂಬಾ ಬೇಜಾರಾದ ಹಾಗೆ ಇದೆ, ಆಚಾರ್ರೆ......"

"ಬೇಜಾರಲ್ಲದೆ ಏನು, ಹೇಳು. ದೊಡ್ಡದಾಗಿ ಈ ಶಾಲೆಗೆ ತಿಂಗಳಿಗೆ ಮೂರು ರೂಪಾಯಿ ಗ್ರಾಂಟು ಕೊಡ್ತಾರೆ, ಮುನ್ಸಿಪಾಟಿಯೋರು. ಯಾರ ಪಿಂಡ ಇಡಲಿಕ್ಕೆ ಸಾಕು? ಐದು ರೂಪಾಯಿ ಮಾಡ್ರಪ್ಪಾ ಅಂತ ಅಂಗಲಾಚಿ ಇವರ ಮನೆ ಬಾಗಿಲಿಗೆ ಅಂಡಲೆದು, ಸಾಕಾಗಿಹೋಯಿತು. ಇವತ್ತೇನೋ ಮೀಟಿಂಗ್ ಇತ್ತಂತೆ. ಹನ್ನೆರಡು ಗಂಟೆಗೆ ಹೋದ ಬ್ರಾಹ್ಮಣನನ್ನ, ಇಷ್ಟು ಕಾಯಿಸಿ, ಇನ್ನೂ ಏನೂ ತೀರ್ಮಾನ ಆಗಲಿಲ್ಲಾಂತ ಮುಖಕ್ಕೆ ಮಂಗಳಾರತಿ ಎತ್ತಿ ಕಳಿಸಿದರು. ಇನ್ನೇನಿದೆ ಅಂತ ಈ ಶಾಲೆ ಕಟ್ಟಿಕೊಂಡು ಮುಂಡಮೋಚಿಕೊಳ್ಳಲಿ. ದೇವವಿದ್ಯೆ, ಇದನ್ನ ಕಲಿಸಿದರೆ ಇಹಕ್ಕೂ ಪರಕ್ಕೂ ಸಾಧನ ಅಂತ ಕಟ್ಟಿಕೊಂಡಿದ್ದು, ಸುಣ್ಣ

ಕಟ್ಟಿಕೊಂಡು ಮಡುವಿಗೆ ಹಾರಿದ ಹಾಗಾಯಿತು. ಊರಿನೋರಿಗೆ ಇದು ಬೇಡ– ಕಲಿಯೋರಿಗೂ ಬೇಕಿಲ್ಲ. ಎಲ್ಲೂ ಕಾಟಾಚಾರ. ಅಮರ ಕಲಿಸೋರಿಗೆ, ಅರಮನೇಲಿ ಮರ್ಯಾದೆ ಇದ್ದ ಕಾಲ ಇತ್ತು. ಈಗ – ನೀನು ಯಾವ ಊರು ಗೌಡ ಅಂತ ಕೇಳೋರು ದಿಕ್ಕಿಲ್ಲ. ಆ ಕಾಲ ಹೋದಾಗಲೇ, ಈ ಕಸಬಿಗೂ ಎಳ್ಳುನೀರು ಬಿಟ್ಟಿದ್ದರೆ ಮರ್ಯಾದೆಯಾಗಿತ್ತು. ಬಿಡಲಿಲ್ಲ; ಈಗ ಬಡುಕೋಬೇಕು."

"ಕಾಲ ಹೀಗೆಯೇ ಇರುತ್ಯೇ, ಆಚಾರ್ರೇ! ಹಾಗಿತ್ತು, ಹೀಗಿದೆ. ಮುಂದೆ ಹೀಗಿರೊಲ್ಲಾ."

"ಹೀಗಿರೋಲ್ಲ, ಇನ್ನೂ ಹೊಲಸು! ಕಂಡ ಹಾಗೇ ಇದೆ. ಹಾಲು ಕುಡಿದ ಮಗು ಬದುಕದೆ ಹೋದಮೇಲೆ, ವಿಷ ಕುಡಿದ ಮಗು ಬದುಕುತ್ಯೇ ? ತಾಯಿಹಾಲು ಬೇಡ, ಶೀಷೆ ಹಾಲು ಬೇಕು ಅಂತ ಕೇಳೋ ಕಾಲ ಬಂದ ಮೇಲೆ ಏನೂ ಉಳಿಯೋಲ್ಲ. ದೇಶ ಕಂಡೋರು ಕಿತ್ತುಕೊಂಡರು; ನಮ್ಮ ಬುದ್ಧಿ, ವಿದ್ಯೆ ನಾವೇ ಕಳಕೊಂಡಿದೀವಿ. ಕಳೀತಲ್ಲಾ ಅನ್ನೋಪ್ರಜ್ಞೇನೂ ಇಲ್ಲ. ನಮ್ಮ ಸಮಾನ ಇಲ್ಲಾ ಅಂತ ಕೋಡು ತುರಿಸಿಕೊಂಡು ತಿರುಗಾಡ್ತವೆ. ಥೂ! ಎಲ್ಲೀ ಮಾತು ಬಿಡು. ಏನೋ ಅಪರೂಪಕ್ಕೆ ಬಂದರೆ, ನನ್ನ ರಾಯಾಯಣವೇ ಆಗಿಹೋಯಿತು. ಏನು ಸಮಾಚಾರ ?"

"ನಾನೀಗ ನನ್ನ ಮಾತೆತ್ತಿದರೆ, ಹುಡುಗರ ಪಾಠ ಕೆಡುತ್ತೇನೋ?"

"ಕೆಟ್ಟರೆ ಆಳೋರು ಯಾರು ? ನಿನ್ನ ಕೆಲಸ ಏನು ಹೇಳು ? ಈ ದ್ರಾವಿಡ ಪ್ರಾಣಾಯಾಮವೆಲ್ಲಾ ಬೇಡ."

"ನಿಮ್ಮ ಹತ್ತಿರ ಒಂದು ವಿಚಾರ ಕೇಳೋದಿತ್ತು. ನಾನು ನಿಮ್ಮ ಹತ್ತಿರ ಕಲೀತಾ ಇರಬೇಕಾದರೆ, ಒಂದು ಮಾತು ಹೇಳ್ತಾ ಇದ್ದಿರಿ..."

"ಒಂದೇನು, ಸಾವಿರ ಹೇಳಿದೆ. ಅದರಲ್ಲಿ ಏನಾದರೂ ಅಲ್ಪಸ್ವಲ್ಪ ಬುರುಡೇಲಿ ಉಳಿದಿದೆಯೇನು?"

"ಅಷ್ಟೋ ಇಷ್ಟೋ ಅಂಟಿಕೊಂಡಿದೆ."

"ಈಗ ಯಾವ ಮಾತಿನ ವಿಚಾರ? ಅಂಟಿಕೊಂಡಿರೋದೋ, ಬಿಟ್ಟು ಹೋಗಿರೋದೋ?"

"ಅಂಟಿಕೊಂಡಿರೋದೇ. ಒಂದು ದಿನ, ನೀವು ಅಮರ ಹೇಳಿಕೊಡ್ತಾ ಇರೋವಾಗ, ನಾನು ಎಲ್ಲೋ ನೋಡ್ತಾ ಇದ್ದಾಗ, 'ಏನು ಕೋಗಿಲೆ ಹಾಡು ಕೇಳ್ತೀಯಾ?'ಅಂತ ಕಿವಿ ಹಿಂಡಿದ್ರಿ. ಹಾಗೇಕೆ ಹೇಳಿದಿರಿ ಅಂತ ಕೇಳೋಣ ಅನ್ನಿಸಿತ್ತು. ಅದಕ್ಕೇ ಬಂದೆ."



"ಅವತ್ತು ಕಿವಿ ಹಿಂಡಿದ್ದರ ಬಿಸಿ, ಇವತ್ತು ತಟ್ಟಿತೇ ?"–ಎಂದು ಗಟ್ಟಿಯಾಗಿ ನಗುತ್ತಾ ಕೇಳಿದರು ಆಚಾರ್ಯರು.

"ಆಗೋ ನೋಡು, ಆ ವೆಂಕಟಾದ್ರಿನೂ ಕೋಗಿಲೆ ಹಾಡು ಕೇಳ್ತಾ ಇದ್ದಾನೆ. ಏನೋ, ವೆಂಕಟಾದ್ರಿ. ಕಿವಿ ಏನನ್ನುತ್ತೆ ?" – ಎಂದು ಎಲ್ಲೋ ನೋಡುತ್ತಿದ್ದ ಶಿಷ್ಯನನ್ನು ಗದರಿದರು, ಆಚಾರ್ಯರು. ಆ ಹುಡುಗ ತಟಕ್ಕನೆ ಚುರುಕಾಗಿ, ಕಿವಿ ಸವರಿಕೊಂಡು, ಅಮರಕೋಶ ಹೇಳಲಾರಂಭಿಸಿದ.

"ಆ ಮಾತಿನ ಅರ್ಥ ಏನು, ಆಚಾರ್ರೇ ?"

"ಎಲ್ಲೋ ಓಬೀರಾಯನ ಕಾಲದ ಮಾತು. ಇವತ್ತು ಅದೇಕೆ ನಿನಗೆ ಜ್ಞಾಪಕ ಬಂತು ?"

"ಆ ಮಾತು ನನ್ನ ನೆನಪಿಗೆ ಬರಲು ಕಾರಣವಾದ ಸಂದರ್ಭವನ್ನೂ, ಮುರುಗೇಂದ್ರಪ್ಪನವರು ಹೇಳಿದುದನ್ನೂ ವಿವರಿಸಿದೆ."

ಯಾವುದೋ ಹಳೆಯ ನೆನಪು, ಕಟ್ಟು ಸಡಲಿದ ನೀರು ನುಗ್ಗಿ ಬರುವಂತೆ ಸರಿದು ಬಂದು, ಅವರ ಒಣಕಲು ಮುಖದಲ್ಲೂ, ಏನೋ ಒಂದು ಮೃದುತ್ವ ಮೂಡಿತು. ಹಾಡು ಹೇಳಲು ಸಿದ್ಧರಾಗುವವರಂತೆ, ಒಂದೆರಡು ಬಾರಿ ಗಂಟಲು ಖೇಕರಿಸಿ, ಕಣ್ಣಿಗೆ ಕಾಣದಂತೆ ಎಲ್ಲೋ ದೂರ ನಿಂತವರಿಂದ ಕಥೆ ಕೇಳಲು ಅಪ್ಪಣೆ ಬೇಡುವಂತೆ ದಿಟ್ಟಿಸುತ್ತಿದ್ದು, ಭಾವಭಾರದಿಂದ ತೂಗುವ ಧ್ವನಿಯಲ್ಲಿ ಹೇಳಲಾರಂಭಿಸಿದರು:

"ನಾವು ಈ ಊರಿನವರಲ್ಲ, ನಮ್ಮ ಹಿಂದಿನವರು ಮೈಸೂರು ಕಡೆಯವರು. ಈ ಊರಿಗೆ ನಾವು ಬಂದು ನೆಲೆಸಿದ್ದು, ಬಿಚ್ಚುಗತ್ತಿ ಭರಮಣ್ಣ ನಾಯಕರ ಕಾಲದಲ್ಲಿ. ಒಳ್ಳೆ ನಡುವಯಸ್ಸಿನಲ್ಲಿ, ಸಂಸಾರದಲ್ಲಿ ಬೇಸರವಾಗಿ, ನಮ್ಮ ಹಿರಿಯರು ಕಸ್ತೂರಿ ರಂಗಾಚಾರ್ರು, ಮೈಸೂರು ಬಿಟ್ಟು, ಅಲ್ಲಲ್ಲಿ ಅಡ್ಡಾಡಿಕೊಂಡು, ಚಿತ್ರದುರ್ಗಕ್ಕೆ ಬಂದರು. ಯಾವುದಾದರೂ ಊರಿಗೆ ಹೋದರೆ, ತಮ್ಮ ಹಸಿಬೆಯನ್ನು, ಊರ ಮುಂದಲ ಗುಡಿಯಲ್ಲಿಟ್ಟು ನಾಲ್ಕು ಜನ ಬ್ರಾಹ್ಮಣರ ಪರಿಚಯ ಮಾಡಿಕೊಂಡು, ಪುರಾಣವೋ ಪುಣ್ಯ ಕಥೆಯೋ ಹೇಳುತ್ತಾ, ತಾವಾಗಿ ಕರೆದ ಬ್ರಾಹ್ಮಣರ ಮನೆಯಲ್ಲಿ ಊಟ ಮಾಡಿಕೊಂಡು, ಆ ಊರು ಬೇಸರವಾಗುವವರೆಗೂ, ಅಲ್ಲಿರುವರು. ಅದು ಬೇಸರವಾಯಿತೆಂದರೆ ಮುಂದಿನ ಊರು. ಒಂಟಿಜೀವನಕ್ಕೇನಾಗಬೇಕು – ಬಿಟ್ಟಲ್ಲಿ ಬಿಡಾರ. ಹೀಗೇ ಸುತ್ತಿಕೊಂಡು ಚಿತ್ರದುರ್ಗಕ್ಕೆ ಬಂದರು."

"ಚಿತ್ರದುರ್ಗ ಏನು ಈಗಿನ ಹಾಗೆ ಹಾಳು ಊರಾಗಿತ್ತೆ ? ಹೇಳಿಕೇಳಿ ರಾಜಧಾನಿ. ಊರ ತುಂಬ ದೇವಾಲಯ; ಬ್ರಾಹ್ಮಣರು. ಎತ್ತಕಡೆ ತಿರುಗಿದರೂ

ಸ್ನಾನಸಂಧ್ಯಾವಂದನೆಗೆ ಅನುಕೂಲವಾದ ತೋಪುಗಳು, ಮೆಟ್ಟಲು ಬಾವಿಗಳು. ಊರೂರು ಸುತ್ತಿಬಂದ ಕಸ್ತೂರಿ ರಂಗಾಚಾರ್ಯರಿಗೆ, ಈ ಊರು ಪ್ರಶಸ್ತವಾಗಿ ಕಂಡಿತು, ಇಲ್ಲಿ ತಳ ಊರಿದರು."

"ಊರಿನ ನಾಲ್ಕು ಜನ ಬ್ರಾಹ್ಮಣಮುಖ್ಯಸ್ಥರನ್ನು ಕಂಡು ತಮ್ಮ ಸ್ಥಿತಿಗತಿ ವಿವರಿಸಿ, ನಾಲ್ಕು ದಿನ ಅಲ್ಲಿರಲು ಅನುಕೂಲ ಮಾಡಿಕೊಡಬೇಕೆಂದು ಕೇಳಿದರು. ಯಾರೂ ಬೇಡವೆನ್ನಲಿಲ್ಲ. ಎರಡು ದಿನ ಯಾರ ಮನೆಯಲ್ಲಾದರೂ ಊಟ, ಇನ್ನೆರಡು ದಿನ ಸ್ವಪಾಕ – ಹೀಗೇ ಹತ್ತು ಹದಿನೈದು ದಿನ ಕಳೆದ ಮೇಲೆ ನಮ್ಮ ಹಿರಿಯರಿಗೂ, ಅರಮನೆಯ ಜೋಯಿಸರು ನರಸಿಂಹಜೋಯಿಸರಿಗೂ ಪರಿಚಯವಾಯಿತು."

"ನರಸಿಂಹಜೋಯಿಸರು, ವೆಂಕಟಸುಬ್ಬಯ್ಯನವರ ತಂದೆ, ಜೋಯಿಸರು ಅಂದರೆ, ಈಗಿನ ಹಾಗೆ ನಕ್ಷತ್ರ ಮರೆತು, ಪಂಚಾಂಗ ನೋಡೋ ಅಂಥ ಜೋಯಿಸರಲ್ಲ, ಒಳ್ಳೇ ಪಂಡಿತರು. ಭೂತ, ವರ್ತಮಾನ, ಭವಿಷ್ಯತ್ತುಗಳನ್ನು ಕೈಬೆರಳ ತುದಿಯ ಮೇಲೆಯೇ ಕಾಣಬಲ್ಲ ಮೇಧಾವಿಗಳು, ಶ್ರೀರಾಜರಾಜೇಶ್ವರಿಯ ಉಪಾಸಕರು. ಎಷ್ಟು ಪಾಂಡಿತ್ಯವೋ, ಅಷ್ಟೇ ಒಳ್ಳೆತನ. ಅವರ ಕುಟುಂಬ ಜಾನಕಮ್ಮನವರೂ ಅಷ್ಟೇ; ಜೋಯಿಸರ ಪೂಜೆಗೆ ಮೆಚ್ಚಿ ರಾಜರಾಜೇಶ್ವರಿಯ ಅಂಶವೇ, ಪತ್ನೀರೂಪವಾಗಿ ಬಂದು, ಕೈಹಿಡಿದಿತ್ತೇನೊ ಅನ್ನುವಷ್ಟು ಒಳ್ಳೇ ಜೀವ. ದೈವಭಕ್ತಿ, ಬ್ರಾಹ್ಮಣಭಕ್ತಿ, ಪತಿಸೇವೆ, ಅತಿಥಿಸೇವೆ – ಎಲ್ಲದರಲ್ಲೂ ಇದ್ದರೆ ಹೀಗಿರಬೇಕು ಎನ್ನುವಂಥ ತಾಯಿ. ಆ ಗಂಡ ಹೆಂಡಿರ ಸಂಸಾರ, ಹತ್ತು ಜನಕ್ಕೆ ಆಶ್ರಯಕೊಡುವ ವಟವೃಕ್ಷ; ತಾನುಂಟು, ತನ್ನ ಕಾಯಿ ಉಂಟು ಅಂತ ಎಲ್ಲೋ ಆಕಾಶದಲ್ಲಿ ತಲೆ ತಿರುಗಿಸುವ ತೆಂಗಿನ ಮರವಲ್ಲ!"

"ಜೋಯಿಸರಿಗೆ ಭಗವಂತ ಯಾವುದಕ್ಕೂ ಕಡಿಮೆ ಮಾಡಿರಲಿಲ್ಲ. ಸರ್ವಜ್ಞ ಹೇಳಿದ ಹಾಗೆ 'ಸ್ವರ್ಗಕ್ಕೆ ಕಿಚ್ಚು ಹಚ್ಚು' ಅಂತ ಹೇಳಬಹುದಾದಂಥ ಸಂಸಾರ. ನೂರು ಜನ ಕೂತು ತಿಂದರೂ ಸವೆಯದ ಆಸ್ತಿ, ರಾಜಾನುಗ್ರಹ, ದೈವಪ್ರೀತಿ ಎಲ್ಲವೂ ಇತ್ತು. ಆದರೆ ಅವರ ಮನೆತನ ಸಂತಾನ ಸೌಖ್ಯ ಕೇಳಿಬಂದಿರಲಿಲ್ಲ."

"ಹಾಗಾದರೆ ವೆಂಕಟಸುಬ್ಬಯ್ಯ ಅವರ ಸ್ವಂತ ಮಗನಲ್ಲವೇ ?"– ನಡುವೆಯೇ ಬಾಯಿಹಾಕಿ ಕೇಳಿದೆ ನಾನು.

"ಅಲ್ಲದೆ.......? ಖಾಸಾ ಮಗ, ಒಬ್ಬನೇ ಮಗ. ಆದರೆ ಆ ಮಗ ಸುಲಭವಾಗಿ ಹುಟ್ಟಲಿಲ್ಲ."

"ಏಕೆ ?"



"ನಾನಾಗಲೇ ಹೇಳಲಿಲ್ಲವೇ – ಜೋಯಿಸರ ವಂಶಕ್ಕೆ ಸಂತಾನಸೌಖ್ಯ ಕಡಿಮೆ ಎಂತ. ನರಸಿಂಹ ಜೋಯಿಸರಿಗೆ, ಹೆಂಡತಿ ಮನೆಗೆ ಬಂದು ಹತ್ತು ಹದಿನೈದು ವರ್ಷಗಳಾದರೂ ಮಕ್ಕಳಾಗಲಿಲ್ಲ. ಪ್ರಪಂಚದಲ್ಲಿ ಪತ್ನಿ ಬೇಡ, ಸಂಸಾರ ಬೇಡ ಎನ್ನುವವರೂ ಇರಬಹುದು; ಆದರೆ ಮಕ್ಕಳನ್ನು ಬಯಸದವರು ಅಪರೂಪ. ಎಷ್ಟು ವರ್ಷವಾದರೂ ಮಕ್ಕಳಾಗಲಿಲ್ಲವಲ್ಲಾ ಎಂಬ ಚಿಂತೆ ಆ ದಂಪತಿಗಳಿಗೂ ತಪ್ಪಿರಲಿಲ್ಲ. ಇಂಥ ಚಿಂತೆ, ಗಂಡಸಿಗಿಂತ ಹೆಂಗಸಿಗೆ ಹೆಚ್ಚು; ಅದರಲ್ಲೂ, ಬಂದ ಮನೆಗೆ ಮೇಲಾಗಬೇಕು ಎಂದು ಬಯಸುವ ಗೃಹಿಣಿಗೆ ಈ ಕೊರಗು ಕೂರಲಗು."

"ಜಾನಕಮ್ಮನವರು ಈ ಕೊರಗು ಹಚ್ಚಿಕೊಂಡು ತುಂಬಾ ಬಳಲಿದರು. ನನ್ನ ದೋಷವೋ ಏನೋ ಈ ಮನೆ ಬೆಳೆಸುವ ಮಗನಾಗಲಿಲ್ಲವಲ್ಲಾ ಎಂದು ಕೊರಗಿದರು. ಗಂಡನಿಗೆ ಹೇಳಬಹುದೋ, ಕೂಡದೋ ಎಂದು, ಅತ್ತೆಯ ಇದಿರು ತನ್ನ ಅಳಲು ತೋಡಿಕೊಂಡಳು. ತಾಯಿ ತನ್ನ ಮಗನಿಗೆ ಸೊಸೆಯ ವ್ಯಥೆಯನ್ನು ಹೇಳಿದಳು. ಆದರೆ ಜೋಯಿಸರು ಆ ಮಾತು ಕೇಳಿಯೂ ಕಿವಿಗೆ ಬೀಳದಂತೆ ಇದ್ದುಬಿಟ್ಟರು. ಹಾಗೇ ಇರುತಿದ್ದರೇನೋ, ಆದರೆ ಮಕ್ಕಳಿಲ್ಲದ ಮಾತು ಜೋಯಿಸರಿಗೆ ಮತ್ತೊಂದು ಮದುವೆ ಮಾಡಿಸುವ ಮಟ್ಟಕ್ಕೆ ಮುಟ್ಟಿದಾಗ, ಅವರಿಗೂ ಗಾಬರಿಯಾಯಿತು.

"ಇದೇನು ಹುಚ್ಚು ನಿನಗೆ, ಜಾನಕಿ, ಮಕ್ಕಳಾಗಲಿಲ್ಲ ಎಂದು ಹೆಂಡಿರ ಮೇಲೆ ಹೆಂಡಿರು ಕಟ್ಟಿಕೊಂಡರಾಯಿತೆ ? ಮಕ್ಕಳಾಗುವ ಯೋಗವಿದ್ದರೆ, ನೀನೇ ತಾಯಿಯಾಗುತ್ತಿ. ಸುಮ್ಮನೆ ಇಲ್ಲದ ಕೊರಗು ಹಚ್ಚಿಕೊಳ್ಳಬೇಡ"– ಎಂದು ಸಮಾಧಾನ ಹೇಳಿದರು. ಆದರೆ ಆ ಸಮಾಧಾನ ಹೆಣ್ಣು ಜೀವಕ್ಕಾದೀತೆ ? ಈ ಹಂಬಲ ಬೆಳೆದು, ಗಂಡನಿಗೆ ಮತ್ತೊಂದು ಮದುವೆ ಮಾಡಿಸುವುದು ಆಗದ ಮಾತೆಂದು ಖಚಿತವಾದಮೇಲೆ, ಜಾತಕ ತೋರಿಸಿ, ಆ ಫಲ ಉಂಟೋ ಇಲ್ಲವೋ ತಿಳಿದುಕೊಳ್ಳಬೇಕೆನಿಸಿತು. ಗಂಡ ದೇಶಕ್ಕೇ ಹೆಸರಾದ ಜೋಯಿಸರು, ಎಲ್ಲರ ಭವಿಷ್ಯವನ್ನೂ ಹೇಳುತ್ತಾರೆ. ಹಾಗೆಂದು, ಅವರ ಹೆಂಡತಿಯೇ ತನ್ನ ಜಾತಕವನ್ನು ಅವರ ಮುಂದಿಟ್ಟು, 'ಈ ಜಾತಕಕ್ಕೆ ಸಂತಾನಯೋಗ ಇದೆಯೋ ಇಲ್ಲವೋ, ನೋಡಿ' ಎಂದು ಕೇಳುವುದಕ್ಕುಂಟೆ ? ಅದು ಸಾಧ್ಯವಿಲ್ಲವೆಂದು, ಆ ಚಪಲವನ್ನೇ ಬಿಡುವುದಾದೀತೆ ?

"ಕಡೆಗೆ ಅತ್ತೆ ಸೊಸೆ ಇಬ್ಬರೂ ಮಾತಾಡಿಕೊಂಡು, ಗಂಡನಿಗೆ ತಿಳಿಯದ ಹಾಗೆ, ಊರ ಜೋಯಿಸರಾಗಿದ್ದ ಲಿಂಗಾಜೋಯಿಸರ ಹಿರಿಯರ ಬಳಿಗೆ ಹೋಗಿ, ಕೇಳಿಕೊಂಡು ಬಂದರು. 'ಆ ಯೋಗವಿದೆ, ದೈವಾನುಗ್ರಹದಿಂದ

ಲಭ್ಯ' ಎಂದು ತಿಳಿಯಿತು. 'ಅದೇನು ನಾಗರ ಕಾಟವೇ, ಗ್ರಹದೋಷವೇ? ಯಾವ ಸೇವೆಯಿಂದ ಬಯಕೆ ತೀರಬಹುದು' ಎಂದು ವಿಚಾರಿಸಿದರು. 'ನರಸಿಂಹನೇ ಅದೆಲ್ಲಾ ನನಗಿಂತ ಚೆನ್ನಾಗಿ ಬಲ್ಲ. ಅವನನ್ನೇ ಕೇಳು'' ಎಂದರು, ದೊಡ್ಡ ಜೋಯಿಸರು.

ಹತ್ತು ದಿನ ಅಳೆದು ಸುರಿದು, ಮುಹೂರ್ತ ಕಾದು, ಜಾನಕಮ್ಮನವರೇ ಗಂಡನಿಗೆ, ದೊಡ್ಡ ಜೋಯಿಸರು ಹೇಳಿದ ವಿಷಯವನ್ನು, ತನ್ನ ಗಂಡ ಸಿಟ್ಟಾಗದಿರಲೆಂದು ಕಂಬನಿಯ ನೆರವು ಪಡೆದು ಹೇಳಿದರು, ನರಸಿಂಹ ಜೋಯಿಸರು ಕೈಹಿಡಿದಾಕೆಯ ಮಾತು ಕೇಳಿ ನಕ್ಕುಬಿಟ್ಟರು. ಮರುಗಳಿಗೆಯೇ ನಕ್ಕ ಮುಖ ಗಂಭೀರವಾಯಿತು. ಹೇಳಿದರು :

"ನೋಡು, ಜಾನಕಿ. ಪೂಜೆ ಮಾಡುವ ಕೈ ಬೇಡಬಾರದು. ತಾಯಿ ತಾನೇ ಕೊಟ್ಟಿದ್ದನ್ನು ಪ್ರಸಾದ – ಎಂದು ಸ್ವೀಕರಿಸಬೇಕು. ಹಾಗಲ್ಲದೇ, ನಿನ್ನ ಪೂಜೆ ಮಾಡಲಿಲ್ಲವೆ, ನಾನು ಕೇಳಿದ್ದು ಕೊಡು – ಎಂದು ಸೇವೆಯನ್ನೇ ಅಧಿಕಾರ ಮಾಡಿಕೊಂಡು ಆಜ್ಞಾಪಿಸಿದರೆ, ಕರುಣಾಮಯಿಯಾದ ತಾಯಿ ಇಲ್ಲವೆನ್ನಲಾರಳು. ಆದರೂ ತಾನೇ ಕೊಡಬೇಕೆಂದು ಕೊಡುವಾಗ, ಕೊಡುವಂಥ ಫಲವನ್ನು ಕೊಡಲಾರಳು. ನೀನು ನೀನಾಗಿಯೇ ಕೊಡುವ ಚುಂಬನಕ್ಕೂ, ನಾನು ಕಾಡಿ ತೆಗೆದುಕೊಳ್ಳುವ ಚುಂಬನಕ್ಕೂ ವ್ಯತ್ಯಾಸವಿಲ್ಲವೇ ? ಹಾಗೆ, ಆದ್ದರಿಂದ ಕೊಂಚ ಸಹನೆ ತಂದುಕೋ. ನೆಲ ಕಾದು ಮಳೆ ಬರಲಿ."

"ಆದರೆ ಹೆಣ್ಣು ಕೇಳಲಿಲ್ಲ."

"ಎಂದೂ ನಾನು ನಿಮ್ಮನ್ನು ಇಂಥದಾಗಬೇಕೆಂದು ಬೇಡಲಿಲ್ಲ. ಈಗಲೂ ನನಗಾಗಿ ಬೇಕು ಎನ್ನುವುದಿಲ್ಲ. ಈ ಬಯಕೆ ನಡೆಸಿಕೊಡಿ."

"ಇಲ್ಲವೆಂದರೆ ಸಿಡಿದುಹೋಗುವುದೇನೋ ಎಂಬಷ್ಟು ಬಿಗಿದಿತ್ತು – ಬಯಕೆಯ ಆರ್ತತೆ ತುಂಬಿದ ಜಾನಕಮ್ಮನ ಮೊಗ. ಆ ಮುಖವನ್ನು ಕಂಡ ಜೋಯಿಸರ ನಾಲಗೆಗೂ ಇಲ್ಲವೆನ್ನಲಾಗಲಿಲ್ಲ. 'ನಿನ್ನ ಬಯಕೆ ತೀರಲಿ' ಎಂದು'' ಒಪ್ಪಿದರು.

"ಆ ಬಳಿಕ ಕ್ರಮವಾಗಿ ದೇವೀಪೂಜೆ, ಒಂದು ಮಂಡಲ ಶ್ರೀಚಕ್ರ ಪೂಜೆ ಮಾಡಿದರು. ಸುಬ್ರಹ್ಮಣ್ಯ ಜಪ ಮಾಡಿ, ಕುಜಶಾಂತಿ ಮಾಡಿದರು. ಸಂತಾನಕಾರಕನಾದ ಗುರುಗ್ರಹದ ಸೇವೆ ಮಾಡಿದರು. ಇವರ ಸೇವೆ ತೃಪ್ತಿಯಾಯಿತೆಂದು, ದೇವಿ ಕುರುಹುದೋರಿದಂತೆ ಜಾನಕಮ್ಮ ಗರ್ಭವತಿಯಾಗಿ, ಗಂಡುಮಗುವಿಗೆ ತಾಯಿಯಾದಳು. ಆ ಪೂಜೆಯ ಫಲ ವೆಂಕಟಸುಬ್ಬಯ್ಯ!"



ಅಷ್ಟು ಹೊತ್ತು ಮಾತಾಡಿದ ಆಯಾಸಕ್ಕೇನೋ ಎಂಬಂತೆ ಆಚಾರ್ಯರು ಒಂದು ಗಳಿಗೆ ಸುಮ್ಮನಿದ್ದು, ಬಳಿಕ ತಮ್ಮ ಮಾತು ಮುಂದುವರಿಸಿದರು:

"ಕುದುರೆಗಿಂತ ಲದ್ದಿ ಬಿರುಸಾಯಿತು ಎನ್ನುವ ಹಾಗಾಯಿತು ನನ್ನ ಕಥೆ. ಕಥೆಗಿಂತ ಪೀಠಿಕೆಯೇ ಉದ್ದವಾಯಿತು."

"ಇದೂ ಅಗತ್ಯವೇ, ತಿಳಿಯಬೇಕಾದ ವಿಚಾರವೇ. ಈ ಹೊತ್ತಿನಲ್ಲಿ ಅಲ್ಲವಾದರೆ, ಮತ್ತೆ ಇವೆಲ್ಲಾ ತಿಳಿದುಕೊಳ್ಳುವುದಕ್ಕೆ ಅವಕಾಶವೆಲ್ಲಿ ?"

"ಅದೇನೋ ಸರಿ ಅನ್ನು, ನಾನು ನೆನಸಿಕೊಳ್ಳೋದು ಎಷ್ಟು ವರ್ಷಕ್ಕೊಂದು ಬಾರಿಯೋ–"

"ಮುಂದಕ್ಕೇನಾಯಿತು ?"

"ನಿನ್ನ ಅವಸರ ನಿನಗೆ! ನರಸಿಂಹ ಜೋಯಿಸರಿಗೆ ಮಗ ಹುಟ್ಟಿದ. ನಮ್ಮ ಹಿರಿಯರು ಚಿತ್ರದುರ್ಗಕ್ಕೆ ಬರುವ ವೇಳೆಗೆ ಆ ಮಗನಿಗೆ ಆರು ವರ್ಷ ವಯಸ್ಸಾಗಿತು. ಬಯಸಿ ಪಡೆದ ಮಗ, ಜೋಯಿಸರ ಪಾಲಿಗೆ 'ಇದ್ದೊಬ್ಬ ಮಗ ಈರಬಸವ ಆದ!' ಅನ್ನೋ ತಲೆನೋವಿಗೆ ಕಾರಣವಾಗಿದ್ದ."

"ಏಕೆ–ರೋಗಿಷ್ಠ ಮಗನೇ ?"

"ಊಹೂ. ಅದೆಲ್ಲಾ ಸಾಮಾನ್ಯ ಮಕ್ಕಳ ರೀತಿಯಾಯಿತು. ಆದರೆ ಈ ಮಗುವೇ ಒಂದು ವಿಲಕ್ಷಣ."

"ಅಂದರೆ–"

"ಅಂದರೆ ಶುದ್ಧ ಮೂಕ ಬಸವಣ್ಣ."

"ಮೂಕು ಹುಡುಗನೇ ?"

"ಮೂಕು ಅಂದರೆ ಮೂಕಲ್ಲ. ಮಾತೆಲ್ಲಾ ಗೊತ್ತು. ಮಾತಾಡುವುದೂ ಗೊತ್ತು. ಅದರೆ ಮೂರುಹೊತ್ತೂ ಎಲ್ಲೋಗೀಳು. ಎಲ್ಲಿಟ್ಟರೆ ಅಲ್ಲಿ, ತಣ್ಣಗೆ ಕೂತುಬಿಡೋದು. ಒಂದು ಸಲ 'ಆ' ಎನ್ನಬೇಕಾದರೆ ಆರು ಸಲು ಕರೆಯಬೇಕು. ಮೈನೆಲದ ಮೇಲಿದ್ದರೂ ಮನಸ್ಸೆಲ್ಲೋ. ಮಗುವಾಗಿದ್ದಾಗ, ಸ್ವಲ್ಪ ದೊಡ್ಡವನಾದರೆ ಸರಿಹೋಗಬಹುದು ಎಂದುಕೊಂಡರು. ಬೆಳೆದಾಗಲೂ ಅದೇ ಬುದ್ಧಿಯೇ. ಈ ಮಗನ ಯೋಚನೆ ಮಕ್ಕಳಿಲ್ಲವಲ್ಲ ಎನ್ನುವ ಯೋಚನೆಗಿಂತ ಹೆಚ್ಚಾಯಿತು, ಆ ದಂಪತಿಗಳಿಗೆ. ಆ ವೇಳೆಗೆ ನಮ್ಮ ಹಿರಿಯರಿಗೂ, ನರಸಿಂಹ ಜೋಯಿಸರಿಗೂ ಪರಿಚಯವಾಯಿತು. ಜೋಯಿಸರ ಚಿಂತೆಯನ್ನರಿತ ನಮ್ಮ ಹಿರಿಯರು ಅವರಿಗೆ–"

"ಮನೇಲಿ ಒಂದೇ ಮಗು ಆದರೆ ಎಷ್ಟೋ ವೇಳೆ ಹೀಗಾಗೋದೂ ಉಂಟು. ನಾಲ್ಕು ಹುಡುಗರ ಜೊತೆ ಸೇರಿದರೆ ಸರಿಹೋಗಬಹುದು–" ಎಂದು ಸಲಹೆ ಹೇಳಿದರು.

"ಆದರೆ ಈ ಆಕಾಶರಾಯನ ಜೊತೇಲಿ ಆಡಲಿಕ್ಕೆ ಯಾವ ಹುಡುಗರು ತಾನೆ ಬರ್ತಾರೆ. ಇವನು ಗೆಲುವಾಗಿದ್ದರೆ ತಾನೇ ಜೊತೆಗೆ ನಾಲ್ಕು ಜನ ಕಲೆಯೋದು?"

"ಎಲ್ಲಾ ಮಕ್ಕಳೂ ಒಂದೇ ತರಹ ಇರ್ತಾರೆಯೇ ? ಹೀಗಿರೋದು, ಇವನ ಹುಟ್ಟುಗುಣ. ಅದಕ್ಕೇನು ಮಾಡಲಿಕ್ಕಾಗುತ್ತೆ. ಕ್ರಮೇಣ ಸರಿ ಹೋಗುತಾನೆ."

"ಹಾಗಾಗಬಹುದು. ಆದರೆ ಆಗೋದು ಹೇಗೆ ? ಇವನು ಮನೆ ಬಿಟ್ಟು ಕದಲಿದರೆ ತಾನೆ?"

"ಆಟಕ್ಕಿಲ್ಲವಾದರೆ ಹೋಗಲಿ, ಪಾಠಕ್ಕಾದರೂ ಹತ್ತು ಜನ ಹುಡುಗರ ಜೊತೇಲಿ ಕಲೀಲಿ. ಮಠಕ್ಕೆ ಸೇರಿಸಿಬಿಡಿ–" ಸಲಹೆ ಮಾಡಿದರು, ಕಸ್ತೂರಿ ರಂಗಾಚಾರ್ಯರು.

"ಆ ಸಲಹೆಯೇ, ಅದುವರೆಗೂ ಪುರಾಣದ ಕಸ್ತೂರಿ ರಂಗಾಚಾರ್ಯ ರಾಗಿದ್ದವರು, ಶಾಲೆಯ ಐನೋರಾಗಲು ಕಾರಣವಾಯಿತು. ನರಸಿಂಹ ಜೋಯಿಸರೇ ಆಚಾರ್ಯರಿಗೆ ಆ ಸಲಹೆ ಮಾಡಿ, ಅವರ ಮನೆಯ ಇದುರಿನ ಆಂಜನೇಯನ ಗುಡಿಯಲ್ಲಿ, ಕಸ್ತೂರಿ ರಂಗಾಚಾರ್ಯರ ವೇದಪಾಠಶಾಲೆ ನಡೆಯಲು ಬೇಕಾದ ಅನುಕೂಲ ಮಾಡಿಕೊಟ್ಟರು. ಸ್ವಲ್ಪ ಮುಂಗೋಪ ಸ್ವಭಾವದ ಆಚಾರ್ಯರು, ಈ ಏರ್ಪಾಟಿಗೆ ಸುಲಭವಾಗಿ ಒಪ್ಪಲಿಲ್ಲ."

"ನನ್ನದು ಹಾಳು ಸಿಡುಕು ಸ್ವಭಾವ. ಕೈ, ನಾಲಿಗೆ ಎರಡೂ ಕೆಟ್ಟದ್ದು. ಈಗ ರಾಮ, ಕೃಷ್ಣ ಅಂದುಕೊಂಡು ಕಾಲ ಹಾಕ್ತಾ ಇದೇನೆ. ಇನ್ನು ಕಂಡೋರ ಮಕ್ಕಳನ್ನು ಹೊಡೆದು, ಬೈದು ಪಾಪಕಟ್ಟಿಕೊಳ್ಳಲೇ ? ಬೇಡ"

– ಎಂದು ಪ್ರತಿವಾದ ಹೂಡಿದರು. ಆದರೆ ಜೋಯಿಸರು ಕೇಳಲಿಲ್ಲ. ಬೇಡಬೇಡವೆಂದರೂ ತಮ್ಮ ಮಗನಿಗೆ ಪಾಠ ಕಲಿಸುವ ನೆಪಮಾಡಿ, ಶಾಲೆಯನ್ನು ಆಚಾರ್ಯರ ಕೊರಳಿಗೆ ಕಟ್ಟಿದರು. ಶಾಲೆ, ಆಚಾರ್ಯರ ಪಾಲಿಗೆ, ಸನ್ಯಾಸಿಯ ಲಂಗೋಟಿಯ ಕಥೆಯಾಯಿತು. ಮೊದಲಷ್ಟು ದಿನ ದಿನಕ್ಕೊಂದು ಮನೆಯಲ್ಲಿ ಉದರಪೂಜೆ ನಡೆಸುತ್ತಿದ್ದರು. ಅಷ್ಟು ದಿನ ಆದಮೇಲೆ, ಶಾಲೆಯನ್ನು ಆಚಾರ್ಯರಿಗೆ ಗಂಟು ಹಾಕಿ, ದಿನಕ್ಕೊಂದು ಊರು ಸುತ್ತುತ್ತಿದ್ದವರನ್ನು, ಅಲ್ಲಿ ಹಿಡಿದು ನಿಲ್ಲಿಸಿದುದಲ್ಲದೆ, ನರಸಿಂಹಜೋಯಿಸರು ವೆಂಕಟ ರಮಣಸ್ವಾಮಿ ಗುಡಿಯಲ್ಲಿ



ಅರ್ಚಕರಾಗಿದ್ದ ಶ್ರೀನಿವಾಸಯ್ಯಂಗಾರ್ಯರ ಮಗಳನ್ನು ತಾವೇ ಮಧ್ಯಸ್ಥಿಕೆ ಮಾಡಿ, ಲಗ್ನ ಮಾಡಿಸಿದರು.

"ನಮಾಜು ಮಾಡೋಕೆ ಹೋದ ಮುಲ್ಲಾ, ಮಸೀದಿ ಕೊರಳಿಗೆ ಹಾಕಿಕೊಂಡು ಬಂದ ಹಾಗೆ ಮಾಡಿದಿರಿ – ನನ್ನ ಕಥೇನ"

– ಎಂದು ನಮ್ಮ ಹಿರಿಯರು, ಕಣ್ಣೀರು ಒರೆಸಿಕೊಂಡರು. ಅಂತು ಚಿತ್ರ ದುರ್ಗದಲ್ಲಿ ಆ ಪುಣ್ಯಾತ್ಮರು ನಮ್ಮ ಮನೆಗೆ ಆಸ್ತಿಭಾರ ಹಾಕಿದರು.

"ಆ ಕ್ರಿಯೆಗೆ ಕಟ್ಟುಬಿದ್ದು, ಕಸ್ತೂರಿರಂಗಾಚಾರ್ಯರು, ಜೋಯಿಸರ ಮಗನನ್ನು ಸರಿಮಾಡಲು, ಭಗೀರಥ ಪ್ರಯತ್ನ ಮಾಡಿದರು. ಆದರೆ ಆ ಹುಡುಗ, ಗುರುವಿಗೇ ಗುರುವಾಗಿದ್ದ."

"ಬೇರೆ ಹುಡುಗರ ಹಾಗೆ ವೆಂಕಟಸುಬ್ಬಯ್ಯ, ತುಂಟತನ ಮಾಡಿದ್ದರೆ, ಮೊಂಡತನ ಮಾಡಿದ್ದರೆ, ಕಸ್ತೂರಿ ರಂಗಾಚಾರ್ಯರು ಅವನಿಗೆ ಹಿಡಿದ ಗ್ರಹ ಬಿಡಿಸಿ, ದಾರಿಗೆ ತರುತ್ತಿದ್ದರು. ಅವರ ಕೈಯೇಟು ತಿಂದವರು ದೊಡ್ಡವರಾದ ಮೇಲೂ, ಅವರ ಹೆಸರು ಹೇಳಿದರೇ, ನಡುಗುತ್ತಿದ್ದರು. ಒಂದು ಸಾರಿ ಗದರಿಸಿದರೆ, ಭೇರಿ ಬಾರಿಸಿದಂತೆ; ಸಾಯುವವರೆಗೂ ಸಿಂಹಸ್ವಪ್ನ! ಅಂಥ ಜಬರದಸ್ತು ಆಚಾರ್ಯರದು. ಆದರೆ ಈ ಹುಡುಗ, ಅವರೂ 'ಜಿತೋಸ್ಮಿ' " ಎಂದು ಹೇಳುವಂತೆ ಮಾಡಿದ.

"ಆ ಹುಡುಗನಲ್ಲಿ ತಪ್ಪು ಎಂದರೆ ಒಂದೇ – ಇವರು ಮಗ್ಗಿಯನ್ನೋ" ಕಾಗುಣಿತವನ್ನೋ, ಪಾಠವನ್ನೋ ಹೇಳುತ್ತಿದ್ದರೆ, ಹುಡುಗನ ಮನಸ್ಸೆಲ್ಲೋ ಹುಲ್ಲು ಮೇಯುತ್ತಿರುವುದು. 'ಬಾಯಿಪಾಠ ಒಪ್ಪಿಸು' ಎಂದರೆ ಅದನ್ನು ಮಾತ್ರ ರಾಗವಾಗಿ, ಕಿವಿಗಿಂಪಾಗುವಂತೆ, ಕೇಳುವವರ ಮನಸ್ಸು ಸೆರೆಯಾಗುವಂತೆ, ಜೇನು ಸುರಿದಂತೆ ಹೇಳುತ್ತಾನೆ. ಆದರೆ ಹೇಳಹೇಳುತ್ತಲೇ, ಬೀದಿಯಲ್ಲಿ ಹಸು ಕೂಗಿದರೆ, ದೇವಾಲಯದ ಇದುರಿನ ಅಶ್ವತ್ಥವೃಕ್ಷದ ಎಲೆಗಳು ಗಾಳಿಯಲ್ಲಿ ಗೆಜ್ಜೆಯಲುಗಿಸಿದಂತೆ ಸದ್ದು ಮಾಡಿದರೆ, ಯಾವುದಾದರೂ ಹಕ್ಕಿ ಕುಕಿಲಿದರೆ, ದೇವಾಲಯದ ಗಂಟೆ ಗಂಭೀರವಾಗಿ ಮೊಳಗಿದರೆ, ಆ ಸದ್ದು ಕೇಳಲೆಂದೇ ಕಿವಿದೆರೆದು ನಿಂತಿದ್ದಂತೆ, ಹೇಳುತ್ತಿದ್ದದನ್ನು ಮರೆತು, ಹೊರಗಿನಿಂದ ಕೇಳಿಬಂದ ನಾದದಲ್ಲಿ ಲೀನನಾಗಿಬಿಡುತ್ತಿದ್ದ. ಉಪಾಧ್ಯಾಯರನ್ನು ನೋಡುತ್ತಿದ್ದ ಕಣ್ಣು, ಹಾಗೇ ಅರೆಮುಚ್ಚಿ, ಎಲ್ಲೋ ನೋಡುವುದು. ಸುತ್ತಲ ಹುಡುಗರು, ಗಟ್ಟಿಯಾಗಿ ನಗಲಾರದೆ, ಉಬ್ಬಸಪಡುತ್ತಾ ಮುಸಿ ಮುಸಿ ನಗುವುದೂ, ಆಚಾರ್ಯರ ಕಣ್ಣು ಕರ್ಕಶವಾಗಿ, ಕೈ ಬರಲನ್ನು ತಡಕುವುದೂ ಒಂದೂ ತಿಳಿಯುವುದಿಲ್ಲ. ಕಡೆಗೆ ಆಚಾರ್ಯರು

ತಾಳ್ಮೆ ಸೋತು – 'ವೆಂಕಟಸುಬ್ಬಾ' ಎಂದು ಘರ್ಜಿಸಿದಾಗ, ಯಾವುದೋ ಲೋಕದಿಂದ ಇಳಿದು ಬಂದು, ಬೆದರುಗಣ್ಣುಗಳಿಂದ ಉಪಾಧ್ಯಾಯರನ್ನು ನೋಡಿ, ತಲೆಬಾಗಿಸಿ ನಿಂತುಬಿಡುತ್ತಾನೆ. ಆಚಾರ್ಯರಿಗೆ ತೆಗೆದು ನಾಲ್ಕು ಬಾರಿಸಬೇಕು ಎನ್ನುವಷ್ಟು ಸಿಟ್ಟು ಬರುತ್ತದೆ. ಆದರೆ ನಾಚಿಕೆಯಿಂದ ಕೆಂಪಾದ ಮುಖ; ದಿಗ್ಭ್ರಮೆಯಿಂದ ಬೆವರಿ, ಚಂಚಲವಾಗಿ, ಕ್ಷಮೆ ಬೇಡುವ ಅವನ ಕಣ್ಣುಗಳನ್ನು ನೋಡಿದಾಗ, ಕರುಳು ಕೊಯ್ದಂತಾಗಿ ಸುಮ್ಮನಾಗುತ್ತಾರೆ. ಯಾವಾಗಲಾದರೂ ಒಮ್ಮೆ, ಕೊಂಚ ತಾಳ್ಮೆ ತಪ್ಪಿ 'ಜೋಯಿಸರ ಹೊಟ್ಟೇಲಿ ಏನಂತ ಹುಟ್ಟಿದೆಯೋ, ನಿರ್ಭಾಗ್ಯ, ಕಬ್ಬಿನ ಹೊಟ್ಟೇಲಿ ಸೂಲಂಗಿ ಹುಟ್ಟಿದ ಹಾಗೆ' ಎಂದು ಗದರಿದರೆ, ಅಂತರ್ಜಲವಿರುವ ಮರಳನ್ನು ಉಗುರಿನಿಂದ ಬಗೆದರೂ ನೀರು ಒಸರುವಂತೆ, ಅವನ ಕಣ್ಣುಗಳಲ್ಲಿ ನೀರಾಡುವುದು. ಪ್ರವಾಹದಲ್ಲಿ ಸಿಕ್ಕಂತೆ ಕಂಗೆಡುವನು. ಅಂಥವನನ್ನು ಏನೆಂದು ಹೊಡೆಯುವುದು ? ಯಾವುದಕ್ಕೆಂದು ಶಿಕ್ಷಿಸುವುದು ?

ಒಂದು ದಿನ ಆಚಾರ್ಯರೂ ತಾಳ್ಮೆ ಸೋತು, ವೆಂಕಟಸುಬ್ಬುವನ್ನು ಹೊಡೆದರು.

ಆ ದಿನ ಆಚಾರ್ಯರು ಹುಡುಗರಿಗೆ ಸತ್ಯಕಾಮ–ಜಾಬಾಲಿಯ ಕಥೆ ಹೇಳುತ್ತಿದ್ದರು. ಪಾಠ ಹೇಳುವಾಗ, ಹೇಳಹೇಳುತ್ತಲೇ ನಡುವೆ ನಿಲ್ಲಿಸಿ. ಹುಡುಗರನ್ನು ಪ್ರಶ್ನೆ ಮಾಡಿ, ಅವರು ಎಷ್ಟರಮಟ್ಟಿಗೆ ಮನಸ್ಸಿಟ್ಟು ಪಾಠ ಕೇಳುತ್ತಿದ್ದಾರೆಂದು ಪರೀಕ್ಷಿಸುವುದು ಆಚಾರ್ಯರ ಪದ್ಧತಿ. ಕಥೆ ಆರಂಭಿಸುವಾಗ, ಸುಟಿಯಾಗಿ ಕೇಳುತ್ತಾ ಕುಳಿತಿದ್ದ ವೆಂಕಟಸುಬ್ಬು, ಅವರು ಪ್ರಶ್ನೆ ಕೇಳಬೇಕೆಂದು ಅಂದುಕೊಳ್ಳುವ ಹೊತ್ತಿಗೆ, ಎಲ್ಲೋ ಪರವಶಚಿತ್ತನಾಗಿದ್ದ. ಅವನ ಕಣ್ಣು, ಅರಳಿಮರದ ಎಲೆಗಳ ನಡುವೆ ನಾಟಿತ್ತು. ಆಚಾರ್ಯರಾಡುತ್ತಿದ್ದ ಮಾತು, ಹೇಳುತ್ತಿದ್ದ ಕತೆ, ಕೋಣನ ಮೇಲೆ ಬಿದ್ದ ನೀರಿನಂತೆ, ಅವನ ಮನಸ್ಸನ್ನು ಸೋಕದೆ ಎಲ್ಲೋ ಹೋದಂತಿತ್ತು. ಆಚಾರ್ಯರಿಗೆ ಅದನ್ನು ನೋಡಿ ವಿಪರೀತ ಸಿಟ್ಟು ಬಂತು.

"ವೆಂಕಟಸುಬ್ಬಾ!" ಎಂದು ಕೂಗಿದರು. ಸಿಟ್ಟಿನಲ್ಲಿ ಹರಿತವಾದ ಅವರ ಕೂಗು ಕೇಳಿ, ವೆಂಕಟಸುಬ್ಬು ಗಾಬರಿಯಾಗಿ ಅವರ ಮುಖ ನೋಡಿದ.

"ನಾನೇನೋ ಹೇಳ್ತಾ ಇದ್ದದ್ದು ಈಗ.....?"

– ಸಿಡಿಲು ಸಿಡಿವ ಮೊದಲ ಸದ್ದಾಗುವ ಗುಡುಗಿನಂತಿತ್ತು ಅವರ ಧ್ವನಿ. ವೆಂಕಟಸುಬ್ಬು ಅವರ ಪ್ರಶ್ನೆಗೆ ಉತ್ತರ ಕೊಡದೆ, ದಿಗ್ಭ್ರಮೆಯಾಗಿ ಅವನ ಮುಖವನ್ನೇ ನೋಡುತ್ತಾ ನಿಂತ.



"ಏನು ಹೇಳ್ತಾ ಇದ್ನೋ ನಾನು.... ?"–ಮತ್ತೆ ಆಚಾರ್ಯರು ಕೆಣಕಿ ಕೇಳಿದರು.

"ಗೊ.....ಗೊ.......ತ್ತಿ.....ಲ್ಲ.........." ಎಂದು ವೆಂಕಟಸುಬ್ಬು ಬೆದರಿಕೊಂಡೇ ಉತ್ತರ ಕೊಟ್ಟ.

"ಗೊತ್ತಿಲ್ಲ! ನೀನೇನು ಕಿವುಡು ಕತ್ತೆಯೇ ? ಊರಿಗೆಲ್ಲಾ ಕೇಳ್ಳೋ ಹಾಗೆ ಗಂಟಲು ಹರಿದುಕೊಂಡರೂ ನಿನಗೆ ಕೇಳಿಸಲಿಲ್ಲವೇ ? ನಿನ್ನ ಚರ್ಮ ಸುಲಿದುಬಿಡ್ತೀನಿ ಇವತ್ತು."

"ಕೋಪದಲ್ಲಿ ಆಚಾರ್ಯರು ಪರಶುರಾಮನಂತಾಗಿದ್ದರು. ಮಗ್ಗುಲಲ್ಲಿದ್ದ, ತೆಳುವಾಗಿ ಬಳುಕುವ ಹುಣಸೆಯ ಬರಲನ್ನು ಝುಳಪಿಸಿ ಎದ್ದು ನಿಂತರು. ಅವರು ನಿಂತ ರೀತಿ ನೋಡಿ, ಬೇರೆಯ ಹುಡುಗರಾಗಿದ್ದರೆ, ಹೆದರಿ ಚೀರಿ ಓಡ ಬೇಕಾಗಿತ್ತು. ವೆಂಕಟಸುಬ್ಬುವಿಗೆ, ಬರಲಿನ ರುಚಿ ಗೊತ್ತಿಲ್ಲದಿದ್ದರೂ, ಅದರ ಪರಿಣಾಮ ಏನೆಂದು ಏಟುತಿಂದ ಬೇರೆಯ ಹುಡುಗರನ್ನು ನೋಡಿ ಕಂಡು ಕೊಂಡಿದ್ದ. ಬರಲನ್ನು ನೋಡಿಯೇ ಅವನ ಕಣ್ಣಲ್ಲಿ ನೀರು ಒಡೆಯಿತು. ಆದರೆ ಹೊಡೆಯಬೇಡಿ ಎನ್ನಲಿಲ್ಲ."

"ತಪ್ಪಾಯ್ತು" ಎಂದು ನಡಗುವ ಧ್ವನಿಯಲ್ಲಿ ಹೇಳಿ, ಬರಲಿನ ಏಟಿಗೆ ಅಂಗೈ ಚಾಚಿದ. ಭಯಕ್ಕೆ ಹುಡುಗನ ಕೈ ಅರಳಿಯ ಚಿಗುರಿನಂತೆ ಕಂಪಿಸುತ್ತಿತ್ತು. ಹೊಡೆದು ಅಭ್ಯಾಸವಾದ ಆಚಾರ್ಯರು, ಅವನ ಕೈಮೇಲೂ ಬಾರಿಸಿಯೇಬಿಟ್ಟರು. ಗುಲಾಬಿ ಬಣ್ಣದ ಅಂಗೈಮೇಲೆ, ರಕ್ತದ ಗೆರೆ ಎಳೆದಂತೆ ಕಾಣಿಸಿತು, ಬರಲಿನೇಟು. ಹುಡುಗ 'ಅಃ' ಎಂದು ನೋವಿನಿಂದ ತುಟಿ ಕಚ್ಚಿದ. ಕಚ್ಚಿದ ಜೋರಿಗೆ ತುಟಿಯಿಂದ ರಕ್ತ ಬಂತು. ಆದರೂ ಮುಂದೆ ಚಾಚಿದ ಕೈ ಹಿಂದೆ ಸರಿಸಲಿಲ್ಲ. ಕಣ್ಣಲ್ಲಿ ಮಾತ್ರ ಗಂಗಾವತಾರ. ಹೂವನ್ನು ಬೆಂಕಿಯ ಮೇಲೆ ಆಡಿಸಿದಂತಿತ್ತು ಹುಡುಗನ ಮುಖ.

"ಏಟು ಕೊಟ್ಟ ಆಚಾರ್ಯರಿಗೆ ಹುಡುಗನ ಮುಖ ನೋಡಿ, ಏಟು ತಮಗೇ ಬಿದ್ದಂತಾಯಿತು. ಆ ನೋವು ತಡೆಯಲಾರದೆ, ಒಂದು ಗಳಿಗೆ ಅವರೂ ಕಣ್ಣು ಮುಚ್ಚಿಕೊಂಡರು. ಮತ್ತೆ ಕಣ್ಣು ತೆರೆದಾಗಲೂ, ಹುಡುಗ ಚಾಚಿದ ಕೈ ಹಾಗೇ ಹಿಡಿದಿದ್ದ. ಆಚಾರ್ಯರು ಕಣ್ಣು ಬಿಟ್ಟಕೂಡಲೇ, ಸದ್ದಿಲ್ಲದ ಅಳು ತುಳುಕುವ ಧ್ವನಿಯಲ್ಲಿ ಮತ್ತೆ 'ತಪ್ಪಾಯಿತು' ಎಂದ. ಆಚಾರ್ಯರಿಗೆ ತಮ್ಮನ್ನೆ ತಾವು ಒದ್ದು ಕೊಳ್ಳುವ ಹಾಗಾಯಿತು. ಅವನ ಮಾತು ಕೇಳಿ. ಒಂದು ಗಳಿಗೆ ಅವನನ್ನೇ ನೋಡುತ್ತಾ ನಿಂತರು ಆಚಾರ್ಯರು. ಅವರ ಕೈಯಲ್ಲಿರುವ ಬರಲು ಹಾಗೆ ಜಾರಿ ಕೆಳಗೆ ಬಿತ್ತು."

"ಶಾಲೆಯ ಉಳಿದ ಹುಡುಗರು ಈ ವಿಚಿತ್ರವನ್ನು ನೋಡುತ್ತಾ, ಹುಲಿ ಎರಗಿದ ಹಸುವಿನ ಮಂದೆಯಂತೆ, ಭಯದಿಂದ ಮರವಟ್ಟು ನಿಂತಿದ್ದರು. ಆಚಾರ್ಯರು ಸಿಟ್ಟಾದಾಗ, ಅದು ಯಾರ ಮೇಲೆ ತಿರುಗೀತು ಎಂಬ ನೆಚ್ಚಿಗೆ ಇಲ್ಲ – ತಮಗೇನು ಗತಿಯೋ ಎಂದು ಅವಕ್ಕೆ ಭಯ. ಅವರನ್ನು ನೋಡಿ ಆಚಾರ್ಯರಿಗೆ ಕರುಳಲ್ಲಿ ಕತ್ತರಿಯಾಡಿಸಿದಂತಾಯಿತು. ಕಣ್ಣು, ಕೈಸನ್ನೆ ಮಾಡಿ ಎಲ್ಲರಿಗೂ ಮನೆಗೆ ಹೋಗಲು ಹೇಳಿದರು. ಅವರ ಸನ್ನೆಯಂತೆ ಹೋಗಲೂ ಭಯಪಟ್ಟು, ಹುಡುಗರು ಒಬ್ಬೊಬ್ಬರಾಗಿ ಮೆಲ್ಲಗೆ ಜಾರಿದರು. ವೆಂಕಟಸುಬ್ಬು ಮಾತ್ರ ಕಣ್ಣು ಮುಚ್ಚಿ ನಿಂತೆ ಇದ್ದ. ಆಚಾರ್ಯರ ಕಣ್ಣಲ್ಲೂ ನೀರಾಡಿತು. ಹಾಗೇ ತಮ್ಮ ಶಿಷ್ಯನನ್ನು ತಬ್ಬಿಕೊಂಡರು. ನೋವಿನಲ್ಲಿ ತೊಯ್ದು ಮೃದುವಾದ ಧ್ವನಿಯಲ್ಲಿ 'ವೆಂಕಟಸುಬ್ಬು' ಎಂದು ಕೂಗಿದರು."

ವೆಂಕಟಸುಬ್ಬು, ನೋವು ಬೆಸುಗೆಹಾಕಿದ ರೆಪ್ಪೆಯನ್ನು ನಿಧಾನವಾಗಿ ಬಿಡಿಸಿ, ಆಚಾರ್ಯರನ್ನೂ ಅವರ ಗಡ್ಡ ಬೆಳೆದ ಮುಖದಲ್ಲಿಯ ಕಣ್ಣಂಚಿನಲ್ಲಿ ಉಯ್ಯಾಲೆಯಾಡುವ ಹನಿಯನ್ನೂ ನೋಡಿದ.

"ತುಂಬಾ ನೋವಾಯ್ತೆ, ನನ್ನಪ್ಪ... ನನ್ನ ಹಾಳು ಕೈಗಿಷ್ಟು ಬೆಂಕಿ ಬೀಳ !" ಎಂದು ತಮ್ಮನ್ನೇ ತಾವು ಶಪಿಸಿಕೊಂಡರು, ಆಚಾರ್ಯರು.

"ಅದುವರೆಗೂ ಅಳದೆ, ತುಟಿ ಕಟ್ಟಿ ಕೊಂಡಿದ್ದ ಹುಡುಗನೂ ಬಿಕ್ಕಲು ಆರಂಭಿಸಿದ. ಹತ್ತು ಕ್ಷಣ ಹಾಗೆ ಕಳೆದಮೇಲೆ, ತಮ್ಮ ದುಃಖವನ್ನು ಸಂತೈಸಿಕೊಂಡು ಆಚಾರ್ಯರು ಅವನ ಕಂಬನಿ ಒಸರುವ ಕಣ್ಣನ್ನು ಒರೆಸಿ ಕೇಳಿದರು."

"ಪಾಠದ ಕಡೆಗೆ ಲಕ್ಷ್ಯ ಕೊಡದೆ ಹೀಗೇಕೆ ಮಾಡುತ್ತೀಯಪ್ಪ ?"

"ವೆಂಕಟಸುಬ್ಬು ಅವರ ಪ್ರಶ್ನೆಗೆ ಉತ್ತರ ಕೊಡದೆ ಸುಮ್ಮನೆ ಅರಳಿಯ ಮರದತ್ತ ನೋಡಿದ. ಅವರು ಪಾಠ ಹೇಳುವಾಗಲೂ, ಅವನು ಅತ್ತ ನೋಡುತ್ತಿದ್ದುದು ಆಚಾರ್ಯರಿಗೆ ನೆನಪಾಯಿತು."

"ಅರಳಿಮರದಲ್ಲೇನು ಚಿತ್ರ ಬರೆದಿದೆಯೇ ? ಸುಮ್ಮನೇ ಯಾವಾಗಲೂ ಅಲ್ಲೇನು ನೋಡ್ತಾ ಇರ‍್ತಿ ?"

"ನೋಡ್ತಾ ಇರಲಿಲ್ಲ, ಉಪಾದ್ರೆ........?"

"ಮತ್ತೆ ?"

"ಅರಳೀಮರದಲ್ಲಿ ಕೋಗಿಲೆ ಹಾಡ್ತಾ ಇತ್ತು. ಕೇಳ್ತಾ ಇದೆ."

"ಹುಡುಗನು ಕೊಟ್ಟ, ಅನಿರೀಕ್ಷಿತವಾದ ಉತ್ತರ ಕೇಳಿ, ಆಚಾರ್ಯರು ಚಕಿತರಾದರು. ಕೋಗಿಲೆಯ ಕೂಗು ಅವರಿಗೇನು ಹೊಸದಲ್ಲ. ವಸಂತ



ಋತುವಿನಲ್ಲಿ ಸಾವಿರಾರು ಕೋಗಿಲೆಕೂಗು ಕೇಳಿದ್ದವರು. ಆ ಕೂಗಿನಲ್ಲಿ ಈ ಮೈಮರೆಸುವ ಶಕ್ತಿ ಇದೆಯೇ ?" ಅದರ ಧ್ವನಿಯಲ್ಲಿ ಏನು ಅರ್ಥ, ಸ್ವಾರಸ್ಯ ಕಂಡಿತು ಈ ಹುಡುಗನಿಗೆ ?

"ಅದರ ಕೂಗು ಕೇಳಿ ಪಾಠ ಮರೀತಾರೆಯೇ, ಮಗೂ?"

"ಅದು ಕೇಳಿದರೆ ಏಕೋ ಹಾಗಾಗುತ್ತೆ"

"ಏನಾಗುತ್ತೆ ?"

"ಅದನ್ನೇ ಕೇಳುತ್ತಾ ಇರಬೇಕು ಅನ್ನಿಸುತ್ತೆ"

"ಅಷ್ಟೇನೆ ?"

"ಊಹೂ."

"ಮತ್ತೆ......"

"ಅದರ ಹಾಗೇ ನಾನೂ ಕೂಗಬೇಕು ಅನ್ನಿಸುತ್ತೆ."

"ಆ ಮಾತು ಕೇಳಿ ಆಚಾರ್ಯರು ಮತ್ತಷ್ಟು ಚಕಿತರಾದರು. ಎಂಥ ವಿಚಿತ್ರ ಬಯಕೆ ಹುಡುಗನಿಗೆ!" ಹುಡುಗನೂ ಅಷ್ಟೇ ವಿಚಿತ್ರವೇ.

"ಎಷ್ಟು ಚೆನ್ನಾಗಿ ಕೂಗುತ್ತೆ, ಉಪಾದ್ರೆ, ಕೋಗಿಲೆ" ಎಂದು ಮತ್ತೆ ಹೇಳಿದ ವೆಂಕಟಸುಬ್ಬು. ಆ ವೇಳೆಗೆ ಅದುವರೆಗೂ ಸುಮ್ಮನಿದ್ದ ಕೋಗಿಲೆ, ಅರಳಿಮರದ ಎಲೆಗಳ ಮರೆಯಿಂದ 'ಕುಹೂ' ಎಂದು ಕೂಗಿತು. ಏಕೋ ಆಚಾರ್ಯರ ಮೈ ಪುಲಕಿತವಾಯಿತು, ಶುದ್ಧ ಪಂಚಮದಲ್ಲಿ ಕೂಗಿದ ಕೋಗಿಲೆಯ ಕುಹುರವನ್ನು ಕೇಳಿ.

"ಅದರ ಹಾಗೇ ನೀನೂ ಹಾಡ್ತೀಯಾ, ವೆಂಕಟಸುಬ್ಬು ?" – ಎಂದು ಕೇಳಿದರು.

"ಹೂ."

"ಹುಡುಗನ ಹಣೆಯಲ್ಲಿ ಅದೇ ಬರೆದಿದೆಯೇನೋ ಅನ್ನಿಸಿತು, ಆಚಾರ್ಯರಿಗೆ. ಆ ಹೊತ್ತಿನಲ್ಲಿ ಹುಡುಗ ದೇವೀಪೂಜೆಯ ಫಲವಾಗಿ ಹುಟ್ಟಿದವನೆಂಬುದೂ ನೆನಪಾಯಿತು. ಕತ್ತಲಲ್ಲಿ ಏನೋ ಬೆಳಕು ಹೊಳೆದಂತಾಗಿ ಅವರ ಮೈ ರೋಮಾಂಚನವಾಯಿತು. ಹುಡುಗನ ಮೈಮರೆವುತನಕ್ಕೆ ಅದೇ ಅರ್ಥವೇನೋ, ಈಗಿನಿಂದಲೇ ಉಪಾಸನೆ ಆರಂಭವಾಗಿದೆ ಅಂದುಕೊಂಡರು. ಮಾತನಾಡದೆ ಹುಡುಗನನ್ನು ಆಶೀರ್ವಾದ ಮಾಡಿ ಕಳಿಸಿದರು." ಆ ಸಂಜೆಯೇ ಹುಡುಗ ಹೀಗೇಕಾದ ಎಂದು, ಕುದಿಯುತ್ತಿದ್ದ ಜೋಯಿಸರಿಗೆ, ಜಾನಕಮ್ಮನವರಿಗೆ ಈ ವಿಷಯ ತಿಳಿಸಿ –

“ಹುಡುಗನ ಹಣೇಲಿ ಸಂಗೀತಗಾರನಾಗೋ ಯೋಗ ಬರೆದಹಾಗಿದೆ, ಜೋಯಿಸರೇ. ಚಿಂತೆ ಮಾಡಬೇಡಿ. ಅವನ ಅದೃಷ್ಟ ಹೇಗಿದೆಯೋ – ಯಾರು ಬಲ್ಲರು ?”–ಎಂದರು.

“ಹೂ, ಶುಕ್ರ ಉಚ್ಚನಾಗಿದ್ದಾನೆ. ಹಾಗೂ ಆಗಬಹುದು” ಎಂದರು ಜೋಯಿಸರು.

“ಅವನ ಕೈಲಿ ತಾಯಿ ಯಾವ ರೀತಿ ಸೇವೆ ಮಾಡಿಸಿಕೊಳ್ತಾಳೋ, ಈ ಹೆಣ್ಣುಬುದ್ಧಿಗೇನು ಗೊತ್ತು ? ಹತ್ತು ಜನ ಹುಡುಗರ ಹಾಗಿಲ್ಲದೆ ಹೋದರೆ ಹಾಳು ಹೆತ್ತ ಹೊಟ್ಟೆ ಕುದಿಯುತ್ತೆ”– ಎಂದು ಜಾನಕಮ್ಮನವರೂ ಸಮಾಧಾನ ಮಾಡಿಕೊಂಡರು. ಆಚಾರ್ಯರು ಮಾತ್ರ ಆ ದಿನವನ್ನು ಮರೆಯಲಿಲ್ಲ. ಅವತ್ತಿನಿಂದ ಯಾರಾದರೂ ಹುಡುಗ ಪಾಠ ಹೇಳುವಾಗ ಕಿವಿ ಎತ್ತಲೋ ಆಗಿದ್ದರೆ ‘ಏನೋ, ಕೋಗಿಲೆ ಹಾಡು ಕೇಳ್ತೀಯೇನು’ ಅನ್ನೋದು, ಅವರಿಗೆ ವಾಡಿಕೆಯಾಗಿಹೋಯಿತು. ಅವರಿಂದ ಆ ಮಾತು ನಮ್ಮ ವಂಶಕ್ಕೆ ಬಂತು – ಎಂದು ಗೋಪಾಲಾಚಾರ್ಯರು.

೬

“ಇದು ಆ ಕಥೆ. ಬೆಳೆಯೋ ಗಿಡದ ಕುರುಹು ಮೊಳಕೆಯಲ್ಲೇ ಕಾಣುತ್ತೆ ಎಂಬ ಮಾತು ಸುಳ್ಳಲ್ಲ. ಚಿಕ್ಕಂದಿನಲ್ಲೇ ವೆಂಕಟಸುಬ್ಬಯ್ಯನವರಿಗೆ ಹುಟ್ಟಾ ಏಕಾಗ್ರಚಿತ್ತವಿತ್ತು. ಎಂತಲೇ, ಸರಸ್ವತಿ ಅವರಿಗೆ ಒಲಿದಳು. ಅಂಥ ಶಿಷ್ಯ ಇದ್ದ ಅಂತ ಇಷ್ಟು ವರ್ಷವಾದರೂ ನೆನಸಿಕೊಳ್ಳುತ್ತೇವೆ. ಈಗೇನಿದೆ – ಅಂಥ ಗುರುವೂ ಇಲ್ಲ, ಅಂಥ ಶಿಷ್ಯರೂ ಇಲ್ಲ. ಹೊಟ್ಟೆಪಾಡಿನ ವಿದ್ಯೆ; ಹೊಟ್ಟೆಪಾಡಿಗೆ ಕಲಿಸೋರು; ಹೊಟ್ಟೆಪಾಡಿಗೆ ಕಲಿಯೋರು. ರೇಷನ್ ತರೋಕೆ ಡಿಪೋಕ್ಕೆ ಹೋದಹಾಗೆ ಹಿಡಿತುತ್ತಿಗೆ ದಾರಿಯಾದೀತೇನೋ ಎಂದು ಶಾಲೆಗೆ ಹೋಗ್ತಾರೆ. ಹೊಟ್ಟೆ ಆಚೆಗೆ ಬೇರೇನೂ ಕಾಣೊಲ್ಲ ನಮಗೆ.”

– ಎಂದರು ಗೋಪಾಲಾಚಾರ್ಯರು, ಭಾರವಾದ ನಿಟ್ಟುಸಿರಿಟ್ಟು. ಮಾತಿನಲ್ಲಿ ಕತ್ತಲಾದುದು ಇಬ್ಬರಿಗೂ ಅರಿವಿರಲಿಲ್ಲ. ಛತ್ರದ ಇದುರಿನ ಬತೇರಿಯ ಮೇಲೆ ಒಂಟಿನಕ್ಷತ್ರವೊಂದು ಮಂಕಾಗಿ ಮಿನುಗುತ್ತಿತ್ತು. ಅದನ್ನೇ ದಿಟ್ಟಿಸುತ್ತಾ, ಆಚಾರ್ಯರು ಹೇಳಿದ ಕಥೆಯನ್ನು ಮೆಲಕುಹಾಕುತ್ತಿದ್ದೆ. ಅವರು ಹೇಳುತ್ತಿದ್ದ ಕಥೆ ಮುಕ್ತಾಯವಾಯಿತೆಂದು ಗೊತ್ತಾಗಿದ್ದರೂ ‘ಮುಗಿಯಿತೇ, ಇನ್ನೇನು?’ ಎಂದು ಕೇಳಲೂ ನಾಲಿಗೆಗೆ ಶಕ್ತಿ ಇದ್ದಂತಿರಲಿಲ್ಲ.



ಎಂಥ ಜೀವಕ್ಕೆ ಎಂಥ ಆರಂಭ! ಮೊಗ್ಗಿನಲ್ಲೇ ಎಂಥ ಸೌರಭ ಈ ಜೀವಕುಸುಮಕ್ಕೆ. ಈ ಹೂವಿಗೆ ಅರಳುವಾಗ ಎಷ್ಟು ಪರಿಮಳವೋ ಎಂಥ ಚೆಲುವೋ! ಯಾವುದೋ ಉತ್ಸಾಹ ತುಂಬಿದ ಹೃದಯ, ಹಕ್ಕಿಯಂತೆ ಯಾವುದೋ ಕಾಣದ ನಾಡಿಗೆ ಹಾರಲು ತವಕಿಸುತ್ತಿತ್ತು.

“ಮಾತು ಮನೆ ತಿಂದಿತು–ಅನ್ನೋದು ಇದಕ್ಕೇ. ಮಾತಿನಲ್ಲಿ ಸಂಜೆಯಾಗಿ ಸಾಯಂಸಂಧ್ಯಾವಂದನೆಯ ವೇಳೆಯಾದರೂ ತಿಳಿಯಲಿಲ್ಲ. ಹುಡುಗರ ಪಾಠವೂ ನಡೆಯಲಿಲ್ಲ” – ಎಂದರು ಆಚಾರ್ಯರು. ಹುಡುಗರು, ಹೊತ್ತಿನ ವಿಚಾರ ನನಗೆ ನೆನಪಾದುದೂ ಆಗಲೇ. ಆಚಾರ್ಯರಾಡಿದ ಮಾತು ಕೇಳಿ ಯಾವುದೋ ಸ್ವಪ್ನಲೋಕದಲ್ಲಿ ತೇಲುತ್ತಿದ್ದ ಮನಸ್ಸು ತಟ್ಟನೆ ನೆಲಕ್ಕೆ ಕುಸಿಯಿತು.

ಸಾಯಂಸಂಧ್ಯಾವಂದನೆಯ ನೆನಪು ಬಂದು, ಮಾತು ಮುಗಿಸಿ ಆಚಾರ್ಯರು ಬದಿಯಲ್ಲಿರಿಸಿದ ವಸ್ತ್ರವನ್ನು ಕೊಡವಿ ಹೆಗಲಿಗೇರಿಸಿ, ತಾವೂ ಹೊರಡಲು ಎದ್ದು ನಿಂತರು. ಇನ್ನವರು ಕಥೆ ಮುಂದುವರಿಸುವುದಿಲ್ಲವೆಂದು, ಆಗ ನನಗೂ ಖಚಿತವಾಯಿತು.

“ನಾಳೆ ಬೆಳಿಗ್ಗೆ ಬಂದು ನಿಮ್ಮನ್ನು ನೋಡಲೇ ?” ಎಂದು ಕೇಳಿದೆ.

“ಏಕೆ ?”

“ವೆಂಕಟಸುಬ್ಬಯ್ಯನವರ ವಿಚಾರ ನಿಮಗೆ ಗೊತ್ತಿರುವುದನ್ನೆಲ್ಲಾ ತಿಳಿದುಕೊಳ್ಳಲಿಕ್ಕೆ.”

“ನನಗಷ್ಟೇ ಗೊತ್ತಿರೋದು. ಅದೂ ಮಾತಿನ ಸಂದರ್ಭ ಎಂತ ಗೊತ್ತಾಯಿತು. ಇಲ್ಲವಾದರೆ ನನಗೆ ತಾನೇ ಏನು ತಿಳಿಯುತ್ತಿತ್ತು ?”

“ಹಾಗಾದರೆ ಅವರ ಜೀವನ, ಸಂಗೀತ ಕಲಿತ ವಿಚಾರ, ಯಾವುದೂ ನಿಮಗೆ ತಿಳಿಯದೆ ?”

“ಊಹೂ.”

“ಆ ವಿಚಾರವನ್ನೆಲ್ಲಾ ತಿಳಿದವರು ಯಾರಾದರೂ ಇಲ್ಲಿ ಇದಾರೆಯೇ, ಆಚಾರ್ಯರೇ?”

“ಅವರ ಮನೆಯವರು ಈ ಊರಲ್ಲಿದ್ದಿದ್ದರೆ, ಏನಾದರೂ ತಿಳಿಯುತ್ತಿತ್ತೋ ಏನೋ. ಯಾರೂ ಇಲ್ಲಿ ಇಲ್ಲ. ಕುರುಮರಡಿಯಲ್ಲಿ ಯಾರೋ ಇದಾರಂತೆ.”

“ಯಾರು ? ಅವರ ಮನೆತನದವರೇ ?”

“ಅಲ್ಲ, ಅಲ್ಲಿ ಚಿನ್ನಪ್ಪ ಅಂತ ಬಯಲುನಾಟಕವಾಡಿಸುವಾತ ಇದಾನೆ. ಆತನ ಪೂರ್ವಜರು, ವೆಂಕಟಸುಬ್ಬಯ್ಯನವರ ಹಾಡಿಗೆ ಮೃದಂಗ ಬಾರಿಸುತ್ತಿದ್ದರಂತೆ.

ಅವನಿಗೇನಾದರೂ ಗೊತ್ತಿದ್ದರೂ ಗೊತ್ತಿರಬಹುದು. ಅಥವಾ ಅವನಿಗೆ ಗೊತ್ತಿರೋದೂ ನನಗೆ ಗೊತ್ತಿರೋ ಅಷ್ಟೇನೋ ಏನೋ...."

"ಅಂದರೆ – ಎಷ್ಟು ?"

"ತಮ್ಮ ಹಿಂದಿನೋರು ಮೃದಂಗ ಬಾರಿಸುತ್ತಿದ್ದರು ಎಂಬುದಷ್ಟೇ ಗೊತ್ತಿದ್ದರೂ ಇರಬಹುದು. ಹೆಚ್ಚು ತಿಳಿದಿದ್ದರೂ ತಿಳಿದಿರಬಹುದು – ವಿಚಾರಿಸಿ ನೋಡು."

"ಆತ ಇರುವುದು ಯಾವ ಊರಿನಲ್ಲಿ ?"

"ಕುರುಮರಡಿಯಲ್ಲಿ"

"ಕುರುಮರಡಿ... ಎಲ್ಲಿದೆ ಅದು ?"

"ಈ ಊರ ಹೆಸರೇ ಕೇಳಿಲ್ಲವೇ ನೀನು. ಪರವಾ ಇಲ್ಲ ! ಜೋಗಿ ಮಟ್ಟಿಯ ಹಿಂಬದಿಯಲ್ಲಿದೆ ಹಳ್ಳಿ."

"ಎಷ್ಟು ದೂರ ಆಗುತ್ತೆ ?"

"ಆರು–ಏಳು ಮೈಲಿ. ನಡದೇ ಹೋಗಬೇಕು."

"ಬೇರೇನೂ ಸೌಕರ್ಯವಿಲ್ಲವೇ ?"

"ದುಡ್ಡು ಹೆಚ್ಚಾಗಿದ್ದರೆ ಗಾಡಿ ಕಟ್ಟಿಸಿಕೊಂಡು ಹೋಗಬಹುದು. ದುಡ್ಡಿಲ್ಲದ ನಮ್ಮಂಥವರಿಗೆ ಕಾಲೇ ಗಾಡಿ. ಬೇಕೆಂದರೆ ಹಾಗೆ ಹೋಗಬೇಕು. ನಾನಿನ್ನು ಬರುತ್ತೇನೆ, ಹೊತ್ತಾಗಿಹೋಯಿತು. ನಿಮ್ಮ ತಂದೆಯವರಿಗೆ ನಾನು ಕೇಳಿದೆ ಅಂತ ಹೇಳು" – ಎಂದು ಹೇಳಿ, ಆಚಾರ್ಯರು ಹೊರಡಲು ಸಿದ್ಧರಾದರು. ನಾನೂ ಅವರಿಗೆ ನಮಸ್ಕಾರ ಹೇಳಿ ಮನೆಗೆ ಹೊರಟೆ.

ಕತ್ತಲಾಗದಿದ್ದರೆ, ಆಗಲೇ ಕುರುಮರಡಿಗೆ ಹೊರಟುಬಿಡಬೇಕೆನ್ನುವಷ್ಟು ಉತ್ಸಾಹವಿತ್ತು. ಆದರೆ ಕತ್ತಲು, ಗುರುತರಿಯದ ಗುಡ್ಡದ ದಾರಿ – ಇವು ನನ್ನನ್ನು ಹಿಂಜರಿಯುವಂತೆ ಮಾಡಿದವು. ಅಲ್ಲದೆ ಜೋಗಿಮಟ್ಟಿಯ ಗುಡ್ಡದಲ್ಲಿ ಹುಲಿಗಳ ಕಾಟವೂ ಹೆಚ್ಚು. ದುರ್ಗದ ಗುಡ್ಡಗಳೆಲ್ಲಾ ಬರೀ ಕಲ್ಲು ಗುಡ್ಡಗಳು. ಜೋಗಿಮಟ್ಟಿಯೊಂದೇ ಕೊಂಚ ಮರ, ಗಿಡ ಬೆಳೆದು ಹಸಿರಾಗಿರುವುದು. ಆದ್ದರಿಂದ ಶಿವಮೊಗ್ಗಾದ ಕಾಡಿನ ಕಡೆಯಿಂದ ಬಂದ ಹುಲಿಗಳಿಗೆ ಜೋಗಿಮಟ್ಟಿಯೇ ನಿಲುದಾಣ. ಅಲ್ಲಿ ನೀರು ನೆರಳಿನ ಆಸರೆ ಅನುಕೂಲವಾಗಿದೆ. ಆಗಾಗ ಮೇಯಲು ಹೋದ ಹಸುಗಳ ಆಹಾರವೂ ದೊರೆಯುತ್ತದೆ – ಹುಲಿಗಳಿಗೆ, ಎಷ್ಟೋ ಸಲ, ಕಟ್ಟಿಗೆ ಹಲ್ಲು ತರಲು ಹೋದವರು ಹಗಲು ಹೊತ್ತೇ ಅಲ್ಲಿ ಹುಲಿಯನ್ನು ಕಂಡು ಗಾಬರಿಯಾಗಿ ಬಂದಿದ್ದಾರೆ. ಜೋಗಿಮಟ್ಟಿಯ



ಮೇಲಿರುವ ಸರಕಾರದ ಟ್ರಾವಲರ್ಸ್ ಬಂಗಲೆಯ ಸುತ್ತ, ರಾತ್ರಿ ಹೊತ್ತು ಹುಲಿಗಳು ಪಹರೆ ತಿರುಗುತ್ತವೆ ಎಂದು ಕೇಳಿ, ಹಗಲೇ ಒಂಟಿಯಾಗಿ ಜೋಗಿಮಟ್ಟಿಗೆ ಹೋಗಲು ಹೆದರುತ್ತಿದ್ದ ನಾನು, ರಾತ್ರಿ ಆ ದಾರಿಯಲ್ಲಿ ಹೋಗುವುದೇ ? ಏನಾದರಾಗಲಿ, ಎಂದು ಉಕ್ಕುವ ಉತ್ಸಾಹದ ಕುದುರೆಗೆ, ಭಯದ ಕಡಿವಾಣ ಎಳೆದು ನಿಲ್ಲಿಸಿದೆ.

ಒಂದು ಜಾತಿ ಜಟಕಾ ಕುದುರೆ ಇರುತ್ತದೆ. ನೀವು ನೋಡಿ ಅದರ ಸುಖ ಅನುಭವಿಸಿರಬಹುದು. ಅದು ತಂಟೆತಕರಾರು ಮಾಡದೆ ನಡೆಯಲು ಆರಂಭಿಸಿತೋ, ಇಂದ್ರನ ಉಚ್ಚೈಶ್ರವಸ್ಸೂ ಅದಕ್ಕೆ ಹೋಲಿಕೆಯಲ್ಲ. ಹಾಗಲ್ಲದೆ, ಏನಾದರೂ ಕಾರಣಕ್ಕಾಗಿ ನಿಂತುಬಿಟ್ಟಿತೋ ಶಿಲಾವಿಗ್ರಹ; ಚಲಿಸಬೇಕೆಂದರೆ, ಹುಟ್ಟಿಸಿದ ಭಗವಂತನೇ ಬರಬೇಕು! ನನ್ನ ಕುರುಮರಡಿಯ ಆ ಪ್ರಯಾಣ ಸ್ವಲ್ಪ ಹಾಗೇ ಆಯಿತು. ಅಂದಿನ ಉತ್ಸಾಹದಲ್ಲಿ, ಆ ರಾತ್ರಿಯೇ ಕುರುಮರಡಿಗೆ ಹೋಗಿದ್ದರೆ, ಹೋಗೇಬಿಡುತ್ತಿದ್ದೆನೋ ಏನೋ. ಹಗಲಾಗಲಿ ಎಂದು ಕಾದದ್ದೇ ತಪ್ಪಾಯಿತು.

ಮರುಬೆಳಿಗ್ಗೆ ಎದ್ದಕೂಡಲೇ ಕುರುಮರಡಿಗೆ ಹೋಗಬೇಕೆನ್ನುವುದಕ್ಕಿಂತ ಹೆಚ್ಚಾಗಿ, ಒಂದೇ ಒಂದು ದಿನದಲ್ಲಿ ನಾನು ಸಂಗ್ರಹಿಸಿದ ವಿಷಯವನ್ನು ರಾಘವೇಂದ್ರರಾಯರಿಗೆ ತಿಳಿಸಿ, 'ಭಲೆ' ಅನ್ನಿಸಿಕೊಳ್ಳಬೇಕೆಂಬ ಚಪಲವಾಗಿ ಮನಸ್ಸು ಅತ್ತಕಡೆ ಎಳೆಯಿತು. ಮನಸ್ಸಿಗೆ ಯಾವುದಾದರೂ ಕೆಲಸ ಬೇಡವಾದಾಗ, ಅದು ತೋರಿಕೆಗೆ ಸಹಜವೆಂದೇ ಕಾಣುವ ನೆಪಕ್ಕೆ ಜೋತುಬಿದ್ದು, ಆ ಕೆಲಸ ಮಾಡುವುದನ್ನು ತಪ್ಪಿಸಿಕೊಳ್ಳುತ್ತದೆ ಎಂದು ಮನೋವೈಜ್ಞಾನಿಕರ ಮತ. ಬಹುಶಃ ನನ್ನ ಮನಸ್ಸೂ ಅದೇ ಜಾತಿಗೆ ಸೇರಿದುದೋ ಏನೋ. ಗುರುತರಿಯದ ಗುಡ್ಡ–ಕಾಡು ದಾರಿ; ಐದಾರು ಮೈಲಿ ನಡೆಯಬೇಕು; ಅದೂ ಒಂಟಿಯಾಗಿ. ಈ ಅಳುಕು ನನ್ನ ಮನಸ್ಸಿನಲ್ಲಿ ಇಲ್ಲದೆ ಇರಲಿಲ್ಲ. ಇದೇ ಕಾರಣವೋ, ನಾನು ಅನಿವಾರ್ಯವೆಂದುಕೊಂಡ ಮನೆಗೆಲಸವೇ ಕಾರಣವೋ, ರಾಯರನ್ನು ನೋಡಿ ಅವರಿಂದ ಹೊಗಳಿಸಿಕೊಳ್ಳುವ ಚಪಲ ತೀರಿದಮೇಲೂ ಮೂರು ದಿನ ಕುರುಮರಡಿಗೆ ಹೋಗುವುದಾಗಲಿಲ್ಲ; ಮತ್ತೆ ರಾಯರನ್ನೂ ನೋಡಲಿಲ್ಲ.

ಕಡೆಗೆ ಒಂದು ದಿನ ರಾಯರೇ ಹುಡುಕಿಕೊಂಡು ಬಂದು–

"ಕುರುಮರಡಿಗೆ ಹೋಗಿ ಬಂದೆಯಾ ?" ಎಂದು ಕೇಳಿದರು.

"ಮನೆಯಲ್ಲೇನೋ ತಾಪತ್ರಯ, ಹೋಗುವುದಾಗಲಿಲ್ಲ" ಎಂದೆ.

"ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ – ಎಂದು ಗಾದೆ ಮಾಡಿದ್ದು ನಿಮ್ಮಂತಹವರನ್ನು ನೋಡಿಯೇ. ಒಂದು ದಿನ ಊಟ ಬಿಟ್ಟು ಅಲೆದು, ಮತ್ತೆ

ತಣ್ಣಗೆ ಮಲಗಿಬಿಟ್ಟೆ. ಹೀಗೆ ಮಾಡಿದರೆ ಹೇಗೆ? ಶುದ್ಧ ಬೇಜವಾಬ್ದಾರಿ."

ಅವರ ಕಟುವಾದ ಮಾತು ಮುಳ್ಳಿನಂತೆ ಮುರಿಯಿತು.

"ಎರಡು ದಿನ ತಡವಾದರೆ ಪ್ರಪಂಚ ಮುಳುಗುತ್ತದೆಯೇ ? ನೂರಾರು ವರ್ಷ ಸುಮ್ಮನಿದ್ದ ವಿಚಾರದಲ್ಲಿ ಒಂದು ದಿನ ತಡವಾದರೇನಾಯಿತು?"–ನಾನು ಕೊಂಚ ಒರಟಾಗೇ ಉತ್ತರ ಕೊಟ್ಟೆ.

"ಅದನ್ನೇ ನಾನು ಬೇಜವಾಬುದಾರಿ ಅನ್ನೋದು. ನೂರು ವರ್ಷ ಬೇಡವಾದ್ದರಿಂದ ಎಲ್ಲಾ ಕಳೆದುಹೋಗಿತ್ತು. ಒಂದು ದಿನ ಶ್ರಮಪಟ್ಟಿದ್ದಕ್ಕೆ ವೆಂಕಟಸುಬ್ಬಯ್ಯನೋರ ವಿಚಾರ ಅಷ್ಟು ತಿಳಿಯಿತು. ಮುಂದೂ ಅಷ್ಟು ಗೊತ್ತಾಗಬಹುದು ಎನ್ನುವುದಕ್ಕೆ ಎಳೆ ಸಿಕ್ಕಿದೆ. ಈಗ ಮಲಗಿದರೆ ಹೇಗೆ."

"ಏನಾಗುತ್ತದೆ, ಎಲ್ಲಾದರೂ ಓಡಿಹೋಗುತ್ತದೆಯೆ?"

"ಹಾಗಲ್ಲ, ಒಂದು ವೇಳೆ ಆ ಚೆನ್ನಪ್ಪನಿಗೆ ಹೆಚ್ಚು ವಿಷಯ ತಿಳಿದಿದೆ ಎಂದುಕೋ. ನೀನು ಹೋಗುವುದು ತಡವಾಯಿತು. ಮನುಷ್ಯಜೀವ ಆಷಾಢದ ಮೋಡವಿದ್ದಂತೆ! ಗಾಳಿ ಬೀಸಿದರೆ ಬಯಲು. ನೀನು ನಿಧಾನವಾಗಿ ಹೋಗುವ ವೇಳೆಗೆ ಅತನಿಗೇನಾದರೂ ಆಗಿತ್ತು. ಆಗ ? ತಲೆಯ ಮೇಲೆ ಕಲ್ಲು ಎಳೆದುಕೊಂಡ ಹಾಗೆಯೇ. ಏನು ಕೊಟ್ಟರೆ ಬರುತ್ತದೆ? ಎಷ್ಟು ನಷ್ಟ – ನಿನಗೆ ಒಬ್ಬನಿಗೇ ಅಲ್ಲ, ದೇಶಕ್ಕೆ. ಅದಕ್ಕೇ ಇಂಥ ಕೆಲಸದಲ್ಲಿ ತಡ ಮಾಡಬಾರದು."

ಅವರ ಮಾತು ಕಟುವಾಗಿದ್ದರೂ ನಿಜವಾಗಿತ್ತು. ಯಾರೂ ಅಲ್ಲವೆನ್ನು ವಂತಿರಲಿಲ್ಲ. ಆದ್ದರಿಂದ ಇದಿರಾಡದೆ ಸುಮ್ಮನಾದೆ.

"ಇದೆಲ್ಲಾ ನಾನು ಹೇಳಬೇಕಾದದ್ದೇ ಇಲ್ಲ. ಯೋಚಿಸಿದರೆ ನಿನಗೇ ತಿಳಿಯುತ್ತದೆ. ಆದರೆ ಯೋಚನೆ ಮಾಡುವುದನ್ನು ನಿಮಗೆ ಯಾರು ಹೇಳಿ ಕೊಡುವುದು ಸಾಧ್ಯ? ನೀನೇ ತಿಳಿದುಕೊಂಡು ಮಾಡಬೇಕು. ನಿನಗಾಗದಿದ್ದರೆ ಹೇಳು. ನಾನೇ ಹೋಗಿ ಬರುತ್ತೇನೆ."

ಅವರು ಮಾತು ಕೇಳಿ ನನಗೆ ಮುಖಕ್ಕೆ ರಾಚಿದಂತಾಯಿತು.

"ಬೇಡ, ನಾನೇ ಹೋಗಿಬರುತ್ತೇನೆ, ನಾಳೆಯೇ ಹೋಗುತ್ತೇನೆ" ಎಂದೆ.

ಮಲಗುವ ಮುನ್ನ ಮರುದಿನ ಕುರುಮರಡಿಗೆ ಹೋಗುವ ಶಪಥ ಮಾಡಿ ಮಲಗಿದೆ. ಮರುಬೆಳಿಗ್ಗೆ ಎದ್ದವನೇ ಹೊಟ್ಟೆಗೆ ಬಲವಾಗಿ ತಿಂಡಿ–ಕಾಫಿ ಗಿಡಿದು ತಂಪುಹೊತ್ತಿನಲ್ಲೇ ಕುರುಮರಡಿಯತ್ತ ಹೊರಟೆ. ದಾರಿ ನಡೆಯಲಾರಂಭಿಸಿದ ಕೂಡಲೆ, ಕೇವಲ ಐದು–ಆರು ಮೈಲಿ ಎಂದುಕೊಂಡ ದೂರ ಹೆಜ್ಜೆ ಹೆಜ್ಜೆಗೂ ಭಾರವಾಗಲಾರಂಭಿಸಿತು. ದಾರಿಯಲ್ಲಿ ಸಿಕ್ಕ ರೈತರಿಂದ, ಕುರುಮರಡಿಯ ದಾರಿ



ಯಾವುದು ಎಂದು ವಿಚಾರಿಸಿಕೊಳ್ಳುತ್ತಾ, ಹೊಲಗಳ ಬದಿಯ ಕಾಲು ದಾರಿಯಲ್ಲಿ ತಪ್ಪಿ ಅಲೆದು, ಮಧ್ಯಾಹ್ನದ ವೇಳೆಗೆ ಹಳ್ಳಿಯನ್ನು ಸೇರಿ ಉಶ್ ಎಂದು ನಿಟ್ಟು ಸಿರುಬಿಟ್ಟೆ.

ಕುರುಮರಡಿ ಊರನ್ನು ನೋಡಿದ ಕೂಡಲೇ ನಡೆದ ಆಯಾಸವೆಲ್ಲಾ ಮಾಯವಾಯಿತು. ಎಷ್ಟು ಸುಂದರವಾದ ಹಳ್ಳಿ! ಜೋಗಿಮಟ್ಟಿಯ ಬೆನ್ನಿನ ಇಳಿಜಾರಿನ ಬದಿಯಲ್ಲೇ ಕಟ್ಟಿದ ಹಳ್ಳಿ. ಗುಡ್ಡದಿಂದ ಇಳಿದು ಬಂದ ಝರಿಯೊಂದು, ಹಳ್ಳಿಯ ಬದಿಯಲ್ಲೇ ಪುಟ್ಟ ಜಲಪಾತವಾಗಿ, ಜಲರೂಪತಾಳಿದ ಅಪ್ಸರೆಯಂತೆ ಗಲಗಲ ಸದ್ದುಮಾಡುತ್ತಾ ಹರಿಯುತ್ತದೆ. ದೂರದಿಂದ ಹಳ್ಳಿಯಿರುವುದೇ ಕಾಣದಂತೆ ಸುತ್ತಲೂ ತೇಗ, ಮತ್ತಿ, ಗೋಣಿ, ಆಲ, ಹೊನ್ನೆ ಮೊದಲಾದ ದೊಡ್ಡ ಮರಗಳ ಗುಂಪು. ಬಯಲುಸೀಮೆಯ ನಡುವೆ, ಮಲೆನಾಡಿನ ತುಂಡೊಂದನ್ನು ತಂದಿಟ್ಟಂತಿದೆ ಹಳ್ಳಿ. ಆ ಮಟ್ಟಿಯ ಓರೆ, ಜಲಪಾತ, ಹರಿವ ನೀರು, ಸುತ್ತಲು ಕಾಡು– ಚಿತ್ರದುರ್ಗಕ್ಕೆ ಅಷ್ಟು ಸಮೀಪವಾಗಿ, ಅಂಥ ಸುಂದರವಾದ ಚೆಲುದಾಣವಿರಬಹುದೆಂಬ ಕಲ್ಪನೆಯೇ ನನಗಿರಲಿಲ್ಲ. ಹರಿವ ತೊರೆಯ ಬದಿಯ ಹೊಂಗೆಯ ಗಿಡದಡಿಯ ನೆರಳಲ್ಲಿ, ನೀರಿನಲ್ಲಿ ಕಾಲಾಡಿಸುತ್ತಾ ಕುಳಿತ ಕೂಡಲೇ, ನಡೆದ ಆಯಾಸವೆಲ್ಲಾ ಎತ್ತಲೋ ಕರಗಿಹೋಗಿ, ಮೈಯಲ್ಲಿ ಹೊಸತನ ಮೂಡಿತು. ಹಾಗೇ ಕಾದ ಮೈ ತಂಪಾದ ಕೂಡಲೇ, ದಣಿವಿನಲ್ಲಿ ಮರೆವಾದ ಹಸಿವು ಇಣುಕಿಹಾಕಿ ನಾನೂ ಇಲ್ಲಿದ್ದೇನೆ ಎಂದಿತು. 'ಹಳ್ಳಿಯಲ್ಲಿ ಎಲ್ಲಾದರೂ ಬ್ರಾಹ್ಮಣರ ಮನೆಯಿರ ಬಹುದು, ನೋಡೋಣ. ಮೊದಲು ಬಂದ ಕೆಲಸವಾಗಲಿ' ಎಂದು ಕೊಂಡು ನೆರಳಿನಿಂದೆದ್ದು ಹಳ್ಳಿಯೊಳಗೆ ಹೊರಟೆ.

ಹಳ್ಳಿ, ಹೊರನೋಡಲು ಎಷ್ಟು ಸುಂದರವಾಗಿತ್ತೋ, ಒಳಗೆ ಅಷ್ಟೇ ಹೊಲಸು. ಆ ರಸ್ತೆಯೋ, ಮನೆಗಳೋ – ವಿಕಾರದಲ್ಲಿ ಒಂದನ್ನೊಂದು ಸ್ಪರ್ಧಿಸುವಂತಿದ್ದವು; ರಸ್ತೆಯಲ್ಲಿ ನಡೆಯುವಾಗ ಇದಿರಾದ ಹಳ್ಳಿಯವನೊಬ್ಬನನ್ನು –

"ಚೆನ್ನಪ್ಪನ ಮನೆ ಎಲ್ಲಿದೆ ಗೊತ್ತೆ ?" ಎಂದು ವಿಚಾರಿಸಿದೆ.

"ಯಾವ ಚೆನ್ನಪ್ಪ ?"

"ಬಯಲುನಾಟಕ ಆಡಿಸುತ್ತಾನಂತಲ್ಲ ಆತ."

"ಅಕ್ಕಸಾಲಿ ಚೆನ್ನಪ್ಪನೇ, ಹಿಂಗೇ ಮ್ಯಾಕ ಹ್ವಾಗೀ ಬಸವಣ್ಣನ ಗುಡಿ ತಾವ ಇಚಾರಿಸ್ರಿ, ಏಳ್ತಾರೆ" ಎಂದವನೇ ಆತ, ಇಷ್ಟು ಮಾತಾಡಿದ್ದೆ ಹೆಚ್ಚಾಯಿತೆಂಬಂತೆ ಹೊರಟುಹೋದ, ಆತ ಹೇಳಿದ ದಾರಿಯನ್ನು ಹಿಡಿದು ನಡೆದೆ. ಬಸವಣ್ಣನ ಗುಡಿಯ ಬಳಿಯಲ್ಲಿ ವಿಚಾರಿಸಲಾಗಿ, ಮೊದಲು ಯಾರೂ ಏನೂ ಹೇಳಲಿಲ್ಲ.

ಅಲ್ಲೇ ಕೂತ, ಮೂರುನಾಲ್ಕು ಜನರನ್ನು ವಿಚಾರಿಸಿದಮೇಲೆ, ಚಿನ್ನಪ್ಪ ಹಳ್ಳಿಯಲ್ಲಿಲ್ಲವೆಂದೂ, ಯಾವುದೋ ಹಳ್ಳಿಗೆ ಆಟ ಕಟ್ಟಿಸಲು ಹೋಗಿರಬೇಕೆಂದೂ, ಆ ದಿನ ಸಂಜೆ ಬಂದರೆ ಬರಬಹುದು; ಇನ್ನಾರು ದಿನದ ಮೇಲೆ ಬಂದರೂ ಬರಬಹುದು. ಅವನಿಗೇನು ಮನೇನಾ, ಮಠನಾ ? ಎಂದು ಬೇಕಾದದ್ದು, ಬೇಡವಾದದ್ದು ಎಲ್ಲಾ ತಿಳಿಯಿತು.

ಆ ಉತ್ತರ ಕೇಳಿ ನನಗೆ ಏನು ಮಡಾಬೇಕೆಂದು ತಿಳಿಯಲಿಲ್ಲ. ನಾನು ಏನೋ ಒಂದೆರಡು ಗಂಟೆಗಳಲ್ಲಿ ಮುಗಿಯಬಹುದಾದ ಕೆಲಸ, ಬೇಗ ಹಿಂದಿರುಗುವುದು ಎಂದು, ಅಲ್ಲಿರಲು ಯಾವ ಸಿದ್ಧತೆಯನ್ನೂ ಮಾಡಿಕೊಳ್ಳದೇ ಬಂದಿದ್ದೆ. ಈಗ ನೋಡಿದರೆ, ಕೆಲವು ಗಂಟೆಗಳ ಕಾಲವಲ್ಲ, ಅದೃಷ್ಟ ಕೆಟ್ಟಿದ್ದಾದರೆ ಕೆಲವು ದಿನವೇ ಅಲ್ಲಿ ಚಿನ್ನಪ್ಪನಿಗಾಗಿ ಕಾಯಬೇಕೇನೋ ? ಎಂಬ ಪರಿಸ್ಥಿತಿ. ಅಲ್ಲೇ ಇರುವುದೇ, ಬಿಡುವುದೇ ? ಒಂದು ವೇಳೆ ಚಿನ್ನಪ್ಪ ಸಂಜೆಗೆ ಬಂದರೂ, ಆತನೊಂದಿಗೆ ಮಾತನಾಡಿ, ಹಿಂದಿರುಗುವ ದಾರಿಯೇನು ? ಕತ್ತಲಲ್ಲಿ ಹಿಂದಿರುಗುವುದು ಸಾಧ್ಯವಿಲ್ಲ. ಇಲ್ಲೇ ಇರುವುದು ಎಲ್ಲಿ ? 'ಇರುವ ವಿಚಾರ ಆಚೆಯಾಯಿತು. ಈಗ ನನಗೇನು ಹೇಳುತ್ತೀ?' ಎಂದು ಘಟ್ಟಿಸಿ ಕೇಳಿತು, ಹೊಟ್ಟೆ, ಅದರ ಪ್ರಶ್ನೆಗೆ ಉತ್ತರ ಕೊಡಲೆಂದು ಹಳ್ಳಿಯಲ್ಲಿ ಯಾವುದಾದರೂ ಬ್ರಾಹ್ಮಣರ ಮನೆಯಿದೆಯೇ ಎಂದು ವಿಚಾರಿಸಿದೆ. ಯಾರೋ ಪುಣ್ಯಾತ್ಮನೊಬ್ಬ, ಹಳ್ಳಿಯಲ್ಲಿ ಒಂದೇ ಒಂದು ಬ್ರಾಹ್ಮಣರ ಮನೆಯ ಬಾಗಿಲು ತೋರಿಸಿದ. ಅಲ್ಲಿ ಅನುಕೂಲವಾದರೆ ಆ ರಾತ್ರಿಯನ್ನು ಅಲ್ಲೇ ಕಳೆದು, ಸಂಜೆ ಚಿನ್ನಪ್ಪನನ್ನು ನೋಡಿ ಮರುದಿನ ಊರಿಗೆ ಹಿಂದಿರುಗುವುದು ಎಂದುಕೊಂಡೆ.

ಆದರೆ ಬಾಗಿಲು ತಟ್ಟಿದಮೇಲೆ ನನ್ನ ಊಹೆ ನಿಜವಾಗದು ಎನಿಸಿತು. ನಾನು ಅವರ ಮನೆಯ ಬಾಗಿಲು ತಟ್ಟಿದಸದ್ದು ಹಳ್ಳಿಗೆಲ್ಲಾ ಕೇಳಿಸಿರಬೇಕು. ಆದರೂ ಹತ್ತು ನಿಮಿಷ ಒಂದೇ ಸಮನೆ ಬಾಗಿಲು ಪಟ್ಟಿದರೂ, ಒಳಗಿದ್ದವರಾರೂ, ಇರುವ ಕುರುಹು ಕೂಡ ತೋರಿಸಿಕೊಳ್ಳಲಿಲ್ಲ. ಯಾರೂ ಬಾಗಿಲು ತೆಗೆಯಲಿಲ್ಲ. ನಾನೂ, ಹಾಳಾಗಲಿ ಎಂದು ಶಪಿಸಿ ಹಿಂದಕ್ಕೆ ಹೋಗದೆ, ಹಸಿವಿಗೆ ಸೋತು ಹಟ ಹಿಡಿದು ಬಾಗಿಲು ತಟ್ಟುತ್ತಾ 'ಸ್ವಾಮೀ ಸ್ವಾಮೀ' ಎಂದು ಕೂಗುತ್ತಾ ನಿಂತೇ ಇದ್ದೆ. ಎಷ್ಟೋ ಹೊತ್ತಿನ ಮೇಲೆ, ಒಳಗೆ ಯಾರೋ ಗಂಡಸು ಮಾತಾಡಿದ ಧ್ವನಿ ಕೇಳಿಸಿತು.

"ಯಾವನೋ ಒಂದು ಗಂಟೆಯಿಂದ ಬಡುಕೋತಿದಾನೆ, ನೋಡು" ಆ ಧ್ವನಿಯಲ್ಲಿ ಕರೆಯುವವರು ಯಾರೆಂದು ತಿಳಿದುಕೊಳ್ಳಬೇಕೆನ್ನುವ ಆಸಕ್ತಿಗಿಂತ, ತಾವು ಇಷ್ಟು ಹೊತ್ತು ಉತ್ತರ ಕೊಡದಿದ್ದರೂ ಈ ಪೀಡೆ ತೊಲಗಲಿಲ್ಲವಲ್ಲಾ ಎಂಬ ತಾತ್ಸಾರವೇ ಹೆಚ್ಚಾಗಿತ್ತು.

"ಇಷ್ಟೊತ್ತಿನಲ್ಲಿ ಇನ್ಯಾರು ಬರ್ತಾರೆ. ಯಾವನೋ ಕೂಳಿಗೆ ವಕ್ಕರಿಸಿರ್ಲೆಬೇಕು. ಹಳ್ಳೀಲಿ ಬ್ರಾಹ್ಮಣರ ಮನೇಂತ ಇದ್ದರೆ ಸಾಕು, ಬಂದೋರೆಲ್ಲಾ ಕಾಗೆ ಬಳಗ ಹೇಳಿಕೊಂಡು, ಅನ್ನಕ್ಕೆ ಮೂಲವಾಗುತ್ತಾರೆ" – ಎಂದಿತು ಹೆಣ್ಣುಧ್ವನಿ. ಒಂದು ವೇಳೆ ಅವರು ಅನ್ನವಿಟ್ಟು, ಆ ಅನ್ನವನ್ನು ತಿನ್ನುತ್ತಿದ್ದರೆ, ಅದನ್ನು ಹಾಗೇ ಬಿಟ್ಟು ಹೊರಬರಬೇಕು – ಅಂಥ ಧ್ವನಿಯಲ್ಲಿ.

"ಹಾಗೇ ಇದ್ದರೆ ಹಾಳಾದೋನು ತಟ್ಟಿ ತಟ್ಟಿ ಬಾಗಿಲು ಮುರಿದು ಹಾಕ್ತಾನೆ. ಬಾಗಿಲು ತೆಗೆದು ಮನೇಲಿ ಗಂಡಸರು ಯಾರೂ ಇಲ್ಲಾಂತ ಅಟ್ಟಿ ಬಿಡು"– ಎಂದಿತು ಗಂಡಸಿನ ಧ್ವನಿ.

ಆ ಮನೆಯ ಬಾಗಿಲಿಗೆ ಅನ್ನವನ್ನರಸಿಬಂದುದಕ್ಕೆ ನನ್ನ ಮೇಲೆ ನನಗೇ ಬೇಸರವಾಗಿ ಸಿಟ್ಟು ಬಂದಿತು. ಆದರೂ ಹಸಿವಿನ ಆತುರ 'ಬಾಗಿಲು ತೆರೆದ ಮೇಲೆ ಮನಸ್ಸು ಬದಲಿಸಿಯಾರೋ ಏನೋ, ಕಾದು ನೋಡು' ಎಂದಿತು. ಮತ್ತೆ ಬಾಗಿಲು ತಟ್ಟಿದೆ.

ಆದರೆ ಬಾಗಿಲು ತೆರೆದ ಗೃಹಿಣಿ, ನನ್ನ ಮುಖ ನೋಡಿ, ಒಳಗೆ ಗಂಡ ಹೇಳಿದ ಮಾತನ್ನು, ಬಿರುಗಾಳಿಯ ವೇಗದಿಂದ ಹೇಳಿ ಮುಖಕ್ಕೆ ಹೊಡೆಯುವಂತೆ ಬಾಗಿಲು ಹಾಕಿದಳು. ಮತ್ತೆ ಎರಡು ನಿಮಿಷ ತಟ್ಟಿದರೂ ಸದ್ದೇ ಬರಲಿಲ್ಲ. ನನ್ನ ಅದೃಷ್ಟವನ್ನು ಶಪಿಸಿ ಹಿಂದಿರುಗಿದೆ. ಹೊಟ್ಟೆಯ ಆತುರ ಹೊತ್ತಾದಂತೆ ಹೆಚ್ಚಾಗುತ್ತಿತ್ತು. ಅದನ್ನು ತಣಿಸಲು ಬೇರಾವ ದಾರಿಯೂ ಕಾಣದೆ ಬಸವಣ್ಣನ ಗುಡಿಯ ಹತ್ತಿರದಲ್ಲಿದ್ದ ಲಿಂಗಾಯಿತರ ಅಂಗಡಿಯಲ್ಲಿ ಸಿಕ್ಕ ಅಷ್ಟು ಮಂಡಕ್ಕಿ, ಕಾರದ ಮೆಣಸಿನಕಾಯಿ, ಕೊಬ್ಬರಿಚಿನ್ನಿಯನ್ನು ತಿಂದು, ಅಂಗಡಿಯಾಕೆ ದಯವಿಟ್ಟು ಕೊಟ್ಟ ನೀರು ಕುಡಿದು, ಬೇರೆಲ್ಲೂ ಇರಲು ತಾವು ಕಾಣದೆ, ಹಳ್ಳಿಯ ಹತ್ತಿರವಿದ್ದ ತೊರೆಯ ಬದಿಯ ಹೊಂಗೆಮರದ ನೆರಳಿಗೆ ಹೋಗಿ ಸೋತ ಮೈ ಚಾಚಿದೆ. ಮನಸ್ಸಿಗೆ, ಜನ ತುಂಬಿದ ಆ ಊರಿಗಿಂತ ಜಲಪಾತದ ಮಂಜುಳನಿನಾದದೊಂದಿಗೆ ತಂಗಾಳಿ ಸುಳಿವ ಕಾಡು ಹಾಯಿ ಎನಿಸಿತು.

ಆ ಗಳಿಗೆಯಲ್ಲಿ ನನಗೇನೋ 'ಈ ಊರಿನ ಸಹವಾಸ ಸಾಕು, ವಿಷಯ ತಿಳಿಯದಿದ್ದರೆ ಪೀಡೆ ಕಳೆಯಿತು; ಮೈಯದಣಿವು ಕೊಂಚ ಅರಿದ ಕೂಡಲೆ ದುರ್ಗದತ್ತ ನಡೆದುಬಿಡೋಣ' ಎನಿಸಿತು. ಹಾಗೆಂದುಕೊಂಡೇ ಕಣ್ಣು ಮುಚ್ಚಿಕೊಂಡೆ. ಅಷ್ಟೇ ನೆನಪು–ಮತ್ತೆ ಏನೋ 'ಗದ್ದಲವಾಗಿ, ಎಚ್ಚರವಾಯಿತು. ಏನೆಂದು ನೋಡಿದೆ.

ಸೂರ್ಯ ಆಗಲೇ ಗುಡ್ಡದ ತುದಿಯಿಂದ ಪಶ್ಚಿಮಕ್ಕೆ ಇಳಿಯುತ್ತಿದ್ದ. ತೋಪಿನಲ್ಲಿ ನೂರಾರು ನವಿಲುಗಳು ಕೇಕೆಹಾಕಿ ಕುಣಿಯುತ್ತಿದ್ದವು. ಹಾಗೇ ನೋಡುತ್ತಿರುವಾಗ ಗುಡ್ಡದ ಓರೆಯಲ್ಲಿ ಜಿಂಕೆಗಳ ಮಂದೆಯೊಂದು ವೇಗವಾಗಿ ಓಡಿ ಕಣ್ಮರೆಯಾಯಿತು. ಆ ನವಿಲು, ಜಿಂಕೆ, ಅಸ್ತೋನ್ಮುಖ ಸೂರ್ಯನ ರಕ್ತಸುವರ್ಣಕಾಂತಿ, ಮೃದಂಗ ನಾದದಂತೆ ಮಿಡಿವ ಜಲಪಾತದ ಗಂಭೀರ ಘೋಷ, ಹಸಿರು ತೋಪು, ಕಲ್ಲಿನ ಮೇಲೆ ಬಿಳಿನೊರೆಯ ಮುತ್ತು ತೂರುತ್ತಾ ಧುಮುಕುವ ಝುರಿ–ಎಲ್ಲೋ ಮಲಗಿದ್ದವನು ಕನಸಿನ ಸ್ವರ್ಗದಲ್ಲಿ ಕಣ್ತೆರೆದೆನೇನೋ ಎನಿಸಿತು. ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಾ ಕುಳಿತುಬಿಟ್ಟೆ. ಎಷ್ಟೋ ಹೊತ್ತಿನ ಮೇಲೆ, ತೊರೆಯ ತಣ್ಣೀರಿನಲ್ಲಿ ಮುಖ ತೊಳೆದುಕೊಂಡಾಗ, ನಾನು ದಿಕ್ಕಿಲ್ಲದ ಪರವೂರಿನಲ್ಲಿರುವುದು ಅರಿವಾಯಿತು. ನೋಡುನೋಡುತ್ತಿದ್ದಂತೆ ಸೂರ್ಯ ಗುಡ್ಡದ ಬದಿಗೆ ಜಾರಿ, ಮಬ್ಬುಗತ್ತಲಾಗಿ, ಊರಿಗೆ ಹಿಂದಿರುಗುವ ಆಸೆ ದೂರವಾಗಿ, ಕತ್ತಲಂತೆ ಎದೆಯಲ್ಲಿ ಭಯವೂ ಕವಿಯಿತು. ದೇವರಿಟ್ಟಂತಾಗಲಿ ಎಂದು ಮತ್ತೆ ಹಳ್ಳಿಯೊಳಗೆ ಪ್ರವೇಶಮಾಡಿ, ಬಸವಣ್ಣನ ಗುಡಿಯ ಬಳಿ ತೆರಳಿದೆ.

ದೀಪವನ್ನು ಆಸೆಗೆ ಹೋಲಿಸುವುದೊಂದು ಕಾವ್ಯಸಂಪ್ರದಾಯ, ಬಹು ಸಂದರ್ಭದಲ್ಲಿ ಅಸಹಜವಾಗಿ ತೋರುವ ಆ ಹೋಲಿಕೆ, ಆ ದಿನ ನನಗೆ ನಿಜವೆಂದು ತೋರಿತು – ತೋಪಿನಿಂದ ನಾನು ಊರೊಳಗಿನ ಬಸವಣ್ಣನ ಗುಡಿಯ ಬಳಿ ಹೋದಾಗ, ಅದುವರೆಗೂ ಮುಚ್ಚಿದ್ದ ಚಿನ್ನಪ್ಪನ ಮನೆಯ ಬಾಗಿಲು ತೆರೆದು, ತೆರೆದ ಬಾಗಿಲಿನ ಒಳಗಿನಿಂದ, ಸಣ್ಣಗೆ ಮಿನುಗುವ ಸೀಮೆಯೆಣ್ಣೆ ದೀಪದ ಬೆಳಕು ಕಾಣಿಸಿದಾಗ, ದೀಪವನ್ನು ನೋಡಿ, ಎದೆಯಲ್ಲಿ ಕವಿದಿದ್ದ ನಿರುತ್ಸಾಹದ ಜಡತೆ ಕೊಂಚ ಕಡಿಮೆಯಾಗಿ ಆಸೆ ಮೂಡಿತು.

ಬಾಗಿಲ ಬಳಿ ಹೋಗಿ ಇಣುಕುಹಾಕಿದೆ. ಒಳಗೆ ಈಚಲು ಚಾಪೆಯ ಮೇಲೆ ಯಾರೋ ಮಲಗಿದ್ದರು. ಬದಿಯ ಮೂಲೆಯಲ್ಲಿ ಒಂದು ಜೊತೆ ತಬಲಾ, ಹಾರ್ಮೋನಿಯಮ್ ಕಾಣಿಸಿತು. ನೆಲದ ತುಂಬಾ ಬೀಡಿ ಕಡ್ಡಿಯ ತುಂಡುಗಳು, ಬೀಡಿಯ ಬೂದಿ. ಎಷ್ಟೋ ದಿನ ವಾಸಮಾಡದೆ ಬಿಟ್ಟ ಮನೆಯಂತಿತ್ತು.

ಒಂದೆರಡು ಬಾರಿ ಬಾಗಿಲು ಸದ್ದುಮಾಡಿದೆ. ಮಲಗಿದ್ದ ವ್ಯಕ್ತಿ ಏಳಲಿಲ್ಲ. ಕೊನೆಗೆ 'ಚಿನ್ನಪ್ಪನವರೇ' ಎಂದು ಕೂಗಿದಾಗ, ಮಲಗಿದ್ದ ಮನುಷ್ಯ ಅಲುಗಾಡಿದ. ಎರಡನೆಯ ಬಾರಿ ಕೂಗಿದಾಗ ಮಗ್ಗುಲಿಗೆ ಹೊರಳಿ, ಬಾಗಿಲ ಕಡೆ ತಿರುಗಿ "ಯಾರದು?" ಎಂದು ಕೇಳಿದ, ಬಳಲಿ ಭಾರವಾದ ಒರಟುಧ್ವನಿಯಲ್ಲಿ.

"ಚಿನ್ನಪ್ಪನವರು ಮನೆಯಲ್ಲಿದ್ದಾರೆಯೇ ?"



"ನಾನೇ ಚಿನ್ನಪ್ಪ, ಏನಾಗಬೇಕು ?"

ಈತನೂ ಬೆಳಗಿನ ಬ್ರಾಹ್ಮಣರ ಮನೆಯವರಂತೆಯೇ ಹೊರಗಿನಿಂದಲೇ ಅಟ್ಟುವನೇನೋ ಎಂದು ಗಾಬರಿಯಾಯಿತು.

"ಒಳಗೆ ಬರಬಹುದೆ ?"

"ಬನ್ನಿ"

ಆ ಮಾತು ಕೇಳಿ ಕೊಂಚ ಧೈರ್ಯವಾಯಿತು. ಒಳಗೆ ಹೋದೆ.

"ಕೂತುಕೊಳ್ಳಿ, ಏನ್ಬೇಕಾಗಿತ್ತು ?"

ಬೀಡಿ, ಬೆಂಕಿಕಡ್ಡಿ, ಬೂದಿ, ಕಸಗಳು ಸಮಸಮವಾಗಿ ತುಂಬಿದ ನೆಲದ ಮೇಲೆ, ಕರವಸ್ತ್ರದಿಂದ ಧೂಳು ಹಾರಿಸಿ, ಹಾಗೇ ಹಿಂಜುಯುತ್ತಾ ಕುಳಿತು ಕೊಂಡೆ.

"ಚಾಪೆ ಮ್ಯಾಲೆ ಬನ್ನಿ. ನೆಲ ಬಾಳ ಹೊಲಸಾಗಿದೆ. ಯಾವೂರು ನಿಮ್ಮದು?"

ಆತ ಹೇಳಿದಂತೆ ಚಾಪೆಯ ಮೇಲೆ ಜರುಗಿದೆ. ಮಲಗಿದ್ದ ಚಿನ್ನಪ್ಪ ಎದ್ದು ಗೋಡೆಗೊರಗಿಕೊಂಡು ಕುಳಿತ.

"ನನ್ನದು ಚಿತ್ರದುರ್ಗ. ನಿಮ್ಮನ್ನು ನೋಡಲೆಂದೇ ಇಲ್ಲಿಗೆ ಬಂದೆ. ಇವತ್ತು ಬೆಳಿಗ್ಗೆ ನೀವು ಊರಲಿಲ್ಲರಲಿಲ್ಲ."

"ಹೌದು. ನಿನ್ನ ಸಂಜೆನಾಗ ಹೋದೋನು ಈಗ್ಲೇ ಬಂದಿದ್ದು. ಇಷ್ಟೊತ್ತು ಎಲ್ಲಿದ್ರಿ ?"

ಬೆಳಗಿನಿಂದ ಹಳ್ಳಿಯಲ್ಲಿ ನಾನು ಪಟ್ಟ ಬವಣೆಯನ್ನು ವಿವರಿಸಿದೆ. ಬ್ರಾಹ್ಮಣರ ಮನೆಯಲ್ಲಿ ನನಗಾದ ಪರಾಭವವನ್ನು ಹೇಳಿದಾಗ–

"ಜೋಯಿಸರ ಶೀನಪ್ಪನೋರೇ ಹಾಗೆ. ಎಂಜಲುಕೈಲಿ ಕಾಗೆ ಹೊಡಿಯೋಲ್ಲ. ಅವರೊಬ್ಬರನ್ನು ಅನ್ನೋದ್ಯಾಕೆ. ಈ ಊರೇ ಹಂಗೆ. ಸತ್ತರೂ ಕೇಳೋರು ದಿಕ್ಕಿರೋಕ್ಕಿಲ್ಲ. ಊರಿನೋರಿಗೇ ಇಲ್ಲ; ಇನ್ನು ನಿಮ್ಮಂಥ ಹೊರಗಿನೋರನ್ನು ಕೇಳೋರು ಯಾರು? ಸತ್ತರೆ ಹೂಳೋಕೂ ಬರೋದಿಲ್ಲ. ಎಲ್ಲ ಬಿಟ್ಟು ನೀವ್ಯಾಕೆ ಈ ಹಾಳು ಕೊಂಪೆಗೆ ಬಂದಿರಿ ?" – ಎಂದು ಚಿನ್ನಪ್ಪ ಗೊಣಗಿದ, ಕಹಿಯಾದ ಧ್ವನಿಯಲ್ಲಿ.

"ನಾನು ನಿಮ್ಮನ್ನು ಹುಡುಕಿಕೊಂಡು ಬಂದ ವಿಚಾರದ ಕಥೆ ದೊಡ್ಡದು. ನಿಧಾನವಾಗಿ ಹೇಳುತ್ತೇನೆ. ಹಗಲಂತೂ ಏಕಾದಶಿಯಾಯಿತು. ಈಗಲಾದರೂ ಊಟಕ್ಕೇನಾದರೂ ಮಾರ್ಗವಾದೀತೆ ?" – ಎಂದೆ.

"ಊಟದ ಯೋಚನೆ ಬಿಟ್ಟುಬಿಡಿ, ಎಲ್ಲಾದರೂ ಅಷ್ಟು ಹಾಲು ಸಿಕ್ತದೇನೋ ನೋಡಿಕೊಂಡು ಬರ್ತೀನಿ. ನಿಂಗಪ್ಪನ ಅಂಗಡೀಲಿ ಬಾಳೆ ಹಣ್ಣೊ ಏನಾರ ಇದ್ರೆ ತನ್ನಿ. ಇಬ್ರಿಗೂ ಅದೇ ಆಗ್ತದೆ"

–ಎಂದು ಚಿನ್ನಪ್ಪ ಎದ್ದು, ಬೇರೊಂದು ಮೂಲೆಯಲ್ಲಿದ್ದ ಅಲ್ಯುಮಿನಿಯಂ ಪಾತ್ರೆ ಹಿಡಿದು ಹೊರಟ. ಆತ ಬರುವ ವೇಳೆಗೆ, ನಾನು ಅಂಗಡಿಯಿಂದ ಅಷ್ಟು ಸೇಲಂ ಬಾಳೆಹಣ್ಣು ಮತ್ತು ಮಂಡಕ್ಕಿ ಕಾರಾಶೇವು ತಂದಿಟ್ಟೆ. ಚಿನ್ನಪ್ಪ ಹಾಲು ತಂದಮೇಲೆ, ಇಬ್ಬರೂ 'ಊಟ' ಮುಗಿಸಿದ ಬಳಿಕ, ಬೀಡಿ ಹಚ್ಚಿಕೊಂಡು ಚಿನ್ನಪ್ಪ, ನಾನು ಬಂದ ಕಾರಣ ಮತ್ತೆ ವಿಚಾರಿಸಿದ, ನಿಧಾನವಾಗಿ ನಡೆದುದೆಲ್ಲವನ್ನೂ ವಿವರಿಸಿ, ಗೋಪಾಲಾಚಾರ್ಯರಿಂದ ಆತನ ವಿಚಾರ ತಿಳಿದು, ಅಲ್ಲಿಗೆ ಬಂದುದನ್ನು ಹೇಳಿ–

"ನಿಮ್ಮ ಹಿರಿಯರು ಯಾರೋ ವೆಂಕಟಸುಬ್ಬಯ್ಯನವರಿಗೆ ತಬಲ ಬಾರಿಸುತ್ತಿದ್ದರಂತೆ, ಅವರ ವಿಷಯ ನಿಮಗೇನಾದರೂ ಗೊತ್ತೆ ?" ಎಂದು ಕೇಳಿದೆ.

"ಹೆಚ್ಚೇನು ಗೊತ್ತಿಲ್ಲ. ಏನೋ ಹಿರೇರು ಹೇಳಿದ್ದು ಅಷ್ಟೇ ಗೊತ್ತೈತೆ. ಹೆಚ್ಚು ಗೊತ್ತಿಲ್ಲದಿದ್ರೂ, ತಬಲಾದ ಮೇಲೆ ಕೈ ಹಾಕೋವಾಗ ಅವರ ಹೆಸರು ಹೇಳಿಕೊಂಡರೆ ಮನಸ್ಸಿಗೇನೋ ಹಾಯಾಗುತ್ತೆ. ನಮ್ಮಪ್ಪಯ್ಯ ನನಗೆ ತಬಲ ಕಲಿಸುವಾಗ 'ವಿದ್ಯಾ ಕಲಿಯೋರು ವೆಂಕಟಸುಬ್ಬಯ್ಯನೋರ ಹಾಗೆ ಕಲಿಯಬೇಕು. ಇಲ್ದೆಹೋದ್ರೆ ಕಲಿತ ವಿದ್ಯೆ ತಲೇಗೆ ಹತ್ತೊ ಕಿಲ್ಲಾಂತ ಹೇಳ್ತಾ ಇದ್ದ."

"ಹಾಗಾದರೆ ನಿಮ್ಮ ಮನೆಯಲ್ಲಿ ತಲತಲಾಂತರದಿಂದಲೂ ತಬಲಾ ಬಾರಿಸುವುದೇ ಕಸುಬಾಗಿತ್ತೆ?"

"ಊಹೂ, ನಾವೆಲ್ಲಾ ಅಕ್ಕಸಾಲಿಗರು. ನಮ್ಮಪ್ಪಯ್ಯ ವಸಿ ಚಿನ್ನ, ಬೆಳ್ಳಿ ಕೆಲಸಾನೂ ಮಾಡ್ತಾ ಇದ್ದ. ಆದ್ರೆ ತಬಲಾ ಬಾರಿಸೋದೂ ಇದ್ದದ್ದೇ. ಹಿರೇರು ಕಲಿತ ವಿದ್ಯೆ, ಬಂದಷ್ಟು ಬರಲಿ ಅಂತ ಕಲಿತೋರು ನಾವೆಲ್ಲಾ."

"ಹಾಗಾದರೆ ನೀವು ಈಗ ಅಕ್ಕಸಾಲಿ ಕೆಲಸ ಮಾಡ್ತೀರಾ ?"

"ಊಹೂ, ಆಟ ಕಟ್ಟಿಸೋ ಹುಚ್ಚಿಗೆ ಬಿದ್ದು, ನನಗೆ ಇದೇ ಕಸುಬಾಗಿ ಹೋಯಿತು."

"ಹಾಗಾದರೆ ಆಟ ಕಟ್ಟಿಸುವುದೇ ನಿಮ್ಮ ಕಸುಬೇ ?"

"ಹೂ."

"ಅದರಲ್ಲೇ ನಿಮ್ಮ ಜೀವನಕ್ಕೆ ಸಾಕಾಗುವಷ್ಟು ಆದಾಯ ಬರುತ್ತದೆಯೇ?"



"ಎಲ್ಲಿ ಆದಾಯ ಸ್ವಾಮಿ – ವರ್ಷದಲ್ಲಿ ಆರು ತಿಂಗಳು ಎರಡು ಹೊತ್ತಿನ ಊಟ ಸಿಕ್ಕೋದು ಕಷ್ಟ. ಕಂಪನಿ ನಾಟಕ, ಸಿನಿಮಾ ಹುಚ್ಚು ಜನಕ್ಕೆ ಹಿಡಿದಿರುವಾಗ ಬೈಲುನಾಟಕ ಅಡೋರು ಯಾರು, ನೋಡೋರು ಯಾರು ? ಸುಗ್ಗೀಲೋ, ಉಗಾದಿಗೋ, ಮಹರ್ನವಮಿಗೋ ಅಥವಾ ಜಾತ್ರೇಲೋ ಯಾವಾಗಲಾದರೂ ವರ್ಷಕ್ಕೊಂದು ದಿನ, ಹಳ್ಳೀಲಿ ಮುಖಕ್ಕೆ ಬಣ್ಣ ಹಚ್ಚಿಕೊಳ್ಳೋ ಹುಚ್ಚಿರೋರು ಬಯಲುನಾಟಕ ಅಂತ ಆಡ್ತಾರೆ, ಅಷ್ಟೆ ಅವತ್ತು ಮುಗೀತು ಅಂದ್ರೆ, ಮತ್ತೆ ವರ್ಷಕಾಲ ಯಾರೂ ನೀನು ಬದುಕಿದೀಯ, ಸತ್ತೀಯಾಂತ ಕೇಳೊಲ್ಲ."

"ಒಂದು ನಾಟಕ ಅಡಿಸಿದರೆ ನಿಮಗೇನು ಸಿಕ್ಕುತ್ತೆ ?"

"ಏನು ಸಿಗುತ್ತೆ, ನಮ್ಮ ಮ್ಮನ ಪಿಂಡ! ಪ್ರಾಕ್ಟೀಸು ನಡೆಯೋ ಅಷ್ಟು ದಿನ ಊಟ, ತಿಂಡಿ, ಕಾಫಿ, ಬೀಡಿ ಖರ್ಚು ಕಳೀತದೆ. ನಾಟಕಮುಗಿದ ಮೇಲೆ ಐದೋ ಹತ್ತೋ ಕೈಗಿಟ್ಟು ಕಳಿಸ್ತಾರೆ, ಅಷ್ಟೆ."

"ಅಷ್ಟರಲ್ಲಿ ಜೀವನ ನಡೆಯುತ್ತದೆಯೇ ?"

"ಅದು ನಡೆಯೋಲ್ಲಾ, ನಾವು ನಡೆಸಬೇಕು. ಇಲ್ಲಾಂದ್ರೆ ಈ ಕಸಬು ಬಿಟ್ಟು ಬಿಡಬೇಕು. ಆದ್ರೆ ಈಗ ಇದನ್ನು ಬಿಟ್ಟು ಏನು ಮಾಡಲಿ ? ನಡು ಹೊಳೇಲಿ ದೋಣಿ ಕೈಬಿಟ್ಟ ಹಾಗಾಗುತ್ತೆ."

"ನಿಮಗೇನೋ ಹೇಗೋ ಆಗಬಹುದು. ಆದರೆ ಹೆಂಡಿರು ಮಕ್ಕಳ ಪಾಡು–?"

"ಅದೆಲ್ಲಾ ಇದ್ದೋರಿಗೆ ಆ ಯೋಚನೆ."

"ಅಂದರೆ – ನಿಮಗೆ ಮದುವೆಯಾಗಿಲ್ಲವೆ ?"

"ಒಂದು ಕಾಲಕ್ಕೆ ಆಗಬೇಕೂಂತ ಇದ್ದೆ. ಈಗ ಅದ್ಯಾವ ಯೋಚ್ನೇನೂ ಇಲ್ಲ. ಹಚ್ಚಗಿದ್ದಲ್ಲಿ ಮೇಯೋದು; ಬೆಚ್ಚಗಿದ್ದಲ್ಲಿ ಮಲಗೋದು, ಅಷ್ಟೇ ಎಲ್ಲೀ ಹಾಳುಮಾತು ಬಿಡಿ. ಅದೆಲ್ಲಾ ಕಟ್ಟಿಕೊಂಡು ಏನಾಗಬೇಕು. ಈಗ ನಿಮಗೇನಾಗಬೇಕು ಹೇಳಿ ? ತಿಳಿದಷ್ಟು ಹೇಳಿ ಮುಗಿಸ್ತೀನಿ. ಮೂರ್ದಿನದಿಂದ ಸಾಕಾಗಿ ಹೋಗಿದೆ ಜೀವಕ್ಕೆ. ನಿಮ್ಗೂ ಬೆಳಗ್ನಿಂದ ಉಪವಾಸ ಆಗದೆ. ಜಟ್‌ಪಟ್ನೆ ಅದೇನ್ಬೇಕೋ ಕೇಳ್ಬಿಟ್ಟು ಮಲಗಿಕೊಳ್ಳಿ."

"ಅದೇನೋ ಸರಿ. ನನಗೆ ಬೇಕಾಗಿರೋದು ನಿಮಗೆ ತಿಳಿದರೋ ಅಷ್ಟು ವೆಂಕಟಸುಬ್ಬಯ್ಯನೋರ ವಿಚಾರ ಹೇಳಿದ್ರೆ ತುಂಬಾ ಉಪಕಾರವಾಗುತ್ತೆ."

"ಹಂಗಾದ್ರೆ ಸರಿ"

– ಎಂದು ಚಿನ್ನಪ್ಪ ತನಗೆ ತಿಳಿದ ವಿಷಯ ಹೇಳಲು ಸಿದ್ಧನಾದ.

ತಾನು ಹೇಳಬೇಕೆಂದಿದ್ದ ವಿಚಾರವನ್ನು ಎಲ್ಲಿಂದ ಹೇಗೆ ಆರಂಭಿಸಬೇಕೆಂದು ಚಿನ್ನಪ್ಪನಿಗೆ ಕೂಡಲೇ ತೋಚಲಿಲ್ಲವೆಂದು ಕಾಣುತ್ತದೆ. ಸ್ವಲ್ಪ ಹೊತ್ತು ಗೋಡೆಯನ್ನೇ ದಿಟ್ಟಿಸುತ್ತಾ ಒಂದೆರಡು ಬೀಡಿ ಎಳೆದ. ಬದಿಯಲ್ಲಿದ್ದ ಹಾರ್ಮೋನಿಯಂ ಬಾರಿಸಿದ; ತಬಲಾ ಎಳೆದುಕೊಂಡು, ಸಣ್ಣಗೆ ನುಡಿಸಿ–

"ಅದೇನು ಹೇಳಬೇಕೂಂತ ಗೊತ್ತಾಗೋದಿಲ್ಲ, ನೀವೇ ಇಂಥ ವಿಚಾರ ಏನು ಅಂತ ಕೇಳಿದ್ರೆ ಹೇಳ್ತೀನಿ" – ಎಂದ.

"ನನಗೆ ಅವರ ವಿಚಾರ ಹೆಚ್ಚೇನೂ ಗೊತ್ತಿಲ್ಲ, ಆದ್ದರಿಂದ ಇದು ಹೇಳಿ ಅಂತ ಹೇಗೆ ಕೇಳಲಿ?"

"ನಿಮಗೇನು ಗೊತ್ತಿದೆ ಹೇಳಿ. ಆಮೇಲೆ ನಿಮಗೆ ಗೊತ್ತಿಲ್ಲದಿರುವುದನ್ನು ನಾನು ಹೇಳ್ತೀನಿ."

ಅದು ಸರಿ ಎನಿಸಿತು. ಲಿಂಗಾಜೋಯಿಸರು, ಮುರುಗೇಂದ್ರಪ್ಪನವರು, ಗೋಪಾಲಾಚಾರ್ಯರು ಹೇಳಿದುದನ್ನೂ, ದಾನಶಾಸನದ ವಿಷಯವನ್ನೂ ಹೇಳಿ "ನನಗೆ ಅಷ್ಟೇ ಗೊತ್ತಿರೋದು" ಎಂದೆ.

"ವೆಂಕಟಸುಬ್ಬಯ್ಯನೋರು ಸಂಗೀತ ಕಲ್ತ ವಿಷ್ಯ ಅವರ್‍ಯಾರೂ ಹೇಳ್ಲಿಲ್ವಾ?"

"ಊಹೂ, ಬಹುಶಃ ಅವರಿಗೂ ತಿಳಿಯದೋ ಏನೋ."

"ಇರ್ಬೋದು. ಅವರು ಸಂಗೀತ ಕಲ್ತಿದ್ದು, ಅದು ಅವರಿಗೆ ಒಲಿದದ್ದೂ ಒಂದು ಕಥೆಯೇ. ನಮ್ಮಪ್ಪಯ್ಯ ಭಾರಿ ವರ್ಣನೆ ಮಾಡಿ, ಬಣ್ಣ ಕಟ್ಟಿ ಹೇಳ್ತಾ ಇದ್ದ. ಅದನ್ನು ಕೇಳಿದಮ್ಯಾಲೆ ನಮಗೂ ಹಾಗೇ ಕಲೀಬೇಕು, ಅವರ ಹಾಗೇ ಆಗಬೇಕೂಂತ ಅನಿಸೋದು. ಹಾಗೇ ಕಲೀಬೇಕೂಂದ್ರೂ ಈ ಕಾಲದಲ್ಲಿ ಕಲಿಸೋರು ಯಾರು ? ಹಾಗೇ ಕಲಿಯೋರಾದ್ರೂ ಎಲ್ಲಿದ್ದಾರೆ? ನಾಟಕದಾಗಿನ ಮೂರು ಮಾತು ಕಲಿತುಕೊಳ್ಳಾಕೆ ಪ್ರಾಣ ಬಿಡ್ತವೆ ಈಗಿನ ಜನ. ಕಲಿಸಬೇಕಾದ್ರೆ ಅವರ ಹೊತ್ತು ಕಾದು, ಮರ್ಜಿ ಹಿಡಿದು ಕಲಿಸಿ ಕೊಟ್ಟು ನಮ್ಮ ಮರ್ಯಾದೆ ಉಳಿಸಿಕೋಬೇಕು. ಇಲ್ಲಾಂದ್ರೆ ನಮಗೇ ಅವಮಾನ. ಅದೆಲ್ಲಾ ಪುಣ್ಯವಂತರ ಕಾಲ!"

– ಎಂದು ಚಿನ್ನಪ್ಪ ತಾನು ಹೇಳಲಿದ್ದ ಕಥೆಗೆ ಆರಂಭಮಾಡಿದ :



## ೭

"ಗೋಪಾಲಚಾರ್ರು ಹೇಳಿದ್ದು ಕೇಳಿದಿರಲ್ಲಾ, ನಮ್ಮಪ್ಪಯ್ಯನೂ ಹಾಗೇ ಹೇಳ್ತಾ ಇದ್ದ – ವೆಂಕಟಸುಬ್ಬಯ್ಯನೋರಿಗೆ ಚಿಕ್ಕಂದಿನಿಂದಲೇ ಸಂಗೀತ ಅಂದ್ರೆ ಪಂಚಪ್ರಾಣ ಅಂತೆ. ಎಲ್ಲಾದರೂ ಯಾರಾದ್ರೂ ಸಂಗೀತ ಹೇಳ್ತಾ ಇದ್ರೆ ಕೇಳೋದಿರಲಿ, ಜೇನು ಜಂಯ್ ಅಂದರೆ, ದುಂಬಿ ಹಾರ್ತಾ ಇದ್ರೆ, ನೀರು ಸದ್ದು ಮಾಡ್ತಾ ಇದ್ರೆ, ಅದನ್ನೇ ಕೇಳ್ತಾ ಮೈಮರ್ತುಬಿಡ್ತಾ ಇದ್ರಂತೆ, ವೆಂಕಟಸುಬ್ಬಯ್ಯನೋರು. ವಯಸ್ಸಾಗ್ತಾ ಆಗ್ತಾ ಈ ಗೀಳು ಮತ್ತಷ್ಟು ಬಲೀತು. ಹತ್ತುಹನ್ನೆರಡು ವರ್ಷದ ಹುಡುಗ, ದುರ್ಗದಲ್ಲಿರಲಿ, ಇಪ್ಪತ್ತು ಮೈಲಿ ಸುತ್ತಿನಲ್ಲಿ ಎಲ್ಲಾದರೂ ಸಂಗೀತಾನೋ, ನಾಟಕಾನೋ ಇದೆ ಅಂದ್ರೆ ಸರಿ, ಮನೇಲಿ ಹೇಳದೆ ಕೇಳದೆ ಎದ್ದು ಬಿಡೋನು. ಎರಡೆರಡು ದಿನ ಮನೇ ಕಡೇನೇ ಸುಳೀತಿರಲಿಲ್ಲ. ಮೊದಮೊದಲು, ನರಸಿಂಹ ಜೋಯಿಸರೂ ಅವರ ಮನೆಯವರೂ, ಮಗ ಮನೆಗೆ ಬರದೆ ಹೋದರೆ ಒದ್ದಾಡಿ ಜೀವ ಬಿಡೋರು, ಊರೆಲ್ಲಾ ಹುಡುಕಿಸೋರು; ಸುತ್ತಮುತ್ತಲ ಊರುಗಳಿಗೆ ಆಳು ಕಳಿಸೋರು. ಆದರೆ ಬರ್ತಾ ಬರ್ತಾ ಮಗನ ನಡತೆ ಅವರಿಗೆ ಅಭ್ಯಾಸವಾಗಿ ಅಷ್ಟು ಒದ್ದಾಡುವುದನ್ನು ಬಿಟ್ಟರು."

"ಮಗನಿಗೆ ಸಂಗೀತದ ಹುಚ್ಚಿದೆ ಅಂತ ತಿಳಿದ ಜೋಯಿಸರು, ಊರಲ್ಲಿದ್ದ ಸಂಗೀತವಿದ್ವಾಂಸರಿಂದ ಮಗನಿಗೆ ಪಾಠ ಹೇಳಿಸಲು ಪ್ರಯತ್ನಮಾಡಿದರಂತೆ. ಅಲ್ಲೂ ವಿಚಿತ್ರಾನೇ ಈ ಹುಡುಗ. ಅವರು ಬೇಕಾದ್ದು ಹೇಳಿ ಕೊಡಲಿ. ತನಗೆ ಬೇಕಾದ್ದೇ ಕಲಿಯೋದು, ತನಗೆ ಬೇಕಾದ್ದೇ ಹೇಳೋದು. ಕ್ರಮವಾಗಿ ಪಾಠ ಹೇಳಿಸಿಕೋ ಅಂದರೆ, ಅದು ಬೇಡ, ನಾನು ಕೇಳಿದ್ದು ಹೇಳಿಕೊಡಿ ಎಂಬ ಹಟ. ಆ ಕಾಲದಲ್ಲಿ ಸಂಗೀತ ಕಲಿಯೋದು ಅಂದರೆ ಬಹಳ ಕಟ್ಟುನಿಟ್ಟು. ಬೆಳಗಿನ ಝಾವಕ್ಕೆ ಎದ್ದು ತಂಬೂರಿ ಹಿಡಿದು, ಶ್ರುತಿ ಸಾಧನೆ, ಅಕಾರಸಾಧನೆ ಮಾಡಬೇಕು. ಸಂಗೀತಕ್ಕೆ ಸೇವೆಮಾಡೋಕ್ಕಿಂತ ಹೆಚ್ಚಾಗಿ, ಸಂಗೀತ ಕಲಿಸುವವರ ಸೇವೆ ಮಾಡಬೇಕು. ಅವರ ಕೆಲಸಕ್ಕೆ ಕತ್ತೆ ಹಾಗೆ ದುಡಿದು, ಅವರ ಹೇಳಿಕೊಟ್ಟಷ್ಟನ್ನು ಕಲಿಯಬೇಕು. ಅವರು ಎಷ್ಟು ಕಲಿಸಿದರೆ ಅಷ್ಟೇ ಪುಣ್ಯ! ಹಾಗಿತ್ತು. ಆದರೆ ಆ ಹುಡುಗನದು ಎಲ್ಲಕ್ಕೂ ತಿರುಮಂತ್ರ. ತನಗೆ ಬೇಕಾದಾಗ ಹಾಡುವುದು, ಅದನ್ನು ಹಾಗೇಕೆ ಹೇಳಬೇಕು, ಹೀಗೇಕೆ ಹೇಳಬಾರದು ಎಂದು ವಾದಮಾಡೋದು, ಈ ರಾಗ ಹೀಗೆ ಹೇಳೋ ಬದಲು ಹಾಗೆ ಹೇಳಿದರೆ ಏನಾಗುತ್ತೆ ಅಂತೆ ಇದಿರು ವಾದಿಸಿ ಕೇಳೋದು. ಗುರು–ಶಿಷ್ಯನ ಸಂಬಂಧ ನೆಲ್ಲು–ಮೊಸರು ಕಲಿಸಿದ

ಹಾಗಾಯಿತು. ಸಂಗೀತ ಕಲಿಯೋಕಿಂತ ಹೆಚ್ಚಾಗಿ ಇಬ್ಬರಿಗೂ ವಾಗ್ವಾದ ಆಗ್ತಾ ಇತ್ತು."

"ವೆಂಕಟಸುಬ್ಬಯ್ಯನೊಂದಿಗೆ ಪಾಠ ಹೇಳಿಕೊಡುತ್ತಾ ಇದ್ದವರು, ತಿರುಮಲಯ್ಯಾಂತ. ಅರಮನೆಯಲ್ಲಿ ಅವರೂ ಒಬ್ಬರು ಹಾಡುಗಾರರು. ಆ ಮನುಷ್ಯನಲ್ಲಿ ವಿದ್ಯಕ್ಕಿಂತ ಗರ್ವವೇ ಹೆಚ್ಚಾಗಿತ್ತಂತೆ. ಆರಂಭದ ವಿದ್ಯೆ ಕಲಿಸಲಿಕ್ಕೆ ಯಾರಾದರೇನು ಅಂತ ನರಸಿಂಹಜೋಯಿಸರು ಮಗನನ್ನು ಅವರ ಬಳಿಗೆ ಕಲಿಕೆಗೆ ಹಾಕಿದ್ದರು. ಒಂದು ಸಲ ಊರಿನಲ್ಲಿ ಹೊರ ಊರಿನ ವಿದ್ವಾಂಸರೊಬ್ಬರ ಕಛೇರಿ ಆಯಿತಂತೆ."

"ಊರಿನಲ್ಲಿ ಎಲ್ಲಿ ಯಾರ ಸಂಗೀತವಾದರೂ, ತಿರುಮಲಯ್ಯ ಅಲ್ಲಿಗೆ ತನ್ನ ಶಿಷ್ಯರನ್ನೂ ಕರೆದುಕೊಂಡು ಹೋಗಿ, ಕೇಳಿ ಬರೋನಂತೆ. ಅದಾದ ಮರುದಿನ ಅವರ ಮನೇಲಿ ಅವರದೇ ಚರ್ಚೆ, ತಿರುಮಲಯ್ಯ ಕಾಲು ನೀಡಿ, ಮೈಗೆ ಶಿಷ್ಯರ ಕೈಲಿ ಎಣ್ಣೆ ಒತ್ತಿಸಿಕೊಳ್ಳುತ್ತಾ ಠೀವಿಯಾಗಿ ಕೂತುಕೊಂಡು 'ಅವರಮ್ಮನ ಪಿಂಡ! ಏನು ಸಂಗೀತ ಹಾಡಿದನೋ, ಅಗಸರ ಕತ್ತೆ ಅವನಿಗಿಂತ ಮೇಲು. ಹಿಂದೋಳ ಹಾಗೇ ಹಾಡೋದು ? ದೇವಗಾಂಧಾರಿ ಹಾಡಿದರೆ ಆರಂಭ ಹಾಗೆ. ಸ್ವರಜ್ಞಾನ ಇಲ್ಲದೋನಿಗೆ ಸಂಗೀತ ಬೇರೆ ಕೇಡು' ಎಂದು ಹೇಳಬೇಕು. ಎಣ್ಣೆ ಒತ್ತುವ ಶಿಷ್ಯ – 'ಹೌದು ಗುರುಗಳೇ, ಗಾಂಧಾರಿ ಕೇಳಿದರೆ ನಿಮ್ಮ ಬಾಯಲ್ಲಿ ಕೇಳಬೇಕು. ಮೊನ್ನೆ ಗೋಪಾಲಸ್ವಾಮಿ ಗುಡಿ ಉತ್ಸವದಲ್ಲಿ ನೀವು ಅದೇ ರಾಗದ ಕೀರ್ತನೆ ಹಾಡಿದಾಗ, ಎಷ್ಟು ಜನ ಕಣ್ಣೀರಿಟ್ಟೋರು. ನಿನ್ನೆ ಕೂತಿದ್ದೋರೆಲ್ಲಾ ಆಕಳಿಸುತ್ತಾ ಕೂತಿದ್ದು' ಎನ್ನಬೇಕು. ಆ ಮಾತು ಕೇಳಿ, ತಿರುಮಲಯ್ಯ ಹಿಗ್ಗಿ ಹೀರೇಕಾಯಿಯಾಗಬೇಕು. 'ನನ್ನ ಹಾಗೆ ಇರಲಿ, ನಿನ್ನ ಹಾಗೆ ಹಾಡೋದೂ ಅವರ ಹಣೇಲಿ ಬರೆಯಲಿಲ್ಲ' ಎಂದು ಶಿಷ್ಯನ ಬೆನ್ನುಚಪ್ಪರಿಸಬೇಕು. ಆ ಮನೆಗೆ 'ಹೌದಪ್ಪನ ಚಾವಡಿ' ಅಂತ ಹೆಸರಿಟ್ಟಿದ್ದರಂತೆ ಊರಿನ ಜನ."

"ಆ ಸಲವೂ ಹೊರ ಊರಿನ ವಿದ್ವಾಂಸರ ಕಛೇರಿ ನಡೆದ ಮರುದಿನ, ಮಾಮೂಲಿನಂತೆ ತಿರುಮಲಯ್ಯನ ಚಾವಡಿಯಲ್ಲಿ ಸಭೆ ಸೇರಿತು. ಶಿಷ್ಯನ ಕೈಲಿ, ನೆತ್ತಿಗೆ ಭೃಂಗಾಮಲಕ ತೈಲ ಉಜ್ಜಿಸಿಕೊಳ್ಳುತ್ತಾ ತಿರುಮಲಯ್ಯ ಸಂಗೀತಗಾರರ ಅವಹೇಳನ ಆರಂಭಿಸಿದ. ಎಣ್ಣೆ ಒತ್ತುವ ಶಿಷ್ಯ ಅವರ ಮಾತಿಗೆ 'ಹೂಂ' ಕೊಡುತ್ತಿದ್ದ."



"ಸಂಗೀತ ಹಾಡ್ತಾನಂತೆ ! ಎಲ್ಲರೂ ಹಾಡೋಕೆ ಇದೇನು ತಿರುಪೆಯೋರ ಕೂಗು ಕೆಟ್ಟುಹೋಯಿತೆ, ರಾಗ, ತಾಳ ಎಲ್ಲಾ ಹಾಳಾಗಿ ಹೋಗಲಿ, ಅವನ ಕಂಠ ಕೇಳಿದೆಯಾ? ಕಂಠ ಅಂದರೆ ಚಿನ್ನದ ತಂತಿ ಎಳೆದ ಹಾಗೆ ಬರಬೇಕು. ಅದು ಬಿಟ್ಟು ಅವರಜ್ಜಿ ತಲೆ ನಡುಗಿದ ಹಾಗೆ ನಡುಗುತ್ತಾ ಇತ್ತು. ಖಚಿತವಾಗಿ, ದೃಢವಾದ ಶಾರೀರ ಇಲ್ಲದೋರು, ಹಾಡಿನ ಜಾತಿ ಕೆಡಿಸೋಕೆ ಏಕೆ ಬರಬೇಕು?"

–ನಡುನಡುವೆ ಹೊಂಕರಿಸುತ್ತಾ ತಿರುಮಲಯ್ಯ ಹೇಳಿದ. ಇತರ ಶಿಷ್ಯರು ತಿರುಮಲಯ್ಯನ ಆ ಮಾತಿಗೆ ತಲೆ ಹಾಕಿದರೂ, ಅಲ್ಲೇ ಕೂತಿದ್ದ ವೆಂಕಟಸುಬ್ಬಯ್ಯ ಏನೋ ಹೇಳಲಿಲ್ಲ.

"ಅವರೊಂದಿಗೆ ಆತನೂ ಸಂಗೀತ ಕೇಳಲು ಹೋಗಿದ್ದ. ಹಾಡಿದಾತ ವೃದ್ಧ. ಕಂಠದಲ್ಲಿ ದೃಢತೆ ಇರಲಿಲ್ಲವಾದರೂ, ಆತನ ರಾಗಜ್ಞಾನ ಚೆನ್ನಾಗಿತ್ತು. ಸ್ವರವೂ ಶುದ್ಧವಾಗಿತ್ತು. ಹಾಡುವ ಶೈಲಿಯಲ್ಲಿ ಪಳಗಿದ ಚಳಕ ಕಾಣುತ್ತಿತ್ತು. ನಿಜ–ಅದು ಅತ್ಯುತ್ತಮವೆನ್ನುವಂತಹ ಹಾಡುಗಾರಿಕೆಯಲ್ಲ; ಹಾಗೆಂದು ತೆಗೆದುಹಾಕುವಂಥ ಕಳಪೆಯೂ ಅಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆತನ ಎದುರಿಗಿದ್ದ ಚಿಕ್ಕವರಿಗೂ ನಮಸ್ಕಾರ ಮಾಡಿ, ಹಾಡು ಆರಂಭಿಸಲು ಅಪ್ಪಣೆ ಬೇಡಿದ್ದ. ಯಾರೋ ವಯಸ್ಸಿನ ಮಾತೆತ್ತಿದಾಗ – 'ವಯಸ್ಸಿಗೆ ನಮಸ್ಕಾರ ಮಾಡುತ್ತಾರೆಯೇ, ಸ್ವಾಮಿ, ವಿದ್ಯೆಗೆ ನಮಸ್ಕಾರ ಮಾಡುತ್ತಾರೆ. ನನಗಿಂತ ವಿದ್ಯೆಯಲ್ಲಿ ಹಿರಿಯರು ಎಷ್ಟು ಸಾವಿರ ಜನವೋ ಎಲ್ಲರಿಗೂ ನಮಸ್ಕಾರ' ಎಂದು ಹೇಳಿದ್ದ. ಆ ಮಾತು ತಿರುಮಲಯ್ಯನ ಆತ್ಮಪ್ರಶಂಸೆಯನ್ನು ಕೇಳಿ ಕೇಳಿ ರೋಸಿದ್ದ ವೆಂಕಟಸುಬ್ಬಯನಿಗೆ ತುಂಬಾ ಮೆಚ್ಚಿಗೆಯಾಗಿತ್ತು."

"ಎಂತಲೇ ತಿರುಮಲಯ್ಯನ ಮಾತು ಕೇಳಿ ಆತನಿಗೆ ಕೆಂಡವನ್ನು ತುಳಿದಂತಾಯಿತು. ಹೊಟ್ಟೆಯ ಮಾತನ್ನು ಬಚ್ಚಿಟ್ಟು ತೋರಿಕೆಯ ವಿಶ್ವಾಸವನ್ನು ನಟಿಸುವ ಸ್ವಭಾವವಲ್ಲ ಆತನದು. ಏನು ತೋಚಿದರೆ ಅದನ್ನು ಆ ಗಳಿಗೆಯೇ ಆಡಿಬಿಡಬೇಕು. ಆಗಲೂ ಹಾಗೇ ಮಾಡಿದ."

"ಗುರುಗಳೇ, ಅವರಿಬ್ಬರನ್ನು ಅಡ್ಕೋಳೋದಕ್ಕಿಂತ, ತಾವು ಹಾಡಿ ತೋರಿಸೋದು ಮೇಲಲ್ಲವೆ? ಆತನ ಯೋಗ್ಯತೆ ಇದ್ದಷ್ಟು ಆತ ಹಾಡಿದ. ಅಲ್ಲಿ ಕೇಳುವಾಗ ನೀವೇ – ಭಲೇ – ಅನ್ನಲಿಲ್ಲವೇ? ಇಲ್ಲೇಕೆ ತೆಗಳ್ತೀರ ?"

"ಓಹೊ! ನೀನು ಇಲ್ಲೇ ಇದೀಯೊ, ದೊಡ್ಡ ಮನುಷ್ಯ! ನೋಡಲಿಲ್ಲ. ತಲೆ ಎಲ್ಲಾ ಹರಟುತೀಯ. ಸಣ್ಣ ಬಾಯಿ ದೊಡ್ಡ ಮಾತಾಡಬಾರದು ಅಂತ ತಿಳಿಯೋಲ್ಲ? ಬಾಯಿ ಮುಚ್ಚಿಕೊಂಡಿರೋದಕ್ಕೆ ಬಾಡಿಗೆ ಕೊಡಬೇಕೇನು ?"

– ಎಂದು ತಿರುಮಲಯ್ಯ ವ್ಯಂಗ್ಯವಾಗಿ. ಆತನ ಮಾತು ಕೇಳಿ ಏರು ರಕ್ತದ ವೆಂಕಟಸುಬ್ಬಯ್ಯನಿಗೂ ಆ ದಿನ ಏಕೋ ತಾಳ್ಮೆ ತಪ್ಪಿತು. ಸುತ್ತಲಿದ್ದ ತಿರುಮಲಯ್ಯನ ಶಿಷ್ಯರು ನಗುತ್ತಿದ್ದುದು, ಆ ಉರಿಗೆ ತುಪ್ಪ ಹಾಕಿ ದಂತಾಯಿತು. ಆದರೂ ತೂಕ ಮೀರದ ಮಾತಿನಲ್ಲಿ ಹೇಳಿದ :

"ನೀವು ಮಾತಾಡೋ ಅಷ್ಟು ಚೆನ್ನಾಗಿ ಹಾಡು ಹೇಳೋದು ಬಂದಿದ್ರೆ ಎಂದೋ ಅರಮನೆ ಬಂಗಾರದ ತೋಡಾ ಸಿಗುತ್ತಿತ್ತು."

"ಅಯೋಗ್ಯ! ಒಳ್ಳೆ ಮಾತಿನಲ್ಲಿ ನನಗೆ ಹಾಡು ಹೇಳೋಕೆ ಬರೋಲ್ಲ ಅಂತ ಅಣಕಿಸ್ತೀಯ? ನನ್ನ ಯೋಗ್ಯತೆ ಅಳೆಯೋಕೆ ಬರ್ತೀಯ – ಅಧಮ? ಥ್ಥ! ನೆಕ್ಕುವ ನಾಯಿಗೆ ಲಿಂಗವೇನು? ಪಾಣಿಪಟ್ಟವೇನು ? ಇವತ್ತಿಗೆ ಆ ಮಾತಾಡಿ ಬದುಕಿದೆ. ಇನ್ನೊಂದು ಸಲ ಹಾಗೆ ಮಾತಾಡಿದರೆ ಹಲ್ಲು ಮುರಿದುಬಿಟ್ಟೇನು !"

"ಅಷ್ಟೇ ನಿಮ್ಮಿಂದ ಆಗೋದು. ಹಾಡು ಹೇಳಿ ತೋರಿಸಿ ಅಂದರೆ ಹಲ್ಲು ಮುರೀತಾರಂತೆ. ಗುರುಗಳೂಂತ ಸುಮ್ಮನೆ ಇದ್ದರೆ, ಏನು ಬೇಕಾದ್ದು ಮಾತಾಡುತ್ತೀರ ? ಯೋಗ್ಯತೆ ಇದ್ದರೆ ಹಾಡಿ ತೋರಿಸಿ. ಹತ್ತು ಜನ ಒಪ್ಪಿಕೊಳ್ಳಲಿ."

"ಹೀಗೇ ಮಾತಿಗೆ ಮಾತು ಬೆಳೆಯಿತು. 'ಗುರುಶಿಷ್ಯರಲ್ಲೇ ಸ್ಪರ್ಧೆ ಆರಂಭ. ಉಳಿದವರ ಮಾತೇನು?' ಎಂದುಬಿಟ್ಟ ವೆಂಕಟಸುಬ್ಬಯ್ಯ. ತಿರುಮಲಯ್ಯ ಬೇರೆಲ್ಲಾ ಮಾತು ಬಿಟ್ಟು ಅದೇ ಮಾತು ಹಿಡಿದುಬಿಟ್ಟ."

"ನೀನು ಒಬ್ಬ ತಂದೆಗೆ ಜನಿಸಿದವನಾಗಿದ್ದರೆ, ಸಭೇಲಿ ನನಗಿಂತ ಚೆನ್ನಾಗಿ ಹಾಡಿ ತೋರಿಸಬೇಕು. ಇಲ್ಲವಾದರೆ ಹತ್ತು ಜನರ ಇದಿರು – ನಾನು ಜಾತಿ ಬ್ರಾಹ್ಮಣನಲ್ಲ. ಮಾತು ಕಟ್ಟಿತು – ಅಂತ ನನ್ನ ಕಾಲು ಹಿಡಿದು ನಮಸ್ಕಾರ ಮಾಡಬೇಕು" ಎಂದು ಷರತ್ತು ಹಾಕಿದ.

"ಅಷ್ಟೇ ಏಕೆ, ನಿಮಗಿಂತ ಚೆನ್ನಾಗಿ ಹಾಡದಿದ್ದರೆ, ಹಾಡೋದಕ್ಕೇ ಎಳ್ಳು – ನೀರು ಬಿಟ್ಟು ಬಿಡುತ್ತೇನೆ" ಎಂದ ವೆಂಕಟಸುಬ್ಬಯ್ಯ ಅಲ್ಲಿಂದ ಎದ್ದು ಹೋಗುತ್ತಾ.

"ತಿರುಮಲಯ್ಯ ಹುಡುಗನ ಮಾತು ಎಂದು ಅದನ್ನು ಅಲ್ಲಿಗೇ ಬಿಡ ಬಹುದಾಗಿತ್ತು. ಆದರೆ ಅಂಥ ಸಾತ್ವಿಕ ಭಾವವಲ್ಲ ಆತನದು; ರೋಷದ ಜೀವ. ಆಡಿದ ಮಾತನ್ನೇ ಹಿಡಿದು, ಒಂದು ದಿನ ಊರಿನಲ್ಲಿಯ ಹತ್ತಾರು ಜನ ಸಂಗೀತ ಬಲ್ಲವರ ಸಭೆಸೇರಿಸಿದ. ಊರವರು ತಿರುಮಲಯ್ಯನಿಗೆ ಎಷ್ಟೋ ಹೇಳಿದರು – 'ವೆಂಕಟಸುಬ್ಬು ಇನ್ನೂ ಹುಡುಗ, ಅವನ ಮಾತಿಗೆ ಬೆಲೆ ಏನು? ಅವನು ಏನೋ ಆಡಿದಾಂತ ನೀನು ಹೀಗೆ ಆಡೋದೆ? ನೋಡಿದ ಜನ. ತಿರುಮಲಯ್ಯನಿಗೆ ವಯಸ್ಸಾದಾರೂ ತಿಳಿವಳಿಕೆ ಬರಲಿಲ್ಲ ಅಂತ ಅಂದು



ಕೊಳ್ಳುವುದಿಲ್ಲವೇ? ಆಮಾತು ಬಿಡು' ಎಂದರು 'ಅವನು ಹತ್ತು ಜನರ ಎದುರಿನಲ್ಲಿ ನನ್ನ ಕಾಲಿಗೆ ಬಿದ್ದು ಶತಾಪರಾಧವಾಯಿತು ಎಂದು ಕೇಳಿಕೊಳ್ಳಲಿ, ಬಿಡುತ್ತೇನೆ. ಹಾಗೆ ಬಿಟ್ಟರೆ ಶಿಷ್ಯರ ಎದುರಿನಲ್ಲಿ ನನ್ನ ಮರ್ಯಾದೆ ಏನು ಉಳಿಯಿತು ?" ಎಂದು ಹಟವಾದಿ ತಿರುಮಲಯ್ಯ.

"ಅದೇ ಜನ ವೆಂಕಟಸುಬ್ಬಯ್ಯನಿಗೂ ಬುದ್ಧಿ ಹೇಳಿದರು: 'ಎಷ್ಟಾದರೂ ಅಷ್ಟು ವರ್ಷ ಪಾಠ ಹೇಳಿಕೊಟ್ಟ ಗುರು. ಆತನ ಹತ್ತಿರ ಇಂಥ ಹಟ ಒಳ್ಳೆಯದಲ್ಲ. ತಪ್ಪಾಯಿತು ಎಂದು ಹೇಳಿದರೆ ಅಗೌರವಲ್ಲ. ತಗ್ಗಿನಡೆಯುವುದು ಶ್ರೇಯಸ್ಕರ, ತಪ್ಪಾಯಿತು ಎಂದುಬಿಡು. ದೇವರು ನಿನಗೆ ಒಳ್ಳೆಯದು ಮಾಡುತ್ತಾನೆ' ಎಂದರು. ಅವರ ಮಾತಿಗೆ ವೆಂಕಟಸುಬ್ಬಯ್ಯನೂ ಬಗ್ಗಲಿಲ್ಲ. 'ನಾನೀಗ ತಗ್ಗಿನಡೆದರೆ ನನ್ನ ಮನೆಗೆ ಅವಮಾನ, ಹುಟ್ಟಿಗೆ ಅವಮಾನ. ಸೋತರೆ ಖಂಡಿತ ಕಾಲು ಹಿಡಿಯುತ್ತೇನೆ. ಗೆದ್ದಮೇಲೂ, ತಪ್ಪಾಯಿತೆಂದು ಕಾಲು ಹಿಡಿದೇನು. ಈಗ ಮಾತ್ರ ಅಲ್ಲ' ಎಂದುಬಿಟ್ಟ. ತಂದೆ ತಾಯಿ – ಯಾರು ಹೇಳಿದರೂ ತನ್ನ ಪಟ್ಟು ಬಿಡಲಿಲ್ಲ. ಹಿತವಾಗಿ ಹೇಳಿದರು; ಬೈದು ಹೇಳಿದರು. ಸಿಟ್ಟಾಗಿ ಹೇಳಿದರು. ಕಣ್ಣೀರಿಟ್ಟು ಹೇಳಿದರು. ಹಿರಿಯರು ಕಿರಿಯರು ಎಲ್ಲರೂ ಹೇಳಿಯಾಯಿತು. ಎಲ್ಲರಿಗೂ ಆತನದೊಂದೇ ಉತ್ತರ.... 'ಪರೀಕ್ಷೆ ನಡೆದುಹೋಗಲಿ. ಆಮೇಲೆ ಮುಂದಿನ ಮಾತು.' ಇಬ್ಬರೂ ಹೀಗೇ ಹಟಕ್ಕೆ ಬಿದ್ದಮೇಲೆ ಬೇರಾವ ದಾರಿಯೂ ಉಳಿಯಲಿಲ್ಲ" ಪರೀಕ್ಷೆಗೆ ದಿನ ನಿಷ್ಕರ್ಷೆಯಾಯಿತು.

"ಒಂದು ಶುಕ್ರವಾರದ ದಿನ ಸಂಜೆ ತಿರುಮಲಯ್ಯನ ಮನೇಲಿ ಸಂಗೀತ ಸ್ಪರ್ಧೆ ಏರ್ಪಾಡಾಯಿತು. ಆ ದಿನಕ್ಕೆ ಮುಂಚೆ ಮೂರು ದಿನ ವೆಂಕಟ ಸುಬ್ಬಯ್ಯನು ಮನೆ ಸೇರಲಿಲ್ಲ. ಎಲ್ಲಿ ಹೋಗುತ್ತಿದ್ದನೋ, ಯಾವಾಗ ಹೋಗುತ್ತಿದ್ದನೋ. ಊಟತಿಂಡಿಗೆ ಏನು ಮಾಡುತ್ತಿದ್ದನೋ ಒಬ್ಬರಿಗೂ ತಿಳಿಯದು. ತಿರುಮಲಯ್ಯನಿಗೆ 'ಎಷ್ಟಾದರೂ ಹುಡುಗಪಿಳ್ಳೆ. ಹೂ ಎಂದು ಗೆದ್ದುಬಿಟ್ಟೇನು' ಎಂಬ ತಾತ್ಸಾರ. ಸ್ಪರ್ಧೆಗೆ ಗೊತ್ತಾದ ದಿನವೂ ಬಂದಿತು. ಊರಿನಲ್ಲಿ ಸಂಗೀತ ತಿಳಿದವರು ಎನಿಸಿಕೊಂಡವರು ಹತ್ತಾರು ಮಂದಿ ತೀರ್ಪುಗಾರರಾಗಿ ಸೇರಿದರು. ಗುರು–ಶಿಷ್ಯರ ಸ್ಪರ್ಧೆಯ ವಿಚಾರ ಊರಿನಲ್ಲೆಲ್ಲಾ ಹರಡಿ ಸಂಗೀತ ತಿಳಿದವರು – ತಿಳಿಯದವರು ನೂರಾರು ಜನ ಕಲೆತರು, ತಿರುಮಲಯ್ಯ ಮದುವೆಗೆನ್ನುವಂತೆ ಸಿಂಗಾರವಾಗಿದ್ದ – ಹತ್ತು ಬೆರಳಿಗೂ ಉಂಗುರ, ಜರತಾರಿ ಪಂಚೆ, ಜರತಾರಿ ಶಾಲು, ಕಿವಿಗೆ ಹತ್ತಕಡಕು, ಮುಂಗೈಗೆ ಬಂಗಾರದ ಕಪ್ಪ ಹಾಕಿಕೊಂಡು ಬಂದು ಕೂತ."

"ಸ್ಪರ್ಧೆಗೆಂದು ಗೊತ್ತಾದ ಹೊತ್ತು ಹತ್ತಿರ ಬಂತು. ಬರಬೇಕಾದನರೆಲ್ಲರೂ ಕಲೆತಿದ್ದರು. ವೆಂಕಟಸುಬ್ಬಯ್ಯನ ತಂದೆ ನರಸಿಂಹ ಜೋಯಿಸರೂ ಬಂದಿದ್ದರು. ಎಲ್ಲಾ ಕಲೆತರೂ ವೆಂಕಟಸುಬ್ಬಯ್ಯನೇ ಇಲ್ಲ. 'ಹೂ, ಹೆದರಿಕೊಂಡು ಮುಖ ತೋರಿಸದೆ ಓಡಿಬಿಟ್ಟ' ಎಂದ ತಿರುಮಲಯ್ಯ, ಗೆಲುವಿನ ಗುಟುರುಹಾಕುತ್ತಾ. ಉಳಿದವರಿಗೂ ಅದು ನಿಜವೇನೋ ಅನಿಸಿತು. ಕೆಲವರು ತಿರುಮಲಯ್ಯನ ಮಾತಿಗೆ ತಲೆಹಾಕಿದರು. ಎಲ್ಲರಿಗಿಂತ ಮೊದಲು ಬರಬೇಕಾದವನು ಎಲ್ಲರೂ ಕಲೆತಮೇಲೂ ಬರದಿದ್ದರೆ, ಬೇರೇನು ಹೇಳಬೇಕು. ಕೆಲವರು ಕುಹಕವಾಗಿ ನರಸಿಂಹ ಜೋಯಿಸರ ಕಡೆ ನೋಡಿ ನಕ್ಕರು. ನರಸಿಂಹ ಜೋಯಿಸರು ತಲೆ ಕೆಳಗೆ ಮಾಡಿದವರು ಮೇಲೆತ್ತಲಿಲ್ಲ. ಅಷ್ಟರಲ್ಲಿಯೇ 'ಆಗೋ ಬಂದ! ಇಗೋ ಬಂದ!' ಎಂದು ಗುಜಗುಂಪಲಾಯಿತು. ಬೇಟೆಯನ್ನು ನೋಡುವ ಸಿಂಹದ ಹಾಗೆ ತಿರುಮಲಯ್ಯ. ಠೀವಿಯಿಂದ ತಲೆ ಎತ್ತಿ ಬಾಗಿಲ ಕಡೆ ನೋಡಿದ, ಜೋಯಿಸರು ನೋಡಿದರು."

"ಆ ಕಾಲಕ್ಕೆ ವೆಂಕಟಸುಬ್ಬಯ್ಯನಿಗೆ ಒಳ್ಳೆ ಹದಿನಾರು ವರ್ಷದ ಪ್ರಾಯ. ನೋಡಿದರೆ ಕಣ್ಣಿಗೆ ಒತ್ತಿಕೊಳ್ಳಬೇಕು – ಅಷ್ಟು ಚೆನ್ನಾಗಿದ್ದ ಹುಡುಗ, ಆದರೆ ಅವೊತ್ತು ನೋಡಿದರೆ ಹೆದರಬೇಕು – ಹಾಗಿದ್ದಾನೆ. ತಲೆಯಲ್ಲಿ ಬೆಳೆದ ತುಂಬುಗೂದಲ ಮುಡಿ ಕೆದರಿ, ಮುಖದ ಮೇಲೆ, ಬೆನ್ನ ಮೇಲೆ ಹರಡಿದೆ ಅಗಲವಾದ ಹಣೆಯ ತುಂಬಾ ಕುಂಕುಮ. ಮುಖದ ಮೇಲೆ, ಕಣ್ಣಲ್ಲಿ ಎಂಥದ್ದೋ, ನೋಡುವವರು ಗಾಬರಿಯಾಗುವಂಥ ಕಳೆ, ಮೈಮೇಲೆ ಒದ್ದೆಯಾದ ಪಂಚೆ, ಎದೆಯ ಮೇಲೊಂದು ಒದ್ದೆಯಾದ ಉತ್ತರೀಯ. ಗೂಳಿಯ ಹಾಗೆ ನಡೆದು ಬಂದು ವೆಂಕಟಸುಬ್ಬಯ್ಯ ದೇವರಿಗೆ, ಸಭೆಗೆ ನಮಸ್ಕಾರ ಮಾಡಿ ಕೂತ. ಅವನ ಮುಖ ನೋಡಿ ತಿರುಮಲಯ್ಯನ ಮುಖ ಕೊಂಚ ಪೆಚ್ಚಾಯಿತು."

"ಅಪ್ಪಣೆಯಾದರೆ, ಪರೀಕ್ಷೆಗೆ ಸಿದ್ಧವಾಗಿದೀನಿ"

– ಎಂದು ವೆಂಕಟಸುಬ್ಬಯ್ಯ. ಯಾರು ಮೊದಲು ಹಾಡಬೇಕೆಂದು ಕೊಂಚ ಚರ್ಚೆ ನಡೆದು, ಬಳಿಕ ಹಿರಿಯನಾದ ತಿರುಮಲಯ್ಯನೇ ಮೊದಲು ಹಾಡುವುದೆಂದು ನಿಶ್ಚಯವಾಯಿತು. ಮದ್ದಲೆ, ತಂಬೂರಿಯವರು ತಮ್ಮ ವಾದ್ಯಗಳನ್ನು ಶ್ರುತಿ ಮಾಡಿಕೊಂಡು ಸಿದ್ಧರಾದರು. ಪದ್ಧತಿಯಂತೆ, ಸರಸ್ವತಿ ಗಣೇಶ ಪ್ರಾರ್ಥನೆಯನ್ನು ಮುಗಿಸಿ ತಿರುಮಲಯ್ಯ ಕಲ್ಯಾಣಿ ರಾಗದ ಕೃತಿಯನ್ನು ತೆಗೆದುಕೊಂಡು ಹಾಡಿದ. ಕಲ್ಯಾಣಿ ತಿರುಮಲಯ್ಯನ ಖಾಸಾರಾಗ, ಎಂಥವರೂ ತಲೆದೂಗಿ ಮೆಚ್ಚುವಂತೆ ಹಾಡಬಲ್ಲ ಶಕ್ತಿ ಇತ್ತು ತಿರುಮಲಯ್ಯನಿಗೆ, ಆ ರಾಗದಲ್ಲಿ. ಆ ದಿನವಂತೂ



ಹುರುಪಿನಿಂದಲೇ ಹಾಡಲಾರಂಭಿಸಿದ್ದರಿಂದ ಮತ್ತಷ್ಟು ಕಳೆ ಕಟ್ಟಿತು. ಮುಕ್ಕಾಲು ಗಂಟೆಯಷ್ಟು ಕಾಲ ಹಾಡಿ ನಿಲ್ಲಿಸಿದ ತಿರುಮಲಯ್ಯ. ಆ ರಾಗವನ್ನು ಅದಕ್ಕಿಂತ ಸೊಗಸಾಗಿ ಯಾರಾದರೂ ಹಾಡಬಹುದೆಂದು ಊಹಿಸುವುದೂ ಕಷ್ಟವಾಗಿತ್ತು. ಆ ಹಾಡಿಕೆಯನ್ನು ಕೇಳಿದ ಎಲ್ಲರೂ ವೆಂಕಟಸುಬ್ಬಯ್ಯನ ಸೋಲು ಕಟ್ಟಿಟ್ಟ ಬುತ್ತಿ ಎನಿಸಿತು.

ತಿರುಮಲಯ್ಯ ಹಾಡುವಾಗ, ವೆಂಕಟಸುಬ್ಬಯ್ಯ ಕಣ್ಣು ಮುಚ್ಚಿ ಕುಳಿತವನು, ಮೈಯಲುಗಿಸದೆ ವಿಗ್ರಹದಂತೆ ಕುಳಿತಿದ್ದ; ತಿರುಮಲಯ್ಯನ ಹಾಡುಗಾರಿಕೆ ಆತನ ಹೃದಯವನ್ನೂ ಸ್ಪರ್ಶಿಸಿದಂತಿತ್ತು. ಮುಚ್ಚಿದ ಕಣ್ಣಂಚಿನಲ್ಲಿ ಕಂಬನಿಯ ಹನಿಯೊಂದು ಹೊಳೆಯುತ್ತಿತ್ತು – ಮೆಚ್ಚುಗೆಯ ಮುತ್ತಿನ ಉಡುಗೊರೆಯಂತೆ. ತಿರುಮಲಯ್ಯನ ಹಾಡಿಕೆ ಮುಗಿದಮೇಲೂ ಒಂದು ಗಳಿಗೆ ಹಾಗೇ ಕುಳಿತಿದ್ದ.

"ಬಳಿಕ ವೆಂಕಟಸುಬ್ಬಯ್ಯ ಕಣ್ಣರಳಿಸಿ, ಸಭೆಯೆಲ್ಲವನ್ನೂ ನೋಡಿ ಕೈಮುಗಿದು, ತಂಬೂರಿಯೊಂದಿಗೆ ಸ್ವರ ಸೇರಿಸಿ, ತಾನೂ ಕಲ್ಯಾಣಿರಾಗವನ್ನೇ ಎತ್ತಿಕೊಂಡ. ರಾಗವನ್ನು ಎತ್ತಿಕೊಂಡ ರೀತಿಯಲ್ಲೇ, ಕೇಳುವವರ ಮೈಯಲ್ಲಿ ಮಿಂಚು ಹರಿದಂತಾಯಿತು. ಮೊದಲು ರಾಗದ ಸ್ವರಸಂಚಾರವನ್ನು ಸೂಚಿಸಿ ಅದರ ನಡೆಯನ್ನು ವಿಸ್ತರಿಸಿ ಹಾಡಿ, ಭಾವಪ್ರಕಾಶಕ್ಕೆ ಪಲ್ಲವಿಯನ್ನು ತೆಗೆದುಕೊಂಡ. ವೆಂಕಟಸುಬ್ಬಯ್ಯ ಎಷ್ಟು ಹೊತ್ತು ಹಾಡಿದನೋ, ಏನು ಹಾಡಿದನೋ, ಒಬ್ಬರಿಗೂ ಎಚ್ಚರವಿರಲಿಲ್ಲ. ಮೃದಂಗದವನೂ ಕೈ ನಡೆಯದೇ ಸುಮ್ಮನೆ ಕುಳಿತುಬಿಟ್ಟಿದ್ದ. ಕೇಳುವವರೆಲ್ಲಾ ನಾದದ ಮೋಡಿಗೊಳಗಾಗಿ ಚಿತ್ರದ ಗೊಂಬೆಗಳಂತೆ ಕುಳಿತಿದ್ದರು. ಅವತ್ತಿನ ವೆಂಕಟಸುಬ್ಬಯ್ಯನ ಕಲ್ಯಾಣಿರಾಗದ ಹಾಡುಗಾರಿಕೆಯನ್ನು ಎಷ್ಟೋ ವರ್ಷಗಳ ಕಾಲ ಜನ ಹೊಗಳಿ ನೆನಸುತ್ತಿದ್ದರಂತೆ. ಆತ ಹಾಡಿ ನಿಲ್ಲಿಸಿದ ಬಳಿಕ, ಎಷ್ಟೋ ಹೊತ್ತಿನ ನಂತರ, ಕೇಳುತ್ತಿದ್ದವರಿಗೆ ಹಾಡು ನಿಲ್ಲಿಸಿದುದರ ಎಚ್ಚರವಾಯಿತು. ಎಲ್ಲರ ಕಣ್ಣಲ್ಲೂ ರಸೋದ್ರೇಕದ ಕಂಬನಿ."

"ಜನ, ದೃಷ್ಟಿಶಕ್ತಿಯನ್ನು ಮಜುಮಾಡಿದ ಕಂಬನಿಯನ್ನು ಒರೆಸಿಕೊಂಡು ನೋಡುತ್ತಾರೆ – ಕಣ್ಣು ಮುಚ್ಚಿ ಕುಳಿತ ಶಿಷ್ಯನ ಕಾಲ ಬಳಿ ತಲೆಯಿಟ್ಟಿದ್ದಾನೆ ತಿರುಮಲಯ್ಯ! ವೆಂಕಟಸುಬ್ಬಯ್ಯನಿಗೆ ನಮಸ್ಕರಿಸಿ ಮೇಲೆ ಎದ್ದವನೇ ತಿರುಮಲಯ್ಯ, ಕೈಯಲ್ಲಿದ್ದ ಕಪ್ಪ, ಹೊದ್ದ ಜರತಾರಿ ಶಾಲನ್ನು ವೆಂಕಟಸುಬ್ಬಯ್ಯನ ಕಾಲ ಬಳಿ ಇಟ್ಟು, ಗದ್ಗದ ಗಾತ್ರದ ಕಣ್ಣೀರು ಸುರಿಸುತ್ತಾ ಯಾರೊಂದಿಗೂ ಮಾತನಾಡದೆ, ದುರ್ದಾನ ತೆಗೆದುಕೊಂಡವನಂತೆ ಧಡಧಡ ಎದ್ದು ಹೋದ."

"ಮರುದಿನ ಲಿಂಗಣ್ಣನ ವರತಿಯಲ್ಲಿ, ತಿರುಮಲಯ್ಯನ ಹೆಣ ತೇಲಿತು !"

"ಊರಲ್ಲಿ ಎಲ್ಲರೂ ವೆಂಕಟಸುಬ್ಬಯ್ಯನ ಹಾಡುಗಾರಿಕೆಯನ್ನು ಹೊಗಳುವವರೇ. ಎಷ್ಟೋ ಜನ ನರಸಿಂಹಜೋಯಿಸರಿಗೆ 'ಸ್ವಾಮಿ! ಮುತ್ತಿನಂಥ ಮಗ! ಮಗ ಎಂದರೆ ಹೀಗಿರಬೇಕು. ಇಂಥ ಮಕ್ಕಳಿದ್ದರೆ ಹಡೆದ ಹೊಟ್ಟೆಗೆ ಹೊನ್ನಕಳಶವಿಟ್ಟಂತೆ' ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆದರೆ ಅವರಿಗೆ ಮಾತ್ರ ಮಗನ ಗೆಲುವ ಹಿತವಾಗಲಿಲ್ಲ. 'ಏನಾದರೇನು? ಗುರುವಿನ ಜೀವ ತಿಂದ. ತುತ್ತು ಅನ್ನ ಇಟ್ಟವನನ್ನೂ, ಒಂದು ಅಕ್ಷರ ಕಲಿಸಿದವರನ್ನೂ ಹಿರಿಯರೆಂದು ಗೌರವಿಸಬೇಕು. ಅದಿಲ್ಲದೇ ಹೋದಮೇಲೆ ಏನಿದ್ದರೇನು? ಏನು ಪ್ರಾಯಶ್ಚಿತ್ತವಾಗಿ ಈ ಪಾಪ ಕಳೆಯಬೇಕೋ? ಎಂದರು ಮಂಕಾದ ಮುಖದಿಂದ. ಊರವರೆಲ್ಲಾ ಮೆಚ್ಚಿದ ಮಗನೊಂದಿಗೆ ಹೆಚ್ಚು ಮಾತನಾಡುವುದನ್ನು ಕೂಡಾ ಬಿಟ್ಟುಬಿಟ್ಟರು. ಯಾರಾದರೂ 'ಈ ವಯಸ್ಸಿಗೆ ಇಂಥ ವಿದ್ಯೆ' ಎಂದರೆ 'ಸೇವೆ, ಸಾಧನೆಯಿಲ್ಲದೆ ಬಂದದ್ದು ವಿದ್ಯೆಯೇ ? ಸೂರ್ಯರಶ್ಮಿ ಸೋಕಿದಾಗ ಗಾಜಿನ ತುಂಡು ವಜ್ರದ ಹಾಗೆ ಹೊಳೆಯುತ್ತದೆ. ಬಳಿಕ ಗಾಜು ಗಾಜೇ, ವಜ್ರ ವಜ್ರವೇ. ಚೆನ್ನಾಗಿ ಕಲಿತು ಕೀರ್ತಿ ತಂದಾಗ ಆ ಮಾತು. ಈಗೇನು?' ಎನ್ನುವರು. ಆ ಮಾತು ಕೇಳಿ ವೆಂಕಟಸುಬ್ಬಯ್ಯವನ್ನು ಹೊಗಳಹೋದವರೂ ಪೆಚ್ಚಾಗಿ ಹಿಂದಿರುಗುವರು."

"ಆ ದಿನದಿಂದ ನರಸಿಂಹ ಜೋಯಿಸರು ಮಗನೊಂದಿಗೆ ಆದಷ್ಟು ದೂರವಾಗತೊಡಗಿದರು; ಮಾತೂ ಕಡಮೆ ಮಾಡಿದರು. ಆಡಿದರೂ ದೂರದ ಗೆಳೆಯನೊಂದಿಗೆ ಮಾತನಾಡುವಂತೆ. ಊರ ಜನರಂತೆ, ತಂದೆಯಿಂದಲೂ ಹೊಗಳಿಕೆಯನ್ನು ನಿರೀಕ್ಷಿಸಿದ್ದ ವೆಂಕಟಸುಬ್ಬಯ್ಯ, ಅವರ ವಿಚಿತ್ರ ರೀತಿಯನ್ನು ಕಂಡು ಪೆಚ್ಚಾಗಿ ಕೊರಗಿದ. ಹೀಗೇಕೆ ಎಂದು ಆ ತಂದೆಯನ್ನು ಘಟ್ಟಿಸಿ ಕೇಳುವುದಕ್ಕುಂಟೆ? ಹಾಗೂ ಒಂದು ದಿನ, 'ನನ್ನನ್ನು ಕಂಡರೆ ಹೀಗೇಕೆ ಮಾಡುತ್ತೀರಿ?' ಎಂದು ಕೇಳಿದರೆ, 'ತಂದೆ ಮೆಚ್ಚಿದರೆ ಮಗನ ಶ್ರೇಯಸ್ಸು, ಗುರು ಮೆಚ್ಚಿದರೆ ಶಿಷ್ಯನ ಕೀರ್ತಿ. ಕಲಿಸಿದ ಗುರುವಿಗೇ ಉರುಲಾದವನು, ಯಾರೂ ಮೆಚ್ಚಲಿಲ್ಲ ಎಂದು ಕೊರಗುವುದೇಕೆ ? ಆದದ್ದಾಯಿತು. ನಿನ್ನ ಅದೃಷ್ಟವಿದ್ದ ಹಾಗೆ ಆಗಲಿ. ಬುದ್ಧಿಗೆ ಹಟದ ಮದ್ಯಪಾನ ಮಾಡುವುದನ್ನು ಅಭ್ಯಾಸ ಮಾಡಿಸಿದೆ. ಅದು ಮೆಚ್ಚಬೇಕಾದುದೇ? ಇದರಿಂದ ಒಳಿತಾದೀತೇ ?' ಎಂದು ಮರುಪ್ರಶ್ನೆ ಕೇಳಿದರು. ವೆಂಕಟಸುಬ್ಬಯ್ಯ ಆ ಮಾತಿಗೆ ಏನೂ ಉತ್ತರ ಕೊಡಲಾಗದೆ ಸುಮ್ಮನಾದ.



"ತಿರುಮಲಯ್ಯನ ಮೇಲೆ ವೆಂಕಟಸುಬ್ಬಯ್ಯ ಹಾಡಿ ಗೆದ್ದಾಗ, ಎಲ್ಲರೂ ಆತನನ್ನು ಹೊಗಳಿದರೂ, ಆದರಿಂದ ಆತನ ಮುಂದಿನ ವಿದ್ಯೆಗೆ ಕಾಲು ಕತ್ತರಿಸಿದಂತಾಯಿತು. ಎಲ್ಲರಿಗೂ ಆ ದಿನ ವೆಂಕಟಸುಬ್ಬಯ್ಯ ಹಾಡಿದುದು ವಿದ್ಯೆಯಲ್ಲ – ಏನೋ ಒಂದು ಪವಾಡ ಎಂಬ ಭಾವನೆ. ಎಂತಲೇ ಊರಿನಲ್ಲಿ ಸಂಗೀತ ಕಲಿಸಬಲ್ಲ ಶಕ್ತಿಯಿದ್ದವರೆಲ್ಲರಿಗೂ ಆತನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಲು ಏನೋಭಯ, ಅನುಮಾನ. ಅದರ ಜೊತೆಗೆ, ತಿರುಮಲಯ್ಯನ ಸಾವೂ ಆ ಭೀತಿಗೆ ಪೋಷಕವಾಗಿತ್ತು, ಹೀಗಾಗಿ ಎಲ್ಲರೂ ಆತನನ್ನು ಮೆಚ್ಚಿಕೊಂಡರೂ, ಅದು ಹತ್ತಿರ ಕರೆವ ಮೆಚ್ಚುಗೆಯಲ್ಲ, ದೂರದ ಅಭಿಮಾನ. ದಿನಕಳೆದಂತೆ ವೆಂಕಟಸುಬ್ಬಯ್ಯನಿಗೂ ತನ್ನ ಹಟದ ದಾಳ ಸರಿಯಾಗಿ ಉರುಳಲಿಲ್ಲ ಎಂಬುದು ಅರಿವಾಯಿತು. ತನಗೆ ಸಂಗೀತ ಕಲಿಸಲು ಮುಂದೆ ಬರುವವರಿಲ್ಲವೆಂದು ತಿಳಿದ ಹಾಗೆ, ಆತನಲ್ಲಿ ಸಂಗೀತ ಕಲಿಯಬೇಕೆಂಬ ದಾಹ ಹೆಚ್ಚಾಗತೊಡಗಿತ್ತು. ತನ್ನ ಹಾಡುವಿಕೆಯಲ್ಲಿ ಕೊರತೆ, ಲೋಪದೋಷ ಹೆಚ್ಚುಹೆಚ್ಚಾಗಿ ಕಾಣತೊಡಗಿತು. ಹಾಗೆನಿಸಿದಾಗ, 'ಆ ದಿನ ನಾನು ಕಲ್ಯಾಣಿ ರಾಗ ಅಷ್ಟು ಚೆನ್ನಾಗಿ ಹೇಗೆ ಹಾಡಿದೆ, ಯಾವ ಶಕ್ತಿಯ ಬಲದಿಂದ ?' ಎಂದು ಯೋಚಿಸಿದನು. ಹುಟ್ಟಿನೊಂದಿಗೆ ಬೆಳೆದು ಬಂದ ಭಕ್ತಿ, ಆ ದಿನ ಅವನು ಹಾಡುವ ಮೊದಲು, ದಿನವಿಡೀ ದೇವರ ಧ್ಯಾನಮಾಡಿ, ಆ ದಿನ ತನ್ನನ್ನು ಗೆಲಿಸು ಎಂದು ಬೇಡುವಂತೆ ಮಾಡಿತ್ತು. ಅದೇ ಶಕ್ತಿಯೇ ತನ್ನನ್ನು ಹಾಗೆ ಹಾಡಿಸಿದುದು ? ಹಾಗಾದರೆ ಆದಾದ ಬಳಕ ಮತ್ತೆ ಅದು ಕಣ್ಣುಮರೆಯಾದುದೇಕೆ ? ದಿನವೂ ಹಾಡಲೆತ್ನಿಸುವಾಗ ಅದೇಕೆ ತನ್ನ ನೆರವಿಗೆ ಬರುವುದಿಲ್ಲ ? ಎಂದು ತಾಯಿಯನ್ನು ಕಳೆದುಕೊಂಡ ತಬ್ಬಲಿಯಂತೆ ಚಿಂತಿಸತೊಡಗಿದ. ಒಂಟಿಯಾಗಿ ಎಲ್ಲಾದರೂ ಕುಳಿತುಕೊಂಡು ಹಾಡುವಾಗ ಕಲಿತ ರಾಗವೂ, ಕೈಗೆ ಸಿಕ್ಕುವಂತೆ ಹತ್ತಿರ ಹಾರಿ, ತಟಕ್ಕನೆ ದೂರಕ್ಕೆ ಹಾರಿ, ಆಟವಾಡಿಸುವ ಪತಂಗದಂತೆ ಹತೋಟಿಗೆ ಸಿಗದೆ ಆಟ ಆಡಿಸುವುದು. ತುಂಬಿ ಹರಿವ ಹೊಳೆ ಇದ್ದಕ್ಕಿದ್ದ ಹಾಗೆ ಬತ್ತಿ ಹೋದಂತೆ ಎದೆಯಲ್ಲಿ ಉಕ್ಕಿಬಂದ ಭಾವಪ್ರವಾಹ, ಹಾಗೇ ಕಣ್ಣುಮರೆಯಾಗುವುದು. ಒಂದು ಗಳಿಗೆ ಬೆಳಕು, ಮರುಗಳಿಗೆ ಕತ್ತಲು, ಇದಾವಕಾಟ? ಗ್ರಹಚಾರವೇ, ಗುರುಶಾಪವೇ? – ಎಂದು ಒದ್ದಾಡುವನು."

"ಈ ಕತ್ತಲ ಹೊತ್ತಿನಲ್ಲಿ ಯಾರಾದರೂ ತನ್ನ ಕೈಹಿಡಿದು ನಡೆಸಬಾರದೆ ಎಂದು ಚಿಂತಿಸುವನು. ಆದರೆ ಅವನ ಪಾಲಿಗೆ ಆ ಕತ್ತಲ ದಾರಿಯಲ್ಲಿ ಕೈಹಿಡಿದು ನಡೆಸುವವರು ಯಾರೂ ಕಾಣಲಿಲ್ಲ. ಅದರ ಜೊತೆಗೆ ತನ್ನ ಹಟ ತಿರುಮಲಯ್ಯನ

ಸಾವಿಗೆ ಕಾರಣವಾಯಿತಲ್ಲ ಎಂಬ ಕೊರಗು ಬೆರೆಯಿತು. ಹಟ ಮಾಡಿ ತಾನು ಗೆದ್ದದ್ದೇನು ಎಂದು ಯೋಚಿಸುವನು. ಕಲಿಸುವ ಗುರುವನ್ನು ಕಳೆದುಕೊಂಡು, ಕಲಿಸಬಲ್ಲವರಿಗೆ ದೂರವಾದ. ಇಷ್ಟೇನೇ ಫಲ ? ಆ ಹೊತ್ತಿನಲ್ಲಿ ಆತನಿಗೆ ಯಾರಲ್ಲಾದರೂ ತನ್ನ ದುಃಖವನ್ನು, ಒಳತೋಟಿಯನ್ನು ಹೇಳಿಕೊಂಡು, ಈ ವಿಷಘಟ್ಟದಿಂದ ಪಾರಾಗಬೇಕು ಎನಿಸಿತು."

"ಆದರೆ ಯಾರಲ್ಲಿ ಹೇಳಿಕೊಳ್ಳಬೇಕು ? ತಂದೆಯಲ್ಲಿ ತನ್ನ ಹೃದಯದ ಯಾತನೆಯನ್ನು ಬಿತ್ತರಿಸಿ ಹೇಳುವಷ್ಟು ಸಲಿಗೆಯಿಲ್ಲ. ಜೊತೆಗೆ ಈ ಸ್ಪರ್ಧೆ ನಡೆದ ಮೊದಲೇ, ಅವರೂ 'ಇದು ಸಲ್ಲದು' ಎಂದು ಬುದ್ಧಿವಾದ ಹೇಳಿದ್ದರೂ, ಕುರುಡುಹಟಕ್ಕೆ ಬಲಿಯಾಗಿ ಅವರ ಮಾತು ಕೇಳಿರಲಿಲ್ಲ. ಸ್ಪರ್ಧೆ ನಡೆದ ಮೇಲೆ ಅವರು ಮೊದಲಿಗಿಂತ ದೂರವಾಗಿದ್ದರು. ಇಂಥ ವಿಚಾರಗಳನ್ನು ಹೇಳಿಕೊಳ್ಳುವಂತಹ ಗೆಳೆಯರೂ ಆತನಿಗೆ ಇರಲಿಲ್ಲ. ಹೇಳಿಕೊಂಡರೆ ಒಬ್ಬರಲ್ಲಿ ಹೇಳಿಕೊಳ್ಳಬೇಕು" – ಅದು ಅವನ ಸೋದರಮಾವ.

"ಅನಂತಯ್ಯ, ವೆಂಕಟಸುಬ್ಬಯ್ಯನ ಸೋದರಮಾವ, ಅಂದರೆ ತಾಯಿಯ ಅಣ್ಣ. ಆತನಿಗೆ ವೆಂಕಟಸುಬ್ಬಯ್ಯನಲ್ಲಿ ಚಿಕ್ಕಂದಿನಿಂದಲೂ ತುಂಬಾ ಪ್ರೀತಿ. ಯಾವಾಗಲಾದರೂ ದುರ್ಗಕ್ಕೆ ಬಂದಾಗ ಹೆಚ್ಚು ಹೊತ್ತನ್ನು ಇವನ ಜೊತೆಯಲ್ಲಿಯೇ ಕಳೆಯುವನು. ಹುಡುಗನಿಗೆ ಬೇಕಾದ್ದನ್ನು ಕೊಡುವನು. ಆತ ದುರ್ಗದಲ್ಲಿ ಇದ್ದಷ್ಟು ದಿನ, ಪ್ರತಿದಿನವೂ ಇಬ್ಬರೂ ಸಂಜೆಯ ಹೊತ್ತು ತಿರುಗಾಡಲು ಹೋದಾಗ, ಅನಂತಯ್ಯ ವೆಂಕಟಸುಬ್ಬಯ್ಯನ ಕೈಲಿ ಹಾಡು ಹೇಳಿಸಿ ಕೇಳಿ ಮೆಚ್ಚುವನು. ಚೆನ್ನಾಗಿ ಕಲಿ ಎಂದು ಪ್ರೋತ್ಸಾಹಿಸುವನು."

"ಹಾಡುವ ಹಕ್ಕಿ, ಹಸಿರು ತೋಪು, ಹರಿವ ನೀರು ಸದ್ದು ಮಾಡಿ ಸುಳಿವ ಗಾಳಿ, ಎಲ್ಲದರಲ್ಲೂ ದೈವಿಕವಾದ ಸಂಗೀತವಿದೆ. ಮನುಷ್ಯ ಹಾಡಲು ಕಲಿತುದೇ ಹಕ್ಕಿಯಿಂದ. ಈಗ ಅದನ್ನು ಮರೆತು, ಜನ ಹಾಡುವ ಸಂಗೀತ ಬಹಳ ಕೃತ್ರಿಮವಾಗಿದೆ. ಚೆನ್ನಾಗಿ ಹಾಡಬಯಸುವವನು ಈ ಸಂಗೀತವನ್ನು ಕೇಳಿ, ಸುಖಪಡುವ ಬುದ್ಧಿಯನ್ನು ಬೆಳಸಿಕೊಳ್ಳಬೇಕು" ಎಂದು ಹೇಳುವನು.

"ಒಂದು ರೀತಿಯಲ್ಲಿ ಹೇಳುವುದಾದರೆ, ಅನಂತಯ್ಯನೇ ವೆಂಕಟಸುಬ್ಬುವಿಗೆ ಮೊದಲ ಸಂಗೀತ ಗುರುವಾಗಿದ್ದ ಎನ್ನಬೇಕು. ಹುಡುಗನಿಗೆ ಸಂಗೀತದಲ್ಲಿ ಹೆಚ್ಚು ಅಭಿಲಾಷೆಯಿದೆಯೆಂದು ತಿಳಿದಾಗ, ಅನಂತಯ್ಯ, ಹುಡುಗನಲ್ಲಿ, ಕಾಷ್ಠದಲ್ಲಿರುವ ಅಗ್ನಿಯಂತೆ ಸುಪ್ತವಾಗಿದ್ದ ಶಕ್ತಿಯನ್ನು ಪ್ರಚೋದಿಸಿ ಹೊರತರಲು ಆದಷ್ಟು ಪ್ರೋತ್ಸಾಹ ನೀಡುತ್ತಿದ್ದ. ಅನಂತಯ್ಯನೂ ಸಂಗೀತ ಪ್ರಿಯ, ರಸಿಕ, ಶಾಸ್ತ್ರೀಯವಾಗಿ ಇದು ಈ ರಾಗ, ಇದು ಇದೇ ತಾಳ ಎಂದು ಹೇಳಲಾರನಾದರೂ, ಉತ್ತಮ ಸಂಗೀತವನ್ನು ಅನುಭವಿಸಬಲ್ಲ, ಕೇಳಿ ಆನಂದಿಸಬಲ್ಲ ಶಕ್ತಿ ಅವನಿಗಿತ್ತು. ಆತನ ದೃಷ್ಟಿಯಲ್ಲಿ ಸಂಗೀತ, ಬರೀ ಪಾಂಡಿತ್ಯ ಪ್ರದರ್ಶನ ಸಾಧನವಲ್ಲ, ಸ್ವರ ತಾಳ ಮೇಳದ ದೊಂಬರಾಟವಲ್ಲ – ಹಾಡುವ ಮನಸ್ಸಿಗೆ ಆದ ಆನಂದವನ್ನು, ಕೇಳಿದವರ ಕಿವಿಯಲ್ಲಿ ಎರೆದು, ಆ ಹೃದಯದಲ್ಲೂ ರಸತರಂಗಗಳನ್ನು ಮೂಡಿಸುವ ಮೋಹಿನೀ ವಿದ್ಯೆ. ಇದೇ ಮಾತನ್ನೇ ಅತ, ತೋಪಿನ ಹುಲ್ಲಿನ ಮೇಲೆ, ಸಂಜೆಯ ಹೊಂಬೆಳಕಿನಲ್ಲಿ ಕಾಲುಚಾಚಿ ಮಲಗಿ, ಹುಡುಗ ವೆಂಕಟಸುಬ್ಬಯ್ಯ ಹಾಡುವಾಗ ಹೇಳುವನು. ವೆಂಕಟಸುಬ್ಬಯ್ಯನ ಅಪರಿಣತ, ಆದರೆ ಭಾವ ಪೂರ್ಣ ಸಂಗೀತ ಆತನಿಗೆ ಆ ಬಗೆಯ ಆನಂದವನ್ನು ನೀಡುವುದು. ಸಂತೋಷಭರವಾದ ಧ್ವನಿಯಲ್ಲಿ ಹೇಳುವನು."

"ನೋಡು ವೆಂಕಟಸುಬ್ಬು, ಆಂಜನೇಯ ಗುಂಡಕ್ರಿಯಾ ರಾಗದಲ್ಲಿ ಹಾಡಿದಾಗ ಕಲ್ಲುಬಂಡೆಗಳು ಕರಗಿ ನೀರಾಗುತ್ತಿದ್ದವಂತೆ. ಅದೆಲ್ಲಾ ದೇವಯುಗದ ಮಾತಾಯಿತು. ಈ ಕಾಲದಲ್ಲಿ ಅದೆಲ್ಲಾ ಸಾಧ್ಯವಿಲ್ಲ. ಆದರೆ ಕಲ್ಲು ಕರಗದೆ ಹೋದರೆ ಹೋಗಲಿ, ಕೇಳುವವರ ಮನಸ್ಸಾದರೂ ಕರಗಬೇಕು. ನೀನು ಹಾಗೆ ಹಾಡುವುದನ್ನು ಅಭ್ಯಾಸ ಮಾಡಬೇಕು. ಬಾಲ ಕುಶ–ಲವರು ಹಾಡಿದಾಗ, ಪ್ರಭು ರಾಮಚಂದ್ರ ತಾನೇ ಬಿಟ್ಟ ಪತ್ನಿಯನ್ನು ನೆನೆದು ಹಂಬಲಿಸಿದನಂತೆ. ನೀನೂ ಹಾಗೆ ಒಬ್ಬ ಕುಶನೋ–ಲವನೋ ಆಗಬೇಕು. ಆಗುತ್ತೀಯ ಅಲ್ಲವೇ?" ಎಂದು ಪ್ರಶ್ನೆ ಮಾಡುವನು. ಆ ಮಾತು ಬರೀ ಪ್ರಶ್ನೆಯಿಲ್ಲ, 'ನೀನು ಹಾಗಾಗು' ಎಂಬ ಆಶೀರ್ವಾದದ ಭಾವನೆಯಿಂದ 'ನೀನು ಹಾಗಾಗಬೇಕು. ಅದೇ ಬಾಳ ಗುರಿ' ಎಂಬ ಹಾರೈಕೆಯಿಂದ ತುಂಬಿರುತ್ತಿತ್ತು.

"ಅನಂತಯ್ಯನ ಬಾಯಿಂದ ಈ ಮಾತನ್ನು ಕೇಳಿದಾಗ, ವೆಂಕಟಸುಬ್ಬಯ್ಯನ ಹೃದಯ ಯಾವುದೋ ಬಯಕೆಯಿಂದ, ಏನೋ ಭರವಸೆಯಿಂದ, ಎಂಥದೋ ನಿರೀಕ್ಷೆಯಿಂದ ಪುಲಕಿತವಾಗುವುದು. ಮುಗಿಲಲ್ಲಿ ಅಸ್ತಮಯ – ಸಮೀಪ ಸೂರ್ಯಕಾಂತಿಯ ಬಂಗಾರದ ಹೊರೆ ಹೊತ್ತು ತೇಲುವ ಬಿಳಿ ಮೋಡವನ್ನು ನೋಡುತ್ತಾ ಮಾತು ಮರೆತು ಕೂತುಬಿಡುವನು. ಆ ಮೋಡದ ಮರೆಯಿಂದ ಅವ್ಯಕ್ತಗಾನಧಾರೆಯೊಂದು, ಬಾನಿನಿಂದ ನೆಲಕ್ಕಿಳಿದು ಅವನ ಎದೆಯನ್ನು ಪ್ರವೇಶಿಸಿದಂತಾಗುವುದು, ಅವನಿಗೆ ಅನಂತಯ್ಯ ಜೊತೆಗಿದ್ದಾಗ, ಎಷ್ಟೋ ಬಾರಿ ಈ ಅನುಭವವಾಗಿತ್ತು, ವೆಂಕಟಸುಬ್ಬಯ್ಯನಿಗೆ. ದೊಡ್ಡವನಾದಾಗಲೂ ಈ ಮಾತನ್ನು ಆಗಾಗ ನೆನಸಿಕೊಳ್ಳುತ್ತಿದ್ದನಂತೆ.

“ಈ ಬಗೆಯ ಪರಸ್ಪರ ಸಹಾನುಭೂತಿಯಿಂದಾಗಿ, ಅವರಿಬ್ಬರಲ್ಲೂ ತೀವ್ರ ಆತ್ಮೀಯತೆ ಬೆಳೆದಿತ್ತು. ಯಾರೊಂದಿಗೂ ಹೆಚ್ಚಿಗೆ ಬೆರೆಯುವ, ಯಾರಲ್ಲೂ ಹೆಚ್ಚು ಮಾತನಾಡದ ವೆಂಕಟಸುಬ್ಬಯ್ಯ, ತನ್ನದೆಯಲ್ಲಿ ಮೂಡಿದ ಭಾವನೆ, ತನ್ನ ಆಸೆ–ಆಕಾಂಕ್ಷೆ, ತನ್ನ ಕೊರಗು–ಕನವರಿಕೆ ಎಲ್ಲವನ್ನೂ, ಅನಂತಯ್ಯನೊಂದಿಗೆ ಹೇಳಿಕೊಳ್ಳುವನು. ಆಗಾಗ ತಂಗಿಯ ಮನೆಗೆ ಬರುವ ಅನಂತಯ್ಯ, ಬೇರೆ ಕೆಲಸಗಳಿದ್ದರೂ ಬಿಟ್ಟು, ಅವಕಾಶಮಾಡಿಕೊಂಡು ವೆಂಕಟಸುಬ್ಬಯ್ಯನ ಮಾತು ಕೇಳಿ, ಹೋಗುವಾಗ ಅವನ ಹೃದಯದಲ್ಲಿ ಮತ್ತಷ್ಟು ಉತ್ಸಾಹ ತುಂಬಿ ಹೋಗುವನು. ಸೋದರಮಾವ ಹೋದ ಬಳಿಕ ನಾಲ್ಕಾರು ದಿನ ವೆಂಕಟಸುಬ್ಬಯ್ಯನ ಹೃದಯ ಯಾವುದೋ ಅವ್ಯಕ್ತ ಗೂಂಜಾರವದ ನಾದತರಂಗದಲ್ಲಿ, ಅಲೆಯ ಮೇಲಿನ ಬೆಂಡಿನಂತೆ ತೇಲಾಡುತ್ತಿರುವುದು.”

“ಅನಂತಯ್ಯ ತಮ್ಮ ಮಗನನ್ನು ಪ್ರೋತ್ಸಾಹಿಸುವ ವಿಚಾರದಲ್ಲಿ ಆತನಿಗೂ ನರಸಿಂಹ ಜೋಯಿಸರಿಗೂ ಕೆಲವು ವೇಳೆ ಮಾತುಕತೆಯಾಗಿತ್ತು. ಜ್ಯೋತಿಷ್ಯದಲ್ಲಿ ಅದ್ಭುತಪಂಡಿತರಾದ ನರಸಿಂಹ ಜೋಯಿಸರಿಗೆ, ತಮ್ಮ ಮಗ ಮುಂದೆ ಏನಾಗುವನೋ, ಆತನ ಭವಿಷ್ಯ ಎಂತಾಗುವುದು ಎಂದು ತಿಳಿದಿದ್ದರೂ ಎಷ್ಟೋ ಬಾರಿ ಅವರೂ, ‘ತಮ್ಮ ಒಬ್ಬನೇ ಮಗ ತಮ್ಮಂತೆ ಆಗಬೇಕು, ತಮ್ಮ ವಿದ್ಯೆಯನ್ನು ಶ್ರದ್ಧೆಯಿಂದ ಕಲಿತು, ತಮ್ಮಂತೆಯೇ ಮನೆತನದ ಹೆಸರನ್ನು ಕಾಪಾಡಿ ಬೆಳೆಸಬೇಕು’ ಎಂಬ ತಂದೆಗೆ ಸಹಜವಾದ ಚಾಪಲ್ಯಕ್ಕೆ ಬಲಿಯಾಗುತ್ತಿದ್ದರು. ಆಗಾಗ ಮಗನಿಗೆ ತಮ್ಮ ವಿದ್ಯೆಯನ್ನು ಕಲಿಸಲು ಪ್ರಯತ್ನಿಸಿ, ಅದರಲ್ಲಿ ಅವನ ಮನಸ್ಸು ಓಡದಿರುವುದನ್ನು ಕಂಡು ಬೇಸರಪಡುವರು. ಅಂಥ ಹೊತ್ತಿನಲ್ಲಿ ಅವರ ಮನಸ್ಸು ಹೊತ್ತದ ಒಲೆಯಂತೆ ಬರೀ ಹೊಗೆಯಾಡುವುದು. ತಮ್ಮ ಭಾವಮೈದುನನ ಮೇಲೂ ಬೇಸರವಾಗುವುದು.”

“ಅನಂತೂ, ವೆಂಕಟಸುಬ್ಬುವಿಗೆ ಮೊದಲೇ ವಿದ್ಯೆಯಲ್ಲಿ ಮನಸ್ಸಿನಲ್ಲ. ನೀನೂ ಅವನಿಗೆ ಪ್ರೋತ್ಸಾಹವಾದರೆ ಹೇಗೆ? ಅವನು ನನ್ನ ಮಗ, ನಿಜ, ಆದರೆ ನನ್ನ ಮಾತು ಅವನಿಗೆ ಬೇಕಿಲ್ಲ; ನಿನ್ನ ಮಾತು ಕೇಳುತ್ತಾನೆ. ನೀನಾದರೂ ಅವನಿಗೆ ಸರಿಯಾದ ಬುದ್ಧಿಯನ್ನು ಹೇಳಿ ದಾರಿಗೆ ತರುವುದನ್ನು ಬಿಟ್ಟು ಕುಣಿಯುವ ಕಾಲಿಗೆ ಗೆಜ್ಜೆ ಕಟ್ಟುವುದೇ ?” ಎನ್ನುವರು.

“ಎಲ್ಲಾ ಬಲ್ಲವನು ನೀನೂ ಹೀಗೆ ಮಾತಾಡುವುದೇ, ಭಾವ ? ಸಂಗೀತವೂ ವಿದ್ಯೆಯಲ್ಲವೆ ? ಅವನಿಗೆ ಬೇಕಾದುದನ್ನು ಅವನು ಕಲಿಯಲಿ. ಹುಡುಗ ಸಂಗೀತವೆಂದರೆ ಕಿವಿ ಕೊಯ್ಯಿಸಿಕೊಳ್ಳುತ್ತಾನೆ. ಹಾಗೇ ಮುಂದೆ ಬರಲೇಳು” ಎಂದು ಅನಂತಯ್ಯ ಅವರಿಗೆ ಸಮಾಧಾನ ಮಾಡಲೆತ್ನಿಸುವನು.

“ಅದೆಲ್ಲಾ ಸರಿ, ಅನಂತೂ. ನನಗೂ ಅರ್ಥವಾಗುತ್ತದೆ. ಹತ್ತು ಮಕ್ಕಳಿದ್ದರೆ, ಇದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ಇರುವವನು ಒಬ್ಬನೇ. ಅವನೂ ಮನೆಯ ಹೆಸರು ಉಳಿಸದೆ ಹೋದರೆ ? ಮನೆಯ ಹೆಸರು, ಮನೆತನದ ವಿದ್ಯೆ ನನಗೆ ಕೊನೆಯಾಗಬೇಕೆ ? ಅವನು ಸಂಗೀತ ಕಲಿಯಲು ನಾನು ಬೇಡ ಎನ್ನುವುದಿಲ್ಲ; ಅದು ತಪ್ಪು ಎಂತಲೂ ಹೇಳುವುದಿಲ್ಲ. ತಾಯಿ ತ್ರಿಪುರಸುಂದರಿಗೆ ಅತ್ಯಂತ ಪ್ರಿಯವಾದ ಸಂಗೀತವನ್ನು ನನ್ನ ಮಗ ಕಲಿತರೆ, ನನಗೂ ಅದು ಪ್ರೀತಿಯೇ. ಆದರೆ ಇದನ್ನೂ ಕಲಿತು, ಅದನ್ನು ಕಲಿಯಲಿ. ನೀನೂ ಅವನಿಗೆ ಕೊಂಚ ಬುದ್ಧಿ ಹೇಳು.”

“ಅಗತ್ಯವಾಗಿ ಹೇಳುತ್ತೇನೆ, ಭಾವ, ಆದರೆ ಅವನು ಕೇಳಬೇಕಲ್ಲ ? ಪ್ರಾಸಂಗಿಕವಾಗಿ ನಾನೂ ಎಷ್ಟೋ ಸಲ ಅವನ ಹತ್ತಿರ ಪ್ರಸ್ತಾಪಿಸಿದ್ದೇನೆ. ಆದರೆ ಒಲ್ಲದ ಕುದುರೆಗೆ ನೀರು ಕುಡಿಸುವುದು ಯಾರಿಂದ ಸಾಧ್ಯ ಹೇಳು ?”

“ನೀನಾಡುವುದೂ ನಿಜ ಅನ್ನು. ನನ್ನ ಮನಸ್ಸಿಗೆ ಸಂತೋಷಪಡಿಸಲು ಹುಟ್ಟಿಲ್ಲ ಅವನು. ಹೆತ್ತ ಹೊಟ್ಟೆ ಉರಿಸಿ ಹೆಸರುವಾಸಿಯಾಗಬೇಕೋ ಏನೋ. ನನ್ನ ಅದೃಷ್ಟಕ್ಕೆ ನೀನು ತಾನೇ ಏನು ಮಾಡುತ್ತಿ ?”

– ಎಂದು ವ್ಯಥೆಗೆ ಮಾತಿನ ರೂಪ ಬಂದಂತೆ ಹೇಳಿ ನಿಟ್ಟುಸಿರಿಡುವರು. ನರಸಿಂಹಜೋಯಿಸರು ಆ ಮಾತು ಹೇಳಿದಾಗ ಅನಂತಯ್ಯನ ಹೃದಯಕ್ಕೂ ಬೆಂಕಿಯ ಮೇಲೆ ಹೊರಳಿಸಿದಂತಾಗುವುದು. ಒಂದು ಗಳಿಗೆ ತಂದೆಯ ಮನಸ್ಸಿಗೆ ಸಂತೋಷ ಕೊಡದ ವೆಂಕಟಸುಬ್ಬಯ್ಯನ ಮೇಲೆ ಸಿಟ್ಟುಬರುವುದು.

“ನೀನು ಹೀಗಿದ್ದರೆ ಆಗುವುದಿಲ್ಲ. ಸಂಗೀತಾನ ನಿನಗಾಗಿ ಕಲಿತರೆ, ತಂದೆಯನ್ನು ಸಂತೋಷಪಡಿಸಲಿಕ್ಕೆ ಅವರು ಹೇಳಿಕೊಟ್ಟಿದ್ದನ್ನು ಕಲಿಯಬೇಕು. ಇಲ್ಲದೆ, ನಿನ್ನ ದಾರಿಯಲ್ಲೇ ನೀನಿದ್ದು, ಹೆತ್ತ ಹೊಟ್ಟೆ ಉರಿಸಿದರೆ ಮಗನಾದದ್ದಕ್ಕೆ ಏನು ಸಾರ್ಥಕ ?” ಎಂದು ಆ ವ್ಯಥೆಯ ಹೊತ್ತಿನಲ್ಲಿ ವೆಂಕಟಸುಬ್ಬಯ್ಯನಿಗೆ ಬುದ್ಧಿ ಹೇಳುವನು. ಅವನು ಆ ಮಾತಿಗೆ ಉತ್ತರ ಹೇಳಲಾಗದೆ, ವ್ಯಥೆಯಿಂದ ಕಂಬನಿ ಇಟ್ಟರೆ, ಇವನು ಇಬ್ಬಗೆಯ ವ್ಯಥೆಯ ಕತ್ತರಿಯಲ್ಲಿ ಸಿಕ್ಕು ಹಂಬಲಿಸುವನು.

“ನಿನ್ನ ದಾರಿಯೇ ನಿನಗಾದರೂ, ಆದಷ್ಟು ಹೆತ್ತ ಕರುಳಿಗೆ ಸಮಾಧಾನವಾಗುವಂತೆ ವರ್ತಿಸು. ಈ ಮನೆಯ ಹೆಸರು ಉಳಿಸಲು ಇರುವವನು ನೀನೊಬ್ಬನೇ. ನೀನು ಬೇರೆ ದಾರಿ ಹಿಡಿದೆಯಲ್ಲಾ ಎಂದು ಅವರು ಕೊರಗಿ, ಕಣ್ಣೀರಿಡುತ್ತಾ ಕೊನೆಯುಸಿರೆಳೆದರೆ, ನಿನಗೆ ತಾನೇ ಒಳ್ಳೆಯದಾದೀತೇ ? ವಯಸ್ಸು

ಬಂದ ಹಾಗೇ ವಿವೇಚನೆ ಬರಬೇಕು. ನೀನು ಸಂಗೀತ ಕಲಿಯಲು, ಅವರು ಅಡ್ಡವಾಗುವುದಿಲ್ಲ. ಅವರ ಇಚ್ಛೆಗೆ ನೀನೂ ಅಡ್ಡವಾಗಬೇಡ ನೀವೆಲ್ಲಾ ನಗುನಗುತ್ತಾ ಇದ್ದರೆ, ಒಂದು ಹೋಗುವ ನಮ್ಮ ಮನಸ್ಸಿಗೂ ತಂಪು" ಎಂದು ಬುದ್ಧಿವಾದ ಹೇಳುವನು.

"ಅವನ ಮಾತ ವೆಂಕಟಸುಬ್ಬಯ್ಯನಿಗೆ ಸರಿ ಎಂದು ತೋರಿ ತಂದೆ ಹೇಳಿಕೊಡುವ ಜ್ಯೋತಿಷ್ಯವನ್ನೂ ಕಲಿಯಲೆತ್ನಿಸುವನು. ರಾತ್ರಿಯ ಹೊತ್ತು ಅವರು ನಕ್ಷತ್ರಗಳನ್ನು ತೋರಿಸಿ 'ಇದು ಶುಕ್ರ, ಇದು ಗುರು, ಇದು ಸಪ್ತರ್ಷಿ ಮಂಡಲ, ಇದು ಕೃತ್ತಿಕೆ' ಎಂದು ತೋರಿಸಿದಾಗ, 'ಅವು ಈ ರಾಶಿಗೆ ಬಂದರೆ ಈ ಫಲ' ಎಂದು ಹೇಳಿದಾಗ ಅವನಿಗೆ ಅದು ಹಿಡಿಯುವುದಿಲ್ಲ. ಗ್ರಹರಾಜನ ಸುತ್ತೂ ಸುತ್ತುವ – ನವಗ್ರಹಗಳು, ಒಂದನ್ನು ಒಂದು ಹಿಂಬಾಲಿಸಿ ನಡೆದ ನಕ್ಷತ್ರರಾಶಿ – ಇವುಗಳನ್ನು ಇರುಳ ತಂಗಾಳಿಯಲ್ಲಿ ನೋಡುವಾಗ, ಅವನ ತಲೆಯಲ್ಲಿ ಜ್ಯೋತಿಷ್ಯಶಾಸ್ತ್ರದ ವಿಚಾರ ಮೂಡದೆ, ಹೃದಯದಲ್ಲಿ ಅವು ಎಲ್ಲವೂ ಯಾವುದೋ ಒಂದು ಕಾಂತಿಪೂರ್ಣ ದಿವ್ಯರಾಗದ, ತೇಜೋವಿರಾಜಿತ ಜೀವ ಸ್ವರಗಳಂತೆ ಕಾಣುವುವು. ವಿಶ್ವವೇ ಒಂದು ವೀಣೆಯಾಗಿ ನಕ್ಷತ್ರದ ತಂತಿಯನ್ನು ಮಿಡಿದಾಗ, ಬೆಳಕಿನ ಹಾಡು ಹೊರಹೊಮ್ಮುವಂತೆ ತೋರುವುದು. ಈ ಭವ್ಯೋಜ್ವಲ ವ್ಯೋಮಗಾನವನ್ನು ಆಲಿಸುತ್ತಾ ಮೈಮರೆಯುವನು, ವೆಂಕಟಸುಬ್ಬಯ್ಯ. ಅವನು ಜೋಯಿಸರು ಹೇಳುತ್ತಿದ್ದ ಮಾತಿಗೆ ಕಿವಿಗೊಡದೆ, ಮೂಕನಾದಾಗ, ಜೋಯಿಸರ ಬಿಸಿಯಾದ ನಿಟ್ಟುಸಿರು ನಿರಾಶೆಯ ತಂಗಾಳಿಯಲ್ಲಿ ಬೆರೆಯುವುದು. ಅವರೂ ಮಾತನಾಡದೆ, ಸುಮ್ಮನೆ ಎದ್ದು ಹೋಗಿ, ಗಂಡ ಬರುವುದನ್ನೇ ಕಾದು, ಹಾಸಿಗೆಯ ಬಳಿ ಕುಳಿತ ಹೆಂಡತಿಗೆ... 'ಅವನ ದಾರಿಯೇ ಅವನಿಗಾಯಿತು, ಜಾನಕಿ. ನಮಗೆ ಬೇಕಾದದ್ದು, ಅವನಿಗೆ ಬೇಕಾಗಲಿಲ್ಲ; ಅವನ ಸುಖ ನಮ್ಮದಾಗಲಿಲ್ಲ' ಎನ್ನುವರು. ಜಾನಕಮ್ಮನವರೂ ಕಂಬನಿಯನ್ನು ಸೆರಗಿನ ತುದಿಯಿಂದ ಒರೆಸಿಕೊಂಡು 'ಮಗನನ್ನು ಕೊಡು ಎಂದು ತಾಯಿಯನ್ನು ಬೇಡಿದೆ. ನನ್ನ ಮಾತು ನಡೆಸುವ ಅವಸರದಲ್ಲಿ ಎಲ್ಲೋ ಹತ್ತಿರವಿದ್ದ ಭೂತಗಣದಲ್ಲಿ ಒಂದನ್ನು ಕಳಿಸಿಬಿಟ್ಟಳೇನೋ. ತಂದೆಗೆ ಸುಖ ಕೊಡುವ ಮಗನನ್ನು ಪಡೆಯುವ ಭಾಗ್ಯ ನನ್ನದಾಗಲಿಲ್ಲ" ಎನ್ನುವರು.

"ಮತ್ತೊಮ್ಮೆ ಅನಂತಯ್ಯ ದುರ್ಗಕ್ಕೆ ಬಂದಾಗ ತಂಗಿಯಿಂದ ಈ ವಿಚಾರ ತಿಳಿದು, 'ದೇವರ ದಾರಿ ನನಗೂ ನಿನಗೂ ಕಾಣುವುದಿಲ್ಲ, ಜಾನಕಿ. ಕಹಿ ಔಷಧದಲ್ಲಿ ಆರೋಗ್ಯವನ್ನು ನೀಡುವ ಬಲವಿರುವಂತೆ, ನಮಗಹಿತವೆಂದು



ಕಾಣುವುದರಲ್ಲೂ, ಯಾವುದೋ ಹಿತವನ್ನು ಹುದುಗಿಸುವುದು ಆತನ ಲೀಲೆ. ಜ್ಯೋತಿಷಿಯಾದರೇನು, ಸಂಗೀತಗಾರನಾದರೇನು – ಅವನಿಂದ ಮನೆಯ ಹೆಸರುಳಿಯಲಿ ಎಂದು ಅಂದುಕೋ. ಹರಳೆಣ್ಣೆಯಾಗಲಿ ಗಂಧದೆಣ್ಣೆಯಾಗಲಿ, ದೀಪ ಉರಿಯುವುದು ಮುಖ್ಯ' ಎಂದು ಆತ ತಂಗಿಗೆ ಸಮಾಧಾನ ಹೇಳುವನು , ಅದೇ ಮಾತನ್ನೇ ವೆಂಕಟಸುಬ್ಬಯ್ಯನಿಗೂ ಹೇಳುವನು– 'ಮನೆಯ ಹೆಸರುಳಿಸುವ ಮಗನಾಗು. ತಂದೆಯ ವಿದ್ಯೆ ಬೇಡವಾದರೆ ಹೋಗಲಿ, ನಿನ್ನ ವಿದ್ಯದಲ್ಲೇ ನಿನ್ನ ತಂದೆ ಗಳಿಸಿದ ಹೆಸರು ಗಳಿಸು. ಅತೋಭ್ರಷ್ಟ ತತೋ ಭ್ರಷ್ಟನಾಗಿ, ಮನೆಗೆ ಮುಳ್ಳಾಗಬೇಡ!' ಎಂದ. ಆ ಮಾತು ಕೇಳಿ, ತಂದೆಗೆ ತನ್ನ ನಡಗೆಯಿಂದ ಅಸಮಾಧಾನವಾಯಿತೇನೋ ಎಂದು ಕುಗ್ಗಿದ ವೆಂಕಟಸುಬ್ಬಯ್ಯ ಮತ್ತೆ ಸುಟಿಯಾಗುವನು. ಹೀಗೇ ನಡೆದಿತ್ತು. ಅನಂತಯ್ಯನ ಮಾತಿನ ಮೇಲೆ ಜೋಯಿಸರು ವೆಂಕಟಸುಬ್ಬಯ್ಯನನ್ನು ತಿರುಮಲಯ್ಯನ ಬಳಿ ಬಿಟ್ಟಿದ್ದು."

"ತಿರುಮಲಯ್ಯನ ಅಹಂಭಾವ, ಇತರರನ್ನು ಹೀಗಳೆದು ಮಾತಾಡುವ ವಿಚಾರದಲ್ಲಿ ತನ್ನ ಅಸಮಾಧಾನವನ್ನು ವೆಂಕಟಸುಬ್ಬಯ್ಯ ಒಂದರೆಡು ಬಾರಿ ಅನಂತಯ್ಯನ ಹತ್ತಿರವೂ ಆಡಿದ್ದ. ಹಾಗೆ ಹೇಳಿದಾಗ ಅನಂತಯ್ಯ – 'ಹಿರಿಯರಲ್ಲಿ ಅವಗುಣ ಅರಸುವುದು ಕಿರಿಯರಿಗೆ ಶ್ರೇಯಸ್ಕರವಲ್ಲ. ಮುಂದಕ್ಕೆ ಬರಬೇಕೆನ್ನುವವನು ತನ್ನ ತಪ್ಪು ಕಂಡು ತಿದ್ದಿಕೊಳ್ಳಬೇಕೆ ವಿನಾ ಇತರರ ಅದರಲ್ಲೂ ಗುರುಗಳ ತಪ್ಪು ಕಾಣಹೋಗಬಾರದು. ಗುರುಭಕ್ತಿ ಇಲ್ಲದವರಿಗೆ ವಿದ್ಯವೆಲ್ಲಿ?"

– ಎಂದು ತಿರುಮಲಯ್ಯ ವೆಂಕಟಸುಬ್ಬಯ್ಯನ ಬಾಯಿ ಮುಚ್ಚಿಸಿದ್ದ.

"ಈಗ ತಿರುಮಲಯ್ಯನ ಮೇಲೆ ಹಟ ಸಾಧಿಸಿ, ಆತನ ಸಾವಿಗೇ ಕಾರಣನಾಗಿ, ಆದರೆ ಪರಿಣಾಮವಾಗಿ ಬಂದ ಕೊರಗಿನ ನಿವಾರಣೆಗೆ ಪರಿಹಾರೋಪಾಯವನ್ನು ಅನಂತಯ್ಯನನ್ನೇ ಹೇಗೆಂದು ಕೇಳುವುದು ? ಎಲ್ಲರಂತೆ ಆತನೂ ತನ್ನನ್ನು ಕಂಡು ಹೇಸಿಕೊಂಡರೆ ? ತನ್ನ ನಡತೆಯಿಂದಾಗಿ ಇದ್ದೊಬ್ಬ ಆಪ್ತನೂ ತನ್ನಿಂದ ದೂರವಾದರೆ ? ಒಂದು ಕಡೆ ಆ ಕೊರಗು – ಇನ್ನೊಂದು ಕಡೆ ಸಂಗೀತ ಪಾಠ ತಪ್ಪಿದ ಕೊರಗು. ಈ ಕೊರಗಿನಲ್ಲಿ ಬಳಲಿ ಬೇಸತ್ತು, ಇರುವುದನ್ನು ಅನಂತಯ್ಯನಿಗೆ ಹೇಳಿಬಿಡುವುದು. ಆತ ದಾರಿ ತೋರಿಸಿದರೆ ಸರಿ. ಇಲ್ಲದೆ ಆತನೂ ದೂರವಾದರೆ ದೇವರೇ ದಿಕ್ಕು!" ಎಂದು ನಿಶ್ಚಯ ಮಾಡಿ, ಅನಂತಯ್ಯ ಊರಿಗೆ ಬಂದಕೂಡಲೇ, ಆತನಿಗೆ ತನ್ನ ಕೊರಗನ್ನು ಅರಿಕೆ ಮಾಡಿಕೊಂಡ, ವೆಂಕಟಸುಬ್ಬಯ್ಯ.

"ಮಾನವನ ಮನ ನೊಂದೀತೆಂದು ಸತ್ಯಕ್ಕೆ ಅಪಚಾರಮಾಡಬಾರದು, ವೆಂಕಟಸುಬ್ಬ. ಹಾಗೆಂದು ಅಪ್ರಿಯವಾದ ಸತ್ಯವನ್ನೂ ಆಡಬಾರದು. ಹಾಗೆಂದು ಉಪನಿಷತ್ತೇ ಸಾರಿದೆ–ನ ಬ್ರೂಯಾತ್ ಸತ್ಯಮಪ್ರಿಯಂ–ಆದರೆ ನಿನ್ನ ಸತ್ಯನಿಷ್ಠುರತೆ, ಗುರುವಿನ ಜೀವಕ್ಕೆ ಎರವಾಗುವಷ್ಟು ದೂರ ಹೋಯಿತು. ಮುಂದೇನು ಮಾಡುತ್ತಿ"– ಎಂದು ಕೇಳಿದ ಅನಂತಯ್ಯ.

"ಏನು ಮಾಡಬೇಕೋ ನನಗಂತೂ ತೋಚುತ್ತಿಲ್ಲ, ಮಾವ, ಹೀಗಾಗುವುದೆಂದು ನನಗೆ ಗೊತ್ತಿರಲಿಲ್ಲ. ಗುರುವನ್ನು ಕಳೆದುಕೊಂಡೆ. ಅಣ್ಣನಿಗೂ ನನ್ನ ಮೇಲೆ ಸಿಟ್ಟು. ಸಂಗೀತ ಕಲಿಸುವವರೂ ನಾನೆಂದರೆ – ಮೂಲಾನಕ್ಷತ್ರದಲ್ಲಿ ಹುಟ್ಟಿದ ಹುಡುಗಿಯನ್ನು ಸೊಸೆಯಾಗಿ ಮಾಡಿಕೊಳ್ಳಲು ಹಿಂಜರಿಯುವವರಂತೆ, ನನ್ನಿಂದ ದೂರ ಸರಿಯುತ್ತಾರೆ. ಗುರುವಿನ ಶಾಪವೋ ಏನೋ– ಈಚೀಚೆಗೆ ಕಲಿತ ರಾಗಗಳೂ ಕೈ ಬಿಡುತ್ತಿವೆ. ನಾನೇನು ಮಾಡಲಿ, ಮಾವ? ನಿರ್ಭಾಗ್ಯನಾದೆ. ನನಗೀಗ ಯಾರು ದಿಕ್ಕು ?"

– ಎದೆಯ ಬೇಗುದಿಯನ್ನೆಲ್ಲಾ ಮಾತಿನಲ್ಲಿ ಹೊಳೆಯಾಗಿ ಹರಿಸಿ, ಅಳುತ್ತಾ ಕೇಳಿದ ವೆಂಕಟಸುಬ್ಬಯ್ಯ.

"ಈಗ ನೀನೇನು ಮಾಡಬೇಕೆಂದುಕೊಂಡಿದ್ದೀಯ ?"

"ನನಗೇನೂ ತಿಳಿಯುತ್ತಿಲ್ಲ. ಎಲ್ಲರಿಗೂ ಹೀಗೆ ಬೇಡವಾಗಿ ಬಾಳುವುದಕ್ಕಿಂತ, ಸತ್ತರೆ ಮೇಲು ಎನಿಸುತ್ತದೆ."

"ಆತ್ಮಹತ್ಯೆ ಹೇಡಿಯ ಅಂತಿಮಸಾಹಸ; ಪುರುಷಪ್ರಯತ್ನದ ಫಲವಲ್ಲ. ವಿರುದ್ಧ ಪರಿಸ್ಥಿತಿಯನ್ನು ಎದುರಿಸಿ ಗೆಲ್ಲುವ ಗಂಡುತನವನ್ನು ಮೆರೆಯದೆ, ಹೀಗೆ ಮುತ್ತೈದೆಯ ಹಾಗೆ ಮಾತನಾಡಿದರೆ ಯಾವ ದೇವರಿಗೆ ಪ್ರೀತಿ ?"

"ಮತ್ತೇನು ಮಾಡಲಿ? ಯಾರೊಬ್ಬರಿಗೂ ಬೇಡವಾದ ನಾನು ಎಲ್ಲಿಗೆ ಹೋಗಲಿ ?"

"ಅತ್ತರೆ, ನಿರ್ವೀರ್ಯನಾದರೆ ಏನು ಫಲ? ನಾವು ಗುರುವೆಂದು ತೋರಿಸಿದವನು ನಿನಗೆ ಕೂಡಿಬರಲಿಲ್ಲ. ಈಗ ನೀನೇ ಗುರುವನ್ನು ಆರಿಸಿಕೋ. ಗುರು ಸಿಗುವವರೆಗೂ ಕಾಯಿ, ಸಿಕ್ಕಾಗ ಆತನ ಕಾಲು ಹಿಡಿದು ಕಲಿ. ಈ ಬಾರಿ ಅವಿಧೇಯನಾದ ಫಲ ಅನುಭವಿಸಿದೆ, ಇದರಿಂದ ಪಾಠ ಕಲಿ."

"ಆದರೆ, ಇಲ್ಲಿ ನನಗೆ ಗುರುಗಳಾಗುವವರು ಇಲ್ಲವಲ್ಲ, ಮಾವ?"

"ನಾಳೆ ಏನಾಗುವುದೆಂದು ಬಲ್ಲವರಾರು? ಕಾದು ನೋಡು. ಗುರು ಸಿಗಬಹುದು. ನಿನ್ನ ಪುಣ್ಯ ಪಕ್ವವಾದಾಗ ಗುರು ತಾನೇ ಬರುತ್ತಾನೆ. ಅಲ್ಲಿಯವರೆಗೂ ಎದೆ ಹಿಡಿದುಕೊಂಡು ಕಾದಿರು. ಹಂಬಲಿಸಿ ವಿಫಲತೆಯ ಕಂಬನಿಗರೆದರೆ, ಆ ಕಣ್ಣೀರಿಗೆ ಹುಲ್ಲುಕಡ್ಡಿ ಕೂಡಾ ಬೆಳೆಯುವುದಿಲ್ಲ. ಈ ಬಾರಿ ನೀನು ಒಂದು ಕೆಲಸ ಮಾಡಬೇಕು..."



"ಏನು ಮಾಡಲಿ, ಮಾವ?"

"ಸುಮ್ಮನೆ ಸಿಕ್ಕಿದವರನ್ನು, ಯಾರೋ ತೋರಿಸಿದವರನ್ನು ನಿನ್ನ ಗುರು ಎಂದು ಒಪ್ಪಿಕೊಳ್ಳಬೇಡ, ಯಾರ ಒತ್ತಾಯಕ್ಕೂ ತಲೆಬಾಗಬೇಡ. ನಿನ್ನ ಮನಸ್ಸು, ಹೃದಯ, ಆತ್ಮ ಯಾರಿಗೆ ತಲೆಬಾಗುವುದೋ ಅವರನ್ನು ಗುರು ಎಂದುಕೊಂಡು ಅವರಿಗೆ ನಿನ್ನ ಬಾಳನ್ನು ಅರ್ಪಿಸು. ನಿನ್ನ ಜೀವನ ಅವರ ಕೈಯ ವೀಣೆಯಾಗಲಿ, ಅವರು ಮಿಡಿದಂತೆ ನುಡಿಯಲಿ. ಈ ಬಗೆಯ ಶರಣಾಗತಿಯೇ ಸಾಧನೆಗೆ ಅಡಿಗಲ್ಲು. ಇನ್ನಾದರೂ ನಿನ್ನ ಮನಸ್ಸು ಗಾಳಿಪಟದಂತೆ ಹಾರಾಡದೆ, ನಕ್ಷತ್ರಕಾಂತಿಯಂತೆ ನಿಶ್ಚಲವಾಗಿದ್ದರೆ, ನಿನ್ನ ಬಯಕೆ ಈಡೇರಬಹುದು. ಈಗಾದುದು ನಾಳಿನ ಬಾಳಿಗೆ ಎಚ್ಚರಿಕೆಯಾಗಲಿ. ಇಂದಿನ ಪಶ್ಚಾತ್ತಾಪ ನಾಳಿನ ನಡತೆಗೆ, ಜೀವನಕ್ಕೆ ಕೈಗೋಲಾಗಲಿ, ಹಾಗೆ ಮಾಡುತ್ತೀಯ ? ದಾಸರು ಒಂದು ಮಾತು ಹೇಳಿದ್ದಾರೆ – ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದು. ಅರಿತುಕೊಂಡು ಹಾಗಿರುವ ನಿರ್ಧಾರ ಮಾಡು."

"ನಾನೇನೋ ಖಂಡಿತ ಹಾಗಿರುತ್ತೇನೆ, ಮಾವ ದೇವರಾಣೆ ಮಾಡಿ ಹೇಳುತ್ತೇನೆ. ಆದರೆ ಗುರು ದೊರಕಬಹುದೇ ನನಗೆ ?"

"ದೊರಕುತ್ತಾನೆ, ವೆಂಕಟಸುಬ್ಬು, ನೀನು ಅಷ್ಟು ನಿರಾಶನಾಗಬೇಕಾಗಿಲ್ಲ. ನೋಡು–ನಮ್ಮ ಇಚ್ಛೆಯೂ ಒಂದು ಶಕ್ತಿ; ಅತ್ಯಂತ ಪ್ರಬಲಶಕ್ತಿ! ಮಸೆದ ಹಾಗೆ ಕತ್ತಿ ಹರಿತವಾಗುವ ಹಾಗೆ, ತೀವ್ರವಾದಷ್ಟೂ, ಉತ್ಕಟವಾದಷ್ಟೂ, ಬಯಕೆ ಶಕ್ತಿಶಾಲಿಯಾಗುತ್ತದೆ. ನೆಲ ತುಂಬಾ ಕಾದಾಗ, ಮಳೆ ಬಂದೇ ಬರುವಂತೆ, ಅತಿ ತೀವ್ರವಾದಾಗ ಬಯಕೆ ಫಲಕಾರಿಯಾಗುತ್ತದೆ."

"ಬಯಕೆಯೇನೋ ಇದೆ. ಅದನ್ನು ತೀವ್ರಮಾಡುವುದು ಎಂದರೇನು ?"

"ನಿನಗೀಗ ಜೀವನದಲ್ಲಿ ಒಂದೇ ಬಯಕೆಯೆ ? ಆಹಾರದ ಬಯಕೆಯಿದೆ, ನಮ್ಮೆಲ್ಲರ ಪ್ರೀತಿಗೆ ಪಾತ್ರನಾಗಬೇಕೆಂಬ ಬಯಕೆಯಿದೆ, ಸಂಗೀತ ಕಲಿಯಬೇಕೆಂಬ ಬಯಕೆಯಿದೆ, ಗುರು ಬೇಕೆಂಬ ಬಯಕೆಯಿದೆ – ಹೀಗೇ ಹುಡುಕುತ್ತ ಹೋದರೆ ಒಂದಲ್ಲ ಹತ್ತಾರು ಬಯಕೆಗಳು ಸಿಗುತ್ತವೆ. ದಾರವನ್ನು ಹೇಗೆ ಬಲಮಾಡುತ್ತಾರೆ, ಗೊತ್ತೆ ?"

"ಹೇಗೆ ?"

"ಒಂಟಿ ಎಳೆ ಯಾವಾಗಲೂ ದುರ್ಬಲ. ಅದಕ್ಕೆ ಹತ್ತಾರು ಎಳೆಗಳನ್ನು ಕೂಡಿಸಿ, ಆ ಹತ್ತಾರು ದುರ್ಬಲ ಎಳೆಗಳು, ಒಂದು ಬಲವಾದ ದಾರವಾಗುವಂತೆ ಹೊಸೆಯುತ್ತಾರೆ. ಹಾಗೇ ನೀನೂ ನಿನ್ನ ಎಲ್ಲ ಬಯಕೆಗಳನ್ನೂ ಬಾಳಿನ ಮುಖ್ಯವಾದ ಬಯಕೆಗೆ ಸೇರಿಸಿ, ಹೊಸೆದು ಅದನ್ನು ಬಲಗೊಳಿಸಬೇಕು. ಈಗ ನಿನಗೆ ಗುರುವಿಲ್ಲದೆ ನಿನ್ನ ಉದ್ಧಾರವಿಲ್ಲ ಎನಿಸಿದೆ, ಅಲ್ಲವೇ ?"

"ಹೂಂ."

"ಅದು ಈಗ ಮೂಲ ಎಳೆ, ಅದಕ್ಕೆ ನಿನ್ನ ಉಳಿದೆಲ್ಲಾ ಬಯಕೆಗಳನ್ನೂ ಸೇರಿಸಿ ಹೊಸೆ; ಹೊಸೆದ ದಾರದಲ್ಲಿ ಅದರಲ್ಲಿ ಸೇರಿದ ಎಳೆಗಳು ಕಾಣದಂತೆ ಬೆರೆಯುವಂತೆ, ನಿನ್ನ ಈ ಬಯಕೆಯಲ್ಲಿ ಉಳಿದೆಲ್ಲ ಬಯಕೆಗಳೂ ಕರಗಿ, ಬಯಕೆ ಏಕಮುಖವಾಗಬೇಕು. ಆಗ ಭೂತಗನ್ನಡಿಯೊಳಗಿನಿಂದ ಹಾದು ಬರುವ ಬೆಳಕಿನ ಕಿರಣದಂತೆ, ನಿನ್ನ ಬಯಕೆಯೂ ಪ್ರಭಾವಶಾಲಿಯಾಗುತ್ತದೆ. ಭೂತಗನ್ನಡಿಯಲ್ಲಿ, ಹಲವಾರು ಬೆಳಕಿನ ಕಿರಣಗಳನ್ನು ಆಕರ್ಷಿಸಿ ಒಂದಾಗಿ ಮಾಡಿ, ಸಂಧಾನ ಮಾಡುವಂತೆ, ನಿನ್ನ ಬಯಕೆಯನ್ನೂ ಸಂಧಾನಮಾಡು. ಆಗ ಅದಕ್ಕೆ ಸಫಲವಾಗುವ ಶಕ್ತಿ ಬರುತ್ತದೆ."

"ಅನಂತಯ್ಯನ ಮಾತು ಕೇಳುತ್ತಾ ವೆಂಕಟಸುಬ್ಬಯ್ಯನಿಗೆ ಹೊಸ ಬೆಳಕು ಕಂಡಂತಾಗಿ ಆಶ್ಚರ್ಯವಾಯಿತು. ತನ್ನ ಬಯಕೆಯನ್ನೇ ಫಲದಾಯಿಯಾದ ಶಕ್ತಿಯನ್ನಾಗಿ ಮಾಡಿಕೊಳ್ಳುವ ವಿಧಾನ ಅವನಿಗೆ ಗೊತ್ತಿರಲಿಲ್ಲ. ಈಗ ಅನಂತಯ್ಯನಿಂದ ಅದನ್ನರಿತು ಅಚ್ಚರಿಯಾಯಿತು. ಆ ಆಶ್ಚರ್ಯದಲ್ಲೇ ಕೇಳಿದ"

"ನಿಜವಾಗಿಯೂ ಹಾಗಾಗುವುದೇ, ಮಾವ?"

"ನಿಜವಾಗಿಯೂ. ನಾನು ಸುಳ್ಳೇಕೆ ಹೇಳಲಿ ? ಗುರುವನ್ನಲ್ಲ, ದೇವರನ್ನು ಕಾಣುವ ದಾರಿಯೂ ಇದೇ. ತನ್ಮಯತೆ, ಏಕಾಗ್ರಚಿತ್ತ, ಸಮಾಧಿ ಎನ್ನುವುದೆಲ್ಲಾ ಇದಕ್ಕೆ ಬೇರೆ ಹೆಸರು. ಜಪ, ಮೂರ್ತಿಧ್ಯಾನ, ವಿಗ್ರಹಾರಾಧನೆ ಬಯಕೆಗಳನ್ನು ಒಂದಾಗಿ ಹೊಸೆವ ವಿಧಾನ. ನಿನಗೆ ಈ ವಯಸ್ಸಿಗೆ ಅದೆಲ್ಲಾ ಅರ್ಥವಾಗುವುದಿಲ್ಲ. ಆದ್ದರಿಂದ ಇಷ್ಟು ತಿಳಿದುಕೊ. ಗುರು ಬೇಕು ತಾನೆ? ಅದನ್ನೇ ಚಿಂತಿಸು. ಉಳಿದ ಕಡೆ ಮನಸ್ಸನ್ನು ಹರಿಯಬಿಡಬೇಡ. ಅಷ್ಟು ಮಾಡು. ನಿನ್ನ ಬಯಕೆ ಈಡೇರುವುದೋ ಇಲ್ಲವೋ ನಿನಗೇ ಗೊತ್ತಾಗುತ್ತದೆ"–ಎಂದರು ಅನಂತಯ್ಯ.

"ಅವರ ಮಾತು ಕೇಳಿ, ವೆಂಕಟಸುಬ್ಬಯ್ಯನಿಗೆ, ಕತ್ತಲಲ್ಲಿ ತಡಕಾಡುವನಿಗೆ ಬೆಳಕು ಸಿಕ್ಕಿದಂತಾಯಿತು. ಅಂದಿನಿಂದ ಆ ಧ್ಯಾನ ಆರಂಭಿಸಿದ. ಗುರು ಇಂದು ಬಂದಾನೇ, ನಾಳೆ ಬಂದಾನೇ ? ಎಂಬುದೇ ಚಿಂತೆ ಆತನಿಗೆ ಮೂರು ಹೊತ್ತು.



ಏಳುವಾಗ ದೇವರೇ, ಈ ದಿನ ನನ್ನ ಗುರು ಪ್ರತ್ಯಕ್ಷವಾಗಲಿ ಎನ್ನುವನು. ಮಲಗುವಾಗ ಇಂದು ಕಾಣದ ಗುರು ನಾಳೆ ಕಾಣಲಿ, ಸ್ವಾಮಿ ಎಂದು ಪ್ರಾರ್ಥಿಸಿ ಮಲಗುವನು. ಹದವಾದ ನೆಲದಲ್ಲಿ ಬಿತ್ತಿದ ಬೀಜದಂತೆ ಪಶ್ಚಾತ್ತಾಪಕೋಮಲವಾದ ಅವನ ಹೃದಯದೊಳಗೆ, ಅನಂತಯ್ಯನ ಮಾತು ಆಳವಾಗಿ ಇಳಿದಿತು. ದಿನಗಳೆದಂತೆ ಅವನ ಬಯಕೆ ಬೆಳೆಯಿತು. ಅವನ ಹೃದಯದೊಳಗೆ ಈ ಬಯಕೆ, ನಿರೀಕ್ಷೆ, ಕಾತರತೆ ಬೆಳೆದಂತೆ, ಹೊರನೋಟಕ್ಕೆ ಆತ ಮಂಕಾಗಿ ಕಾಣತೊಡಗಿದ. ಅನ್ನದ ಚಿಂತೆಯಿಲ್ಲ; ಬಟ್ಟೆ ಹೇಗಿದ್ದರೂ ಸರಿಯೆ; ಕಣ್ಣು ಸದಾ ಅಂತರ್ಮುಖಿ. ಮುಖದಲ್ಲಿ ಮೊದಲಿನ ಹೊಳಪಿಲ್ಲ. ನೋಡಿದವರು 'ವೆಂಕಟಸುಬ್ಬಯ್ಯನಿಗೆ ಏನೋ ಆಗಿ ಹೋಗಿದೆ. ತಿರುಮಲಯ್ಯನ ಸಾವಿನ ರಾವು ಬಡಿದಿರಬೇಕು' ಎಂದಾಡತೊಡಗಿದರು. ದಿನ ಕಳೆದಂತೆ ಜನರಲ್ಲಿ ಆ ಭಾವನೆ ಬೆಳೆದು, ಜನ ಅವನನ್ನು ಕನಿಕರದಿಂದ ನೋಡಲಾರಂಭಿಸಿದರು. ಎಷ್ಟೋ ಜನ, ಜೋಯಿಸರಿಗೆ ಜಾನಕಮ್ಮನವರಿಗೆ 'ಏನಾದರೂ ಗ್ರಹಶಾಂತಿ ಮಾಡಿಸಿ, ಇಲ್ಲವಾದರೆ ಮಗ ಕೈಗೆ ಸಿಗುವುದಿಲ್ಲ" ಎಂದು ಹೆದರಿಸಿದರು. ತಂದೆತಾಯಿಗಳೂ ಈ ಹೊಸ ಕೊರಗಿನಲ್ಲಿ ಕಂಗಾಲಾದರು. ಅವರಿಗೂ ಅವನನ್ನು 'ಹೀಗೇಕೆ ಮಾಡುತ್ತಿ?' ಎಂದು ಕೆಣಕಿ ಕೇಳಲು ಭಯ. ಏನು ಕೇಳಿದರೆ ಏನೋ, ಹೇಗೋ. ಆದರೂ ಒಂದೊಂದು ಬಾರಿ ಕರುಳು ತಡೆಯದೆ, ಜಾನಕಮ್ಮನವರೇ –

"ಏನಪ್ಪಾ ವೆಂಕಟಸುಬ್ಬೂ, ಹೀಗಾದರೆ ಹೇಗೋ?" – ಎನ್ನುವರು.

"ಏನಾಯಿತಮ್ಮ ?" ಎಂದು ಕೇಳುವನು ವೆಂಕಟಸುಬ್ಬಯ್ಯ, ಏನೂ ಅರಿಯದವನಂತೆ.

"ಚೆನ್ನಾಯಿತಪ್ಪ. ಕೈಗೆ ಬಂದ ಮಗ, ಹೊತ್ತುಗೊತ್ತಿಗೆ ಊಟ, ನಿದ್ರೆ ಮಾಡದೆ, ಹುಚ್ಚು ಹಿಡಿದೋರ ಹಾಗೆ ಅಲೀತಾ ಇದ್ದರೆ ಏನು ಮಾಡಬೇಕು. ಹೇಳು ? ನಿನ್ನ ಮೈ ತಡೆಯಬಹುದು. ಆದರೆ ನನ್ನ ಹೊಟ್ಟೆ ತಡೆಯಬೇಕಲ್ಲ" – ಎನ್ನುವರು ಜಾನಕಮ್ಮ ಕಂಬನಿ ಮಿಡಿಯುತ್ತಾ.

"ನನಗೇನು ಆಗಿದೆ ಅಂತ ಕಣ್ಣೀರು ಹಾಕ್ತೀಯಮ್ಮ ? ನನಗೇನೂ ಆಗಿಲ್ಲ."

"ನಿನಗೇನು ಆಗಿಲ್ಲಾಂತೀಯ, ಮೂರುಹೊತ್ತೂ ಏನೋ ಯೋಚನೆ ಮಾಡ್ತೀಯ. ಕೈತುತ್ತು ಬಾಯಿಗೆ ಹೋಗುವುದೋ, ಮೂಗಿಗೆ ಹೋಗುವುದೋ ಅನ್ನೋದು ಕೂಡ ತಿಳಿಯೋಲ್ಲ. ನಿನ್ನ ಚಿಂತೇಲಿ ಅವರು ಅರ್ಧ ಆಗಿಬಿಟ್ಟರು"

"ಸರಿ, ನಿನಗೆಲ್ಲೋ ಹುಚ್ಚು ಅಷ್ಟೇ; ನೀನೇನೂ ಗಾಬರಿಯಾಗಬೇಡ. ನನಗೇನೂ ಆಗಿಲ್ಲ" ಎಂದು ವೆಂಕಟಸುಬ್ಬಯ್ಯ ತಾಯಿಗೆ ಸಮಾಧಾನ ಹೇಳುವನು. ಆದರೆ ಹೆತ್ತ ಹೊಟ್ಟೆಗೆ ಬರೀ ಮಾತಿನಿಂದ ಸಮಾಧಾನವಾದೀತೆ ?

"ಅವರೂ ಏನೇನೋ ಯೋಚಿಸಿದರು. ನಾಲ್ಕು ದಿನ ಊರು ಬಿಡಿಸಿದರೆ ಸರಿಹೋಗಬಹುದೇನೋ ಅಂದುಕೊಂಡರು. ಸುತ್ತಲ ಹೆಂಗಸರ ಮಾತು ಕೇಳಿ, ಮಗನಿಗೆ ಮದುವೆ ಮಾಡಿದರೆ ಸರಿಯಾಗಬಹುದೇನೋ ಎಂದು ಯೋಚಿಸಿ, ಗಂಡನಿಗೆ ಆ ಮಾತು ಹೇಳಿದರು ಜಾನಕಮ್ಮ. ಹೀಗೆ ಅವರಿಗೆ ಸಾವಿರ ಯೋಚನೆ; ವೆಂಕಟಸುಬ್ಬಯ್ಯನಿಗೆ ಒಂದೇ ಯೋಚನೆ – ಗುರು ಎಂದು ಬಂದಾನು, ತನ್ನ ಬಯಕೆ ಎಂದು ಸಫಲವಾದೀತು?".... ಹೀಗೆಯೇ ಹತ್ತಾರು ತಿಂಗಳು ಕಳೆಯಿತು.

"ಒಂದು ದಿನ ಒಳ್ಳೆ ಬೆಳ್ಳಬೆಳದಿಂಗಳ ರಾತ್ರಿ. ವೆಂಕಟಸುಬ್ಬಯ್ಯ ಬಿಸಿಲುಮಾಳಿಗೆಯ ಮೇಲೆ ಮಲಗಿದ್ದ. ನಡುರಾತ್ರಿಯ ಹೊತ್ತು. ಹಾಲು ಸುರಿದ ಹಾಗೆ ಬೆಳದಿಂಗಳು ನೆಲವನ್ನು ತೋಯಿಸಿತ್ತು. ಎಲ್ಲ ಕಡೆಯೂ ನಿಶ್ಯಬ್ಧ. ಆಗಾಗ ಕೋಟೆಯ ಬತೇರಿಯ ಮೇಲೆ ಪಹರೆ ತಿರುಗತ್ತಿರುವವರ ಎಚ್ಚರಿಕೆಯ ಕೂಗಲ್ಲದೆ, ಬೇರಾವ ಸದ್ದೂ ಕೇಳಿಸದು. ಬೇಸಗೆಯ ಕಾಲವಾದುದರಿಂದ, ಬೆಳದಿಂಗಳಿಗೆ ಕಾಂತಿ ಹೆಚ್ಚಾದಂತೆ, ಗಾಳಿಗೆ ಸದ್ದಡಗಿ ಹೋಗಿದೆ. ತಿಂಗಳ ಬೆಳಕಿನ ಕ್ಷೀರಕಾಂತಿಯಲ್ಲ ತೆರೆಯ ಮರೆಯಲ್ಲೆಂಬಂತೆ ಮಂಕಾಗಿ ಹೊಳೆವ ನಕ್ಷತ್ರಗಳನ್ನು, ನಿದ್ರೆ ತುಂಬಿದ ಕಣ್ಣುಗಳಿಂದ ದಿಟ್ಟಿಸುತ್ತಾ ಮಲಗಿದ್ದ ವೆಂಕಟಸುಬ್ಬಯ್ಯ ಎಂದಿನಂತೆ ಅಂದೂ ಆತ, ಅನಂತಯ್ಯ ಹೇಳಿದಂತೆ, ತನ್ನ ಬಯಕೆಗಳನ್ನು ಹೊಸೆಯುತ್ತಾ ಇದ್ದ. ಕಣ್ಣು ಹೊರಗಿನದನ್ನು ಯಾಂತ್ರಿಕವಾಗಿ ಕಾಣುತ್ತಿದ್ದರೂ" ಮನಸ್ಸು ಎದೆಯೊಳಗೇ ಬೆದಕುತ್ತಿತ್ತು.

"ಎಷ್ಟು ಹೊತ್ತು ಮಲಗಿದ್ದನೋ ಏನೋ, ಎತ್ತಲಿಂದಲೋ ಸುಳಿದು ಬಂದ ತಂಗಾಳಿಯಲ್ಲಿ, ಮಧುರ ರಾಗಾಲಾಪದ ಎಳೆಯೊಂದು ತೇಲಿಬಂದು ಅವನ ಕಿವಿಯನ್ನು ಸೋಕಿತು."

"ಆ ರಾಗ ಕಿವಿ ಸೋಕಿದೊಡನೆಯೇ ತಟಕ್ಕನೆ ಮಿಂಚು ಸೋಕಿದವನಂತೆ ಹಾಸಿಗೆಯಿಂದ ಸಿಡಿದೆದ್ದ ವೆಂಕಟಸುಬ್ಬಯ್ಯ. ಹುಲಿಯ ವಾಸನೆ ಸೋಕಿದ ಹರಿಣಿ, ಕಿವಿ ನಿಮಿರಿಸಿ ಸದ್ದಾಲಿಸುವಂತೆ, ಹಾಡಿನ ದನಿ ಎತ್ತಲಿಂದ ಬಂತೆಂದು ಆಲಿಸಿದ. ದೂರದಿಂದ ಗಾಳಿಯಲ್ಲಿ ಭಾರವಾಗಿ ತೇಲಿಬರುತ್ತಿದೆ."

"ಓ! ಎಂಥ ಮನೋಹರ ಧ್ವನಿ! ಜೇನುತುಪ್ಪವನ್ನು ಎಳೆಯಾಗಿ ನಾಲಿಗೆಯ ಮೇಲೆ ಬಿಟ್ಟಂತಿದೆ. ಅದರ ಮಾಧುರ್ಯ, ಎಷ್ಟು ಮಾಧುರ್ಯವೋ ಅಷ್ಟೇ ಖಚಿತವಾದ



ಸ್ವರಸಂಚಾರ; ಮಧುರತೆಯಷ್ಟೇ ಗಂಭೀರತೆ. ಬಯಲಿನಲ್ಲಿ ಹರಿವ, ಆಳವೂ ಅಷ್ಟೇ ವಿಶಾಲವೂ ಆದ ನದಿಯಂತೆ ಗಂಭೀರಗತಿಯಲ್ಲಿ ಹರಿಯುತ್ತದೆ. ಹತ್ತಾರು ಪರಿಜನರ ಗೌರವನ್ನು ಗಂಭೀರವಾಗಿ ಸ್ವೀಕರಿಸುತ್ತ ಕಣ್ಣ ಕೊನೆಯಲ್ಲಿ ಹೊಳೆವ ನೋಟದಿಂದ ತನ್ನ ತೃಪ್ತಿಯನ್ನು ಬೆಳಕಾಗಿ ತುಳುಕಿಸುತ್ತಾ, ಹಂಸಗಮನದಿಂದ ನಡೆದ ದಿವ್ಯ ಸೌಂದರ್ಯಶಾಲಿನಿಯಾದ ಮಹಾರಾಜ್ಞಿಯಂತೆ, ಮನೋಹರ ಮಂದಗಮನದಿಂದ ನಡೆಯುತ್ತಿದೆ ರಾಗ. ಏರು–ಇಳುವಿನಲ್ಲೂ, ವಕ್ರಸಂಚಾರದಲ್ಲೂ ಕೊಂಕಾದ, ನಡೆ ಚಲಿಸಿದ ಲಾಘವದ ಚತುರತೆ ಕಾಣುತ್ತಿದೆ. ಯಕ್ಷನ ಪ್ರಣಯಸಂದೇಶದ ಹೂ–ಭಾರ ಹೊತ್ತ ಮೋಡ, ಮಂದಾನಿಲನ ಅಲೆಯ ಮೇಲೆ ತೇಲುವಾಗ ಹೀಗೆ ಇದ್ದಿತೇನೋ ಎನ್ನಿಸುತ್ತಿದೆ, ರಾಗ ಚಿತ್ರಿಸುವ ಮನಶ್ಚಿತ್ರ. ರಾಗದ ಅವರೋಹಣ ಹೂ–ಮೆಟ್ಟಲುಗಳ ಮೇಲೆ, ತೇಲುತ್ತಾ ಇಳಿವ ಪಲ್ಲವಪಾದದ ಕಿನ್ನರಿಯಂತಿದೆ. ಅದನ್ನು ಕೇಳಿದಾಗ ಎಳೆಗಾಳಿಗೆ ಕೆದರುವ ಸಣ್ಣ ಕಿಡಿಯಂತೆ, ಹೃದಯದಲ್ಲೇನೋ ಹೊತ್ತಿ ಉರಿಯುತ್ತದೆ. ಏನೋ ವ್ಯಥೆ, ಮಧುರವಾದ ವ್ಯಥೆ, ಇನ್ನಷ್ಟು ಬೇಕು ಎನ್ನಿಸುವಂಥ ವ್ಯಥೆ; ಆ ಮಧುರ ಸ್ವರವನ್ನು ನಲ್ಲೆಯಂತೆ ತಬ್ಬಿಕೊಳ್ಳಬೇಕೆಂದು ಬಯಸುವಂಥ ಯಾತನೆ ಎದೆಯನ್ನು ಅಲುಗಿಸುತ್ತದೆ. ಅದನ್ನು ಕೇಳಿದಾಗ, ಹಸುರು ಹುಲ್ಲಿನ ತಡಿಯ ಮೇಲೆ ಮೈಯೊರಗಿಸಿ, ನೀಳವಾದ ಕತ್ತು ಚಾಚಿ, ಅರೆಗಣ್ಣು ಮುಚ್ಚಿ, ತಿಳಿನೀರನ್ನು ನಿಧಾನವಾಗಿ ಹನಿ ಹನಿಯಾಗಿ ಸವಿಯುತ್ತಿರುವ ಹುಲ್ಲೆಯನ್ನು, ಎಲ್ಲೋ ದೂರದಲ್ಲಿ ಅಡಗಿದ್ದ ಬೇಟೆಗಾರ, ಉರಲು ತೂರಿ, ಹಿಡಿದು ಎಳೆದಂತಾಯಿತು, ಅದನ್ನು ಕೇಳಿದ ವೆಂಕಟಸುಬ್ಬಯ್ಯನಿಗೆ. ಅವನು ಎಂದೂ ಅಷ್ಟು ಸೊಗಸಾದ ಹಾಡುಗಾರಿಕೆಯನ್ನು ಕೇಳಿರಲಿಲ್ಲ."

"ಹಾಡು ಕಿವಿ ಸೋಕಿದಾಗಲೇ, ಅದಕ್ಕೆ ಹೃದಯನ್ನು ಅರ್ಪಿಸಿಬಿಟ್ಟಿದ್ದ. ಈಗ ಮೈ ಕೂಡ ಇಲ್ಲಿರಲಾರನೆಂದು ಹೋಗಲು ತವಕಿಸುತ್ತಿದೆ. ಏನು ಮಾಡುತ್ತಿರುವೆನೆಂದು ತಿಳಿಯದೆ, ಹೊದ್ದ ಶಾಲನ್ನು ಹೆಗಲ ಮೇಲೆ ಎಳೆದುಕೊಂಡು, ಹಾಡಿನ ಮೂಲವನ್ನು ಅರಸುತ್ತಾ ಮನೆಯಿಂದ ಹೊರಟು ಬಿಟ್ಟ."

"ಗಾಳಿ ಬೀಸಿದಾಗ ಹಾಡು ಸ್ಪಷ್ಟವಾಗುತ್ತದೆ, ಗಾಳಿ ನಿಂತಾಗ ಅದೂ ಹಾಗೇ ಕರಗಿಹೋಗುತ್ತದೆ. ಸಿಕ್ಕೂ ಸಿಗದಂತೆ ಆಟವಾಡಿಸುವ ಪತಂಗವನ್ನು ಹಿಂಬಾಲಿಸುವ ಮಗುವಿನಂತೆ, ವೆಂಕಟಸುಬ್ಬಯ್ಯ ಮಧುರಧ್ವನಿಯ ಬೆನ್ನು ಹತ್ತಿದ. ಹತ್ತಾರು ಕೇರಿಗಳನ್ನು ಅಲೆಸಿ, ಹಾಡಿನ ಧ್ವನಿ ಅವನನ್ನು ಊರ ಮುಂದಲ ಗೋಸಾಯಿ ಛತ್ರದ ಬಳಿ ತಂದುಬಿಟ್ಟಿತು."

“ರಂಗಯ್ಯನ ಬಾಗಿಲಿನಿಂದಾಚೆ ಊರ ಹೊರಗೆ ಹಳೆ ಪೂರ್ಣಯ್ಯನ ಛತ್ರವಿತ್ತಲ್ಲಾ, ಅಲ್ಲೇ ಪಾಳೆಗಾರರ ಕಾಲದಲ್ಲಿ ಗೋಸಾಯಿ ಛತ್ರವಿದ್ದುದು. ಹಗಲೆಲ್ಲಾ ಊರಲ್ಲಿ ಬೇಡಿಬಂದ ಗೋಸಾಯಿಗಳು, ತಿರುಪೆಯವರು ಅಲ್ಲಿ ರಾತ್ರಿಯನ್ನು ಕಳೆಯುವರು. ವೆಂಕಟಸುಬ್ಬಯ್ಯ ರಂಗಯ್ಯನ ಬಾಗಿಲ ಬಳಿ ಇದ್ದ ಕಾವಲು ಕಾಯುವವರಿಗೆ, ತನ್ನ ಪರಿಚಯ ಹೇಳಿ, ಹಾಡನ್ನು ಹಿಂಬಾಲಿಸಿ ಬಂದ ಗೋಸಾಯಿ ಛತ್ರಕ್ಕೆ. ಛತ್ರದ ಮುಂದಿನ ಕಟ್ಟೆಯ ಮೇಲೆ, ಕತ್ತಲು ಕವಿದ ಮೂಲೆಯೊಂದರಿಂದ ಹಾಡು ಮೂಡಿಬರುತ್ತಿತ್ತು – ಕೆಸರಿನಲ್ಲಿ ಅರಳಿದ ಕಮಲದಂತೆ. ಹೊರಗೆ ಬೆಳದಿಂಗಳು ಚೆಲ್ಲಿದ್ದರೂ, ಕತ್ತಲಲ್ಲಿ ಹಾಡುವವರು ಮುಖ ಸರಿಯಾಗಿ ಕಾಣದು. ಮುಖ ಕಾಣಬೇಕೆಂಬ ಬಯಕೆಯೂ ಆತನಿಗೆ ಇರಲಿಲ್ಲ. ಮೋಡಿಗೊಳಗಾದವನಂತೆ ತಾನೂ ಒಂದು ಕಂಬಕ್ಕೆ ಒರಗಿ ಹಾಡು ಕೇಳುತ್ತಾ ಕುಳಿತ. ಮಂತ್ರಮುಗ್ಧ ಸರ್ಪದಂತೆ ಅವನ ಹೃದಯವು ರಾಗಪರವಶವಾಗಿತ್ತು. ಅಯಾಚಿತವಾಗಿ ಮೂಡಿಬಂದ ಕಂಬನಿ, ಎದೆಯ ಮೆಚ್ಚುಗೆಯ ಮುತ್ತಿನ ಹಾರದಂತೆ, ಕೆನ್ನೆಯ ಮೇಲೆ ಉರುಳುತ್ತಿತ್ತು. ಬಿರುಗಾಳಿಗೆ ಸಿಲುಕಿದ ಚಿಗುರೆಲೆಯಂತೆ ಅವನ ಹೃದಯ ಪ್ರಖರ ಭಾವಾಘಾತಕ್ಕೆ ಸಿಲುಕಿ ಕಂಪಿಸುತ್ತಿತ್ತು. ಎಷ್ಟು ಹೊತ್ತು ಹಾಗೆ ಕುಳಿತಿದ್ದನೋ ಅವನಿಗೇ ತಿಳಿಯದು. ಹಾಡು ನಿಂತಿತೆಂದು ಅರಿವಾದಾಗ ಪಕ್ವಫಲದಂತೆ, ಹಾಡುತ್ತಿದ್ದ ಕಾಲ ಮೇಲೆ ಉರುಳಿದ.”

“ಯಾರು ನೀನು ?”

“ಹಾಡುತ್ತಿದ್ದವನು ಹಾಡು ನಿಲ್ಲಿಸಿ, ಕಾಲ ಮೇಲೆ ಉರುಳಿದ ವೆಂಕಟ ಸುಬ್ಬಯ್ಯನನ್ನು ಗದ್ದರಿಸಿ ಕೇಳಿದ. ಅವನ ಹಾಡು ಎಷ್ಟು ಮಧುರವಾಗಿತ್ತೋ ಪ್ರಶ್ನೆ ಅಷ್ಟೇ ಕರ್ಕಶವಾಗಿತ್ತು. ಆ ಪ್ರಶ್ನೆಗೆ ವೆಂಕಟಸುಬ್ಬಯ್ಯ ಏನೂ ಉತ್ತರ ಕೊಡದೆ, ಮೌನವಾಗಿ ಕಂಬನಿಯಿಂದ ಆತನ ಕಾಲು ತೊಳೆಯುತ್ತಿದ್ದ.”

“ಯಾರು ನೀನು? ತೊಲಗಾಚೆ!” – ಹಾಡುಗಾರ ಕಾಲು ಕೊಡಹುತ್ತ ಹೇಳಿದ.

“ನೀವು ನನ್ನ ಪಾಲಿನ ದೇವರು. ನನಗೆ ಆಶ್ರಯ ಕೊಡಿ”– ಎಂದು ಕೇಳಿದ ವೆಂಕಟಸುಬ್ಬಯ್ಯ ಅರ್ತನಾಗಿ. ಅವನ ಮಾತು ಕೇಳಿ ಆತ ವಿಕಟವಾಗಿ ನಕ್ಕ.

“ನಾನು ಭಿಕಾರಿ! ನಿನಗೆ ನಾನೇನು ಆಶ್ರಯ ಕೊಡಲಿ ?”

“ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಕಾಪಾಡಬೇಕು. ಸಂಗೀತ ಕಲಿಸುವ



ಅನುಗ್ರಹ ಮಾಡಬೇಕು.”

“ಆ ಮಾತು ಕೇಳುತ್ತಿದ್ದಂತೆಯೇ ತನ್ನ ಕಾಲನ್ನು ಸುತ್ತಿದ ಆತನ ಕೈಗಳನ್ನು ಕಾಲು ಸುತ್ತಿದ ಹಾವನ್ನು ಕೊಡಹುವಂತೆ ಕೊಡವಿ–”

“ನನ್ನ ಕಾಲು ಬಿಡುತ್ತೀಯೊ ಇಲ್ಲವೋ ? ಬಿಡು, ನನ್ನ ಕಾಲು ಬಿಡು. ಇಲ್ಲವಾದರೆ ನಿನ್ನ ತಲೆಯನ್ನು ಒಡೆದುಬಿಡುತ್ತೇನೆ !” ಎಂದು ಅರಚಿದ.

“ಇಷ್ಟು ದಿನ ಕಾದ ಗುರು ಇಂದು ಕಂಡ. ಶಿಷ್ಯನನ್ನಾಗಿ ಸ್ವೀಕರಿಸುತ್ತೇನೆಂದು ಅಭಯ ಕೊಡುವವರೆಗೂ ಕಾಲು ಬಿಡುವುದಿಲ್ಲ.”

“ಅಭಯ ? ನಿನಗೆ ಅಭಯ......”

– ಎಂದನೇ ಆತ, ತನ್ನ ಕಾಲನ್ನು ಕೊಡವಿಕೊಂಡು, ಬಿಡುವಾದ ಕಾಲಿನಿಂದ ವೆಂಕಟಸುಬ್ಬಯ್ಯನ ತಲೆಯನ್ನು ಝಾಡಿಸಿ ಒದ್ದ. ಕಲ್ಲುನೆಲ್ಲಕ್ಕೆ ಆತನ ತಲೆಯನ್ನು ಘಟ್ಟಿಸಿ, ಏಟಿನ ನೋವಿಗೆ ತನ್ನಕಾಲನ್ನು ಹಿಡಿದ ವೆಂಕಟಸುಬ್ಬಯ್ಯನ ಕೈ ಸಡಿಲಾದ ಕೂಡಲೇ, ಆತ ತನ್ನ ಕಾಲನ್ನು ಬಿಡಿಸಿಕೊಂಡು, ಮೂಲೆಯಲ್ಲಿದ್ದ ಹಸಿಬೆಯನ್ನು ಹೆಗಲಿಗೇರಿಸಿಕೊಂಡು ಓಡತೊಡಗಿದ. ಒಂದು ಗಳಿಗೆಯಲ್ಲಿ ಏಟನ್ನು ಸಾವರಿಸಿಕೊಂಡು, ವೆಂಕಟಸುಬ್ಬಯ್ಯನೂ ಆತನನ್ನು ಹಿಂಬಾಲಿಸಿದ. ಅವನ ಹೃದಯ ಮೊರೆಯುತ್ತಿತ್ತು – ‘ಇವನೇ ನಿನ್ನ ಗುರು, ಬಿಡಬೇಡ.’

“ಮುಂದೆ ಬೈರಾಗಿ – ಹಿಂದೆ ಇವನು, ಹೀಗೆ ಚಳ್ಳಕೆರೆಯ ದಾರಿಯಲ್ಲಿ ಮದಕರಿಪುರದ ಕಣಿವೆ ಕಾಣುವವರೆಗೂ ಓಡಿದರು. ಕಣಿವೆ ಹತ್ತುವಾಗ ಬೈರಾಗಿ ಆಯಾಸವಾಗಿಯೋ ಕಲ್ಲು ಎಡವಿಯೋ ಉರುಳಿಬಿದ್ದ. ಆತನ ಬಾಯಿಂದ ಆಯಾಸಹೊಂದಿದ ಕುದುರೆಯ ಬಾಯಿಂದ ನೊರೆ ಸೂಸುವಂತೆ. ನೊರೆ ಹರಿಯುತ್ತಿತ್ತು. ಮೈಮೇಲೆ ಪ್ರಜ್ಞೆ ಇರಲಿಲ್ಲ. ವೆಂಕಟಸುಬ್ಬಯ್ಯ ತಾನು ಹೊದ್ದ ಶಾಲನ್ನು ನೆಲದ ಮೇಲೆ ಹಾಸಿ, ಹಣೆಗೆ ಒದ್ದೆಬಟ್ಟೆ ಹಾಕಿದ. ಸ್ವಲ್ಪ ಹೊತ್ತಿನ ಮೇಲೆ ಆತನಿಗೆ ಪ್ರಜ್ಞೆಬಂತು. ಶತ್ರುವನ್ನು ನೋಡುವಂತೆ ವೆಂಕಟಸುಬ್ಬಯ್ಯನನ್ನು ನೋಡಿ–”

“ಚಂಡಾಲ! ಪಾಪಿ! ತೊಲಗು, ನನಗಾರೂ ಶಿಷ್ಯರು ಬೇಡ, ಹಾಳಾಗಿ ಹೋಗು. ನನ್ನನ್ನು ಕೊಲ್ಲಲು ಬಂದೆಯಾ, ಶನಿಯೇ ?” – ಎಂದು ಪಕ್ಕದಲ್ಲಿ ಶುಶ್ರೂಷೆ ಮಾಡುತ್ತಾ ಕುಳಿತ ವೆಂಕಟಸುಬ್ಬಯ್ಯನ ಕೆನ್ನೆಗೆ ಹೊಡೆದ.

“ನೀನು ಸತ್ತರೂ ಸರಿಯೇ, ನಾನು ಹಾಡು ಹೇಳಿಕೊಡುವುದಿಲ್ಲ ಯಾರಿಗೂ ಹೇಳಿಕೊಡುವುದಿಲ್ಲ. ಬೆಂಕಿ ಹಚ್ಚಿಬಿಡುತ್ತೇನೆ. ಹಾಡಿಗೇ ಉರಿ ಹಚ್ಚಿ ಬಿಡುತ್ತೇನೆ. ಹಾಡಂತೆ, ಸಂಗೀತವಂತೆ. ಎಲ್ಲಾ ಹಾಳಾಗಿಹೋಗಲಿ ?”

– ಎಂದು ಹುಚ್ಚುನಂತೆ ಅರಚಿದ, ಒಂದು ಗಳಿಗೆ ಅಳುವನು, ಒಂದುಗಳಿಗೆ ಚೀರುವನು, ಮತ್ತೊಂದು ಗಳಿಗೆ ಬೆಳದಿಂಗಳಲ್ಲಿ ಸದ್ದುಮಾಡದೆ ಮಲಗಿದ ಗುಡ್ಡಗಳೂ ಬೆದರಿ ಏಳುವಂತೆ ಏಕಾರವಾಗಿ ಕೇಕೆಹಾಕಿ ನಗುವನು ಬೈರಾಗಿ.

"ಅವನ ರೀತಿಯೇ ವೆಂಕಟಸುಬ್ಬಯ್ಯನಿಗೆ ಅರ್ಥವಾಗಲಿಲ್ಲ. ಹಾಡು ಕೇಳಿ ಹುಚ್ಚನನ್ನು ಬೆನ್ನಟ್ಟಿ ಬಂದನೇನೋ ಎಂದು ಒಂದು ಗಳಿಗೆ ಸಂಶಯವಾಯಿತು. ಮರುಗಳಿಗೆಯೇ ತನ್ನನ್ನು ಪರೀಕ್ಷಿಸುತ್ತಿದಾನೋ ಏನೋ ಎನಿಸಿತು. ಎದೆಯೊಳಗಿನ ಒಳದನಿ ಮಾತ್ರ 'ಇವನೇ ನಿನ್ನ ಗುರು, ಬಿಟ್ಟರೆ ಕಟ್ಟೆ ' ಎಂದು ಸಾರುತ್ತಿತ್ತು. ಬೈರಾಗಿ ಒಂದು ಅರ್ಧಗಂಟೆಯ ಕಾಲ ಹಾಗೇ ಚೀರುತ್ತಿದ್ದು, ಬಳಿಕ ನಿದ್ರೆ ಹೋದ. ಬೆಳದಿಂಗಳ ಬೆಳಕಿನಲ್ಲಿ, ನಿದ್ರೆಯಲ್ಲಿ ತೊಯ್ದ ಮುಖ ಗಂಭೀರವಾಗಿತ್ತು. ಬಿಳಿದಾದ ಗಡ್ಡ ಮೀಸೆಗಳು, ದಪ್ಪನಾದ ಹುಬ್ಬು, ಹೆಗಲ ಮೇಲೆ ಬಿಳಿದಾಗಿ ಹರಡಿದ, ಜಡೆಗಟ್ಟಿದ ತಲೆ ಗೂದಲು – ಈ ಲೋಕದ ಮನುಷ್ಯನಲ್ಲ ಎನ್ನುವಂತಿದ್ದ ಆತ. ಆ ಮುಖವನ್ನು ನೋಡಿದಾಗ ಅವನು ಆಡಿದ ಮಾತು, ಬೈದ ಬೈಗಳು ಮುಖ ಎಲ್ಲಾ ಮರೆತು, ಏನೋ ಒಂದು ಬಗೆಯ ಅಕ್ಕರೆ ಮೂಡಿಬಂತು ವೆಂಕಟಸುಬ್ಬಯ್ಯನ ಎದೆಯಲ್ಲಿ. ಬರಿ ನೆಲದ ಮೇಲೆ ಹೊರಳಿದ ತಲೆಯನ್ನು ಎತ್ತಿ ತೊಡೆಯ ಮೇಲಿಟ್ಟುಕೊಂಡು ಹಾಗೆ ಕುಳಿತ. 'ಈತನೇ ಹಾಡಿದವನು ? ಒಣಗಿದ ಗಿಡದಂತೆ ಬರಿ ಮೂಳೆಯಾದ ಈ ಮೈಯಲ್ಲಿ ಆ ರಸದ ಚಿಲುಮೆ ಎಲ್ಲಿ ಅಡಗಿರಬಹುದು ? ಆತನ ಈ ವಿಚಿತ್ರ ವರ್ತನಗೆ ಅರ್ಥವೇನು ?' ಎಂದು ಅವನ ಮನಸ್ಸು ಚಿಂತಿಸುತ್ತಿತ್ತು. 'ಈ ವಿಚಿತ್ರ ವ್ಯಕ್ತಿ ಯಾರಿರಬಹುದು ? ಗಂಧರ್ವನಂತೆ ಹಾಡುವ ಗಾಯಕನಿಗೆ ಈ ಬೈರಾಗಿಯ ಬಾಳೇಕೆ ? ಹಾಡು ಹೇಳಿಕೊಡು ಎಂದರೆ ಪಿಶಾಚಿ ಹಿಡಿದವನ ಹಾಗೇಕೆ ಆಡುತ್ತಾನೆ ?' ಹೀಗೆಯೇ ಸಾವಿರ ಪ್ರಶ್ನೆ, ಅವನ ಮೆದುಳಿನಲ್ಲಿ ಸುಳಿ ಸುತ್ತುತ್ತಿದ್ದವು, ಹಾಗೇ ಕುಳಿತಿದ್ದ. ಬೆಳಗಿನ ಝಾವದ ಇಬ್ಬನಿಗೆ ಮೈ ತೊಯ್ದು, ಗರಿಗಟ್ಟುತ್ತಿದ್ದುದು ಅವನಿಗೆ ಅರಿವಿರಲಿಲ್ಲ."

"ಬೆಳದಿಂಗಳು ಬಾಡಿ, ಕತ್ತಲಾವರಿಸಿ, ಮತ್ತೆ ಮೂಡಲಲ್ಲಿ ಕೆಂಪು ಮೂಡುವ ಹೊತ್ತಿಗೆ ಆತನಿಗೆ ಎಚ್ಚರವಾಯಿತು. ಆತ ಎದ್ದವನೇ ವೆಂಕಟಸುಬ್ಬಯ್ಯನನ್ನು ಮಾತನಾಡಿಸದೆ, ಮುಖವನ್ನೂ ನೋಡದೆ, ಮತ್ತೆ ಹೆಗಲಿಗೆ ಹಸಿಬೆಯೇರಿಸಿ ನಡೆದ. ವೆಂಕಟಸುಬ್ಬಯ್ಯ ತಾನೂ ಮಾತನಾಡದೆ ಆತನನ್ನು ಹಿಂಬಾಲಿಸಿದ. ಅಷ್ಟು ದೂರ ಹೋದಮೇಲೆ, ಆತ 'ನನ್ನ ಹಿಂದೆ ಬರಬೇಡ' ಎಂದ. ವಾಚಾಮಗೋಚರವಾಗಿ ಬಯ್ದ. ಏನೆಂದರೂ ವೆಂಕಟಸುಬ್ಬಯ್ಯ ಆತನ ಬೆನ್ನು



ಬಿಡಲಿಲ್ಲ. ಮಧ್ಯಾಹ್ನದವರೆಗೂ ಹೀಗೆ ನಡೆದರು. ಇಬ್ಬರೂ ರಾಮಜೋಗಿಹಳ್ಳಿಯ ಬಳಿ ತಲುಪಿದಾಗ ಆತ ಮರದ ಕೆಳಗೆ 'ಎಲ್ಲಾದರೂ ಅಷ್ಟು ಅನ್ನ ಸಿಕ್ಕರೆ ತಗೊಂಡು ಬಾ, ಹಸಿವೆಯಾಗುತ್ತೆ' ಎಂದು ಹೇಳಿ ಹಸಿಬೆಯೊಳಗಿನ ಪಾತ್ರೆಯನ್ನು ವೆಂಕಟಸುಬ್ಬಯ್ಯನ ಕೈಗೆ ಕೊಟ್ಟ. ಬೇರಾವ ದಾರಿಯೂ ಇಲ್ಲದೆ ವೆಂಕಟಸುಬ್ಬಯ್ಯ ಹಳ್ಳಿಯಲ್ಲಿ ನಾಲ್ಕು ಮನೆ ಅಲೆದು ಅನ್ನ ತಂದ. 'ಊಟಕ್ಕೆ ನೀನೇನು ಮಾಡುತ್ತಿ? ನಿನಗೆ ಹಸಿವೆಯಾಗುತ್ತದೆಯೇ, ಇಲ್ಲವೆ?' ಎಂದು ಕೂಡ ಕೇಳದೆ, ಆತ ಅವನು ತಂದ ಅನ್ನದಲ್ಲಿ ಅಗಳು ಕೂಡ ಮಿಗಿಸದೆ ತಿಂದು ನೆರಳಲ್ಲಿ ಮಲಗಿದ. ನಡೆದು ದಣಿದು ವೆಂಕಟಸುಬ್ಬಯ್ಯ ಹಸಿವನ್ನು ಮರೆತು ತಾನೂ ಮಲಗಿದ."

"ಸ್ವಲ್ಪ ಹೊತ್ತಾದಮೇಲೆ ಇಬ್ಬರೂ ಎದ್ದು ಮತ್ತೆ ಪ್ರಯಾಣವನ್ನು ಮುಂದುವರಿಸಿದರು. ಸಂಜೆ ಮತ್ತಾವುದೋ ಹಳ್ಳಿಯ ಬಳಿ ತಲುಪಿದಾಗ, ಆತ ಮತ್ತೆ ಪಾತ್ರೆಯನ್ನು ವೆಂಕಟಸುಬ್ಬಯ್ಯನ ಕೈಗೆ ಕೊಟ್ಟು 'ಎಲ್ಲಾದರೂ ನನಗೆ ಅಷ್ಟು ಹೆಂಡ ತಂದುಕೊಡು' ಎಂದ. 'ಹೆಂಡ ತರಲು ನನ್ನ ಬಳಿ ಹಣವಿಲ್ಲವಲ್ಲ' ಎಂದ ಈತ. 'ನಿನ್ನ ಶಾಲು ಮಾರಿ ತಂದುಕೊಡು. ಕಿವಿಯಲ್ಲಿ ಹತ್ತಕಡಕು ಇದೆಯಲ್ಲ, ಅದನ್ನೇ ಮಾರು. ಹೇಗೆ ತರುತ್ತೀಯೋ, ತಂದರೆ ಸರಿ, ಇಲ್ಲವೆಂದರೆ ನನ್ನ ಹಿಂದೆ ಬರಬೇಡ' ಎಂದು ಗದರಿಸಿದ. ಉತ್ತರ ಕೊಡದೆ ವೆಂಕಟಸುಬ್ಬಯ್ಯ ಹೆಂಡದ ಅಂಗಡಿಯವನಿಗೆ ಕಿವಿಯಲ್ಲಿದ್ದ ಬೆಲೆ ಬಾಳುವ ಹತ್ತಕಡಕವನ್ನು ಮಾರಿ, ಅವನಿಗೆ ಹೆಂಡ ತಂದುಕೊಟ್ಟು, ಉಳಿದ ಹಣವನ್ನು ಹತ್ತಿರ ಇಟ್ಟುಕೊಂಡ. ಬೈರಾಗಿ ಕಂಠಮಟ್ಟ ಹೆಂಡ ಕುಡಿದು, ವೆಂಕಟಸುಬ್ಬಯ್ಯನನ್ನು ಬಯ್ಯುತ್ತಲೇ ಮಲಗಿದ. ಹಗಲು ಅವನಿಗಾಗಿ ಭಿಕ್ಷ ಬೇಡಿದ ವೆಂಕಟಸುಬ್ಬಯ್ಯ ಈ ಬಾರಿ ತನಗಾಗಿಯೇ ಬೇಡಬೇಕಾಯಿತು. ಏಕೋ ಭಿಕ್ಷೆಯ ಅನ್ನ ತಿನ್ನಲು ಅವನ ಮನಸ್ಸು ಒಪ್ಪಲಿಲ್ಲ. ಹಣ ಕೊಟ್ಟು, ಹಣ್ಣು ಹಾಲು ತಿಂದು ಫಲಾಹಾರ ಮಾಡಿ ಮಲಗಿದ."

"ಹೀಗೇ ಅವರ ಪ್ರಯಾಣ ಮುಂದುವರಿಯಿತು – ಮನಸ್ಸಿಗೆ ಬಂದತ್ತ ಪಯಣ. ಬೈರಾಗಿ ಬೇಕೆಂದು ವೆಂಕಟಸುಬ್ಬಯ್ಯನ ತಾಳ್ಮೆಯನ್ನು ಪರೀಕ್ಷಿಸುತ್ತಿರುವಂತಿತ್ತು ಆತನ ಚರ್ಯೆ. ಇವನ ಕೈಲಿ ಆತ ತಿರುಪೆ ಎತ್ತಿಸುವನು. ಕೈಕಾಲು ಒತ್ತಿಸಿಕೊಳ್ಳುವನು – ಈ ಸೇವೆ ಸಾಲದೆಂಬಂತೆ' ಬಾಯಿಗೆ ಬಂದ ಹಾಗೆ ಬಯ್ಯುವನು. ಆತನ ವಿಚಿತ್ರ ಚರ್ಯೆಯಿಂದ ವೆಂಕಟಸುಬ್ಬಯ್ಯನಿಗೆ ಒಂದು ಬಾರಿ ಸಿಟ್ಟುಬರುವುದು; ಒಮ್ಮೆ ಬೇಸರ, ಒಮ್ಮೆ ದುಃಖ, ಮತ್ತೊಮ್ಮೆ ಕರುಣೆ. ಏನೆಂದರೂ ಇದಿರಾಡದೆ ಹಿಂಬಾಲಿಸಿದ. ಯಾವಾಗಲಾದರೊಮ್ಮೆ

ಅವನು ಹೆಂಡದ ಮತ್ತಿನಲ್ಲೋ, ಗಾಂಜಾದ ಅಮಲಿನಲ್ಲೋ ಹಾಡಲಾರಂಭಿಸುವನು. ಅವನ ಹಾಡುಗಾರಿಕೆಯೊಂದು ಮೋಹಿನೀವಿದ್ಯೆ. ಹಾಡಲಾರಂಭಿಸಿದ ಕೂಡಲೇ ಮಾಂತ್ರಿಕ ಸ್ಪರ್ಶಕ್ಕೆ ಮರಳುಗಾಡೂ ನಂದನವಾಗುವಂತೆ, ಅವನ ಅಸಹ್ಯ ನಡತೆ, ಹೊಲಸು ನಾಲಗೆ – ಎಲ್ಲವೂ ಮರೆಯಾಗಿ, ಹೊಸ ಜಗತ್ತೊಂದು ನಿರ್ಮಾಣವಾಗುವುದು. ಮುಗ್ಧನಾಗಿ ಅದನ್ನಾಲಿಸುತ್ತಾ ಕುಳಿತುಕೊಳ್ಳುವನು ವೆಂಕಟಸುಬ್ಬಯ್ಯ. ಹೀಗೆ ಕೆಲವು ತಿಂಗಳು ಕಳೆದವು. ನೂರಾರು ಊರು ಸುತ್ತಿದರು. ಹಿಂದೆಂದೂ ಕಾಣದ ಸೀಮೆಗೆ ಬಂದರು. ಆದರೂ ಆತ ಒಂದು ದಿನವೂ ವೆಂಕಟಸುಬ್ಬಯ್ಯನಿಗೆ 'ಆಗಲಿ, ನಿನಗೆ ಹಾಡು ಹೇಳಿಕೊಡುತ್ತೇನೆ' ಎನ್ನಲಿಲ್ಲ; 'ಆಯಿತು, ನಿನ್ನನ್ನು ಶಿಷ್ಯನೆಂದು ಒಪ್ಪಿಕೊಂಡೆ' ಎಂದೂ ಹೇಳಲಿಲ್ಲ. ಸುಮ್ಮನೆ ಗಾಣದ ಎತ್ತಿನಂತೆ ಸುತ್ತಿಸುತ್ತಿದ್ದ."

"ವೆಂಕಟಸುಬ್ಬಯ್ಯ ತಂದೆತಾಯಿಗಳ ಅಕ್ಕರೆಯ ಹೂ–ಬುಟ್ಟಿಯಲ್ಲಿ ಬೆಳೆದವನು. ಈ ತಿರುಗಾಟ, ತಿರುಪೆಯ ಅನ್ನ ಯಾವುದನ್ನೂ ಅರಿಯದ ಮೈ ಆತನದು. ಬೈರಾಗಿಗೆ ಯಾವ ಯೋಚನೆಯೂ ಇಲ್ಲ. ಅಲೆದಲೆದು ಆತನ ಮೈ ಜಾಲಿಯ ಕೊರಡಾಗಿತ್ತು. ತೀರಾ ದಣಿವಾದರೆ ಹೆಂಡವಿತ್ತು, ಆದರೆ ಇವನಿಗೆ? ಆ ಮೈ ತಾನೇ ಎಷ್ಟು ತಡೆದೀತು– ಈ ಅಭ್ಯಾಸವಿಲ್ಲದ ಉಪವಾಸ–ವನವಾಸದ ಜೀವನದ ಕಾವನ್ನು ? ಕಡೆಗೊಂದು ದಿನ ಹಗಲು, ಮೈ ಜಡವಾಗಿ, ಉಸಿರು ಬಿಗಿಯಾಗಿ, ತಲೆಸುತ್ತಿಬಂದು ನಡುದಾರಿಯಲ್ಲೇ ಮೈ ಮರೆತು ಮಲಗಿಬಿಟ್ಟ ವೆಂಕಟಸುಬ್ಬಯ್ಯ."

"ಎಷ್ಟು ಹೊತ್ತು ಹಾಗೆ ಎಚ್ಚರ ಜಾರಿ ಮಲಗಿದ್ದನೋ ಏನೋ ವೆಂಕಟಸುಬ್ಬಯ್ಯ. ತಣ್ಣನೆಯ ಗಾಳಿ ಸುಳಿದು ಎಚ್ಚರವಾದಾಗ, ಗುರುತರಿಯದ ನಿರ್ಜನಪ್ರದೇಶದಲ್ಲಿ, ತಾನೊಬ್ಬನೇ ಒಂಟಿಯಾಗಿ ಇರುವುದು ಅರಿವಾಯಿತು. ಎದ್ದು ಕುಳಿತುಕೊಳ್ಳಲು ಯತ್ನಿಸಿದ. ಆದರೆ ಬುಗುರಿಯಂತೆ ತಲೆಸುತ್ತಿಬಂದು, ಏದ್ದು ಕೂಡುವುದೂ ಆಗಲಿಲ್ಲ. ಜ್ವರದ ತಾಪಕ್ಕೆ ಗಂಟಲಿನ ತೇವ ಆರಿ, ಬಾಯಾರಿಕೆ ಒಳಗಿನ ಉರಿಯಂತೆ ದಹಿಸುತ್ತಿತ್ತು. ತಾನು ಗುರುವೆಂದು ಹಿಂಬಾಲಿಸಿ ಬಂದಾತ, ಸುತ್ತ ಹತ್ತಿರದಲ್ಲೆಲ್ಲಾದರೂ ಇರಬಹುದೆಂದು, ಮಲಗಿದಂತೆಯೇ ತಲೆ ತಿರುಗಿಸಿ ನೋಡಿದ. ಯಾರೂ ಕಾಣಲಿಲ್ಲ. ಮುಸುಕು ಸಂಜೆಯ ಮಬ್ಬುಗತ್ತಲಿನಲ್ಲಿ ಕಳ್ಳನಂತೆ ಸುಳಿವ ಗಾಳಿಯೊಂದಿಗೆ ಪಿಸುದನಿಯಲ್ಲಿ ಮಾತಾಡುವ ಮರದ ಎಲೆಗಳ ಸದ್ದಲ್ಲದೇ ಬೇರೇನೂ ಸದ್ದು ಕೇಳಿಸಲಿಲ್ಲ. ಆಗೊಮ್ಮೆ ಈಗೊಮ್ಮೆ, ಆಗಲೇ ಗೂಡು ಸೇರಿದ ಹಕ್ಕಿಗಳ ರೆಕ್ಕೆ ಕೊಡಹುವ ಸದ್ದು ಕತ್ತಲಿನ ಬರವನ್ನು ಸೂಚಿಸುತ್ತಿತ್ತು."



"ಎತ್ತ ಕಡೆಗೋ ಹೋದ ತನ್ನ ಗುರು ಈಗ ಬರಬಹುದು. ಈ ಸ್ಥಿತಿಯಲ್ಲಿ ತನ್ನನ್ನು ಆತ ಒಂಟಿಯಾಗಿ ಬಿಟ್ಟು ಹೋಗಲಾರ ಎಂದು ನಂಬಿ, ಭಯದಿಂದ ಸಿಡಿಯಲೆಳಸುವ ಎದೆಯನ್ನು ಬಿಗಿಹಿಡಿದು ಕಾದ, ಸುತ್ತಲೂ ನೋಡಿದ. ಯಾವ ಕಾಡೋ, ಯಾವ ಊರಿಗೆ ದಾರಿಯೋ, ಎಷ್ಟು ದೂರದ ದಾರಿಯೋ, ಎಂಥ ಸ್ಥಳವೋ, ಒಂದೂ ಆತನಿಗೆ ತಿಳಿಯದು. ಕುರುಡನಂತೆ ಬೈರಾಗಿಯ ಬೆನ್ನುಹತ್ತಿ ಬಂದಿದ್ದ. ಈಗ ಯಾರೂ ಇಲ್ಲ. ಅಪರಿಚಿತ ಸ್ಥಳದಲ್ಲಿ ಅವನೊಬ್ಬನೇ ಏಕಾಕಿ.

"ಪಡುವಣದ ಅಂಚಿನಲ್ಲಿದ್ದ ಕಿಡಿಬೆಳಕೂ ಕರಗಿ ಕತ್ತಲಾವರಿಸಿದಂತೆ ಅವನ ಎದೆಯಲ್ಲಿದ್ದ ಅಲ್ಪಸ್ವಲ್ಪ ಆಸೆಯೂ ನಂದಿಹೋಗಿ ಎದೆಯಲ್ಲಿ ದಿಗಿಲು ಕವಿಯಿತು. ಅವರಿಸುತ್ತಿರುವ ಕತ್ತಲಲ್ಲಿ ತನ್ನ ನೀಲಿಮೆಯನ್ನು ಕಳೆದುಕೊಂಡು ದಟ್ಟವಾದ ಇದ್ದಿಲ ಹೊಗೆಯಂತೆ ಕಪ್ಪಾದ ಮೋಡದಲ್ಲಿ ಮಿನುಗುವ ನಕ್ಷತ್ರ ಕಣ್ರಗೆ, ಆಕಾರ ಅಳಿದ ಮೂಕಮಾನವರಂತೆ ನಿಂತ ಮರಗಳು, ಎಲ್ಲೋ ಬೀಸಿ ಎಲ್ಲೋ ಕರಗುವ ಗಾಳಿ–ಒಂದೊಂದೂ ಅವನೆದೆಯ ಭೀತಿಯನ್ನು ಬಲಿಸಿದವು. ಅದರ ಜೊತೆಗೆ ನರನರವನ್ನೂ ಕಿತ್ತು ತಿನ್ನುವ ಜ್ವರದ ತಾಪ, ದಾಹ. ಇದೇ ತನ್ನ ಕೊನೆಯೇ ಎನಿಸಿತು ಆತನಿಗೆ. ಸಂಗೀತಸಾಧನೆಯ ಬಂಗಾರದ ಕನಸನ್ನು ಬೆನ್ನಟ್ಟಿದ ತನ್ನ ಬಾಳಿಗೆ ಇದು ಮುಕ್ತಾಯವೇ? ಆ ಗಳಿಗೆಯೂ ಅವನಿಗೆ. ತನ್ನ ಮನೆ, ತಂದೆತಾಯಿ, ಊರುಕೇರಿಯ ನೆನಪು ಆಯಿತು. ಗುರುತರಿಯದ ನಿರ್ಜನಪ್ರದೇಶದಲ್ಲಿ, ನರಿಹದ್ದುಗಳ ಪಾಲಾಗುವ ಭಿಕಾರಿಹೆಣದ ಗತಿ ಬಂತೇ ತನಗೆ ಎಂದು ಮರುಗಿದ. ಅಸಹಾಯಕತೆಯ ಬಿಸಿಯಾದ ಕಂಬನಿ ಅಪ್ರಯತ್ನವಾಗಿ ಅವನ ಕಣ್ಣಿಂದ ಜಾರಿತು.

"ಏಕೋ, ಅವನು ಬಯಸದೆಯೇ, ಆ ಗಳಿಗೆಯಲ್ಲಿ ಅವನಿಗೆ ತಿರುಮಲಯ್ಯನ ಅಪಮೃತ್ಯು ನೆನಪಾಯಿತು. ಅದರ ಪರಿಣಾಮವೇ ಇದು? ಏನೋ–ನೂರಾರು ಕರಾಳಹಸ್ತಗಳು ಸುಡುಗೈಯಿಂದ ಅವನ ಮೆದುಳನ್ನು ಹಿಸುಕುತ್ತಿದ್ದಂತೆ ತೋರಿತು. ಆ ಸುಡುನೆನಪು ಮಿದುಳಿನಲ್ಲಿ ಮೂಡಿದಾಗ, ಗುರುದ್ರೋಹಿಗೆ ಬೇರೆಂಥ ಸಾವು? ಜ್ವರತಾಪದಿಂದ ಪ್ರಕ್ಷುಬ್ಧವಾದ ಮಿದುಳಿಗೆ ದಿಕ್ಕುದೆಸೆಯರಿಯದಡೆಯಲ್ಲಿ ಸಾಯುವ ಗತಿಯೇ ತನ್ನ ಬಯಕೆಗಳ ಕೊನೆ ಯಾಗುವುದೆಂದು ಎನಿಸಿತು. ಒಂದು ಗಳಿಗೆ ಗುರುತರಿಯದ ಭೀತಿಯ ಬೆದರಿದ ಮಗುವಿನಂತೆ ಅತ್ತುಬಿಟ್ಟ. ತೇವವಾರಿ ಒಣಗುತ್ತಿರುವ ಕಂಠಕ್ಕೆ ಅಳಲು ಕೂಡ ಶಕ್ತಿಯಿರಲಿಲ್ಲ. ಸದ್ದಡಗಿ ಬರೀ ಕಂಬನಿ ಹರಿಯಿತು. ಹೀಗೆ ಹೆದರಿ ಅತ್ತು ಸಾಯಬೇಕೆ ?

“ಸಾವು ಬರುವುದೇ ನಿಶ್ಚಯವಾದರೆ, ಶಾಂತವಾಗಿ, ಧೀರತೆಯಿಂದ ಸಾವಿನ ಶೀತಹಸ್ತಕ್ಕೆ ಜೀವನವನ್ನೇಕೆ ಒಪ್ಪಿಸಬಾರದು ? ಹಾಡು ಕಲಿಯಲೆಂದು ಬಂದವನು ತಾನು. ಹಾಡುಹಾಡುತ್ತಲೇ, ಕೊನೆಗಾಣದ ಕತ್ತಲಿಗೆ ಜಾರಬಾರದೇಕೆ ? ಯಾವ ನೆರವೂ, ಯಾವ ದಿಕ್ಕೂ ಇಲ್ಲದ ಭಕ್ತ ಇಂಥ ಹೊತ್ತಿನಲ್ಲಿ ಏನು ಪ್ರಾರ್ಥಿಸುತ್ತಾನೆ? ತಾನು ಸಾಯುವುದೇ ಸತ್ಯವೆಂದರೆ ಹೆದರಿ ಪರದಾಡುವುದಕ್ಕಿಂತ, ಭಗವಂತನ ಚಿಂತನೆ ಮಾಡುತ್ತಾ ಕೊನೆಯುಸಿರೆಳೆದರೆ ತಪ್ಪೆ ? ನಿಜ... ಹಾಡಬೇಕು, ಹಾಡಲೇಬೇಕು... ಕೊನೆಯುಸಿರು ಹಾಡಿನೊಂದಿಗೆ ಬೆರೆತು, ಗಾಳಿಯಲ್ಲಿ ಕರಗಿಹೋಗಲಿ....

“ಮನಸ್ಸಿನಲ್ಲಿ ಆ ಭಾವನೆ ಬಂದ ಕೂಡಲೇ, ಆರುವ ಮೊದಲು ದೀಪದಲ್ಲಿ ಕಾಂತಿ ಹೆಚ್ಚಾಗಿ ತುಳುಕುವಂತೆ ಬಳಲಿದ ಮೈಯಲ್ಲಿ ಹೊಸ ಶಕ್ತಿಯೊಂದು ಸಂಚರಿಸಿದಂತಾಯಿತು. ಮೈಯನ್ನು ಆವರಿಸಿದ ಜ್ವರವನ್ನು ದೂರ ಕೊಡಹುವಂತೆ, ಕೊಡವಿ ಎದ್ದು ಕುಳಿತ.

“ಎಲ್ಲೋ ಕಣ್ಣಿಗೆ ಕಾಣದ, ಮಿಡಿಯುತ್ತಿರುವ ಅವ್ಯಕ್ತ ತಂಬೂರಿಯ ಶ್ರುತಿಗೆ ದನಿಗೂಡಿಸಿ, ಗಾಳಿಯಲೆಯ ಮೇಲೆ ಕಂಠಸ್ವರದ ಹರಿಗೋಲಿನಲ್ಲಿ ಎದೆಯಳಲಿನ ಹೊರೆ ಹೇರಿ ತೇಲಿಬಿಟ್ಟ. ಏಳಲಾಗದಷ್ಟು ಬಳಲಿದ ಮೈಯೊಳಗೆ ಆ ಶಕ್ತಿ ಎಲ್ಲಿ ಹುದುಗಿತ್ತೊ. ಎದೆಯೊಳಗಿನ ದುಃಖವೇ ಹಾಡಾಗಿ ಹರಿಯಲಾರಂಭಿಸಿತು. ಸುತ್ತಲ ಕತ್ತಲಾವರಿಸಿದ ಮೌನಮಯ ನಿರ್ಜನಭೂಮಿಯ ಬಟ್ಟಲನ್ನು ತುಂಬತೊಡಗಿತ್ತು ಆತನ ತಬ್ಬಲಿ ಹಾಡು. ಯಾವ ರಾಗವೋ, ಯಾವ ತಾಳವೋ – ಒಂದರದೂ ಆತನಿಗೆ ಅರಿವಿಲ್ಲ.

ಹಾಡುಹಾಡುತ್ತಾ ಕಣ್ಣನೋಟ ಮಂಜಾಗಿ, ತನ್ನ ಸುತ್ತಲೂ ಕೋಟಿ ತೆರೆಗಳನ್ನು ತುಳುಕಿಸುವ ಕಡಲು ಹರಡುತ್ತಿರುವಂತೆ ತೋರಿತು. ಮುಗಿಲಿನಿಂದ, ನೆಲದಿಂದ, ನಕ್ಷತ್ರದಿಂದ ಕತ್ತಲಲ್ಲಿ ಕಡೆಗೆ ಗಿಡಮರಗಳ ಎದೆಯಿಂದ, ಎಲ್ಲೋ ಮಿಣುಕುವ ಮಿಂಚುಹುಳುಗಳಿಂದ, ಜೀರುದುಂಬಿಯ ಏಕನಾದದಿಂದ, ಅಲೆ ಅಲೆಯಾಗಿ, ಗಳಿಗೆಗಳಿಗೆಗೆ ಉಕ್ಕು ಹೆಚ್ಚಿ, ನೆಲದಿಂದ ಮೇಲೆದ್ದು ಮುಗಿಲನ್ನು ಅವರಿಸುವಂತಿದೆ, ಆ ಕಡಲು, ಅವನ ಹೃದಯದಿಂದಲೇ ಹೊಳೆಹೊಳೆವ ಪ್ರವಾಹವೊಂದು ಹೊರಬಂದು ಆ ಕಡಲನ್ನು ಬೆರೆತು, ಅದರ ಉಕ್ಕಿಗೆ ತೋಳು ಕೊಟ್ಟು ಮೇಲೆತ್ತುತ್ತಿದೆ. ಗಳಿಗೆಗಳಿಗೆಗೆ ಏರುತ್ತಿರುವ ಸಾಗರದ ಆಗಾಧ ಮುಖದಲ್ಲಿ ನೆಲ–ಮುಗಿಲು ಮರೆಯಾಗುತ್ತಿವೆ. ಸುತ್ತ ಕವಿದ ಕತ್ತಲು ಬಂಗಾರದ ಮಿರುಗು ಕೊಟ್ಟಂತೆ ಹೊಳೆಯುತ್ತಿದೆ. ಎಲ್ಲ ಕಡೆಯಲೂ ಬೆಳಕು; ಬೆಳಕೇ ಸಾಗರವಾಗಿ



ಜಗತ್ತನ್ನು ನುಂಗುತ್ತಿದೆ. ಆ ಆಗಾಧ ಬೆಳಕಿನ ಅಮರ್ತ್ಯ ಪ್ರಕಾಶದಲ್ಲಿ ಕೋರೈಸಿದ ಕಣ್ಣು ತಾನೆ ಮುಚ್ಚಿ ಸೋಲುತ್ತಿದೆ. ಎಲ್ಲೋ ಒಳಗೆ, ಇನ್ನೂ ಒಳಗೆ... ಯಾವುದೋ ಝುರಿಯೊಂದು ಅವನನ್ನು ಯಾವುದೋ ಪಾತಾಳದಾಳಕ್ಕೆ ವೇಗವಾಗಿ ಸೆಳೆದೊಯ್ಯುತ್ತಿದೆ. ಸುಳಿಯಲ್ಲಿ ಸಿಲುಕಿದ ಭಾರವಾದ ಸೀಸದ ಗುಂಡಿನಂತೆ, ಉಸಿರು ಸಿಕ್ಕಿಸುವ ವೇಗದಿಂದ ಕೆಳಗಿಳಿಯುತ್ತಿದೆ ಅವನ ಚೇತನ. ಎಲ್ಲಿಗೆ.... ಎತ್ತ ಕಡೆಗೆ.... ಏನು ಗುರಿ.... ಏನು ದಾರಿ ? ಭೀತಿ... ಅಸಹಾಯಕತೆ... ಆರ್ತತೆ ಕರಣಗಣಗಳೆಲ್ಲಾ, ಉಗ್ರವಾಗಿ ಮೀಟುವ ಬೆರಳಿನ ಓಟಕ್ಕೆ ಸಿಲುಕದ ವೀಣೆಯ ತಂತಿಗಳಂತೆ ಪ್ರಕ್ಷುಬ್ಧವಾಗಿ ಆಕ್ರಂದಿಸುತ್ತಿವೆ. ತಾಯಿಯ ತೋಳಿನಂತೆ ಸೆಳೆದುಕೊಳ್ಳುತ್ತಿವೆ. ಆ ತೆರೆಗಳು... ಮಂದಹಾಸದ ಮಧುರ ಉಜ್ವಲತೆಯ ಬಂಗಾರದ ಬೆಳಕಿನ ತೆರೆಗಳು ತೊಟ್ಟಿಲಾಗಿ ತೂಗುತ್ತಿವೆ... ಉರಿವ ಕರ್ಪೂರದಂತೆ, ಸಕ್ಕರೆಯ ಹಳುಕಿನಂತೆ, ಅವನೊಳಗಿನ ಬೆಳಕು, ಆ ಬೆಳಕಿನ ಆತ್ಮೀಯವಾದ ತೆರೆಗಳಲ್ಲಿ ಕರಗಿಹೋಗುತ್ತಿದೆ... ಇದ್ದಕ್ಕಿದ್ದಹಾಗೆ ಎಲ್ಲ ಸದ್ದು, ಬೆಳಕು, ಎಲ್ಲ ಆಕಾರ – ಎಲ್ಲೋ ಕರಗಿಹೋಗಿ, ತೇಜೋಮಯವಾದ ಶೂನ್ಯ ಎಲ್ಲವನ್ನೂ ಅವರಿಸಿತು... ಶೂನ್ಯ – ಮೌನ ಶೂನ್ಯ. ಬೆಳಕಿನಲ್ಲಿ ಬೆಳಕು, ಅಲೆಯಲ್ಲಿ ಅಲೆ, ನಾದದಲ್ಲಿ ನಾದ ಬೆರೆತು ಕರಗಿ – ಬರಿ ಶೂನ್ಯ. ಬಿರುಗಾಳಿಯಲುಗಿಸಿದಂತೆ ಅವನ ಮೈ ಝೊಂಕಿಸಿ ನೆಲ. ಮುಗಿಲು ಕಲಕಿ ಒಂದಾದವು–

“ಹಣೆಯ ಮೇಲೆ ತಣ್ಣೀರು ಚಿಮುಕಿಸಿದಂತಾಗಿ, ವೆಂಕಟಸುಬ್ಬಯ್ಯ ಬೆಂಕಿಯ ನಾಲಿಗೆಯಂತೆ ಉರಿವ ಕಣ್ಣು ತೆರೆದು ನೋಡಿದ – ತನ್ನನ್ನು ಕೈಬಿಟ್ಟು ಎಲ್ಲೋ ಹೋದವನೆಂದುಕೊಂಡ ಬೈರಾಗಿ ತನ್ನ ತೊಡೆಯ ಮೇಲೆ ಅವನ ತಲೆಯನ್ನಿಟ್ಟುಕೊಂಡು, ಜ್ವರತಾಪದಿಂದ ಕುದಿಯುತ್ತಿರುವ ಅವನ ಹಣೆಗೆ, ಕಂಬನಿಯ ಶೈತ್ಯೋಪಚಾರ ಮಾಡುತ್ತಿದ್ದಾನೆ !ತನ್ನ ಕಣ್ಣನ್ನೇ ನಂಬುವುದು ವೆಂಕಟಸುಬ್ಬಯ್ಯನಿಗೆ ಕಷ್ಟವಾಯಿತು. ಇದೂ ಭ್ರಮೆಯೇ ? ತನ್ನ ಹಣೆಯ ಮೇಲೆ ಆಡುತ್ತಿದ್ದ ಆತನ ಕೈಯನ್ನು ಹಿಡಿದು ನೋಡಿದ. ನಿಜ–ಆತನೆ. ಯಾರಿಗೆ ತನ್ನೊಂದಿಗೆ ಮಾತನಾಡುವುದೂ ಬೇಡವಾಗಿತ್ತೋ ಯಾರು ತನ್ನಿಂದ ಆದಷ್ಟು ದೂರವಿರಲೆತ್ನಿಸಿದ್ದನೋ, ಆತನ ತೊಡೆಯ ಮೇಲೆಯೇ ತನ್ನ ತಲೆ! ಇದೇನು ಪವಾಡವೇ ? ಏನೋ ಮಾತಾಡಬೇಕನಿಸಿತು. ಆದರೆ ನಾಲಿಗೆ ಅಲುಗಲಿಲ್ಲ. ಬೈರಾಗಿಯೇ ಮಾತನಾಡಿದ;

“ನಾನು ಮಹಾನೀಚ. ನನ್ನನ್ನು ಕ್ಷಮಿಸು, ಕಂದಾ. ಸಾವಿನ ಬಾಯಿಗೆ ನಿನ್ನನ್ನು ಬಿಟ್ಟು ಹೋದ ಕಟಕ ನಾನು!”–ಎದೆಯೊಳಗೆ ಹರಿವ ಕಣ್ಣೀರಿನಲ್ಲಿ

ರೂಪುಗೆಟ್ಟು ಹೊರಬಂದ ಮಾತು, ಹೃದಯದಾಳದಲ್ಲಿ ಮೂಡಿದ ಅಕ್ಕರೆಯ ಜೇನಿನಲ್ಲಿ ಅದ್ದಿ ತೆಗೆದಂತಿತ್ತು. ಎಷ್ಟು ಬೇಗ, ಎಷ್ಟು ಆಶ್ಚರ್ಯಕರವಾದ ಪರಿವರ್ತನೆ! ಆ ವಿಸ್ಮಯವೇ ಮೂಕನಾದ ಅವನು ಮಾತಾಡುವಂತೆ ಮಾಡಿತು.

"ನನ್ನನ್ನು ಕೈಬಿಡಬೇಡಿ, ಗುರು, ನೀವಲ್ಲದೆ ನನಗಾರೂ ದಿಕ್ಕಿಲ್ಲ."

"ನನ್ನನ್ನು ನಂಬಬೇಡ. ನಾನೆಂಥ ಕಟುಕನೆಂಬುದು ನಿನಗೆ ತಿಳಿಯದು."

"ಊಹೂ, ನಾನು ಆ ಮಾತನ್ನು ನಂಬಲಾರೆ. ನೀವು ತುಂಬ ದಯಾಮಯರು."

"ನಾನು ದಯಾಮಯನೇ ?" ಕಹಿಯಾಗಿ ನಕ್ಕು ಆ ಬೈರಾಗಿ ಹೇಳಿದ; "ಈಗೊಂದು ಗಳಿಗೆಯ ಕೆಳಗೆ ನೀನು ಜ್ವರದ ತಾಪದಿಂದ ಪ್ರಜ್ಞೆ ತಪ್ಪಿಬಿದ್ದಾಗ ಸತ್ತರೆ ಪೀಡೆ ಬಗೆಹರಿಯಿತು, ಎಂದು ಬಿಟ್ಟುಹೋದೆ. ಹೊರಟಹಾಗೇ ಹೋಗಿದ್ದರೆ ಹೋಗೇಬಿಡುತ್ತಿದ್ದೆನೇನೋ. ಯಾವುದೋ ಶಕ್ತಿ ನನ್ನನ್ನು ತಡೆದು ನಿಲ್ಲಿಸಿತು. ನಿನ್ನ ಕೊನೆಯಾದಮೇಲೆ ಹೋಗುವುದೆಂದು ದೂರದಲ್ಲಿ ಅಡಗಿ ಕುಳಿತೆ. ನಿನ್ನ ಹಾಡುಗಾರಿಕೆ ನನ್ನನ್ನು ಮತ್ತೆ ನಿನ್ನ ಬಳಿಗೇ ಎಳೆತಂದಿತು."

"ನಾನು ಹಾಡಿದೆನೇ ?" ಅಚ್ಚರಿಯಿಂದ ಕೇಳಿದ ವೆಂಕಟಸುಬ್ಬಯ್ಯ.

"ಊಹೂ, ನೀನು ಹಾಡಿದೆ ಎನ್ನಲಾರೆ. ಮನುಷ್ಯಮಾತ್ರದವನು ಹಾಗೆ ಹಾಡುವುದು ಸಾಧ್ಯವಿಲ್ಲ....."

"ನನ್ನ ಮೇಲಿನ ಪ್ರೀತಿಗೆ ಆ ಮಾತು ಹೇಳುತ್ತಿದೀರ. ನಾನಿನ್ನೂ ಹಸುಳೆ. ನೀವು ಹಾಡುವುದರಲ್ಲಿ ಸಾಸಿವೆಕಾಳಿನಷ್ಟು ಹಾಡುವುದು ಬಂದರೂ ನಾನು ಕೃತಾರ್ಥನಾಗುತ್ತೇನೆ. ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ಸಂಗೀತವನ್ನು ಅನುಗ್ರಹಿಸಿ."

"ಗುರುವಾಗಬಲ್ಲವನು ನೀನು. ನೀನುಶಿಷ್ಯನಾಗುವುದೇ ?"

"ಆ ಗರ್ವವೇ ನನ್ನನ್ನು ತಿಂದದ್ದು.... ನನ್ನಲ್ಲಿ ದಯೆ ತೋರಬೇಕು" ಎಂದು ಹೇಳಿ, ಹಾಗೇ ಬೈರಾಗಿಯ ಪಾದಗಳನ್ನು ಮುಟ್ಟಿದ ವೆಂಕಟಸುಬ್ಬಯ್ಯ. ಅವನ ಹೃದಯದ ಹಂಬಲವೆಲ್ಲಾ ಮಾತಿನ ರೂಪತಾಳಿ ಹರಿದಷ್ಟು ಉತ್ಕಟವಾಗಿತ್ತು ಮಾತು.

"ದಯೆ ಮಾಡಬೇಕೆ ? ನಾನು ದಯೆ ಮಾಡಬೇಕೆ ? ದಯೆ! ಕರುಣೆ! ಅನುಕಂಪ! ಎಲ್ಲಕ್ಕೂ ಬೆಂಕಿಹಚ್ಚಿ ಬೈರಾಗಿಯಾಗಿದ್ದೇನೆ ನಾನು. ಹೃದಯವಿದ್ದವರಿಗೆ ಅದೆಲ್ಲಾ. ನಾನು ಹೃದಯಹೀನ. ನನ್ನೆದೆಯಲ್ಲಿ ಹೃದಯವಿಲ್ಲ, ಮಸಣವಿದೆ." – ಕಟುವಾಗಿ ಮುಳ್ಳಿನಂತಹ ಮಾತಾಡಿ, ನಿಟ್ಟುಸಿರಿಟ್ಟು ಹೇಳಿದ ಬೈರಾಗಿ– "ಒಂದು ದಿನ ಅದೆಲ್ಲವೂ ಇತ್ತು. ಇಂದಾವುದೂ ಇಲ್ಲ–ಹೂಂ. ಹೋಗಲಿ, ಎಲ್ಲಿಯ ಹಾಳುಮಾತು. ಎಲ್ಲವನ್ನೂ ಮರೆತು ನಿದ್ರೆ ಮಾಡು. ಜ್ವರದ ತಾಪದಲ್ಲಿ ಮಾತಿನ ಬೇಗೆ ಏಕೆ ?"



"ತಿಂಗಳುಗಟ್ಟಲೆ ಅಲೆದಾಟದಲ್ಲಿ ಒಂದು ದಿನವೂ ಬೈರಾಗಿ ಅಷ್ಟು ಮಾತಾಡಿರಲಿಲ್ಲ. ಕತ್ತಲಲ್ಲಿ ಅವನ ಮುಖ ಕಾಣದಿದ್ದರೂ, ಮಾತಿನ ಕಾವಿನಿಂದ ಆತನ ಮನಸ್ಸಿನ ಉದ್ವೇಗದ ಅನುಭವವಾಗುತ್ತಿತ್ತು. ಆದರೂ ಆತನ ಮನಸ್ಸು ಕರಗಿದ ಈ ಹೊತ್ತಿನಲ್ಲಿ ಬಿಟ್ಟರೆ ಮತ್ತೆಲ್ಲಿ ಹಿಂದಿನ ಹಾಗೆ ಬಿರುಸಾಗುತ್ತಾನೋ ಎಂದು ಬೆದರಿ, ವೆಂಕಟಸುಬ್ಬಯ್ಯ ಹೇಳಿದ:"

"ನೀವು ಮಾತುಕೊಟ್ಟರೆ ನಾನು ನಿದ್ರೆಮಾಡುತ್ತೇನೆ."

"ಏನು ಮಾತು ಕೊಡಬೇಕು ?"

"ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸಬೇಕು."

"ನನ್ನ ಶಿಷ್ಯನಾಗಲು ಅಷ್ಟು ಇಚ್ಛೆಯೇ ?"

"ಹೂಂ, ನಿಮ್ಮಂತಹ ಗುರು ದೊರೆತಾರೇ ಎಂದು ಹಂಬಲಿಸುತ್ತಿದ್ದೆ. ಅಂದು ರಾತ್ರಿ ದುರ್ಗದಲ್ಲಿ ನಿಮ್ಮ ಹಾಡು ಕೇಳಿದಾಗಲೇ, ನಿಮ್ಮನ್ನು ಗುರು ಎಂದು ಮನಸಾ ಕಾಲು ಹಿಡಿದೆ. ನಿಮಗೆ ಶಿಷ್ಯನಾಗುವ ಯೋಗ್ಯತೆ ನನಗಿಲ್ಲ. ಆದರೂ ಕರುಣಿಸಬೇಕು."

"ಈ ಬಂಧನ ಬೇಡವೆಂದು ದೂರಮಾಡಿದ್ದೆ. ಬಿಡುಗಡೆಯ ಕಾಲವಿನ್ನೂ ಬಂದಿಲ್ಲವೆಂದು ಕಾಣುತ್ತೆ. ದೈವೇಚ್ಛೆ ಹೇಗಿದ್ದರೆ ಹಾಗಾಗಲಿ."

– ಅನಿವಾರ್ಯದ ವಿಧಿಗೆ ಶರಣಾಗತವಾಗುವ ಧ್ವನಿಯಲ್ಲಿ ಹೇಳಿದ ಬೈರಾಗಿ. ಆಗ ಅವನು ಆಡಿದ ಒಂದೊಂದು ಮಾತೂ ಒತ್ತಾಯವಾಗಿ ಅವನ ಹೃದಯದಿಂದ ಕಿತ್ತು ತಂದಂತಿತ್ತು.

"ಹಾಗಾದರೆ ಇಂದಿನಿಂದ ನಾನು ನಿಮ್ಮ ಶಿಷ್ಯ....... ?"

"ಹೂಂ. ಅದೂ ನಿನ್ನ ಹಣೆಯಬರಹ"

"ಅಲ್ಲ, ನನ್ನ ಪರಮಭಾಗ್ಯ!"

"ಅಷ್ಟು ದಿನಗಳ ಅಲೆದಾಟ, ಬಯಕೆ, ಕಾತರ–ಎಲ್ಲವೂ ಒಂದು ಗಳಿಗೆಯಲ್ಲಿ ತೀರಿದಂತಾಗಿ, ಎದೆ ಹಗುರಾಗಿ ಮಲಗಿದ ವೆಂಕಟಸುಬ್ಬಯ್ಯ. ಮರುದಿನವೂ ಜ್ವರವಿದ್ದ ವೆಂಕಟಸುಬ್ಬಯ್ಯನಿಗೆ ಬೈರಾಗಿಯೇ ಎಂಥದೋ ಹಸರು ಮದ್ದು ಮಾಡಿಕೊಟ್ಟು, ಔಷಧೋಪಚಾರ ಮಾಡಿದ. ಜ್ವರ ಕೊಂಚ ಇಳಿಯಿತು ಎಂದಾದಮೇಲೆ, ತಂಪುಹೊತ್ತಿನಲ್ಲಿ ನಿಧಾನ ಪ್ರಯಾಣಮಾಡಿ ಇಬ್ಬರೂ ಹತ್ತಿರದ

ಹಳ್ಳಿಯೊಂದನ್ನು ಸೇರಿದರು. ಅಲ್ಲೇ ಊರ ಮುಂದಲ ಗುಡಿಯಲ್ಲಿ ಕೆಲವು ದಿನ ವೆಂಕಟಸುಬ್ಬಯ್ಯನಿಗೆ ಸಂಗೀತ ಅಭ್ಯಾಸ ನಡೆಯಿತು– ಇದು ವೆಂಕಟಸುಬ್ಬಯ್ಯನಿಗೆ ಗುರು ಸಿಕ್ಕ ಕಥೆ" ಎಂದ ಚಿನ್ನಪ್ಪ.

ಅಷ್ಟು ಹೊತ್ತಿಗೆ ನಡುರಾತ್ರಿಯ ವೇಳೆಯಾಗಿತ್ತು. ಕಥೆ ಹೇಳುವ ಚಿನ್ನಪ್ಪನ ಕಣ್ಣು ಕೆಂಪಾಗಿ, ನಿದ್ರೆ ಬರುತ್ತಿರುವುದನ್ನು ಸೂಚಿಸುತ್ತಿತ್ತು.

"ನಿದ್ರೆ ಬರುತ್ತಿದೆಯೇ, ಚಿನ್ನಪ್ಪ ? ಹೊತ್ತು ಬಹಳ ಆಯಿತು" ಎಂದೆ.

"ಬೈಲುನಾಟಕ ಕಲಿಸೋಕೆ ಸೇರಿಕೊಂಡು ಮೈಗೆ ನಿದ್ರೆಕೆಡೋದು ಅಭ್ಯಾಸ ಆಗಿಹೋಗಿದೆ. ನಿಮಗೆ ನಿದ್ದೆ ಬರೋದಾದ್ರೆ ಮಲಕೊಳ್ಳಿ, ಉಳಿದದ್ದು ನಾಳೆ ಹೇಳ್ತೀನಿ."

"ಇನ್ನೂ ಬಹಳ ಇದೆಯೇನು ?"

"ಹೇಳೋಕೆ ಹೊರಟರೆ ಅದಕ್ಕೆ ಕೊನೆ ಮಿತಿ ಎಲ್ಲಿ ? ಬೆಳಗ್ನಿಂದ ಅನ್ನ, ನೆರಳು ಇಲ್ದೆ ದಣಿದಿದೀರ, ನಿದ್ದೆ ಮಾಡಿ."

"ನನಗೂ ನಿದ್ದೆ ಕೆಡುವುದು ಅಭ್ಯಾಸವಿದೆ, ಚಿನ್ನಪ್ಪ, ಕಥೆ ಹೆಚ್ಚಿಲ್ಲದಿದ್ದರೆ, ನಿಮಗೆ ತೊಂದರೆ ಆಗದಿದ್ದರೆ, ಹೇಳಿ ಮುಗಿಸಿಬಿಡಿ, ಮುಂದೆ ಕೇಳಬೇಕು ಎನ್ನೋ ಆಸೇಲಿ ನನಗಂತೂ ಮಲಗಿದರೂ ನಿದ್ದೆ ಬರೋಲ್ಲ."

"ಹಂಗಾದ್ರೆ ಕೇಳೇಬಿಡಿ"

– ಎಂದು ಹೇಳಿ ಚಿನ್ನಪ್ಪ ನೀರು ಕುಡಿದು ಬಂದು, ಬೀಡಿ ಸೇದಿ, ಮತ್ತೆ ವೆಂಕಟಸುಬ್ಬಯ್ಯನ ಕಥೆಯನ್ನು ಮುಂದುವರಿಸಿದ :

## ೮

'ವೆಂಕಟಸುಬ್ಬಯ್ಯನಿಗೆ ಗುರುವಾಗಿ ಸಿಕ್ಕ ಬೈರಾಗಿಯದೂ ವಿಚಿತ್ರ ಜೀವನ. ಆತ ಧಾರವಾಡದ ಕಡೆಯವನು. ಆತನ ಊರು ಯಾವುದೋ ನನಗೆ ತಿಳಿಯದು. ಸದಾನಂದಬುವಾ ಎಂದು ಅವನ ಹೆಸರು. ಆ ಸೀಮೆಯಲ್ಲಿ ಆತ ತುಂಬ ಹೆಸರುವಾಸಿಯಾದ ಸಂಗೀತಗಾರನಾಗಿದ್ದನಂತೆ. ಎಲ್ಲಾದರೂ ಆತನ ಸಂಗೀತ ನಡೆಯುತ್ತದೆ ಅಂದರೆ, ಸುತ್ತಲ ಹತ್ತಾರು ಊರುಗಳ ಜನ ಸೇರುತ್ತಿದ್ದರಂತೆ. ಹಾಡುತ್ತಾ ಕುಳಿತುಬಿಟ್ಟರೆ ಮೂರು ದಿನವಾದರೂ ಸರಿಯೆ, ಆರು ದಿನವಾದರೂ ಸರಿಯೆ. ಇಡೀ ಕಛೇರಿಗೆ ಒಂದು ರಾಗವೇ ಆದರೂ ಆಯಿತು. ಮನಸ್ಸು ಬಂದರೆ ಹಾಡಿದ, ಇಲ್ಲವಾದರೆ ವರ್ಷಗಟ್ಟಲೆಯಾದರೂ ಇಲ್ಲವೇ ಇಲ್ಲ, ಅಂಥ



ಆಸಾಮಿ. ಪೇಶ್ವೆಗಳ ಆಸ್ಥಾನದವರೆಗೂ ಆತನ ಕೀರ್ತಿ ವ್ಯಾಪಿಸಿತ್ತಂತೆ. ಅವರು ಎಷ್ಟೋ ಬಾರಿ, ಆತನನ್ನು ತಮ್ಮ ಆಸ್ಥಾನಕ್ಕೆ ಕರೆಸಿಕೊಳ್ಳುವ ಪ್ರಯತ್ನ ಮಾಡಿದರೂ ಸಫಲವಾಗಲಿಲ್ಲ. 'ಹಾಡೋ ಹಕ್ಕಿಗೆ ಅರಮನೆ ಪಂಜರವೇಕೆ ? ಅರಸರ ಅಂಕೆ, ದೆವ್ವದ ಭಯ ಇಲ್ಲದ ಕಾಡೇ ಸರಿ. ಹಿಮಾಲಯ ಚೆನ್ನಾಗಿದೆ ಅಂತ ಹಿತ್ತಲಲ್ಲಿಟ್ಟುಕೋತೀರಾ? ಅಲ್ಲೇ ಹೋಗಿ ನೋಡಬೇಕು. ನನ್ನ ಸಂಗೀತ ಕೇಳಬೇಕೆಂದರೆ ನಾನಿದ್ದಲ್ಲಿಗೇ ಬನ್ನಿ' ಎಂದು ಹೇಳಿಕಳಿಸಿಬಿಟ್ಟಿದ್ದನಂತೆ ಬುವಾ. ಇದರಿಂದಾಗಿ ಎಷ್ಟೋ ಜನಕ್ಕೆ 'ಈತನಿಗೆ ಮಹಾದುರಹಂಕಾರ' ಎನಿಸಿತು. ಆದರೂ ವಾಸ್ತವಿಕವಾಗಿ ಮನುಷ್ಯ ಅಹಂಕಾರಿಯಲ್ಲ. ಎಳೆಯ ಮಗು ಬಂದು 'ಬುವಾ, ಹಾಡ್ತೀರಾ? ಕೇಳಬೇಕು' ಎಂದರೆ ಅಲ್ಲೇ ಹಾಡುತ್ತಿದ್ದನಂತೆ. ಊರಲ್ಲಿ ಹೋಗುವಾಗ ಯಾರ ಮನೆಯಲ್ಲಾದರೂ ಮಗು ಅಳುತ್ತಾ ಇದ್ದರೆ, ಈತ ಹಾಗೇ ಒಳಗೆ ಹೋಗಿ, ಹಾಡು ಹೇಳುತ್ತಾ ಮಗುವಿನ ತೊಟ್ಟಿಲು ತೂಗುತ್ತಿದ್ದನಂತೆ. ಇದೆಲ್ಲಾ ನೋಡಿ ಊರಿನ ಜನ ಆತನಿಗೆ 'ಖಯಾಲಿ ಬುವಾ' ಎಂದು ಹೆಸರಿಟ್ಟಿದ್ದರಂತೆ.

"ಸದಾನಂದಬುವಾಗೆ ಸಂಗೀತದ ಮೇಲಿದ್ದಷ್ಟೇ ಪ್ರೀತಿಯಿದ್ದ ವ್ಯಕ್ತಿ ಆತನ ಹೆಂಡತಿ. ಆಕೆ ತುಂಬಾ ಸುಂದರಿಯಂತೆ. ಇಂಥ ಖಯಾಲಿ ಗಂಡನನ್ನು ಕಟ್ಟಿಕೊಂಡು ಎಷ್ಟು ಕಷ್ಟ ಅನುಭವಿಸಿದಳೋ ಏನೋ, ಮನಸ್ಸು ಎಷ್ಟು ರೋಸಿತ್ತೋ. ಬುವಾಗೆ ಒಳ್ಳೇ ಸಂಗೀತಗಾರನೆಂದು ಹೆಸರಿತ್ತು. ಹೆಂಡತಿಯ ಮೇಲೆ ಪ್ರೀತಿ ಇತ್ತು. ಆದರೆ ಅದೆಲ್ಲಾ ಏನು – ಹೊಟ್ಟೆಗೆ ಅನ್ನವೇ, ಮೈಗೆ ಬಟ್ಟೆಯೇ ? ಏನಾಯಿತೋ ಏನೋ – ಒಂದು ದಿನ ಈಕೆ ಆತನನ್ನು ಬಿಟ್ಟು ಯಾರೋ ಬೇಕಾದವರೊಂದಿಗೆ ಓಡಿಹೋದಳು."

"ಅದು ಬುವಾಗೆ ಸಿಡಿಲಿನ ಏಟಾಯಿತು. ಮೂರು ನಾಲ್ಕು ದಿನ ಪ್ರಜ್ಞೆ ಇಲ್ಲದೆ, ಹುಚ್ಚಾಗಿ ಹರಟುತ್ತಾ, ಹೋದ ಹೆಂಡತಿಯನ್ನು ನೆನೆಸಿಕೊಂಡು ಕನವರಿಸಿಕೊಳ್ಳುತ್ತಾ, ಅಳುತ್ತಾ, ರೇಗುತ್ತಾ, ಬಿದ್ದಿದ್ದನಂತೆ. ಊರ ಜನ ಅವನ ಸ್ಥಿತಿಯನ್ನು ಕಂಡು ಕನಿಕರಪಟ್ಟು, ಹಾಗೂ ಹೀಗೂ ಮಾಡಿ, ಬುವಾನ ಜೀವ ಉಳಿಸಿದರು. ಅವೊತ್ತಿನಿಂದ ಬುವಾ ಊರು, ಮನೆ ಬಿಟ್ಟು ಬೈರಾಗಿಯಾಗಿ ಊರೂರು ಅಲೆಯಲಾರಂಭಿಸಿದ. ಆತನ ಪಾಲಿಗೆ ಜಗತ್ತೇ ಶೂನ್ಯವಾದಂತಿತ್ತು. ಮೊದಲೇ ಖಯಾಲಿಯಾಗಿದ್ದವನು, ಆಗ ಮತ್ತಷ್ಟು ಖಯಾಲಿಯಾದ. ಹೆಂಡತಿಯ ಮೇಲಿನ ಸಿಟ್ಟನ್ನು ಜಗತ್ತಿನ ಮೇಲೆ ತೋರಿಸತೊಡಗಿದ. ಎಲ್ಲರೂ ಮೋಸಗಾರರು, ಎಲ್ಲರೂ ತನ್ನನ್ನು ಸುಲಿಗೆ ಮಾಡಲು ಬಂದವರು ಎಂಬ ಭಾವನೆ. ಹೆಂಡತಿಯಂತೇ

ತನ್ನಿಂದ ಸಂಗೀತ ಕಲಿತವರೂ, ಕೇಳಿದವರೂ ತನಗೆ ದ್ರೋಹ ಮಾಡುತ್ತಾರೆ ಎಂಬ ಕುರುಡು ಕ್ರೋಧ, ಹಗೆತನ. ತನಗೆ ಮನಸ್ಸು ಬಂದಾಗ ಹಾಡುವನು. ಅದನ್ನು ಯಾರಾದರೂ ಕೇಳುತ್ತಿದ್ದಾರೆಂದು ತಿಳಿದರೆ ಅಲ್ಲೇ ನಿಲ್ಲಿಸಿಬಿಡುವನು. ಕೇಳುತ್ತಿದ್ದವರ ಮೇಲೆ, ಅವರು ಕೇಳುವುದೇ ದ್ರೋಹ ಎಂಬಂತೆ ಹೆಚ್ಚಾಗಿ ರೇಗುವವನು. ಅವನ ಹಾಡು ಕೇಳುವುದೇ ಇಷ್ಟು ಕಷ್ಟವಾದಾಗ ಇನ್ನು ಆತ ಯಾರಿಗಾದರೂ ಕಲಿಸುವುದು ಎಲ್ಲಿ ಬಂತು ?"

"ಇಂಥವನಿಗೆ 'ನನಗೆ ಸಂಗೀತ ಕಲಿಸು' ಎಂದು ವೆಂಕಟಸುಬ್ಬಯ್ಯ ಗಂಟುಬಿದ್ದಿದ್ದ. ಯಾವ ಕರ್ಮಫಲವೋ, ಮನಸ್ಸು ಕರಗಿದ ಹೊತ್ತಿನಲ್ಲಿ ಆತನೂ ಒಪ್ಪಿಕೊಂಡ. ಅಷ್ಟು ಕಾಡಿಸಿದಮೇಲೂ ಒಪ್ಪಿಕೊಂಡದ್ದು ಈತನ ಪುಣ್ಯವೆಂದೆನ್ನಬೇಕು. ಅಂತೂ ಅಂದಿನವರಿಗೂ ಬಿಟ್ಟುಹೋದ ವೆಂಕಟಸುಬ್ಬಯ್ಯನ ಸಂಗೀತಾಭ್ಯಾಸ ಮತ್ತೆ ಆರಂಭವಾಯಿತು.

ಆ ಅಭ್ಯಾಸ ವೆಂಕಟಸುಬ್ಬಯ್ಯನಿಗೆ ಸರಿಯಾದ ಅಭ್ಯಾಸ! ಅದರಲ್ಲೇನು ಒಂದು ಕ್ರಮವೇ, ಒಂದು ನಿಯಮವೇ ? ಮನಸ್ಸು ಬಂದಾಗ ಇಪ್ಪತ್ತು ನಾಲ್ಕು ಗಂಟೆಯೂ ಸಂಗೀತಾಭ್ಯಾಸ; ಇಲ್ಲವೆಂದರೆ ತಿಂಗಳುಗಟ್ಟಲೆ ಏನೂ ಇಲ್ಲ. ತಿರುಪೆಯ ಅನ್ನ; ಕಂಡವರ ಜಗಲಿಯೋ ದೇವಾಲಯವೋ ಛತ್ರವೋ – ಎಲ್ಲಿದ್ದರಲ್ಲಿ ವಾಸ. ಸ್ವಲ್ಪ ದಿನವಾದರೂ ತಿರುಮಲಯ್ಯನಲ್ಲಿ ಸಂಗೀತ ಕಲಿತದ್ದು ಆಗ ವೆಂಕಟಸುಬ್ಬಯ್ಯನಿಗೆ ಸಹಾಯವಾಯಿತು. ಇಲ್ಲವಾದರೆ ಬುವಾನ ವಿಚಿತ್ರ ಪಾಠಕ್ರಮದ ಬಿರುಗಾಳಿಯಲ್ಲಿ ಸಿಕ್ಕಿ ವೆಂಕಟಸುಬ್ಬಯ್ಯ ದಿಗ್ಭ್ರಾಂತನಾಗಿ ಕಂಗೆಡಬೇಕಾಗಿತ್ತು. ಹಗಲಾದರೆ ಹಗಲು, ರಾತ್ರಿಯಾದರೆ ರಾತ್ರಿ, ಎಷ್ಟು ಹೊತ್ತಿನಲ್ಲಿ ಹೇಳಿಕೊಡಬೇಕೆನಿಸಿದರೆ ಅಷ್ಟು ಹೊತ್ತಿನಲ್ಲಿ, ಊಟ ನಿದ್ದೆಯನ್ನಾದರೂ ಬಿಟ್ಟು ವೆಂಕಟಸುಬ್ಬಯ್ಯ ಕಲಿಯಬೇಕು. ತಾಳ, ತಂಬೂರಿಯ ಬೆಂಬಲವೂ ಇಲ್ಲ. ಒಮ್ಮೆ ವೆಂಕಟಸುಬ್ಬಯ್ಯ 'ತಂಬೂರಿ ಇದ್ದಿದ್ದರೆ, ಶ್ರುತಿಗೆ ಅನುಕೂಲವಾಗುತ್ತಿತ್ತೋ ಏನೋ' ಎಂದದ್ದಕ್ಕೆ ಆತ–

"ತಂಬೂರಿ ಆದೇತಕ್ಕೆ ಬೇಕು ? ನಾದದ ಶ್ರುತಿ ಹಿಡಿಯೋ ಯೋಗ್ಯತೆ ಇಲ್ಲದೋನಿಗೆ, ಆ ಬಹಿರಾವಲಂಬನ ಬೇಕು – ಕಣ್ಣಿಲ್ಲದೋನಿಗೆ ಸುಲೋಚನ ಬೇಕಾಗೋ ಹಾಗೆ. ರಾಗದ ನಾದದಲ್ಲಿ ಮೈಮರೆತಾಗ ನಿನ್ನ ಮೈಯೇ ತಂಬೂರಿಯಾಗಬೇಕು. ತ್ರಿಕರಣಗಳೂ ತಂಬೂರಿಯ ಮೂರು ತಂತಿಗಳಾಗಿ ಮಿಡಿಯಬೇಕು. ಆ ಪರವಶತೆ ಬರದೆ ಹೋದರೆ ಸಂಗೀತ ಬರುತ್ತೇನು? ಶ್ರುತಿ ಶುದ್ಧ ಇದ್ದರೆ, ಸಪ್ತಸ್ವರಗಳು ಕರೆದಾಗ ಬಂದು, ನುಡಿಸಿದಂತೆ ನುಡಿಯಬೇಕು.



ಹಾಡುವಾಗ ಸುತ್ತಲ ಜಗತ್ತೇ ತಂಬೂರಿಯಾಗಿ ಮಿಡಿಯಬೇಕು. ಹಾಗೆ ಹಾಡುವುದನ್ನು ಅಭ್ಯಾಸ ಮಾಡು."

"ಅದು ಹೇಗೆ ಸಾಧ್ಯ ಗುರುಗಳೇ ?"

"ಹಾಲಿನಲ್ಲಿ ಬಿದ್ದ ಸಕ್ಕರೆ, ಕಣ್ಣಿಗೆ ಕಾಣುತ್ತದೆಯೇ ? ಹೂವಿನಲ್ಲಿ ಪರಿಮಳ ಎಲ್ಲಿದೆ ತೋರಿಸು? ಅದು ಮನೋಗೋಚರವಾದದ್ದು, ದೃಗ್ಗೋಚರವಾದುದಲ್ಲ. ನಾದಸಮುದ್ರದಲ್ಲಿ ಸಪ್ತಸ್ವರಗಳೂ ಅಷ್ಟೆ. ಗುಡ್ಡದಲ್ಲಿ ಕಾಣುವ ಕಲ್ಲಿನ ಹಾಗೆ, ಅದನ್ನು ಒಂದು, ಎರಡು, ಮೂರು, ಇಲ್ಲಿ ಇಲ್ಲಿ ಇಲ್ಲಿ ಎಂದು ಕೈತೋರಿಸಿ ಎಣಿಸಲು ಸಾಧ್ಯವೇ ? ರಾಗದ ಎಳೆಯನ್ನು ಹತ್ತಿಯ ದಾರದ ಹಾಗೇ ಕತ್ತರಿಸಿ, ಇದು ಸ, ಇದು ರಿ, ಇದು ಗ, ಎನ್ನಲು ಸಾಧ್ಯವೇ ? ಹೊಳೆಯಂತೆ ನಾದ ಹರಿಯುವಾಗ, ಈ ಏರು ಸ, ಈ ಇಳುವು ರಿ, ಆ ನಿಲುಗಡೆಗೆ ಎಂತ ಸ್ಥೂಲವಾಗಿ ನಿರ್ದೇಶನ ಮಾಡಿದಾರೆ; ನೀರಿನಲ್ಲೇ ಅಲ್ಲಲ್ಲಿ ಕಟ್ಟೆ ಹಾಕಿ, ಹೆಸರು ಬರೆದಿಲ್ಲ. ಎಲ್ಲಿ ಯಾವುದು ಎಂದು ಅನುಭವಜನ್ಯವಾಗಿ ತಿಳಿಯಬೇಕು. ಆ ಅನುಭವ ಇಂದ್ರಿಯದ್ದಲ್ಲ, ಇಂದ್ರಿಯಾತೀತವಾದದ್ದು. ನೀರಿನ ಏರು ಇಳುವು, ನಿಲುಗಡೆ ಮುರಿತಗಳು ಅರಿವಾಗಬೇಕಾದರೆ, ನೀರಿನಲ್ಲೇ ನಡೆಯಬೇಕಾದಂತೆ, ನಿನ್ನ ಚೇತನ ನಾದಲಹರಿಯಲ್ಲಿ ಮುಳುಗಿದಾಗ ಸಪ್ತ ಸ್ವರಗಳ ಜೀವಸ್ಥಾನ ನಿನಗೆ ಅರಿವಾಗುತ್ತದೆ. ಆ ನಾದದ ನೀರಿನಲ್ಲಿ ನೀನು ಮುಳುಗಬೇಕು, ಮೈಮರೆಯಬೇಕು; ಇಲ್ಲವಾದರೆ ಕಟ್ಟಿಕೊಟ್ಟ ಬುತ್ತಿಯಂತೆ ಕಲಿಸಿಕೊಟ್ಟ ಸ್ವರಜ್ಞಾನವೂ ತಾತ್ಕಾಲಿಕವಾಗುತ್ತದೆ. ಆದ್ದರಿಂದ ನಾದದಲ್ಲಿ ಲೀನವಾಗುವುದನ್ನು ಅಭ್ಯಾಸ ಮಾಡು."

"ಅದಕ್ಕೆ ದಾರಿ"

"ದ್ವೈತಬುದ್ಧಿ ತೊಲಗಬೇಕು. ಅದ್ವೈತ ಸಾಧಿಸಬೇಕು."

"ಅಂದರೆ"

"ಹಾಡು–ಹಾಡುವವನ್ನು ಬೇರೆ ಬೇರೆ ಎಂಬ ಭಾವನೆ ಹೋಗಬೇಕು. ಎರಡೂ ಒಂದಾಗಬೇಕು. ನಾನು–ನೀನು ಎಂಬ ಈ ದ್ವಂದ್ವ ಇರುವವರೆಗೂ ಜೀವನದಲ್ಲಿ ಸಮರಸ ಹೇಗೆ ಸಾಧಿಸುವುದಿಲ್ಲವೋ, ಹಾಗೇ ಸಂಗೀತದಲ್ಲೂ. ಒಂದು ವೇಳೆ ಜೀವನದಲ್ಲಿ ದ್ವಂದ್ವ ಇದ್ದರೂ ನಡೆದೀತು, ಸಮರಸವೇ ಜೀವನವಾದ ಸಂಗೀತದಲ್ಲಿ ಅದು ಕೂಡಲೇ ಕೂಡದು. ತಲ್ಲೀನತೆಯೊಂದೇ ಸಂಗೀತದಲ್ಲಿ ಸಿದ್ಧಿಗೆ ಹಾದಿ. ಹಾಡುತ್ತಿದ್ದೇನೆ ಎನ್ನುವ ಅರಿವು ಹಾಡುವಾಗ ಇರಬಾರದು."

"ಹಾಗಿದ್ದರೆ ಅದರಿಂದ ತೊಂದರೆಯಾಗದೇ ?"

"ಏನು ತೊಂದರೆ ?"

"ರಾಗ ಹಾಡಿ ನಿಲ್ಲಿಸಿ ಮತ್ತೊಂದು ರಾಗ ಆರಂಭಿಸಬೇಕು ಎನ್ನುವಾಗ. ತಾಳಬದ್ಧವಾಗಿ ಹಾಡಬೇಕು ಎನ್ನುವಾಗ, ಮೈಮರೆತರೆ ಶಾಸ್ತ್ರಭಂಗವಾಗ ಬಹುದಲ್ಲಾ?"

"ಶಾಸ್ತ್ರ! ಯಾರು ಮಾಡಿದ ಶಾಸ್ತ್ರ ? ಯಾವ ಶಾಸ್ತ್ರಕ್ಕೆ ಭಂಗಬರುತ್ತದೆ ? ಹರಿವ ನೀರಿಗೆ, ಇಳುಕಲಿನಲ್ಲಿ ವೇಗವಾಗಿ, ಸಮತಟ್ಟಿನಲ್ಲಿ ಶಾಂತವಾಗಿ ಹರಿಯಬೇಕು, ಎದುರು ಏರು ಅಡ್ಡವಾದಾಗ, ಅಲ್ಲೇ ನಿಂತು ವಿಸ್ತಾರವಾಗಬೇಕು ಎನ್ನುವ ಸ್ವಭಾವಜನ್ಯವಾದ, ಪ್ರಕೃತಿಸಿದ್ಧವಾದ ನಿಯಮ ಹೇಗೆ ಇದೆಯೋ, ಸಂಗೀತಕ್ಕೂ ಅಷ್ಟೇ ನಿಯಮ. ಭಾವದ ಏರಿಳಿತಕ್ಕೆ ಅನುಗುಣವಾಗಿ ಹರಿಯುತ್ತದೆ, ತಾಳವೆನ್ನುವುದು ಇದಕ್ಕೇ. ರಾಗವೆಂದರೇನು ? ನಾದದಿಂದ ಪ್ರಕಾಶಿತವಾದ ಭಾವವೇ ರಾಗ. ಈಗ ಕೆಲಕೆಲವು ಹೊತ್ತಿನಲ್ಲಿ ಕೆಲವು ರಾಗ ಹಾಡಬಹುದು ಎನ್ನುತ್ತಾರೆ. ಅಲ್ಲವೇ ?"

"ಅಹುದು."

"ಅದು ಏಕೆ ಬಲ್ಲೆಯಾ ?"

"ಹಾಗೆ ಹಾಡಿದರೆ ಅದು ಶ್ರೇಯಸ್ಕರವಲ್ಲ ಎಂದು."

"ಅದು ನಂಬಿಕೆ, ಸಂಪ್ರದಾಯ. ಅದಕ್ಕೆ ಕಾರಣವೇನು ?"

"ನಾನರಿಯೆ."

"ನೋಡು, ಮನುಷ್ಯನಲ್ಲಿ ಮೂರು ಬಗೆಯ ಗುಣಗಳಿವೆ; ಸತ್ಯ, ರಜಸ್, ತಮೋಗುಣಗಳು; ದಿನದಲ್ಲೂ ಹಾಗೇ ಮೂರು ಹೊತ್ತು; ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ. ಮನುಷ್ಯನಲ್ಲಿರುವ ಗುಣಗಳಿಗೂ, ಈ ಹೊತ್ತುಗಳಿಗೂ ಸಂಬಂಧವಿದೆ. ಒಂದೊಂದು ಹೊತ್ತಿನ ಪ್ರಭಾವದಿಂದ ಮನುಷ್ಯನಲ್ಲಿ ಒಂದೊಂದು ಬಗೆಯ ಗುಣ ಕೆರಳುತ್ತದೆ; ಒಂದು ಬಗೆಯ ಬುದ್ಧಿ ಪ್ರಧಾನವಾಗಿ ಎದ್ದುನಿಲ್ಲುತ್ತದೆ. ಕತ್ತಲಲ್ಲಿ ಕಣ್ಣು ಚೆನ್ನಾಗಿ ಕಾಣಿಸುವುದಿಲ್ಲ. ಆಗ ಉಳಿದ ಇಂದ್ರಿಯಗಳು ಹೆಚ್ಚು ಜಾಗ್ರತವಾಗುವುದಿಲ್ಲವೇ ? ಹಾಗೆ. ರಾಗವೆಂದರೆ ನಾದದಿಂದ ಪ್ರಕಾಶಿತವಾದ ಭಾವ ಎಂದು ನಾನಾಗಲೇ ಹೇಳಲಿಲ್ಲವೇ? ಭಾವವೆಂದರೂ ಒಂದೇ, ಗುಣವೆಂದರೂ ಅದೇ. ಈಗೇನಾಯಿತು – ಒಂದೊಂದು ಹೊತ್ತಿನಲ್ಲಿ, ಮನುಷ್ಯನಲ್ಲಿ, ಆ ಹೊತ್ತಿನ ಪ್ರಭಾವದಿಂದ ಒಂದೊಂದು ಬಗೆಯ ಭಾವ ಕೆರಳುತ್ತದೆ – ಎಂದಾಗಲಿಲ್ಲವೇ ? ಆದುದರಿಂದ ಆ ಹೊತ್ತಿನಲ್ಲಿ, ಆ ಭಾವಕ್ಕೆ ಅನುಗುಣವಾದ, ರಂಜಕವಾದ, ಪ್ರಚೋದನಕಾರಿಯಾದ, ಪೋಷಕವಾದ ರಾಗವನ್ನು ಹಾಡಬೇಕು. ಆಗ ಅದು ರಂಜಿಸುತ್ತದೆ. ಈಗ ನೋಡು–ರಾತ್ರಿ ಹೊತ್ತಿಸುವ ದೀಪವನ್ನು



ಹಗಲು ಹೊತ್ತಿಸಿದರೆ ಶೋಭಿಸುತ್ತದೆಯೇ ? ಅಳಬೇಕಾದಾಗ ನಕ್ಕರೆ ಅದು ಹಿತವೇ? ಹಾಗಾಗಬಾರದು; ಆದರೆ, ಅದು ಸಹಜವಲ್ಲ, ವಿಕಾರ, ಸಂಗೀತ ಹೃದಯ ಸಂಸ್ಕರಣ ಮಾಡುವಂಥದು, ಅತ್ಮೋಲ್ಲಾಸಕಾರಿಯಾದುದು. ಅದರಲ್ಲಿ ಈ ವಿಕಾರಕ್ರಿಯೆ, ಅಪರಸಂಧಾನ ಸರಿಯಲ್ಲ; ಮದುವೆಯಲ್ಲಿ ತಿಥಿಮಂತ್ರ ಹೇಳಿದ ಹಾಗೆ. ಆದುದರಿಂದ ಕೂಡದು. ಸಂಗೀತಗಾರ ಇದನ್ನು ಅರಿತಿರಬೇಕು. ಈ ಭಾವನೆ, ನೀನು ಹೇಳಿದ ಸಂಪ್ರದಾಯಕ್ಕೆ ಕಾರಣ. ವಿಚಾರ ಮಾಡಿದ ಜನ, ತಮ್ಮ ವಿಚಾರಜನ್ಯವಾದ ಸತ್ಯವನ್ನು ಸಂಪ್ರದಾಯವೆಂದು ನಮ್ಮ ಮುಂದಿಟ್ಟಿದ್ದಾರೆ; ಅಷ್ಟೇ. ಸಂಪ್ರದಾಯ ಸತ್ಯವಲ್ಲದಿರಬಹುದು; ಆದರೆ ಸಂಪ್ರದಾಯಕ್ಕೆ ಸತ್ಯವೇ ತಾಯಿ. ನಮ್ಮ ರಾಗ ವಿಂಗಡನೆ ಯಾಗಿರುವುದು ಅದೇ ರೀತಿ."

"ಹಾಗಾದರೆ ಈ ರಾಗಕ್ಕೆ ಇದೇ ಸ್ವರಸಂಚಾರ ಎನ್ನುತ್ತಾರಲ್ಲಾ – ಆ ರಾಗವನ್ನು ಹಾಡುವಾಗ ಮೈಮರೆತರೆ, ಸ್ವರಭಂಗವಾದರೆ......?"

"ರಾಗಕ್ಕೆ ಈ ಸ್ವರಕ್ರಮ ಎನ್ನುವುದು ಮತ್ತೊಂದು ಸಂಪ್ರದಾಯ. ಅದು ಬಹು ಸ್ಥೂಲ. ಭಾವ ನಾದಸ್ವರೂಪದಿಂದ ಹರಿಯುವಾಗ, ಅದು ಎಲ್ಲೋ ಒಂದು ಕಡೆ ಇಳಿಯುತ್ತದೆ. ಎಲ್ಲೋ ಏರುತ್ತದೆ – ಅದರ ಉತ್ಕಟತೆ, ಶಿಥಿಲತೆಗೆ ಅನುಸಾರವಾಗಿ, ಎಲ್ಲ ಸಂದರ್ಭಗಳಲ್ಲೂ ಅಷ್ಟೆ. ಸ್ವರವೆಂದರೆ, ನಾದದ ಏರಿಳಿವು, ಅಲ್ಲವೇ ? ಆದ್ದರಿಂದ ಈ ಭಾವಕ್ಕೆ ನಾದ ಸ್ವರೂಪ ಬಂದಾಗ, ಈ ಸ್ವರಗಳಲ್ಲಿ ಹರಿಯುತ್ತದೆ ಎಂದು ಲೆಕ್ಕಹಾಕಿ, ಈ ಭಾವವನ್ನು ಮೂಡಿಸಬೇಕಾದರೆ, ಇಂಥ ಸ್ವರಸಂಚಾರ ಕ್ರಮದಿಂದ ಸಾಧ್ಯ ಎಂಬ ಸಿದ್ಧಾಂತಕ್ಕೆ ಬಂದರು. ಕಾವ್ಯದಲ್ಲಿ ವ್ಯಾಕರಣಕ್ಕೆ ಎಷ್ಟು ಬೆಲೆಯೋ, ಸಂಗೀತದಲ್ಲಿ ಈ ಸ್ವರ ತಾಳ ಶಾಸ್ತ್ರಕ್ಕೂ ಅಷ್ಟೇ ಬೆಲೆ. ವ್ಯಾಕರಣಕ್ಕೆ ಪಂಡಿತರಾಗಿ, ಅಕ್ಷರಕ್ಕೆ ಅಕ್ಷರವನ್ನು ಮಾತ್ರಾಗಣಬದ್ಧವಾಗಿ ಹೊಲೆದರೆ, ಅದು ಹೇಗೆ ಕವಿತೆ ಎನಿಸಿಕೊಳ್ಳುವುದಿಲ್ಲವೋ, ಹಾಗೆ ಸ್ವರ, ತಾಳಬದ್ಧವಾಗಿ ಹಾಡಿದ ಮಾತ್ರಕ್ಕೆ ಅದು ಸಂಗೀತ ಎನ್ನಿಸಿಕೊಳ್ಳುವುದಿಲ್ಲ. ಕವಿಗೂ ಸಂಗೀತಗಾರನಿಗೂ ಮುಖ್ಯವಾಗಿ ಬೇಕಾದದ್ದು ಪ್ರತಿಭೆ; ಭಾವವನ್ನು ಅನುಭವಿಸುವ ಪ್ರತಿಭೆ; ಭಾವವನ್ನು ಪ್ರಕಾಶಗೊಳಿಸುವ ಪ್ರತಿಭೆ."

"ಅಂದರೆ ಶಾಸ್ತ್ರ ಬೇಡಲೇ ಬೇಡವೇ ?"

"ಬೇಡವೆಂದಲ್ಲ; ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣ ಇಟ್ಟಂತೆ. ಪ್ರತಿಭೆ ಇಲ್ಲದವನು ಶಾಸ್ತ್ರ ಪಾಂಡಿತ್ಯವಿದೆಯೆಂದು ಹಾಡಹೊರಟರೆ ಅಂಗಪುಷ್ಟಿ ಇಲ್ಲದವನು ಕಸರತ್ತು ಮಾಡಿದಂತೆ, ಬರೀ ಅಪಹಾಸ್ಯಕ್ಕೆ ದಾರಿ."

"ಪ್ರತಿಭೆ ಇದ್ದವನು ಶಾಸ್ತ್ರವನ್ನು ಮರೆತು ಹಾಡಬಹುದೆ ? ಅದು ಚೆನ್ನಾದೀತೇ?"

"ಏಕಾಗದು ? ಕುಂದಣವಿಲ್ಲದೆ ವಜ್ರ ಹೊಳೆಯುವುದಿಲ್ಲವೇ ? ಆದರೆ ಹಾಗೆಂದು ಶಾಸ್ತ್ರವನ್ನು ತಳ್ಳಲಾಗದು. ಶಾಸ್ತ್ರಪುಷ್ಟಿಯಿದ್ದರೆ ಅದರಿಂದ ಪ್ರತಿಭೆ ಇಲ್ಲದೆ ಹಾಡುವವನ ಹಾಡುಗಾರಿಕೆಯಲ್ಲೂ, ಶಾಸ್ತ್ರಲಬ್ಧವಾದ ಕನಿಷ್ಠ ಗುಣವಾದರೂ ಇದ್ದೇ ಇರುತ್ತದೆ. ಎಲ್ಲರಿಗೂ ಪ್ರತಿಭೆ ಇರುವುದಿಲ್ಲ. ಆದರೆ ಹಾಡಬೇಕೆಂಬ ಚಪಲ ಇಲ್ಲದವರೇ ಇಲ್ಲ. ಆದ್ದರಿಂದ ಶಾಸ್ತ್ರ ಬೇಕಾಗಿದೆ. ಶಾಸ್ತ್ರ ಎಳೆಯ ಮಗುವಿಗೆ ಕೈಹಿಡಿದು ನಡೆಸುವ ತಾಯಿ. ಮುಂದೆ ಮಗು ತಾನೇ ತನ್ನ ಶಕ್ತಿಗನುಗುಣವಾಗಿ ನಡೆಯುವಂತೆ, ಪ್ರತಿಭೆಗನುಗುಣವಾಗಿ ವಿದ್ಯೆ ಬೆಳೆಯುತ್ತದೆ. ಆ ಪ್ರತಿಭೆ ದೈವದತ್ತವಾದುದು. ಅದನ್ನು ನಾವು ಬೆಳೆಯುತ್ತಾ ಬೆಳೆಸಿಕೊಳ್ಳಬೇಕು."

"ಪ್ರತಿಭೆಯನ್ನು ಹೇಗೆ ಬೆಳೆಸಿಕೊಳ್ಳುವುದು ? ದೈವದತ್ತವಾದ ಅದು ಬೆಳೆಯುತ್ತದೆಯೇ ?"

"ಬೆಳೆಯುತ್ತದೆ – ಅನುಭವದಿಂದ. ನೀರು ಹಾಕಿ ಬೆಳೆಸಿದ ಬಳ್ಳಿ ಹೆಚ್ಚು ಹೂ ಕೊಡುವಂತೆ, ಕಡೆದ ವಜ್ರದ ಕಾಂತಿ ಹೆಚ್ಚಾಗುವಂತೆ, ಅನುಭವದಿಂದ ಪ್ರತಿಭೆಯೂ ಬೆಳೆದು, ಉಜ್ವಲವಾಗುತ್ತದೆ. ಆದರೆ ಆ ದಾರಿ ಗೊತ್ತಿರಬೇಕು."

"ಅಂದರೆ—"

"ಭೂಮಿಯ ಮೇಲೆ ಮಳೆ ಹುಯ್ಯುತ್ತದೆ. ಆದುದರಿಂದ ಸಸ್ಯ ಉತ್ಪತ್ತಿಯಾಗುತ್ತದೆ. ಅಲ್ಲವೆ?"

"ಹೌದು."

"ಹಾಗೇ ಮಳೆಯ ನೀರು ಭೂಮಿಗೆ ಬಿದ್ದ ಗಳಿಗೆಯೊಳಗೆ ಅರಿಹೋಗುತ್ತದೆ."

"ನಿಜ."

"ಅನುಭವವೂ ಮಳೆಯ ನೀರಿನಂತೆ. ಅನುಭವ ಆದಾಗ ಮನಸ್ಸಿನ ಮೇಲೆ ಏನೋ ಪರಿಣಾಮವಾಗುತ್ತದೆ; ಕೊಂಚ ಹೊತ್ತಾದಮೇಲೆ ಮರೆವಿನಲ್ಲಿ ಅರಿಹೋಗುತ್ತದೆ. ಅದು ಅಷ್ಟು ಪರಿಣಾಮಕಾರಿಯಲ್ಲ. ತಾತ್ಕಾಲಿಕ ಪರಿಣಾಮ ಅವರದು. ಆ ಪರಿಣಾಮ ಚಿರವಾಗಬೇಕಾದರೆ, ಪ್ರತಿಭೆಗೆ ಪೋಷಕವಾಗಬೇಕಾದರೆ, ಮಳೆಯ ನೀರನ್ನು ಕೆರೆಯಲ್ಲೋ ಬಾವಿಯಲ್ಲೋ ಸಂಗ್ರಹಿಸಿ, ಆರಿಹೋಗದಂತೆ ಇಟ್ಟುಕೊಂಡು, ಅಗತ್ಯವಾದಾಗ, ಬೇಕಾದುದಕ್ಕೆ ಬಳಸುವಂತೆ, ಅನುಭವವನ್ನು ಸಂಗ್ರಹಿಸಬೇಕು. ಆಗ ಅದು ಪ್ರತಿಭೆಗೆ ಪೋಷಕವಾಗುತ್ತದೆ. ಹಿಂದೆ ನಾನು



ನಿನ್ನನ್ನು ಬಿಟ್ಟುಹೋದ ರಾತ್ರಿ, ನಿನ್ನ ಹೃದಯಕ್ಕೆ ವೇದನೆಯಾಯಿತು; ದುಃಖವಾಯಿತು; ದಿಕ್ಕಿಲ್ಲದ ತಬ್ಬಲಿಯಂತೆ ಹಂಬಲಿಸಿ ಹಾಡಿದೆ. ಹಾಡು ಭವ್ಯವಾಗಿ, ದಿವ್ಯವಾಗಿ ಹರಿದು ಬಂತು, ಬಳ್ಳಿಯಲ್ಲಿ ಹೂ ಅರಳಿದಂತೆ. ಅದೊಂದು ಅನುಭವ ಮುಂದೆ ಯಾವುದೋ ಸಂದರ್ಭದಲ್ಲಿ ಅಂದು ಹಾಡಿದ ರಾಗವನ್ನೇ ಹಾಡಬೇಕೆನಿಸಿತು. ಆಗ ಅಂದಿನ ಅನುಭವದ ನೆರವು ಪಡೆ. ಆಗಲೂ ಹಾಗೇ ಆಗಿದೆ ಎಂದುಕೊಂಡು ಹಾಡು. ಆ ಭಾವದಲ್ಲಿ ತಲ್ಲೀನನಾಗು. ಆ ಅನುಭವದಿಂದ ನಿನ್ನ ಪ್ರತಿಭೆ ಕುಂದಣವಿಟ್ಟ ರತ್ನದಂತೆ ಹೊಳೆಯುತ್ತದೆ. ಆ ಒಂದು ಅನುಭವವೇ ಅಲ್ಲ , ಎಲ್ಲ ಅನುಭವಗಳನ್ನೂ ಹಾಗೇ ಶೇಖರಿಸು. ಹಾಗೇ ನಿನ್ನ ಅನುಭವವಷ್ಟೇ ಅಲ್ಲ, ಇತರರ ಅನುಭವಗಳನ್ನೂ ನಿನ್ನದಾಗಿ ಮಾಡಿಕೋ."

"ಅಂದರೆ—"

"ಯಾರೋ ಒಬ್ಬ ಹೆಣ್ಣು ಗಂಡನನ್ನು ಕಳೆದುಕೊಂಡು ಆಳುತ್ತಿದ್ದಾಳೆ ಅನ್ನು. ಆ ದುಃಖವನ್ನು ನೀನು ಆ ಹೆಣ್ಣಾಗಿ ಅನುಭವಿಸು. ಆಗ ಅವಳ ಅನುಭವ ನಿನ್ನದಾಗುತ್ತದೆ."

"ಅದು ಹೇಗೆ ಸಾಧ್ಯ ನನ್ನದಲ್ಲದ ಅನುಭವವನ್ನು ನನ್ನದಾಗಿ ಮಾಡಿಕೊಳ್ಳುವುದು ಸಾಧ್ಯವೇ?"

"ಗಾಳಿ ಸುಳಿಯದ ಕಡೆ ಎರಡು ಸಮಾನ ಶ್ರುತಿಗೆ ಸಿದ್ಧಗೊಳಿಸಿದ ತಂಬೂರಿಗಳನ್ನಿಟ್ಟು ಒಂದನ್ನು ಮಿಡಿದರೆ, ಮತ್ತೊಂದು ತಾನೇ ಮಿಡಿಯುವುದಿಲ್ಲವೆ ? ಹಾಗೆ ನೀನಾಗಬೇಕು. ಹಾಗೆ ನಿನ್ನ ಹೃದಯವನ್ನೂ, ಜಗದ ಭಾವನಾಟ್ಯಕ್ಕೆ ಮಿಡಿಯುವಂತೆ, ಸ್ಪಂದಿಸುವಂತೆ ಶ್ರುತಿಗೊಳಿಸಬೇಕು."

"ಅದಕ್ಕೇನು ದಾರಿ ?"

"ಸಹಾನುಭೂತಿ; ಪರಕಾಯಪ್ರವೇಶ."

"ಅಂದರೆ..."

"ನಾನಾಗಲೇ ಹೇಳಲಿಲ್ಲವೇ – ಅದ್ವೈತ. ಎಲ್ಲವೂ ನಾನೇ, ಎಲ್ಲರ ಸುಖದುಃಖವೂ ನನ್ನದೇ ಎಂಬ ಮನಸ್ಸು – ಅಹಂ ಬ್ರಹ್ಮಾಸ್ಮಿ – ಎಂಬ ಮನಸ್ಸಿನ ಪರಿಪಾಕ ಬರಬೇಕು."

"ಆ ಮಾತು ಕೇಳಿದ ವೆಂಕಟಸುಬ್ಬಯ್ಯನಿಗೆ ಆಶ್ಚರ್ಯವಾಯಿತು, ಸಂಗೀತದ ಮಾತು, ವೇದಾಂತದ ಮಜಲು ಮುಟ್ಟಿದ್ದನ್ನು ಕಂಡು ಚಕಿತನಾದ.

"ಇದೇನು, ವೇದಾಂತದ ಮಾತು ಹೇಳುತ್ತಿದ್ದೀರಲ್ಲಾ ?" ಎಂದು ಕೇಳಿದ.

"ನಿಜ, ವೇದಾಂತವೂ ಅದೇ, ನಾದಾಂತವೂ ಅದೇ. ವಿಚಾರದ ಹಾದಿಯಲ್ಲಿ

ನಡೆದರೆ ವೇದಾಂತ ಹಾಡಿನ ದಾರಿಯಲ್ಲಿ ನಡೆದರೆ ನಾದಾಂತ, ಎಲ್ಲದರ ಗುರಿಯೂ ಒಂದೇ – ಸಾಕ್ಷಾತ್ಕಾರ. ವೇದಬ್ರಹ್ಮ, ನಾದಬ್ರಹ್ಮ ಎರಡೂ ಒಂದೇ, ಬೇರೆಯಲ್ಲ. ಉಪಾಸನಾಮಾರ್ಗ ಬೇರೆ; ಸಿದ್ಧಿ ಒಂದೇ. ಉಪಾಸನೆಗೆ ಅನುಗುಣವಾದ ರೂಪದಲ್ಲಿ ಸತ್ಯ ಸಾಕ್ಷಾತ್ಕಾರವಾಗುತ್ತದೆ."

"ಎಂದೂ ವೇದಾಂತ ಚಿಂತೆಯನ್ನೇ ಮಾಡದ ವೆಂಕಟಸುಬ್ಬಯ್ಯನಿಗೆ ಬುವಾರ ಮಾತನ್ನು ಕೇಳಿ, ಅದರ ನಿಶ್ಚಿತಾರ್ಥ ತಿಳಿಯದೆ, ಕತ್ತಲಲ್ಲಿ ತಡಕಾಡಿದಂತಾಯಿತು. ತನ್ನ ಅಜ್ಞಾನವನ್ನೇ ಪ್ರಶ್ನೆಯನ್ನಾಗಿ ಮಾಡಿ ಕೇಳಿದ "

"ಉಪಾಸನೆಗೆ ಅನುಗುಣವಾದ ರೂಪದಲ್ಲಿ ಸತ್ಯ ಸಾಕ್ಷಾತ್ಕಾರವಾಗುತ್ತದೆ ಎಂದರೇನು ?"

"ದೇವರು ಒಬ್ಬನೇ ಎಂಬ ಮಾತು ಕೇಳಿದೀಯ, ಅಲ್ಲವೇ ? ಆದರೆ ಆ ದೇವಸಾಧಕರಿಗೆ ಶಿವನಾಗಿ, ವಿಷ್ಣುವಾಗಿ, ದೇವಿಯಾಗಿ ಅವರಲ್ಲೂ ನಾನಾ ಹೆಸರು, ರೂಪದ ಮೂರ್ತಿಯಾಗಿ ಕಾಣುವುದಿಲ್ಲವೇ ? ನಾನಾರೂಪ ಎನ್ನುವವು ಉಪಾಸಕ ತಾನು ಯಾವ ಬಗೆಯ ಸಿದ್ಧಿಯನ್ನು ಬಯಸುತ್ತಾನೆ ಎಂಬುದರ ಮೂರ್ತಿರೂಪ. ಆ ರೂಪದಲ್ಲೇ ದೇವರು ಸಾಧಕನಿಗೆ ಪ್ರತ್ಯಕ್ಷವಾಗುತ್ತಾನೆ. ಇಲ್ಲೂ ಅಷ್ಟೇ–ದೇವರೂಪವಾಗಿಯೋ ನಾದರೂಪವಾಗಿಯೋ; ನಿನ್ನ ಮನಸ್ಸಿಗೆ ಬೇಕಾದ, ನಿನ್ನ ಚೇತನಕ್ಕೆ ಎಟುಕಬಲ್ಲರೂಪವನ್ನು ಉಪಾಸಿಸಬಹುದು. ಉಪಾಸನಾಮಾರ್ಗ ಹಲವಾದರೂ, ಬಹುರೂಪದಂತೆ ಕಾಣುವ ಉಪಾಸನಾಲಕ್ಷ್ಯ ಒಂದೇ."

"ಅಂದರೆ ವೇದಬ್ರಹ್ಮ – ನಾದಬ್ರಹ್ಮ ಎರಡೂ ಒಂದೇನೇ ?"

"ಹೂ, ಪರಮಾತ್ಮ ಪ್ರಣವಸ್ವರೂಪಿ ಎನ್ನುವುದಿಲ್ಲವೇ ? ಓಂಕಾರವೇ ಪ್ರಣವ, ಅ ಉ ಅಂ ಸೇರಿ ಓಂಕಾರ, ಸಾ ಪಾ ಸಾ ಸೇರಿದರೂ ಓಂಕಾರವೇ. ಅಕ್ಷರದಲ್ಲಿ ಅ ಉ ಅಂ ಆದುದು ನಾದದಲ್ಲಿ ಸಾ ಪಾ ಸಾ ಆಗುತ್ತದೆ. ಹೋಗಲಿ ಬಿಡು. ಎಲ್ಲಿಯ ಮಾತು ಎಲ್ಲಿಗೋ ಬಂತು. ಇದೆಲ್ಲವೂ ಇಂದಲ್ಲ ನಾಳೆ ನಿನಗೇ ಅನುಭವವಾಗುತ್ತದೆ. ಈಗ ಸಂಗೀತವನ್ನು ಮನಸ್ಸಿಟ್ಟು ಕಲಿ" ಎಂದು ಬುವಾ ಮಾತು ಮುಗಿಸಿದರು. ಅವರ ಮಾತಿನ ಸಂಪೂರ್ಣ ಅರ್ಥ ಪರಿಚಯ ಆ ದಿನ ವೆಂಕಟಸುಬ್ಬಯ್ಯನಿಗೆ ಆಗದೇಹೋದರೂ, ಕಣ್ಣೆದಿರು ಎಂಥದೋ ಉಜ್ವಲ ಬೆಳಕು ಮಿಂಚಿನಂತೆ ಚಿಮ್ಮಿಹೋದಂತಾಯಿತು.

"ಎಂದೂ ಹೆಚ್ಚು ಮಾತನಾಡದ ಸದಾನಂದಬುವಾ, ಯಾವಾಗಲಾದರೊಮ್ಮೆ ಮಾತನಾಡಿದಾಗ, ಹೀಗೆ ಬೆಳಕಿನಂಥ ಮಾತಾಡುವರು."



"ಒಮ್ಮೊಮ್ಮೆ ಬೆಳಕಿನಂಥ ಮಾತು, ಮತ್ತೊಮ್ಮೆ ಕತ್ತಲ ತತಿಯಂಥ ಮಾತು"

"ಯಾವ ಗಳಿಗೆಯಲ್ಲಿ ಬುವಾರ ಬಾಯಿಂದ ಎಂಥ ಮಾತು ಬರುವುದೆಂದು ನಿರೀಕ್ಷಿಸಲು ಸಾಧ್ಯವಿರಲಿಲ್ಲ ವೆಂಕಟಸುಬ್ಬಯನಿಗೆ."

"ಒಂದು ದಿನ ಯಾವುದೋ ಹಳ್ಳಿಯ ಮುಂದಲ ದೇವಾಲಯದಲ್ಲಿ ಇಬ್ಬರೂ ತಂಗಿದ್ದರು. ಬೆಳಗಿನ ಸ್ನಾನಕ್ಕೆ ಬಾವಿಯಿಂದ ನೀರು ಎಳೆದುಕೊಳ್ಳಲೆಂದು, ವೆಂಕಟಸುಬ್ಬಯ್ಯ ದೇವಾಲಯದ ಮುಂದಿನ ಸೇದುವ ಬಾವಿಯ ಬಳಿ ಹೋದಾಗ, ಬಾವಿಯ ಬಳಿ ಹತ್ತಾರು ಮಂದಿ ಹಳ್ಳಿಯ ಹೆಂಗಸರು ನೆರೆದಿದ್ದರು. ಅವರೆಲ್ಲರೂ ನೀರು ಎಳೆದುಕೊಂಡು ಹೋಗುವವರೆಗೂ ವೆಂಕಟಸುಬ್ಬಯ್ಯ ಕಾದು ನಿಂತಿರಬೇಕಾದ್ದರಿಂದ ಅಷ್ಟು ದೂರದಲ್ಲಿ ನಿಂತುಕೊಂಡ – ನೀರು ಸೇದುತ್ತಿರುವವರನ್ನೇ ನೋಡುತ್ತಾ."

"ಬಾವಿಯ ಬಳಿ ನೆರೆದಿದ್ದವರಲ್ಲಿ ಒಬ್ಬಾಕೆ – ಪ್ರಾಯಕ್ಕೆ ಬಂದ ರೈತರ ಹೆಣ್ಣು. ಬಣ್ಣ ಕಪ್ಪಾದರೂ, ಶ್ರಮದ ಜೀವನದಿಂದ, ಪುಷ್ಟವಾಗಿ ಬೆಳೆದು ಸ್ಫುಟವಾದ ಆಕೆಯ ಅಂಗಾಂಗಗಳ ಮಾಟ, ಎಂಥ ಕಣ್ಣನ್ನೂ ತಡೆದು ನಿಲ್ಲಿಸಿ, 'ಒಂದು ಗಳಿಗೆ ನೋಡಿಹೋಗು' ಎನ್ನುವಂಥದ್ದು. ಆಕೆ ಬರಿದಾದ ಕೊಡವನ್ನು ಹಗ್ಗಕ್ಕೆ ಬಿಗಿದು ಬಾವಿಗೆ ಬಿಟ್ಟಾಗ, ತುಂಬಾ ಭಾರವಾದ ಕೊಡವನ್ನು ಬಾವಿಯ ಕಟ್ಟೆಗೆ ಕಾಲನ್ನು ಊರುಗೊಟ್ಟು ಎಳೆಯುವಾಗ, ನೀರಿನಿಂದ ತುಂಬಿದ ಕೊಡವನ್ನು ನೆತ್ತಿಯ ಮೇಲೇರಿಸಿಕೊಳ್ಳಲು, ಸೆರಗನ್ನೇ ನೆತ್ತಿಯ ಮೇಲೆ ಸಿಂಬಿಯಾಗಿ ಬಿಗಿದು, ಒಂದು ಕೊಡವನ್ನು ತಲೆಯ ಮೇಲಿಟ್ಟುಕೊಂಡು, ಮತ್ತೊಂದು ಕೊಡವನ್ನು ಸೊಂಟದ ಮೇಲೇರಿಸಿಕೊಂಡು, ಅದಕ್ಕೆ ತೋಳು ಬಳಸಿ, ಆ ಎರಡು ಕೊಡಗಳ ಭಾರ ಮೈಯ ತೂಕವನ್ನು ಏರುಪೇರು ಮಾಡದಂತೆ ಲಾಸ್ಯಗತಿಯಲ್ಲಿ ನಡೆಯುವಾಗ – ಒಮ್ಮೊಮ್ಮೆಯೂ ಆಕೆಯ ದೇಹಲಾವಣ್ಯ, ಬೆಳಕು ಬಿದ್ದಲ್ಲಿ ಹೊಸ ಬಗೆಯ ಬಣ್ಣವೊಂದನ್ನು ತುಳುಕಿಸುವ ಕಡೆದ ವಜ್ರದಂತೆ, ನೂತನ ಸೊಬಗಿನಿಂದ ರಂಜಿಸುತ್ತಿತ್ತು."

"ನೋಡನೋಡುತ್ತಾ ವೆಂಕಟಸುಬ್ಬಯ್ಯನ ಕಣ್ಣು ಆ ರೂಪಲಾಸ್ಯದಲ್ಲೇ ಕೀಲಿಸಿಹೋಯಿತು."

"ಆ ಹೆಣ್ಣ ಮೈ, ಸ್ವರ ತಾಳ ಮೇಳಗಳಿಂದ ಸಂಪೂರ್ಣವಾಗಿ ತುಂಬು ತೊರೆಯಂತೆ ಹರಿವ ಯಾವುದೋ ರಾಣಿಯಂತೆ ಕಾಣಿಸಿತು ಅವನಿಗೆ."

"ಬಿಟ್ಟ ಕಣ್ಣನ್ನು ಬಿಟ್ಟ ಹಾಗೇ ಬಿಟ್ಟು – ಆ ಹೆಣ್ಣನ್ನೇ ನೋಡುತ್ತಾ ನಿಂತುಬಿಟ್ಟ."

"ಆ ಹೆಣ್ಣು ಹಳ್ಳಿಗೆ ಹೊಸಬನಾದ ವೆಂಕಟಸುಬ್ಬಯ್ಯನನ್ನು ಒಂದು ಗಳಿಗೆ ನೋಡಿತು. ಅವನು ತನ್ನನ್ನು ನೋಡುತ್ತಿದ್ದ ರೀತಿಯಿಂದ ಆಕೆಗೆ ಏನು ಅನಿಸಿತೋ ಏನೋ, ಚಿನ್ನದ ಗೆಜ್ಜೆಯನ್ನು ಆಲುಗಿಸಿದಂತೆ, ನಕ್ಕು ಮುಂದೆ ನಡೆದಳು."

"ಆಕೆ ಅಷ್ಟು ದೂರ ನಡೆದು, ದಾರಿಯ ತಿರುವಿನತ್ತ ತಿರುಗಿ ಮರೆಯಾದಳು. ವೆಂಕಟಸುಬ್ಬಯ್ಯ ನಿಂತಲ್ಲಿಯೇ ನಿಂತಿದ್ದ. ಆದರೆ ಅವನ ಕಣ್ಣು ಮಾತ್ರ ಆಕೆಯ ಒಂದೊಂದು ಹೆಜ್ಜೆಯ ಲಾಸ್ಯಲಾವಣ್ಯವನ್ನೂ ಸವಿಯುತ್ತಾ ಆಕೆಯನ್ನೇ ಹಿಂಬಾಲಿಸಿತು."

"ವೆಂಕಟಸುಬ್ಬಯ್ಯನ ಹರೆಯ ತುಂಬಿದ ಮೈ ಹಿಂದೆಂದೂ ಅರಿಯದ ಹೊಸ ರಾಗವೊಂದನ್ನು ಕೇಳಿ ಪರವಶವಾಗಿತ್ತು."

"ಬಳಿಯಿರುವವರು ತನ್ನ ಪರವಶಸ್ಥಿತಿಯನ್ನು ನೋಡಿ ನಗಬಹುದೆಂಬ ಅರಿವೂ ಇಲ್ಲದೆ ನಿಂತಿದ್ದ ವೆಂಕಟಸುಬ್ಬಯ್ಯ, ನೀರಿಗಾಗಿ ಬಂದು ಎಷ್ಟು ಹೊತ್ತಾಯಿತು ಎಂಬುದರ ಪ್ರಜ್ಞೆಯೂ ಇಲ್ಲದೆ. ಬಾವಿಯ ಬಳಿಯಿದ್ದ ಹೆಂಗಸೊಬ್ಬಳೇ ಅವನನ್ನು ಎಚ್ಚರಿಸಬೇಕಾಯಿತು. ಆಕೆಯ ಎಚ್ಚರಿಕೆಯ ಮಾತನ್ನು ಕೇಳಿ ವೆಂಕಟಸುಬ್ಬಯ್ಯನ ಮುಖ, ಕಳ್ಳತನ ಮಾಡುತ್ತಿರುವಾಗ ಸಿಕ್ಕಿಬಿದ್ದವನಂತೆ ಕೆಂಪೇರಿತು."

"ಈವಯ್ಯ ನೀರು ಸೇದಾಕೆ ಬಂದಿಲ್ಲ; ನೀರು ಸೇದೋಕೆ ಬಂದೋರ ನೋಡಾಕೆ ಬಂದಿದಾನೆ, ಹೆಣ್ಣು ಕಾಣ್ದೋನಾಗೆ" ಎಂದು ಯಾರೋ ಒಬ್ಬ ಹೆಣ್ಣುಮಗಳು ಕಟುವಾದ ಮಾತಿನಿಂದ ಹೊಡೆದಳು. ಆಕೆಯ ಮಾತನ್ನು ಕೇಳಿ, ಉಳಿದ ಹೆಂಗಸರಲ್ಲೂ ಒಬ್ಬಿಬ್ಬರು ಮುಸಿಮುಸಿ ನಕ್ಕರು.

"ಆ ನಗುವನ್ನು ಕೇಳಿ, ಆ ಮಾತಿನ ಪೆಟ್ಟಿನಿಂದ ವೆಂಕಟಸುಬ್ಬಯ್ಯ ನಿಂತಲ್ಲಿಯೇ ನೀರಾಗಿಹೋದ. ಬಗ್ಗಿಸಿದ ತಲೆಯನ್ನು ಮೇಲೆತ್ತದೆ ಯಾರನ್ನೂ ನೋಡದೆ ಬಾವಿಯ ಬಳಿಸಾರಿ ನೀರು ಎಳೆದುಕೊಂಡು, ದೇವಾಲಯದ ಬಳಿಗೆ ಹಿಂತಿರುಗಿದ."

"ಅವನು ನೀರು ತರುವುದನ್ನೇ ಕಾದು ಕುಳಿತ ಬುವಾ ಉರಿಕೆಂಡಗಳು ಕಳಕಳಿಸುತ್ತಿದ್ದ ಕಣ್ಣುಗಳಿಂದ ಇವನನ್ನು ನೋಡಿ–"

"ಹೆಂಗಸರನ್ನು ನೋಡಿದ್ದು ಮುಗಿಯಿತೇ ? ಥೂ–ನಾಯಿ!" ಎಂದು ಗದರಿಸಿದರು.

"ಸಿಡಿಲಿನಂತಿತ್ತು ಆ ಮಾತನ್ನಾಡಿದ ಬುವಾರ ಧ್ವನಿ. ಹಿಂದೆ ಎಂದೂ ಯಾವ ಸಂದರ್ಭದಲ್ಲೂ ಬುವಾ ಹಾಗೆ ಮಾತನಾಡಿರಲಿಲ್ಲ. ಬುವಾರ ಕಣ್ಣುಗಳಲ್ಲಿ ಹೊಳೆಯುತ್ತಿದ್ದ ಉಗ್ರ ಕಠೋರ ಕಾಂತಿ, ಮುಂಗಾರು ಮುಗಿಲಿನಂತೆ ಭಯಂಕರವಾದ ಮುಖ, ಸಿಡಿಲಿನಂತೆ ಮೊಳಗಿದ ಮಾತು– ವೆಂಕಟಸುಬ್ಬಯ್ಯ ತತ್ತರಿಸಿಹೋದ."



"ತ.... ತ.... ತ.... ಪ್ಪಾ.....ಯಿ...ತು" ಎಂದು ತೊದಲುವಂತೆ ಹೇಳಿದ.

"ತಪ್ಪಾಯಿತಂತೆ–ತಪ್ಪು. ಹೆಣ್ಣು, ಗಂಡಿನ ಜೀವನದ ಅತ್ಯಂತ ದೊಡ್ಡ ತಪ್ಪು. ಈಗ ನೋಡುವಾಸೆ, ನಾಳೆ ಕೊಡುವಾಸೆ. ಈ ಹೆಣ್ಣು. ಮಾರಿಯ ಬೇಟೆಯ ಮೃಗವಾದೆಯಾ ನೀನೂ. ಅಯೋಗ್ಯ–ಅಯೋಗ್ಯ – ಹೆಣ್ಣನ್ನು ಮರೆಯುವವರೆಗೂ ಮತ್ತೆ ನನ್ನ ಹತ್ತಿರ ಸಂಗೀತದ ಹೆಸರೆತ್ತ ಬೇಡ" ಎಂದು ಕಠೋರವಾಗಿ ಅಪ್ಪಣೆ ಮಾಡಿದರು ಬುವಾ.

"ಅಂದಿನಿಂದ ಮೂರು ದಿನ ಸಂಗೀತಪಾಠ ನಡೆಯಲೇ ಇಲ್ಲ. ಮೂರು ಹೊತ್ತು ಬುವಾರ ಬಾಯಿ ಹೆಣ್ಣಿನ ವಿಷಯದಲ್ಲಿ ಕೆಂಡ ಕಾರುತ್ತಿತ್ತು. ಬುವಾರ ಮಾತು ಕೇಳಿದರೆ, ಹೆಣ್ಣಿನ ಹೆಸರು ಕೇಳಿಯೇ ಹೆದರುವಂತಾಗುತ್ತಿತ್ತು ವೆಂಕಟಸುಬ್ಬಯ್ಯನಿಗೆ. ಆದರೆ ಬಾವಿಯ ಬಳಿಯ ಹೆಣ್ಣಿನ ನೆನಪು ಬಂದ ಕೂಡಲೇ ಬೆದರಿಕೆಯನ್ನು ತುಳಿದು ತಾಂಡವವಾಡುತ್ತಿತ್ತು ಕಣ್ಣ ಬಯಕೆ."

"ಒಮ್ಮೆ ಬಯಕೆ–ಮತ್ತೊಮ್ಮೆ ಬೆದರಿಕೆ! ಯಾವುದು ಸರಿ, ಯಾವುದು ತಪ್ಪು ?"

"ತುಳಿದುಬಿಡು, ತುಳಿದುಬಿಡು" ಎಂದು ಹೆಣ್ಣಿನ ಹೆಸರು ಹೇಳಿ ಉರಿಗಾರುತ್ತಿದ್ದರು ಬುವಾ.

"ತುಳಿದುಬಿಡು, ತುಳಿದುಬಿಡು ಬುವಾರ ಬೆದರಿಕೆಯನ್ನು –" ಎಂದು ಹಳಿಯುತ್ತಿತ್ತು, ಹೊತ್ತ ಭಾರಕ್ಕೆ ಬಳ್ಳಿಯಂತೆ ಬಳುಕಿದ ಹೆಣ್ಣ ಮೈ.

"ಈ ವಿರುದ್ಧ ಭಾವನೆಗಳ ಸಂಘಟನೆಯಲ್ಲಿ ವೆಂಕಟಸುಬ್ಬಯ್ಯ, ಸ್ಪರ್ಧೆಯಿಂದ ಕುರುಡಾಗಿ ತಲೆಗಳನ್ನು ಘಟ್ಟಿಸುವ ಟಗರುಗಳ ನಡುವೆ ಸಿಕ್ಕಂತಾದ."

"ಯಾವುದನ್ನು ಗೆಲ್ಲಬೇಕು, ಯಾವುದನ್ನು ತುಳಿಯಬೇಕು ? ಹೇಗೆ ತುಳಿಯಬೇಕು ?"

"ಭಾವನೆಗಳ ತಾಕಲಾಟದಲ್ಲಿ ಅರಸಿಬಂದ ಸಂಗೀತಾಭ್ಯಾಸವೇ ಮರೆತಂತಾಯಿತು ವೆಂಕಟಸುಬ್ಬಯ್ಯನಿಗೆ."

"ಬುವಾರಿಗೂ ಇವನ ಮನಸ್ಸಿನ ಹೋರಾಟ ಅರ್ಥವಾಯಿತೇನೋ. ಎರಡು ದಿನ ಮಾತೇ ಆಡಿಸದಿದ್ದವರು ಮೂರನೆಯ ದಿನ ತಾವೇ ಸಂಗೀತ ಪಾಠ ಆರಂಭಿಸಿದರು. ಅದೂ ಬಿರುಗಾಳಿಯಂಥ ಪಾಠ – ದಿನದ ಇಪ್ಪತ್ತು

ನಾಲ್ಕು ಗಂಟೆಯೂ ಬೇರೆ ಯೋಚನೆಗಿರಲಿ– ಊಟ, ನಿದ್ರೆಯ ಚಿಂತೆಗೂ ಅವಕಾಶ ಕೊಡದಂಥ ಪಾಠ. ದಡದಲ್ಲಿ ಬೆಳೆದುದೆಲ್ಲವನ್ನು ಕೊಚ್ಚಿ ಹರಿದು ಎಲ್ಲೆಡೆಯಲ್ಲೂ ತಾನೇತಾನಾಗಿ ಹರಿವ ನೀರಿನಂತೆ ಅವನ ಮೈ, ಮಿದುಳು, ಹೃದಯ ಎಲ್ಲದರಲ್ಲೂ ತಾನೇತಾನಾಗಿ ಮೆರೆಯಿತು ಸಂಗೀತ. ಅದು ನೀಡುವ ಆನಂದ, ಆದರ ಲಾವಣ್ಯ, ಇದರ ಇಂಪಿನಾಚೆಗೆ ಬೇರೇನೂ ಇಲ್ಲವೆಂಬಂತೆ, ಅವನೆದೆಯಲ್ಲಿ ಸಂಗೀತವನ್ನು ತುಂಬಿ ಹೇಳಿದರು ಬುವಾ...."

"ಈ ಸಂಗೀತ ಬೇಕಲ್ಲವೇ ನಿನಗೆ ? ನಿನ್ನ ನರನರಗಳೂ ನಾದಸರಸ್ವತಿಯ ನಾಟ್ಯರಂಗವಾಗದೆ, ಈ ಭವ್ಯತೆ ನಿನಗೆ ಸಿದ್ಧಿಸಲಾರದು. ಆ ಸಿದ್ಧಿಗೆ ಹೆಣ್ಣು ಮಾರಿ"– ಎಂದು ಸಂಗೀತಮುಗ್ಧನಾದ ಅವನ ಮಿದುಳಿನ ಮೇಲೆ ಸ್ತ್ರೀ ಭಯದ ಮುದ್ರೆಯನ್ನೊತ್ತಿದ್ದರು.

"ಅಲ್ಲಿಗೇ, ಅಂದಿಗೇ ಆ ಮಾತು ನಿಲ್ಲಿಸದೆ, ಅವಕಾಶ ದೊರೆತಾಗಲೆಲ್ಲಾ ಹೆಣ್ಣಿನ ವಿಷಯದಲ್ಲಿ ವೆಂಕಟಸುಬ್ಬಯ್ಯನನ್ನು ಎಚ್ಚರಿಸುತ್ತಿದ್ದರು ಬುವಾ"

"ಹೆಣ್ಣಿನಿಂದ ಆದಷ್ಟು ದೂರವಿರುವುದನ್ನು ಕಲಿ. ಹೆಣ್ಣು ಮಾರಿ; ಸಾಧಕರ ಸಿದ್ಧಿಯ ದಾರಿಯಲ್ಲಿ ಅಡ್ಡಗಲ್ಲು. ಹೆಣ್ಣನ್ನು ಹಾವಿನಂತೆ ಆಡಿಸಬೇಕು. ನಿನ್ನ ಪುಂಗಿಯ ನಾದಕ್ಕೆ ಅದು ಹೆಡೆ ತೂಗುವವರೆಗೂ ಬಹು ಆಕರ್ಷಕ. ನಿನ್ನ ಹಿಡಿತ ಸಡಿಲಿತೋ, ತೂಗುವ ಹೆಡೆಯೇ ಸಾವಿನ ಸಿಡಿಲಾಗುವುದು" ಎನ್ನುವರು; ಮತ್ತೊಮ್ಮೆ—

"ಹಣ್ಣಿಗಿಂತಲೂ ಘೋರ – ಅಹಂಭಾವ; ಸಾಧಕನಿಗೆ ಅದರೊಂದಿಗೆ ಸರಸ ಸಲ್ಲದು" ಎಂದು ಬುದ್ಧಿವಾದ ಹೇಳುವರು. ಎಷ್ಟೋ ಸಲ ಸಂಗೀತಕ್ಕೂ ಈ ಸ್ತ್ರೀದ್ವೇಷಕ್ಕೂ ಏನು ಸಂಬಂಧ ಎಂದು ವೆಂಕಟಸುಬ್ಬಯ್ಯನಿಗೆ ಬೇಸರವಾಗುವುದು. ಬಾವಿಯ ಬಳಿಯ ಹೆಣ್ಣಿನ ನೆನಪಾಗಿ 'ಆ ಲಾವಣ್ಯದ ಗಣಿ, ವಿನಾಶದ ಹಾವಿನ ಹುತ್ತವೆ ?' ಎಂದು ಸಂಶಯ ಮೂಡುವುದು. ತನ್ನ ಸಂಶಯವನ್ನೇ ಪ್ರಶ್ನೆಮಾಡಿ ಕೇಳಬೇಕು ಎನಿಸುವುದು. ಆದರೆ ಒಮ್ಮೆ ಎದುರು ಮಾತಾಡಿ ಕೈಸುಟ್ಟು ಕೊಂಡ ಆತ ಮತ್ತೆ ಎದುರುವಾದಿಸುವ ತಂಟೆಗೆ ಹೋಗದೆ ಹೇಳಿದುದನ್ನು ಕೇಳುವನು; ಮನಸ್ಸಿಗೆ ಹಿಡಿದ ಮಾತಿಗೆ ಮೆಚ್ಚುವನು. ಅವನ ಗೀಳೆಲ್ಲಾ ಸಂಗೀತವನ್ನು ಕಲಿಯುವತ್ತ. ಅನಂತಯ್ಯ ಹೇಳಿದ 'ನಿನ್ನ ಬಾಳಿನ ಉಳಿದ ಬಯಕೆಗಳನ್ನೆಲ್ಲಾ ಎಳೆಗಳಾಗಿ ಮಾಡಿ, ಅವೆಲ್ಲವನ್ನೂ, ಸಂಗೀತದ ಬಯಕೆಯ ದಾರದಲ್ಲಿ – ಕಾಣದೆ ಒಂದಾಗುವಂತೆ ಹೊಸೆ; ಅದೇ ಸಿದ್ಧಿಯ



ದಾರಿ' ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು, ತನ್ನ ಬಯಕೆಗಳನ್ನೆಲ್ಲಾ ಆ ಸಾಧನೆಗೆ ಮೀಸಲು ಮಾಡಿ ಕಲಿಯುತ್ತಿದ್ದ.

"ಬರಬರುತ್ತಾ, ಬುವಾರ ಮಾತು ಕೇಳಿ ಕೇಳಿ, ತಾಯಿಯಲ್ಲದೆ, ಬೇರೆ ಹೆಣ್ಣು ಎಂದರೆ ಏನೆಂದು ತಿಳಿಯದ ವೆಂಕಟಸುಬ್ಬಯ್ಯನೂ ಹೆಣ್ಣಿನ ಹೆಸರು ಕೇಳಿ ಹೆದರುವಂತಾಯಿತು. ಅವನೂ ಪ್ರಯತ್ನಪಟ್ಟು, ತನ್ನೆದೆಯಲ್ಲಿ ಆಗಾಗ ಸುಳಿಯುತ್ತಿದ್ದ ಮಧುರ ನೆನಪನ್ನು ತುಳಿದುಬಿಟ್ಟು 'ಹೆಣ್ಣಿನ ಮಾಯೆಯಿಂದ ಗೆದ್ದೆ' ಎಂದುಕೊಂಡು ಸಂಗೀತಾಭ್ಯಾಸದಲ್ಲಿ ಮೈಮರೆತ. ವೆಂಕಟಸುಬ್ಬಯ್ಯನ ಮನಸ್ಸಿನಿಂದ ಮೋಹ ಮರೆಯಾಯಿತು ಎಂಬ ಸಂತಸದಿಂದ ಬುವಾ ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ಸಂಗೀತ ಕಲಿಸತೊಡಗಿದರು."

"ಒಮ್ಮೊಮ್ಮೆ ಸದಾನಂದಬುವಾ, ಆತನಿಗೆ ರಾಗಲಕ್ಷಣ ಹೇಳಿ ಅದನ್ನು ಹಾಡುವ ರೀತಿ ತೋರಿಸಿ, ಅದರಂತೆ ಅವನಿಂದ ಹಾಡಿಸುವರು. ಮತ್ತೊಮ್ಮೆ ಅವನನ್ನೇ ಹಾಡಲು ಬಿಟ್ಟು, ಆಗಾಗ ತಿದ್ದಿ ದಾರಿ ತೋರಿಸುವರು. ಇನ್ನೊಮ್ಮೆ ಇಬ್ಬರೂ ಜೊತೆಗೇ ಹಾಡುವರು. ಹಾಡುತ್ತಾ, ಕಲೆಯುತ್ತಾ, ಹೊಟ್ಟೆಯ ಪಾಡಿಗೆ ಭಿಕ್ಷೆ ಬೇಡುತ್ತಾ, ಊರಿಂದೂರಿಗೆ ನಡೆದಿತ್ತು ಗುರು ಶಿಷ್ಯರ ಸಂಸಾರ. ಹೀಗೆ ನಡೆಯುತ್ತಿರುವಾಗ ಯಾವುದೋ ಒಂದು ಊರಿನಲ್ಲಿ ಅಕಸ್ಮಾತ್ ಸದಾನಂದಬುವಾರ ಸಂಗೀತ ಕೇಳಿದ ಜನ, ಕಛೇರಿ ಮಾಡಿಸಿದರಂತೆ. ಅದಾದ ಮೇಲೆ ಏನು ಪ್ರತಿಫಲ ಕೊಡಬೇಕೆಂದು ಕೇಳಿದಾಗ ಬುವಾ 'ಬೇರೇನೂ ಬೇಡ. ಒಂದು ಒಳ್ಳೆ ತಂಬೂರಿ ಕೊಡಿ. ಅದಿಲ್ಲದೆ ನನ್ನ ಶಿಷ್ಯ ತೊಂದರೆಪಡುತ್ತಿದ್ದಾನೆ' ಎಂದು ಕೇಳಿದರಂತೆ. ಮೆಚ್ಚಿದ ಜನ, ಬೇಡಿದ ಮೆಚ್ಚು ಕೊಡುವಂಥ ಕಾಲ ಅದು. ಸೊಗಸಾದ ತಂಬೂರಿಯೇ ದೊರಕಿತು." ಅದು ಬಂದ ಮೇಲೆ ವೆಂಕಟಸುಬ್ಬಯ್ಯನ ಸಾಧನೆಗೆ ರೆಕ್ಕೆ ಮೂಡಿದಂತಾಯಿತು.

"ಹೀಗೇ ನಾಲ್ಕಾರುವರ್ಷ ಸಾಧನೆ ನಡೆಯಿತು. ವೆಂಕಟಸುಬ್ಬಯ್ಯನ ಕಲೆ ಪುಟಕ್ಕಿಟ್ಟ ಚಿನ್ನವಾಯಿತು. ಸಂಗೀತಕ್ಕೆ ಹೇಳಿ ಮಾಡಿಸಿದಂಥ ಶಾರೀರ ಹಾಡುತ್ತಿದ್ದರೆ ತಂಬೂರಿ ನಾದ ಬೇರೆ, ಕಂಠನಾದ ಬೇರೆ ಎಂದು ಗುರುತಿಸಲಾರದಷ್ಟು ಮಧುರವಾದ ಕಂಠಸೌಭಾಗ್ಯ; ಅದಕ್ಕೆ ಅನುಗುಣವಾದ ಮನೋಧರ್ಮ; ರಾಗ ಹತ್ತು ಜನ ಹಾಡಿದುದಾದರೂ, ಅದರಲ್ಲಿ ಹೊಸತನ್ನು ಮೂಡಿಸಬಲ್ಲ ಕಲ್ಪನಾವಿಲಾಸ; ಎಂಥ ಹೃದಯವನ್ನೂ ಸೆಳೆಯಬಲ್ಲ ಆಕರ್ಷಕ ಶೈಲಿ; ದ್ರುತದಲ್ಲಾಗಲಿ, ವಿಳಂಬದಲ್ಲಾಗಲಿ ಎಲ್ಲೂ ನಡೆಯ ಜಾಡು ತಪ್ಪದ ಖಚಿತ ಸ್ವರಜ್ಞಾನ– ದಿನದಿನಕ್ಕೆ ಸಾಧನೆ ಹೆಚ್ಚಿದಂತೆ ಒಂದೊಂದಾಗಿ ಸಿದ್ಧಿಸಿದವು. ಹೇಳಿಕೊಳ್ಳುತ್ತಿದ್ದ ಬುವಾ,

ಹೇಳಿಕೊಡುವುದನ್ನು ಮರೆತು, ಹಾಡುವವನನ್ನು ತಬ್ಬಿ ಆಶೀರ್ವಾದಾಶ್ರು ಸುರಿಸುವಂತೆ ಮಾಡುತ್ತಿತ್ತು ವೆಂಕಟಸುಬ್ಬಯ್ಯನ ಹಾಡುಗಾರಿಕೆ. ಹಾಡು ಹೇಳಿಕೊಡಲು ಆರಂಭಿಸಿದ ಬುವಾ, ಗಂಟೆಗಟ್ಟಲೆ ಅವನನ್ನೇ ಹಾಡಲು ಬಿಟ್ಟು 'ಭೇಷ್' 'ಶಾಭಾಷ್' ಎಂದು ತಲೆದೂಗುತ್ತಾ ಕುಳಿತುಬಿಡುವರು. ಅವರ ಆನಂದ ವೆಂಕಟಸುಬ್ಬಯ್ಯನಲ್ಲಿ ಮತ್ತಷ್ಟು ಹುರುಪು ಹುಟ್ಟಿಸಿ, ಮತ್ತಷ್ಟು ಉತ್ಸಾಹದಿಂದ ಹಾಡುವಂತೆ ಮಾಡುವುದು. ಒಂದೊಂದು ದಿನ, ಹಗಲು ರಾತ್ರಿ ತಿಳಿಯದೆ, ಊಟ ನಿದ್ರೆ ಮರೆತು, ಹಾಡುತ್ತಾ ಕುಳಿತುಬಿಡುವರು – ಗುರು ಶಿಷ್ಯರು."

"ಕಡೆಗೊಂದು ದಿನ ವೆಂಕಟಸುಬ್ಬ ಯ್ಯ ಸಂಗೀತಕಲೆಯಲ್ಲಿ ಪರಿಣತ ನಾದನೆಂದು ಮನವರಿಕೆಯಾದಮೇಲೆ, ಸದಾನಂದಬುವಾ ಹೇಳಿದರು;"

"ಯಾವ ರಾಗವನ್ನಾದರೂ ಸುಮಾರಾಗಿ ಹಾಡಬಲ್ಲ ಶಕ್ತಿ ಈಗ ನಿನಗೆ ಬಂದಿದೆ. ಈಗ ಯಾವುದಾದರೂ ಒಂದು ರಾಗವನ್ನು ಒಲಿಸಿಕೊ."

"ಯಾವ ರಾಗವನ್ನು ಒಲಿಸಿಕೊಳ್ಳಲಿ ?" ಎಂದು ಕೇಳಿದ ವೆಂಕಟ ಸುಬ್ಬಯ್ಯ.

"ಯಾವುದೆಂದು ನಾನು ಹೇಗೆ ಹೇಳಲಿ? ಹಾಡಹಾಡುತ್ತಾ ನಿನಗೇ, ಇಂಥ ರಾಗ ನಿನಗೆ ಸರಿ ಎಂದು ತೋರುವುದು. ಆಗ ಅದನ್ನು ಪಟ್ಟು ಹಿಡಿದು ಸಾಧಿಸು. ರಾಗವೂ ಒಂದು ದೇವತೆ. ಎಲ್ಲಾ ರಾಗಗಳೂ ಎಲ್ಲರಿಗೂ ಒಲಿಯುವುದಿಲ್ಲ" ಎಂದು ಹೇಳಿದರು ಬುವಾ.

"ಅಂದಿನಿಂದ ವೆಂಕಟಸುಬ್ಬಯ್ಯನಿಗೆ, ರಾಗವನ್ನು ಒಲಿಸಿಕೊಳ್ಳುವ ಹೊಸ ಹುಚ್ಚು ಹಿಡಿಯಿತು. ದಿನವೂ ಅಭ್ಯಾಸ ಮಾಡುವಾಗ ಈ ರಾಗವೇ ಎಂದು ಯೋಚಿಸುವುನು. ಹಾಡುವಾಗ ಮಾತ್ರ ಒಂದು ರಾಗ ಮತ್ತೊಂದಕ್ಕಿಂತ ಸೊಗಸಾಗಿ ಕಾಣುವುದು. ಒಂದು ದಿನ ಒಂದು ರಾಗ ಚೆನ್ನ ಎನಿಸಿದರೆ, ಇನ್ನೊಂದು ದಿನ ಮತ್ತೊಂದು ರಾಗ ಚೆನ್ನ ಎನಿಸುವುದು. ಒಂದು ತನ್ನ ಕೋಮಲತೆಯಿಂದ ಮನಸೆಳೆದರೆ, ಮತ್ತೊಂದು ತನ್ನ ಗಾಂಭೀರ್ಯದಿಂದ ಹೃದಯವನ್ನು ಗೆಲ್ಲುವುದು; ಒಂದು ರಾಗ ನರನರವನ್ನು ಕೆರಳಿಸಿ ಕೂಗಿಸಿದರೆ ಮತ್ತೊಂದು ಚಂದ್ರಿಕೆಯ ಪ್ರಶಾಂತ ಆಹ್ಲಾದವನ್ನು ನೀಡುವುದು. ಆರಿಸುವ ದೃಷ್ಟಿಯಿಂದ ಹಾಡಿದಾಗ ಒಂದೊಂದು ರಾಗದಲ್ಲೂ ಅಂದಿನವರೆಗೂ ಕಾಣದ ಹೊಸ ಸೊಬಗು ಕಾಣಬರುವುದು. ಎಷ್ಟೋ ವೇಳೆ, ಈ ಬೇಟೆಯಲ್ಲಿ ದಾರಿಗಾಣದೆ ವಿಹ್ವಲನಾಗಿ ಉದ್ರಿಕ್ತನಾಗುವನು ವೆಂಕಟಸುಬ್ಬಯ್ಯ. ಆಗ ಅವನನ್ನು ನೋಡಿ ಬುವಾ ನಗುತ್ತಾ ಕೇಳುವರು;"



"ಏಕೆ, ಯಾವ ರಾಗವೆಂದು ತಿಳಿಯಲಿಲ್ಲವೇ! ನೂರು ಜನ ಚೆಲುವೆಯರಲ್ಲಿ ಯಾರನ್ನು ಆರಿಸಲಿ ಎಂದು ಗೋಳಾಡುವ ಯುವಕನ ಹಾಗಾಗಿದೆಯಲ್ಲವೇ ನಿನ್ನ ಅವಸ್ಥೆ! ಅವಳ ತುಟಿ ಹವಳ; ಇವಳ ಕೆನ್ನೆ ಸೊಗಸು; ಅವಳ ಗಲ್ಲ ಗುಲಾಬಿ; ಇವಳ ಮೂಗು ಸಂಪಿಗೆ; ಇವಳದು ಕೇದಿಗೆಯ ಬಣ್ಣ; ಅವಳು ಅಮೃತಶಿಲಾಪ್ರತಿಮೆ; ಇವಳ ಕಣ್ಣು ನಕ್ಷತ್ರ; ಅವಳದು ಹೂವು – ಯಾರನ್ನು ಬಿಡಲಿ, ಯಾರನ್ನು ಕಟ್ಟಿಕೊಳ್ಳಲಿ – ಹೀಗೆ ಅಲ್ಲವೆ ? ನಿನಗೆ ಬೇಕಾದ ರಾಗವನ್ನು ಅರಿಸಿಕೋ ಎನ್ನುವ ಮೊದಲು, ಎಲ್ಲ ರಾಗವೂ ಬೇಕಾಗಿತ್ತು. ಈಗ ಯಾವುದನ್ನಾದರೂ ಒಂದನ್ನು ಅರಿಸಿಕೋ ಎಂದಾಗ ಶಾಪತ್ರಯ ಆರಂಭವಾಯಿತು, ಅಲ್ಲವೇ ?"

"ನಿಜ, ಹಾಗೇ ಆಗಿದೆ ನನ್ನ ಪಾಡು" ಎನ್ನುವವನು ವೆಂಕಟಸುಬ್ಬಯ್ಯ.

"ಆಗಲಿ. ನಾಳೆ ಮದುವೆಯಾಗಲು ಹೆಣ್ಣಾರಿಸಲು ಒದ್ದಾಡಬೇಕಾಗಿಲ್ಲ. ಈಗ ಆ ಅನುಭವವೂ ಸ್ವಲ್ಪ ಬಂದಹಾಗಾಗಲಿಲ್ಲವೆ ? ಆದರೂ ನೀನು ಯಾವುದನ್ನಾದರೂ ಮೆಚ್ಚು, ಯಾವುದನ್ನಾದರೂ ಬಿಡು–ನಿನಗೆ ಸಿಗುವುದು ಸಿಕ್ಕೇಸಿಗುವುದು."

"ಹಾಗಾದರೆ ಈ ತೊಳಲಿಕೆ ವ್ಯರ್ಥವೇ ?"

"ಛಿ! ಉಂಟೇ? ಗಂಡಸಾಗಿ ಹುಟ್ಟಿದ ಮೇಲೆ ಯಾರೋ ಒಬ್ಬ ಹುಡುಗಿ, ಕೈಹಿಡಿದೇ ಹಿಡಿಯುತ್ತಾಳೆ. ಹಾಗೆಂದು ಇದಿರಾದ ಹೆಣ್ಣನ್ನು ನೋಡಿ, ಹೀಗಿದ್ದರೆ ಆಗಬಹುದು, ಹಾಗಿದ್ದರೆ ಬೇಡ ಎಂದು ನಿನ್ನ ಲೆಕ್ಕಾಚಾರ. ನೀನು ಮಾಡುವುದನ್ನು ಬಿಡುವುದಕ್ಕಾಗುತ್ತದೆಯೇ ? ನಮ್ಮ ಲೆಕ್ಕ ನಮಗೆ. ಬಂದದ್ದು ಬರಲಿ. ಹತ್ತು ನೋಡಿದ ಅನುಭವ ಕಣ್ಣಿಗೆ ಬೇಕು; ಹತ್ತು ಹಾಡಿದ ಅನುಭವ ಕಂಠಕ್ಕೆ ಬೇಕು."

– ಎನ್ನುವರು ಬುವಾ, ಗಾಂಜಾದ ಚಿಲುಮೆಯಿಂದ ಸೇದಿದ ಹೊಗೆಯನ್ನು ನಿಧಾನವಾಗಿ ಬಾಯಿ ಮೂಗುಗಳಿಂದ ಹೊರಬಿಡುತ್ತಾ.

"ಆ ಮಾತು ಕೇಳಿ ವೆಂಕಟಸುಬ್ಬಯ್ಯ ನಕ್ಕು ಸುಮ್ಮನಾದರೂ ಆ ಮಾತುಗಳಲ್ಲಿಯ ಸತ್ಯ ಅವನಿಗೆ ಮನವರಿಕೆಯಾಗುವುದು."

"ಸದಾನಂದ ಬುವಾ ವೆಂಕಟಸುಬ್ಬಯ್ಯನಿಗೆ ಒಲಿದಿದ್ದರೂ, ಆತನ ಶಿಷ್ಯತ್ವ ಹೂವಿನ ಹಾಸಿಗೆಯಾಗಿರಲಿಲ್ಲ. 'ಆಡಿದರೆ ಅರಗಿಳಿ, ಕಾಡಿದರೆ ನಾಗರ' ಎನ್ನುತ್ತಾರಲ್ಲಾ ಹಾಗಿದ್ದರು ಸದಾನಂದ ಬುವಾ. ಅದೂ ಯಾವ ಗಳಿಗೆಗೆ ಹೇಗೋ. ಆತ ನಕ್ಕರೆ ನಗಬೇಕು, ಹಾಡಿದರೆ ಹಾಡಬೇಕು, ಸುಮ್ಮನಿದ್ದರೆ ಸುಮ್ಮನಿರಬೇಕು. ಆತ ಹೇಳಿದ ಚಾಕರಿಯನ್ನು ಮೇಲುಕೀಳೆಂದು ನೋಡದೆ

ಮಾಡಬೇಕು, ಕೊಂಚ ಹೆಚ್ಚ ಕಡಿಮೆಯಾದರೆ, ಎಲ್ಲಾದರು ಹೇಳದೆ ಕೇಳದೆ ಹೊರಟುಬಿಟ್ಟರೆ.... ? ಹೀಗೆ ಆರು ವರ್ಷ ಕತ್ತಿಯ ಮೇಲಿನ ಸಾಮಿನಂತೆ ನಡೆಯಿತು ವೆಂಕಟಸುಬ್ಬಯ್ಯನ ಶಿಷ್ಯತ್ವ."

"ಈ ಕಾಲದಲ್ಲಿ ತಾನು ಹಾಡಬೇಕು, ಹತ್ತು ಜನರ ಇದಿರು ಹಾಡಿ ಮೆಚ್ಚಿಗೆ ಗಳಿಸಬೇಕು, ಕೀರ್ತಿ ಸಂಪಾದಿಸಬೇಕು ಎಂಬ ಯಾವೊಂದು ಯೋಚನೆಯೂ ವೆಂಕಟಸುಬ್ಬಯ್ಯನಿಗೆ ಇರಲಿಲ್ಲ. ಹಾಗೆ ಇದ್ದಿದ್ದರೆ, ಇನ್ನೂ ಅಷ್ಟು ವರ್ಷ ಹಾಗೇ ಇದ್ದು ಬಿಡುತ್ತಿದ್ದನೋ ಏನೋ. ಆದರೆ ವಿಧಿಯ ಯೋಚನೆಯೇ ಬೇರೆಯಾಗಿತ್ತು. ಒಂದು ದಿನ ತಣ್ಣೀರಿನಲ್ಲಿ ಸ್ನಾನ ಮಾಡಿ ಬಂದ ಬುವಾ ಕೆಮ್ಮುತ್ತಾ ಮಲಗಿದವರು ಮೇಲೇಳಲಿಲ್ಲ. ಆರೆಂಟು ದಿನ ಕೆಮ್ಮಿ ಕೆಮ್ಮಿ ನವೆದು, ಬಳಿಯಲ್ಲಿ ಕಂಬನಿಗರೆಯುತ್ತಾ ಕುಳಿತ ವೆಂಕಟಸುಬ್ಬಯ್ಯನ ತಲೆಯನ್ನು ನೇವರಿಸಿ–"

"ನೋಡು–ನನ್ನದು ಸಂಗೀತದಲ್ಲಿ ಅರೆಬಾಳಾಯಿತು. ಯಾವುದೋ ಕೊರಗು ದಾರಿ ತಪ್ಪಿಸಿತು. ನಿನ್ನದಾದರೂ ಪೂರ್ಣ ಜೀವನವಾಗಲಿ. ದೇವರು ನಿನಗೆ ಯೋಗ್ಯತೆ ಕೊಟ್ಟಿದ್ದಾನೆ. ಅದನ್ನು ಉಳಿಸಿಕೊ. ಎಷ್ಟೋ ಸಲ ನಾನು ನಿನಗೆ ಅಯ್ಯೋ ಅನ್ನಿಸಿದ್ದೇನೆ. ಕರುಳು ಇರಿಯುವಷ್ಟು ಕಟುವಾಗಿ ಮಾತನಾಡಿದ್ದೇನೆ. ಅದೆಲ್ಲಾ ಮರೆತುಬಿಡು. ಕಲಿಸಿದ ವಿದ್ಯೆ ಮರೆಯಬೇಡ. ಕಲಿಸಿದ್ದನ್ನು ಬೆಳಸಿಕೋ. ಎಷ್ಟು ಬೆಳಸಿದರೂ ಕೊನೆ ಕಾಣದಷ್ಟು ಅಪಾರವಾದದ್ದು ಈ ವಿದ್ಯೆ. ಸಾಧನೆಯ ದಾರಿಯಲ್ಲಿ, ದಾರಿ ಬದಲಿಸುವ ಆಕರ್ಷಣೆ ನೂರು, ಅದಾವುದಕ್ಕೂ ಮರುಳಾಗಿ ಸಂಗೀತಕ್ಕೆ ದ್ರೋಹ ಬಗೆಯಬೇಡ."

–ಎಂದು ಹೇಳಿ, ಕಡೆಯ ಬಾರಿಗೆ ಉಸಿರೆಳೆದು ಕಣ್ಣು ಮುಚ್ಚಿದರು. ವೆಂಕಟಸುಬ್ಬಯ್ಯ ತಂದೆಯನ್ನು ಕಳೆದುಕೊಂಡಂತೆ ದುಃಖಪಟ್ಟ, ಹಂಬಲಿಸಿ ಹೊರಳಾಡಿದ. ಸಾವಿನಿದಿರು ಅದಕ್ಕೆಲ್ಲಾ ಏನು ಬೆಲೆ. ಕಡೆಗೆ ಊರವರ ನೆರವಿನಿಂದ ಅಂತ್ಯಕ್ರಿಯೆ ನಡೆಸಿ, ತಲೆಯ ಮೇಲೆ ಕೈಹೊತ್ತು ಕುಳಿತ.

"ಆ ದಿನ ಆತನಿಗೆ ತಾನು ಬಿಟ್ಟುಬಂದ ಮನೆಯ ನೆನಪಾಯಿತು. ಅದುವರೆವಿಗೂ ಮನೆಯನ್ನು ಸಂಪೂರ್ಣವಾಗಿ ಮರೆತೇಬಿಟ್ಟಿದ್ದನೆಂದಲ್ಲ. ಹಳೆಯ ಉಳುಕಿನಂತೆ, ಯಾವಾಗಲಾದರೊಮ್ಮೆ ಮನೆಯ ನೆನಪಾಗಿ 'ಅವರಿಗೆ ಹೇಳದೆ ಕೇಳದೆ ಬಿಟ್ಟುಬಂದೆ, ಎಷ್ಟು ಒದ್ದಾಡಿದರೋ, ಎಷ್ಟು ವ್ಯಥೆಪಟ್ಟುಕೊಂಡರೊ' ಎಂದು ಮರುಗುವನು. ಆದರೆ ಮರುಗಳಿಗೆಯೇ ಸಂಗೀತಾಭ್ಯಾಸದ ಉತ್ಸಾಹದಲ್ಲಿ ಆ ನೋವು ಮರೆಯಲಾಗುವುದು. ಮತ್ತೆ ಎಂದೋ ನೆನಪು, ಹೀಗೇ ಮರೆವು, ಆರು ವರ್ಷಗಳ ಕಾಲ ಹೀಗೆ ಕಳೆದು ಹೋಗಿತ್ತು. ಈಗ ಬುವಾ ಕೈಬಿಟ್ಟುಹೋದ



ಮೇಲೆ ಮನೆಯ ನೆನಪು ಮರುಕಳಿಸಿತು."

"ಅಲ್ಲಿದ್ದು ಮಾಡುವುದೇನು? ಅಭ್ಯಾಸಕ್ಕೆ ಯಾವ ಊರಾದರೇನು ? ತಂದೆತಾಯಿಗಳ ಮುಖ ನೋಡಿ, ಅವರ ಸೇವೆ ಮಾಡುತ್ತಲೇ, ಅಭ್ಯಾಸ ಮಾಡುವುದು– ಎನಿಸಿತು. ಅಲ್ಲಿದ್ದ ತನ್ನ ಒಂದೇ ಒಂದು ಆಸ್ತಿಯಾದ ತಂಬೂರಿಯನ್ನು ಹೊತ್ತು, ದುರ್ಗದ ಕಡೆ ಹೊರಟ ವೆಂಕಟಸುಬ್ಬಯ್ಯ."

"ಸುಮಾರು ಇಪ್ಪತ್ತು ದಿನಗಳ ಕಾಲುನಡಿಗೆಯ ಪ್ರಯಾಣವನ್ನು ಮುಗಿಸಿ ವೆಂಕಟಸುಬ್ಬಯ್ಯ ಊರು ಸೇರಿದಾಗ ಮತ್ತೊಂದು ಆಘಾತ ಕಾದಿತ್ತು ಆತನಿಗೆ."

"ಯಾರಿಗೂ ಹೇಳದೇ ವೆಂಕಟಸುಬ್ಬಯ್ಯ ಊರು ಬಿಟ್ಟಬಳಿಕ ಅವನ ಮನೆಯವರು ಆತನಿಗಾಗಿ, ಊರೂರು ಹುಡುಕಿಸಿದರು. ಎಲ್ಲಾದರೂ ಮಗನ ಸುಳಿವು ಕಂಡೀತೋ ಏನೋ ಎಂದು ಪಡಬಾರದ ಕಷ್ಟವನ್ನೆಲ್ಲಾ ಪಟ್ಟರು. ನರಸಿಂಹಜೋಯಿಸರೊಬ್ಬರೇ ಅಲ್ಲ, ಅವರ ನೆಂಟರಿಷ್ಟರು, ಆಪ್ತರು ಮಿತ್ರರು ಎಲ್ಲರೂ – ಹೋದಲ್ಲಿ ಬಂದಲ್ಲಿ ವೆಂಕಟಸುಬ್ಬಯ್ಯನ ಜಾಡು ಪತ್ತೆ ಯಾದೀತೊ ಏನೋ ಎಂದು ಪ್ರಯತ್ನ ಮಾಡಿದರು. ಬುವಾನೊಂದಿಗೆ ಯಾವುದೋ ಅಭುಕ್ತ ಮೂಲೆಯಲ್ಲಿ ಅಡಗಿದ ವೆಂಕಟಸುಬ್ಬಯ್ಯ ಯಾರ ಕಣ್ಣು, ಕಿವಿಗೂ ಬಿದ್ದಿರಲಿಲ್ಲ, ದಿನವಾಯಿತು. ವಾರವಾಯಿತು, ತಿಂಗಳಾಯಿತು; ವರ್ಷಗಳ ಆದವು. ಒಂದು ಗಳಿಗೆ ಮಗ ಕಣ್ಣುಮರೆಯಾದ ತುಡಿದುಕೊಳ್ಳುವ ಹೆತ್ತ ಕರುಳಿಗೆ ವರ್ಷಗಟ್ಟಲೆ ಸಮಾಚಾರವೇ ತಿಳಿಯದೆ ಹೋದರೆ ಏನು ವ್ಯಥೆಯಾಗಬೇಡ. ವೆಂಕಟಸುಬ್ಬಯ್ಯನ ತಾಯಿ ಜಾನಕಮ್ಮ ಮಗನ ಕೊರಗಿನಲ್ಲಿ ನನೆದು ಕಡ್ಡಿಯಾದರು. ಮಗ ಕಣ್ಣಲ್ಲಿ ಮರೆಯಾದ ವ್ಯಥೆ, ಹೆಂಡತಿ ನವೆಯುತ್ತಿರುವ ಕಣ್ಣೆದುರಿನ ದಿನನಿತ್ಯದ ಉರಿ– ಈ ಎರಡರ ತಾಪದಲ್ಲಿ ಗಂಡಸಾದ ನರಸಿಂಹಜೋಯಿಸರು, ತಮ್ಮ ಅಳಲನ್ನು ಯಾರ ಮುಂದೂ ಹೇಳಿಕೊಳ್ಳಲಾರದೆ ಒಳಗೇ ಸುಟ್ಟುಹೋದರು." ಒಂದು ದಿನ ಅನಂತಯ್ಯನನ್ನು ಊರಿಗೆ ಕರೆಸಿಕೊಂಡು–

"ಅನಂತೂ, ನನಗಿನ್ನು ಹೆಚ್ಚು ದಿನ ಆಯಸ್ಸಿಲ್ಲ. ಅವಳಿಗಿಂತ ಮೊದಲು ನನಗೆ ಸಾವು ಬಂದರೆ, ಅವಳನ್ನು ಮಗನ ಕೈಲಿಟ್ಟು ನಿಶ್ಚಿಂತನಾಗಿ ಕಣ್ಣು ಮುಚ್ಚಬಹುದು ಎಂದಿದ್ದೆ. ದೇವರು ಅಷ್ಟನ್ನೂ ನಡೆಸಲಿಲ್ಲ. ಮಗನಿಂದ ಅಂತ್ಯಕ್ರಿಯೆ ಮಾಡಿಸಿಕೊಳ್ಳುವ ಯೋಗವೂ ನನಗೆ ಇದ್ದಂತಿಲ್ಲ. ಅವನು ಎಲ್ಲೋ ಇದಾನೆ. ಸತ್ತಿಲ್ಲ. ಇಂದಲ್ಲ ನಾಳೆ ಮನೆಗೆ ಬರುತ್ತಾನೆ. ಅಷ್ಟು ನನಗೆ ಗೊತ್ತು. ಎಂದಾದರೂ ಬರಲಿ – ಅವನು ಬರುವವರೆಗೂ ಜಾನಕಿ ನಿನ್ನ ಸ್ವತ್ತು. ತಮ್ಮನಾಗಿ ಹುಟ್ಟಿದೆ ತಮ್ಮನಲ್ಲ ಮಗ ಎಂದು ಅವಳನ್ನು ಕಾಪಾಡಿಕೋ" ಎಂದರು.

"ಸಾಧಾರಣವಾಗಿ ಜೋಯಿಸರು ಆ ರೀತಿ ಮಾತನಾಡುವವರಲ್ಲ. ಅವರ ಮಾತು ಕೇಳಿ ಅನಂತಯ್ಯನಿಗೂ ಜಂಘಾಬಲ ಉಡುಗಿಹೋಯಿತು. 'ಇಷ್ಟು ಅನಾಹುತಕ್ಕೂ ತಾನು ವೆಂಕಟಸುಬ್ಬಯ್ಯನನ್ನು ಸಂಗೀತ ಕಲಿಯಲು ಪ್ರೋತ್ಸಾಹಿಸಿದ್ದೇ ಕಾರಣವೇನೋ" ಎಂದು ಕೊಂಡು ಅನಂತಯ್ಯ ವ್ಯಥೆಪಟ್ಟ.

"ನೀನು ಮೊದಲೇ ಹೇಳುತ್ತಿದ್ದೆ, ಭಾವ ಅವನನ್ನು ಅಷ್ಟು ಪ್ರೋತ್ಸಾಹಹಿಸಬೇಡ ಎಂತ. ಹೀಗಾಗುವುದು, ನಮಗೆ ಕಾಣಲಿಲ್ಲ. ನನ್ನದೂ ತಪ್ಪಾಯಿತು" ಎಂದರು.

"ಹೀಗಾಗುವುದೆಂದು ನೀನು ಕಂಡಿದ್ದೆಯಾ ? ಹೇಳುವುದನ್ನು, ಅವನು ಮುಂದೆ ಬರಲಿ ಎಂದು ಹೇಳಿದೆ. ನಿನ್ನ ಪ್ರೋತ್ಸಾಹ ಅವನ ಕಲ್ಯಾಣಕ್ಕೆ ಕಾರಣವಾಗಬಹುದು. ಅದೆಲ್ಲಾ ಹಚ್ಚಿಕೊಳ್ಳಬೇಡ. ಆದದ್ದು ಆಗಿಹೋಯಿತು. ಅವನ ದಾರಿ ಅವನು ಆರಿಸುತ್ತಿದ್ದಾನೆ. ನಮ್ಮ ಅದೃಷ್ಟದ ದಾರಿ ನಮಗೆ" ಎಂದರು ಜೋಯಿಸರು.

"ಯಾವ ಹೊತ್ತಿನಲ್ಲಿ ಅವರು ಆ ಮಾತು ಆಡಿದರೋ ಏನೋ, ಅವರು ಅಂದಂತೆಯೇ ಆಯಿತು. ಮಗ ಮನೆಗೆ ಬರುವ ಮೊದಲೇ ಜೋಯಿಸರು ಕಣ್ಣು ಮುಚ್ಚಿದರು. ಸಾಯದ ಹೊತ್ತಿನಲ್ಲೂ ಹೆಂಡತಿಗೆ...."

"ಜಾನಕಿ, ನಿನ್ನ ಮಗ ಬರುತ್ತಾನೆ. ಬಂದಾಗ ಅವನ ಮೇಲೆ ಸಿಟ್ಟಾಗಬೇಡ" ಎಂದು ಹೇಳಿ, ತಮ್ಮ ಜೀವನ ಮುಗಿಸಿದರು. ಗಂಡನೊಂದಿಗೆ ತಾನೂ ಸಹಗಮನ ಮಾಡುತ್ತೇನೆಂದು ಹಟ ಹಿಡಿದ ತಂಗಿಯನ್ನು ತಡೆಯಲು ಅನಂತಯ್ಯ ವಿಶ್ವಪ್ರಯತ್ನ ಮಾಡಿ ಉಳಿಸಿಕೊಳ್ಳಬೇಕಾಯಿತು. ಈಗಲೂ ಮಗ ಬಂದಾನೇನೋ, ಒಂದು ಸಲ ಕಣ್ಣುತುಂಬ ಅವನನ್ನು ನೋಡಿ, ಮಾತನಾಡಿಸಿ ಜೀವ ಬಿಡೋಣ ಎಂದು ಕಣ್ಣಲ್ಲಿ ಜೀವ ಹಿಡಿದು ಮಗ ಬರುವುದನ್ನೇ ಕಾಯುತ್ತಿದ್ದರು, ಜಾನಕಮ್ಮ.

"ತನ್ನ ಸಂಗೀತ ಸಾಧನೆಯನ್ನು ಎಲ್ಲರಿಗೂ ತಿಳಿಸಿ ಮನಸ್ಸಂತೋಷ ಪಡಿಸಬೇಕೆಂದು ಬಂದ ವೆಂಕಟಸುಬ್ಬಯ್ಯ, ಮನೆಗೆ ಕಾಲಿಡುತ್ತಿದ್ದಹಾಗೇ ಎದುರಿಗೆ ಬಂದ ವಿಧವೆಯಾದ ತಾಯನ್ನು ನೋಡಿ, ಸಿಡಿಲು ಬಡಿದಂತೆ ನೆಲಕ್ಕೆ ಉರುಳಿದ. ಆ ಹೊತ್ತಿನಲ್ಲಿ ಅನಂತಯ್ಯ ಅಲ್ಲಿಲ್ಲದೆ ಹೋಗಿದ್ದರೆ, ತನ್ನ ದುಃಖ, ತನ್ನ ಮೇಲಿನ ಕ್ರೋಧದಲ್ಲೇ ವೆಂಕಟಸುಬ್ಬಯ್ಯ ಏನಾಗುತ್ತಿದ್ದನೋ, ಏನು ಮಾಡಿಕೊಳ್ಳುತ್ತಿದ್ದನೋ. ಪತಿಯನ್ನು ಕಳೆದುಕೊಂಡ ತಾಯನ್ನು ಕಾಪಾಡುವ ಜವಾಬ್ದಾರಿಯನ್ನು ನೆನಪಿಗೆ ತಂದು, ಅನಂತಯ್ಯ ಆತನ ಕೈ ತಡೆದರು."

"ಭಾವ ಬದುಕಿರಲಿ ಸತ್ತಿರಲಿ, ಅವರು ಬಯಸಿದ್ದು – ನೀನು ಮುಂದೆ ಬರಬೇಕು, ಮನೆಗೆ ಹೆಸರು ತರುವ ಕೀರ್ತಿವಂತನಾಗಬೇಕು ಎಂದು.



ಸಾಯುವಾಗಲೂ ನಿನಗೆ ಅದೇ ಮಾತು ಹೇಳುವಂತೆ ಹೇಳಿ ಕಣ್ಣು ಮುಚ್ಚಿದರು. ನೀನೀಗ ಹುಚ್ಚನ ಹಾಗಾದರೆ, ನಿನಗೂ ಹಿತವಲ್ಲ; ಸತ್ತವರು ಆತ್ಮಕೂ ಶಾಂತಿಯಿಲ್ಲ. ಪರಲೋಕದಲ್ಲಿರುವ ಅವರ ಆತ್ಮಕ್ಕೆ ತೃಪ್ತಿಯಾಗುವಂತೆ ಬಾಳು. ನೀನು ಮಾಡಬಹುದಾದುದು ಅಷ್ಟೇ–" ಎಂದು ಹೇಳಿ ಉದ್ರೇಕದಲ್ಲಿ ಹುಚ್ಚಾದ ಅವನ ಬುದ್ಧಿಯನ್ನು ನಂತಯ್ಯ ದಾರಿಗೆ ತಂದರು.

"ಅವರ ಸಮಾಧಾನದ ಮಾತಿನಿಂದ, ವೆಂಕಟಸುಬ್ಬಯ್ಯನ ಉದ್ರೇಕ ಕೊಂಚ ಶಮನವಾದರೂ, ಮನಸ್ಸಿನ ಮೇಲೆ ಅನಿರೀಕ್ಷಿತ ಅಘಾತದಿಂದಾದ ಗಾಯ ಪೂರ ಮಾಗಲಿಲ್ಲ. ಮೂರು ಹೊತ್ತೂ ಏನೋ ಮಂಕುಹಿಡಿದಂತಿರುವನು. ಗುರುವಿನ ಸಾವಿನಿಂದಾದ ನೋವು ಮಾಯವಾಗುವ ಮುನ್ನವೇ ಎಡವಿದ ಕಾಲಿಗೇ ಪೆಟ್ಟುಬೀಳುವಂತೆ ಬಿದ್ದಿತ್ತು ತಂದೆಯ ಸಾವಿನ ಆ ಏಟು. ತಂದೆಯ ಸಾವಿಗೆ ತಾನೇ ಕಾರಣ, ಸಾಯುವಾಗ ಅವರು ಎಷ್ಟು ಕೊರಗಿದರೋ, ಎಷ್ಟು ನೊಂದುಕೊಂಡರೋ, ಮಗನಾಗಿ ಹುಟ್ಟಿದುದಕ್ಕೆ ಒಂದು ದಿನವಾದರೂ ಅವರ ಮನಸ್ಸಿಗೆ ಸಂತೋಷ ಕೊಡಲಿಲ್ಲವಲ್ಲಾ ಎಂಬ ಹಲವು ಬಗೆಯ ವ್ಯಥೆ ಆತನ ಹೃದಯವನ್ನು ಹಿಂಡಲಾರಂಭಿಸಿತ್ತು. ಆ ಕುದಿಯಲ್ಲಿ ಯಾರೊಂದಿಗೂ ಬೆರೆಯದೆ, ಯಾರೊಂದಿಗೂ ಮಾತನಾಡದೆ, ಸುಮ್ಮನೆ ಮನೆಯಲ್ಲಿ ಸುತ್ತಾಡುವನು. ಇಲ್ಲವಾದರೆ ಯಾವುದಾದರೂ ನಿರ್ಜನ ಸ್ಥಳಕ್ಕೆ ಹೋಗಿ, ಒಂಟಿಯಾಗಿ ಏನೋ ಚಿಂತಿಸುತ್ತಾ ಕುಳಿತುಬಿಡುವನು. ಅವನಿಗೆ ಬಹುಪ್ರಿಯವಾದ ಸಂಗೀತವೂ ಆ ಪಶ್ಚಾತ್ತಾಪದ ಹೊತ್ತಿನಲ್ಲಿ ಬೇಡದಂತಾಗಿ ತಂಬೂರಿ, ಮೂಲೆಯಲ್ಲಿ ಗೌಸಿನಡಿಯಲ್ಲಿ ಮಲಗಿ ಧೂಳು ತಿನ್ನಲಾರಂಭಿಸಿತು."

"ಹೀಗೆ ಬಿಟ್ಟರೆ ಆತ ಮತಿವಿಕಲನಾದಾನೆಂದು ಹೆದರಿ ಅನಂತಯ್ಯ ಅವನ ಮನಸ್ಸನ್ನು ಈ ಅಪರಿಹಾರ್ಯವಾದ ಚಿಂತೆಯಿಂದ ಸಂಗೀತದ ಕಡೆ ತಿರುಗಿಸಲೆತ್ನಿಸಿದರು. ವೆಂಕಟಸುಬ್ಬಯ್ಯ ದುರ್ಗಕ್ಕೆ ಬಂದು ಒಂದು ತಿಂಗಳಾದ ನಂತರ ಅವನಿಗೆ ತಿಳಿಸದೆಯೇ ಅವನ ಸಂಗೀತಸಭೆ ಏರ್ಪಡಿಸಿ, ಎಲ್ಲ ಸಿದ್ಧತೆಗಳೂ ಮುಗಿದಮೇಲೆ ಆ ವಿಚಾರವನ್ನು ವೆಂಕಟಸುಬ್ಬಯ್ಯನಿಗೆ ತಿಳಿಸಿದರು. ಮೊದಮೊದಲು ವೆಂಕಟಸುಬ್ಬಯ್ಯ ಅದಾವುದೂ ಬೇಡವೆಂದು ವಾದಮಾಡಿದ."

"ಮಾವ, ನೀನು ಕೇಳುವುದಾದರೆ ನಾನು ಹಾಡು ಹೇಳಲು ಇಲ್ಲವೆನ್ನುವುದಿಲ್ಲ. ಒಂದೆರಡು ದಿನ ತಡೆ. ನನ್ನ ಬುದ್ಧಿ ಸ್ತಿಮಿತಕ್ಕೆ ಬಂದರೆ ನಿನಗೆ ಸಾಕಾಗುವಷ್ಟು ಹಾಡುತ್ತೇನೆ. ಈಗ ಸದ್ಯಕ್ಕೆ ಅದರ ಯೋಚನೆಯೇ ಬೇಡ" ಎಂದ.

"ನನಗಾಗಿ ಹಾಡು ಎಂದು ನಾನು ಕೇಳುತ್ತಿಲ್ಲ, ವೆಂಕಟಸುಬ್ಬು. ಯಾರೋ– ಇಷ್ಟುವರ್ಷ ಇವನು ಊರೂರು ಅಲೆದು ಕಲಿತುಬಂದದ್ದೇನು? ಎಲ್ಲಿ ಪೋಲಿ ಅಲೆಯುತ್ತಿದ್ದನೋ – ಎಂದು ಆಡಿಕೊಂಡರು. ಅದಕ್ಕೆ ನಮ್ಮ ಹುಡುಗನ ಯೋಗ್ಯತೆ ಊರ ಜನಕ್ಕೆ ತಿಳಿದು, ಸಲ್ಲದ ಮಾತಾಡುವವರು ಬಾಯಿ ಮುಚ್ಚಲಿ ಎಂದು ಈ ಏರ್ಪಾಟುಮಾಡಿದೆ. ಹಟ ಮಾಡಬೇಡ, ಇದೊಂದು ಸಲ ನಡೆದುಹೋಗಲಿ. ಆಮೇಲೆ ನಿನ್ನ ಮನಸ್ಸಿಗೆ ಬಂದಾಗ ಹಾಡು" ಎಂದು ಅನಂತಯ್ಯ ಒತ್ತಾಯಮಾಡಿ, ವೆಂಕಟಸುಬ್ಬಯ್ಯನನ್ನು ಅಂದಿನ ಕಛೇರಿಗೆ ಒಪ್ಪಿಸಿದರು.

"ಅದರಿಂದಾಗಿ ಮೂಲೆಯಲ್ಲಿ ಅವಿತ ವೆಂಕಟಸುಬ್ಬಯ್ಯ ಹೊರಗೆ ಬರಬೇಕಾಯಿತು. ಆ ಒಂದು ಕಛೇರಿಯಿಂದ ವೆಂಕಟಸುಬ್ಬಯ್ಯ ದುರ್ಗದ ಸಂಗೀತಪ್ರೇಮಿಗಳ ಹೃದಯವನ್ನು ಗೆದ್ದು ಬಿಟ್ಟ. ಗುರುವಿನ ಹೆಸರುಳಿಸಬೇಕೆಂಬ ಬಯಕೆ, ತಂದೆಗೆ ತಕ್ಕ ಮಗನಾದ ಎನ್ನಿಸಿಕೊಂಡು ಕಂಬನಿಗರೆವ ತಾಯಿಯ ಹೃದಯಕ್ಕೆ ತಂಪೆರೆವ ಬಯಕೆ ಎಲ್ಲವೂ ಅಂದು ಆತನಿಗೆ ನೆರವಾದವು. ಹಾಡುಗಾರಿಕೆ ಆರಂಭಿಸುವ ಮುನ್ನ ಇದ್ದ ನಿರುತ್ಸಾಹ, ಜಡತೆ ಎಲ್ಲವೂ ಹಾಡಲು ಆರಂಭಿಸಿದಮೇಲೆ ಮರೆಯಾಗಿ, ಉತ್ಸಾಹ ತಾನೇ ತಾನಾಗಿ ವಿಜೃಂಭಿಸಿತು. ಒಬ್ಬಿಬ್ಬರು ವೃದ್ಧರು– 'ಇನ್ನೂ ತಾಳಜ್ಞಾನ ಸಾಲದು. ಆ ಹಿಡಿತ ಸಿಕ್ಕರೆ ಎಲ್ಲರನ್ನೂ ಮೀರಿಸುವ ಹಾಗಾಗುತ್ತಾನೆ' ಎಂದುಕೊಂಡರೂ ಅವನ ಹಾಡುಗಾರಿಕೆಯ ರಸವಾಹಿನಿಯಲ್ಲಿ ಮಿಂದು ಪುಳಕಿತರಾಗದವರು ಒಬ್ಬರೂ ಆ ದಿನ ಇರಲಿಲ್ಲ. ಎಲ್ಲರೂ ಅವನನ್ನು ಹೊಗಳುವವರೇ."

"ಆ ದಿನ ಸಭೆ ನಡೆದುದು, ಹಿಡಿದು ನಿಲ್ಲಿಸಿದ ನೀರನ್ನು ಅಡ್ಡಿ ಕಡಿದು, ಹರಿಯಲು ಬಿಟ್ಟಂತಾಯಿತು. ಇಂದು ಇಲ್ಲಿ, ನಾಳೆ ಅಲ್ಲಿ ಎಂದು ಆತನ ಸಂಗೀತಸಭೆಗಳು ನಡೆದು, ಕಡೆಗೆ ಪಾಳೆಯಗಾರರ ಇದುರಿನಲ್ಲೂ ಸಂಗೀತವಾಗಿ ಅವರಿಂದಲೂ ಮೆಚ್ಚುಗೆ ದೊರೆತು, ಅಂದಿನಿಂದ ವೆಂಕಟಸುಬ್ಬಯ್ಯನೂ ಆಸ್ಥಾನವಿದ್ವಾಂಸರಲ್ಲಿ ಒಬ್ಬನಾದ."

"ಕೀರ್ತಿ ಮಹಾರಾಜನಿದ್ದಂತೆ; ಧನ, ಗೌರವ ಎಲ್ಲವೂ ಅನುಚರರಂತೆ, ವಂದಿಮಾಗಧರಂತೆ ಕೀರ್ತಿಯನ್ನು ಹಿಂಬಾಲಿಸುತ್ತವೆ. ವೆಂಕಟಸುಬ್ಬಯ್ಯನಿಗೂ ಹಾಗೇ ಆಯಿತು. ಬಂದೆರಡು ವರ್ಷವೆನ್ನುವುದರೊಳಗೆ, ಸುತ್ತ ಮುತ್ತಲೂ ಆತನ ಖ್ಯಾತಿ ಹಬ್ಬಿ, ಊರಿನ ಹತ್ತಾರು ಜನ ಸಂಗೀತಗಾರರು ಆತನ ಸೆರಗು ಹಿಡಿದು ಅಡ್ಡಾಡುವಂತಾಯಿತು. ಪಾಳೆಯುಗಾರರಿಗಂತೂ ಅವನ ಹಾಡುಗಾರಿಕೆಯೆಂದರೆ ಹುಚ್ಚು. ರಾಜಾನುಗ್ರಹ ದೊರೆತಮೇಲೆ ಆತನ ಸಂಗೀತವನ್ನು ಟೀಕಿಸಲು, ಅದರಲ್ಲಿ ತಪ್ಪು ಕಂಡುಹಿಡಿಯಲು ಯಾರಿಗೂ ಧೈರ್ಯವಿಲ್ಲವಾಯಿತು. ಅಕಸ್ಮಾತ್ತಾಗಿ ಯಾರಾದರೂ ಏನಾದರೂ ಹೇಳಿದರೂ, ಅದನ್ನು ಸರಿಯಾದ ರೀತಿಯಲ್ಲಿ ಗ್ರಹಿಸದೆ, ಕೀರ್ತಿಯಿಂದ ಕುರುಡನಾಗಿ, ತಾನು ಸಂಪೂರ್ಣವಾಗಿ ಜ್ಞಾನಿ ಎಂದುಕೊಂಡ ವೆಂಕಟಸುಬ್ಬಯ್ಯ ಅಸಹನೆಯಿಂದ ಅವರ ಮೇಲೆ ಬೀಳಹೋಗುವನು. ಯೌವನ, ಕೀರ್ತಿ, ರಾಜಾನುಗ್ರಹ, ಹಿಂಬಾಲಕರ ಹೊಗಳಿಕೆ ಯಾರ ಮನಸ್ಸನ್ನು ತಾನೆ ಮದೋನ್ಮತ್ತವಾಗಿ ಮಾಡುವುದಿಲ್ಲ. ವೆಂಕಟಸುಬ್ಬಯ್ಯನಿಗೂ ಹಾಗೇ ಆಯಿತು. ಅವನ ಜೀವನ ನಿತ್ಯಮೆರವಣಿಗೆಯಾಯಿತು. ಆ ಅಟ್ಟಹಾಸದಲ್ಲಿ ಆತನಿಗೆ, ತಾನಿನ್ನೂ ಸಾಧಕನೆಂದು, ಗುರು ಹೇಳಿದ ಮಾತುಗಳೂ ಮರೆತುಹೋದವು. ಸಂಗೀತ ತಾನು ಕರೆದಾಗ ಬರುವ ದಾಸಿ ಎಂಬ ರೀತಿಯಲ್ಲಿ ವರ್ತಿಸತೊಡಗಿದ. ಅನಂತಯ್ಯ ಸೋದರಳಿಯನನ್ನು ಒಂದೆರಡು ಬಾರಿ ಎಚ್ಚರಿಸಲು ಹೋಗಿ ವಿಫಲರಾದರು. ಹಾಗೇ ನಡೆದಿದ್ದರೆ ವೆಂಕಟಸುಬ್ಬಯ್ಯ, ಯಾವ ಕೊನೆ ಮುಟ್ಟುತ್ತಿದ್ದನೋ. ಆದರೆ ಆತನ ಕಣ್ಣು ತೆರೆಯುವ ಘಟನೆಯೊಂದು ನಡೆಯಿತು."

"ಉಳಿಯ ಪೆಟ್ಟು ಬೀಳದೆ ಕಲ್ಲು ವಿಗ್ರಹವಾಗುವುದಿಲ್ಲ ಎನ್ನುತ್ತಾರಲ್ಲಾ ಆ ಮಾತು ಸತ್ಯ. ವೆಂಕಟಸುಬ್ಬಯ್ಯನಿಗೂ ಆಗ, ಕಲ್ಲನ್ನು ವಿಗ್ರಹ ಮಾಡುವಂತಹ ಪೆಟ್ಟು ಬಿದ್ದಿತು."

"ರಾಜಾನುಗ್ರಹದಿಂದ ಕೀರ್ತಿಯ ಶಿಖರದಲ್ಲಿ ಕುಳಿತ ವೆಂಕಟಸುಬ್ಬಯ್ಯ ರಾಜಠೀವಿಯಿಂದಲೇ ವರ್ತಿಸುತ್ತಿದ್ದ. ಆತನ ಹಾಡು ಕೇಳಬೇಕೆಂದರೆ, ಆತ ಕೇಳಿದಷ್ಟು ಹಣ ಸುರಿಯಬೇಕು; ಹೇಳಿದಾಗ ಕೇಳಬೇಕು. ಹಾಗೆ ಹಾಡುವಾಗಲೂ ಅನುಗ್ರಹವೆಂಬ ರೀತಿಯಲ್ಲಿ ಹಾಡುವನು."

"ಆತ ಎಲ್ಲಾದರೂ ಕಛೇರಿಗೆ ಹೊರಟರೆ, ಆತನ ಮುಂದೆ, ಪಾಳೆಯಗಾರರು ಮರ್ಯಾದೆಯೆಂದು ಕೊಟ್ಟ ಹಗಲುದೀವಟಿಗೆಯವನು, ಬೆಳ್ಳಿಯ ಕಟ್ಟಿಗೆಯವನು ಮುಂದೆ ಹೊರಡುವರು. ಅವರ ಹಿಂಬದಿಯಲ್ಲಿ ಜರತಾರಿಯ ವಸ್ತ್ರದ ಗೌಸು ಹಾಕಿದ ತಂಬೂರಿಯನ್ನು ಸಣ್ಣ ಬೆಳ್ಳಿಯ ಪಾಲಕಿಯಲ್ಲಿ ಹೊತ್ತವರು, ವೀಣೆಯದ ಪೆಟ್ಟಿಗೆ ಹೊತ್ತವನು, ಬೆಳ್ಳಿ ಬಂಗಾರದ ನಕಾಸೆಕೆಲಸ ಮಾಡಿದ ದಂತದ ಹಿಡಿಯ ಅವರ ಖಾಸಾಕೋಲು ಹಿಡಿದವರು, ಸುತ್ತಲೂ ನಾಲ್ಕಾರುಜನ 'ಮರಿ' ಸಂಗೀತಗಾರರು–ಇವರ ನಡುವೆ ಜರತಾರಿಯ ಪಂಚೆ, ತೆಳುವಾದ ರೇಶಿಮೆಯ ಬಗಲುಗೆಸೆ ಅಂಗಿ ತೊಟ್ಟು, ಅದರಮೇಲೆ ಜರತಾರಿಯ ಶಾಲು ಹೊದೆದು,

ವೀಳೆಯದವನು ಮಡಿಸಿ ಕೊಡುವ ಕರ್ಪೂರವೀಳೆಯವನ್ನು ಮೆಲ್ಲುತ್ತಾ, ಮಂದಗಮನದಿಂದ ನಡೆವ ವೆಂಕಟಸುಬ್ಬಯ್ಯ. ಊರ ಜನ ಇಬ್ಬದಿಯಲ್ಲೂ ನೆರೆದು ನೋಡಬೇಕು ಈ ವೈಭವವನ್ನು – ಹೀಗಿತ್ತು."

"ಹೀಗಿರುವಾಗ ಚಿತ್ರದುರ್ಗಕ್ಕೆ ಯಾವುದೋ ಊರಿನ ಸ್ವಾಮಿಗಳೊಬ್ಬರು ಬಂದರಂತೆ, ಸ್ವಾಮಿಗಳೆಂದರೆ ಆನೆಯ ಮೇಲಿನ ಅಂಬಾರಿಯಲ್ಲೋ, ಬೆಳ್ಳಿಯ ಪಾಲಕಿಯಲ್ಲೋ ಬರುವ ಮಠಾಧಿಪತಿಗಳಲ್ಲ. ಯಾವ ಆಡಂಬರವೂ ಇಲ್ಲದ ಬಿಡಿಸನ್ಯಾಸಿಗಳು. ಪೂಜೆಯ ಪೆಟ್ಟಿಗೆ, ಅದನ್ನು ಹೊತ್ತ ಒಬ್ಬ ಶಿಷ್ಯ – ಅಷ್ಟೇ ಸ್ವಾಮಿಗಳ ಪರಿವಾರ. ಈ ಸ್ವಾಮಿಗಳು ಸದ್ದುಗದ್ದಲವಿಲ್ಲದ ಬಂದು, ಊರಿನ ಬ್ರಾಹ್ಮಣಮುಖ್ಯಸ್ಥರ ಮನೆಯಲ್ಲಿ ಬಿಡಾರಮಾಡಿದರು, ಸ್ವಾಮಿಗಳು ತಾಂಡವೇಶ್ವರನ ಉಪಾಸಕರು. ಪ್ರತಿದಿನ ಸಂಜೆಯೂ ಅವರ ಪೂಜೆಯ ವೇಳೆಗೆ ಊರಿನ ಹತ್ತಾರು ಜನ ಸೇರಿ, ಸ್ವಾಮಿಗಳ ಪ್ರವಚನ ಕೇಳಿ, ತೀರ್ಥಪ್ರಸಾದ ಪಡೆದು ಹೋಗುವವರು. ಆ ಹೊತ್ತಿನಲ್ಲಿ ಯಾರಾದರೂ ಭಾರತವನ್ನೋ, ರಾಮಾಯಣವನ್ನೋ ಓದುವರು; ಮತ್ತಾರೋ ಒಂದೆರಡು ಹಾಡು ಹೇಳುವರು. ಸ್ವಾಮಿಗಳಿಗೆ ಸಂಗೀತವೆಂದರೆ ತುಂಬಾ ಪ್ರೀತಿ. 'ನನ್ನ ಶಿವ ಸಂಗೀತಪ್ರಿಯ. ಸಂಗೀತಸೇವೆಯಿಂದ ಸ್ವಾಮಿಗೆ ತೃಪ್ತಿ ಯಾಗುವಷ್ಟು, ಬೇರೆ ಇನ್ನಾವುದರಿಂದಲೂ ಆಗದು' ಎನ್ನುವರು. ಅವರು ದುರ್ಗದಲ್ಲಿ ನಾಲ್ಕಾರು ದಿನ ನಿಂತಮೇಲೆ ವೆಂಕಟಸುಬ್ಬಯ್ಯನ ಕೀರ್ತಿ ಅವರ ಕಿವಿಗೂ ಬಿತ್ತು. 'ಒಂದು ದಿನ ಸ್ವಾಮಿಯ ಸನ್ನಿಧಿಯಲ್ಲಿ ಅವರ ಸೇವೆಯಾಗಬಾರದೇಕೆ ?' ಎಂದರು ಸ್ವಾಮಿಗಳು. ಹತ್ತಿರದಲ್ಲಿದ್ದವರು ಸ್ವಾಮಿಗಳ ಬಯಕೆಯನ್ನು ವೆಂಕಟಸುಬ್ಬಯ್ಯನಿಗೆ ಮುಟ್ಟಿಸಿದರು."

"ಆಗಬಹುದು. ಅದಕ್ಕೇನು ನೂರು ವರಹ ಕೊಟ್ಟರೆ ಖಂಡಿತವಾಗಿಯೂ ಬಂದು ಹಾಡುತ್ತೇನೆ. ಹಾಗಿಲ್ಲವಾದರೆ, ನಾನು ಹಾಡುವಲ್ಲಿಗೆ ಬಂದು ಸ್ವಾಮಿಗಳು ಕೇಳಬಹುದು" ಎಂದು ಉತ್ತರ ಕಳಿಸಿದ ವೆಂಟಸುಬ್ಬಯ್ಯ. ಆತನ ಉತ್ತರವನ್ನು ಸ್ವಾಮಿಗಳಿಗೆ ಜನರು ಹೆದರಿಕೊಂಡೇ ತಿಳಿಸಿದರು.

"ಮನುಷ್ಯನಿಗೆ ಬಹಳ ಗರ್ವ ಬಂದಿದೆ. ತಾನೊಬ್ಬನೇ ವರಹದ ಮುಖ ಕಂಡ ಹಾಗೆ ಆಡುತ್ತಾನೆ" ಎಂದು ಹೇಳಿದರು. ಆ ಮಾತು ಕೇಳಿದ ಸ್ವಾಮಿಗಳು ನಕ್ಕು–

"ವೆಂಕಟಸುಬ್ಬಯ್ಯನೋರು ದೊಡ್ಡ ಸಂಗೀತಗಾರರು; ಆಸ್ಥಾನ ವಿದ್ವಾಂಸರು, ಅವರ ವಿದ್ಯೆಗೆ ಆ ಹಣ ಬೆಲೆಯಲ್ಲ; ಕೋಟಿ ವರಹ ಕೊಟ್ಟರೂ ಕಡಮೆಯೇ. ಆದರೆ ಏನು ಮಾಡುವುದು ? ನನ್ನ ದೇವರು ನನ್ನ ಹಾಗೇ ಬಡವ; ಮಸಣದಲ್ಲಿ ಬೆತ್ತಲೆ ಕುಣಿವ ಬೈರಾಗಿ. ಅಷ್ಟು ಹಣ ಎಲ್ಲಿಂದ ತಂದಾನು. ಆದರೂ ಆತನಿಗೆ ವೆಂಕಟಸುಬ್ಬಯ್ಯನವರ ಸಂಗೀತ ಕೇಳಬೇಕೆಂಬ ಚಪಲ. ಆ ಬಯಕೆಯನ್ನು ನನ್ನ ಬಾಯಲ್ಲಿ ಆಡಿಸಿದ. ಅದಕ್ಕೇ ಹೀಗಾಯಿತು. ಆತನ ಚಿತ್ತವಿದ್ದಹಾಗಾಗಲಿ" ಎಂದು ಬಿಟ್ಟರು.



"ಈ ಘಟನೆ ನಡೆದು ಎರಡು ಮೂರು ದಿನಗಳಲ್ಲೇ ಪಟ್ಟಣಶೆಟ್ಟರ ಮನೆಯಲ್ಲಿ ವೆಂಕಟಸುಬ್ಬಯ್ಯನ ಸಂಗೀತ ಕಛೇರಿ ಏರ್ಪಾಡಾಯಿತು. ಆ ವಿಚಾರ ಸ್ವಾಮಿಗಳಿಗೂ ತಿಳಿಯಿತು. ತಮ್ಮ ಶಿಷ್ಯನನ್ನು ಕರೆದು –"

"ಆ ದಿನ ವೆಂಕಟಸುಬ್ಬಯ್ಯನೋರ ಸಂಗೀತಕ್ಕೆ ನೀನು ಮದ್ದಲೆ ಬಾರಿಸಬೇಕು" ಎಂದರು. ಆ ಮಾತು ಕೇಳಿ ಎಂದೂ ಮದ್ದಲೆಯನ್ನೇ ಮುಟ್ಟದ ಶಿಷ್ಯ ಗಾಬರಿಯಾಗಿ, "ಗುರುಗಳು ಕ್ಷಮಿಸಬೇಕು. ಆ ಯೋಗ್ಯತೆ ನನ್ನದಲ್ಲ" ಎಂದ, ಸ್ವಾಮಿಗಳ ಕಾಲಿಗೆ ಅಡ್ಡಬಿದ್ದು. "ನೀನೇನೂ ಹೆದರಬೇಡ. ನೀನೇ ಬಾರಿಸಬೇಕೆಂದು ಸ್ವಾಮಿಯ ಅಪ್ಪಣೆಯಾಗಿದೆ. ಸ್ವಾಮಿಯ ಮೇಲೆ ಭಾರಹಾಕಿ ಹೋಗು" ಎಂದು ಹೇಳಿ ಅವನ ಹಣೆಗೆ ತಾವೇ ಕೈಯಾರ ಪ್ರಸಾದದ ವಿಭೂತಿಯಿಟ್ಟು "ಒಂದು ವೇಳೆ ಆತ – ಹುಡುಗ, ನೀನೇನು ಬಾರಿಸೀಯೆ– ಅಂದರೆ – ಅವಕಾಶ ಕೊಟ್ಟು ನೋಡಿ ಎನ್ನು" ಎಂದು ಹೇಳಿ ಕಳುಹಿಸಿದರು. ಸ್ವಾಮಿಗಳು ಅವನ ಹಣೆಗಿಟ್ಟ ವಿಭೂತಿ, ಅವನ ಎದೆಯಲ್ಲಿ ಧೈರ್ಯ ತುಂಬಿತು. ಶಿಷ್ಯ "ತಮ್ಮ ಚಿತ್ತವಿದ್ದಂತೆ ಆಗಲಿ" ಎಂದು ಸ್ವಾಮಿಗಳಿಗೆ ನಮಸ್ಕಾರ ಮಾಡಿದ.

"ಆ ದಿನ ಸಂಜೆ ಪಟ್ಟಣಶೆಟ್ಟರ ಮನೆಯಲ್ಲಿ ವೆಂಕಟಸುಬ್ಬಯ್ಯನ ಕಛೇರಿ. ಎತ್ತರವಾದ ವೇದಿಕೆಯ ಮೇಲೆ ರಾಜಠೀವಿಯಿಂದ ವೆಂಕಟಸುಬ್ಬಯ್ಯ ಮಂಡಿಸಿದ್ದಾನೆ. ಶ್ರೀಮಂತೋಚಿತವಾಗಿ ಅಲಂಕರಿಸಿದ ವಿಶಾಲವಾದ ಹಜಾರದಲ್ಲಿ ಊರಿನ ಮುಖ್ಯರು, ಸಂಗೀತಾಭಿಮಾನಿಗಳು ಹಾಡು ಕೇಳಲು ಮೈಯೆಲ್ಲಾ ಕಿವಿಯಾಗಿ ನೆರೆದಿದ್ದಾರೆ. ತಂಬೂರಿ ಶ್ರುತಿಯಾಗಿ ಮಿಡಿಯುತ್ತಿದೆ. ಮದ್ದಲೆಯವನೂ ಶ್ರುತಿ ಸರಿಮಾಡಿಕೊಂಡು 'ಸಿದ್ಧವಾಗಿದ್ದೇನೆ' ಎಂದ. ಇನ್ನೇನು ಸಂಗೀತ ಆರಂಭವಾಗಬೇಕು, ಆ ಹೊತ್ತಿಗೆ ಸರಿಯಾಗಿ ಸ್ವಾಮಿಗಳ ಶಿಷ್ಯ ಎದ್ದುನಿಂತು–"

"ದೊಡ್ಡವರು ಅಪಚಾರವೆಂದು ಭಾವಿಸಬಾರದು. ಅಪ್ಪಣೆಯಾದರೆ ಒಂದು ವಿಷಯ ಅರಿಕೆ ಮಾಡಿಕೊಳ್ಳುವುದಿದೆ" ಎಂದ.

"ಸಭೆಯಲ್ಲಿ ಎದ್ದುನಿಂತ ಹುಡುಗನನ್ನು ಮೊದಲ ಬಾರಿಗೆ ನೋಡಿದ ವೆಂಕಟಸುಬ್ಬಯ್ಯನಿಗೆ ಅವನು ಏನು ಹೇಳುತ್ತಾನೆಂದು ತಿಳಿಯಲಿಲ್ಲ. 'ಅದೇನು ಹೇಳು' ಎಂದ.

"ತಮ್ಮ ಹಾಡುಗಾರಿಕೆಗೆ ಮದ್ದಲೆ ಬಾರಿಸಲು ಅಪ್ಪಣೆಯಾಗಬೇಕು."

–ಹುಡುಗ ಹೇಳಿದ. ಹುಡುಗನ ಮಾತು ಕೇಳಿ ಸಭೆ ಆಶ್ಚರ್ಯದಿಂದ ಅವಾಕ್ಕಾಯಿತು. ವೆಂಕಟಸುಬ್ಬಯ್ಯ ಹುಡುಗನನ್ನು ದಿಟ್ಟಿಸಿ ನೋಡಿದ. ಹತ್ತು ವರುಷದ ಸುಟಿಯಾದ ಹುಡುಗ, ನೋಡಲು ಲಕ್ಷಣವಾಗಿದ್ದಾನೆ. ಅವನ ಮಾತು, ಧೈರ್ಯವನ್ನು ಕಂಡು ಮೆಚ್ಚುಗೆಯಾದರೂ, ಅವನ ಪ್ರಶ್ನೆ ಕೇಳಿ ವೆಂಕಟಸುಬ್ಬಯ್ಯನ ಮನಸ್ಸು ಮುಳ್ಳಾಯಿತು.

"ಎಲ್ಲಾದರೂ ಆಟ ಆಡಿಕೋ ಹೋಗು. ಚೋಟುದ್ದ ಇದ್ದೀಯ. ನಿನಗೇಕೆ ಮದ್ದಲೆ ಬಾರಿಸೋ ಅಧಿಕಪ್ರಸಂಗ" ಎಂದು ವೆಂಕಟಸುಬ್ಬಯ್ಯ.

"ಹಿರಿಯರು ಕ್ಷಮಿಸಬೇಕು. ವಯಸ್ಸು ನೋಡಿ ನನ್ನ ಮಾತು ತಳ್ಳಿ ಹಾಕಬಾರದು. ವಿದ್ಯೆ ಇದ್ದರೆ ಒಪ್ಪಿಕೊಳ್ಳಿ. ಇಲ್ಲವಾದರೆ ಸಭೆ ಹೇಳಿದ ಶಿಕ್ಷೆ ನಾನು ಅನುಭವಿಸುತ್ತೇನೆ."

"ಅಳುಕದೆ, ಬಳುಕದೆ, ಸೆಟೆದು ನಿಂತು ಹೇಳಿದ ಹುಡುಗ. ಸಭಿಕರಿಗೆಲ್ಲ ಇದೇನೋ ಒಂದು ಚೋದ್ಯವೆನಿಸಿತು. ಅದಕ್ಕಿಂತ ಹೆಚ್ಚಿನದೇನೂ ಅವರಿಗೆ ಕಾಣಲಿಲ್ಲ. ವೆಂಕಟಸುಬ್ಬಯ್ಯನ ಹೃದಯ ಮಾತ್ರ ಏಕೋ ಹುಡುಗನ ಮಾತು ಕೇಳಿ ಅಧೀರವಾಯಿತು."

"ವೆಂಕಟಸುಬ್ಬಯ್ಯನವರೇ ಹೇಳಲಿ, ನಾನು ಸರಿಯಾಗಿ ಬಾರಿಸದಿದ್ದರೆ ನನಗೆ ಅವಮಾನ. ಸರಿಯಾಗಿ ಬಾರಿಸಿದರೆ ಸಭೆಗೆ ಸಂತೋಷ, ಅವಕಾಶ ಕೊಡದಿದ್ದರೆ ನನ್ನ ಮಾತು, ನಡತೆ ವೃಥಾ ನಗೆಗೀಡಾಗುತ್ತದೆ. ಆದ್ದರಿಂದ ಮತ್ತೊಮ್ಮೆ ಬೇಡುತ್ತೇನೆ."

"ಹುಡುಗನ ಮಾತು ಕೇಳಿ ವೆಂಕಟಸುಬ್ಬಯ್ಯ ದಿಗ್ಭ್ರಾಂತನಾದ. ವಿನಯದ ಮಾತಾದರೂ, ಅದರಲ್ಲಿ ಸವಾಲಿನ ಸೆಡಕಿದೆ. ಬೇಡ ಎಂದರೆ ವೆಂಕಟಸುಬ್ಬಯ್ಯ ಹುಡುಗನಿಗೆ ಹೆದರಿದ ಎನ್ನಲಾರರೇ ಜನ ? ಎದುರಿಗಲ್ಲವಾದರೆ ಹೋಗಲಿ, ಹಿಂದಾದರೂ ಆಡಿಕೊಳ್ಳಲಾರರೇ? ಹುಡುಗ ಏನು ಬಾರಿಸಿಯಾನು? ಅಗದವರು ಯಾರೋ ಚಿತಾವಣೆ ಮಾಡಿ ಕಳಿಸಿದಾರೆ. ಒಂದು ನಿಮಿಷ ಬಾರಿಸಲು ಬಿಟ್ಟು, ಎದ್ದು ಹೋಗು ಎಂದರಾಯಿತು ಎಂದುಕೊಂಡು, 'ಆಗಲಿ, ಬಾರಿಸಲು ಬಾ' ಎಂದ ವೆಂಕಟಸುಬ್ಬಯ್ಯ."



"ಹುಡುಗ ಧೀರನಡೆಯಿಂದ ವೇದಿಕೆಯನ್ನು ಹತ್ತಿ, ಮದ್ದಳೆಯವನಿಂದ ಮದ್ದಲೆ ತೆಗೆದುಕೊಂಡು, ಒಂದು ಛಾಪು ಹಾಕಿ 'ನಡೆಯಲಿ' ಎಂದ. ವೆಂಕಟಸುಬ್ಬಯ್ಯ ರಾಗವನ್ನೆತ್ತಿಕೊಂಡು, ಆಲಾಪನೆ ಮುಗಿಸಿ, ತಾಳ ಸೂಚನೆ ಮಾಡಿ ಹಾಡು ಎತ್ತಿಕೊಂಡ. ಹುಡುಗ ಗುರುಸ್ಮರಣೆ ಮಾಡಿ ಮದ್ದಲೆ ಬಾರಿಸಲು ಆರಂಭಿಸಿದ. ಅದರ ನಡೆಗೆ ವೆಂಕಟಸುಬ್ಬಯ್ಯ ತಬ್ಬಿಬ್ಬಾದ. ತಾಳವೇನೋ ಅವನು ಹೇಳಿದುದೇ. ಆದರೆ ಅದರ ಲೆಕ್ಕಾಚಾರವೇ ಅವನಿಗೆ ಅರ್ಥವಾಗುತ್ತಿರಲಿಲ್ಲ. ಒಂದು ಆವರ್ತ ಹಾಡಿ ನಿಲುಗಡೆಗೆ ಬರುವಾಗ, ಅದು ತಾಳಕ್ಕೆ ಹೊಂದಿಕೊಳ್ಳುವುದಿಲ್ಲ, ಕೊಂಚ ಹಿಂಚೋಮುಂಚೋ ಆಗುತ್ತದೆ. ಒಂದು ಸಲ ಮುಗ್ಗರಿಸಿದಾಗ ಹುಡುಗ ಅವರ ಮುಖ ನೋಡಿ ವಿಚಿತ್ರವಾಗಿ ನಕ್ಕ. ಎರಡನೇ ಬಾರಿಯೂ ಅದೇ ಹೆಜ್ಜೆ ಜಾರು; ಮೂರನೆಯ ಬಾರಿಯೂ ಹಾಗೇ. ತಾಳದ ಲೆಕ್ಕವೇ ಸಿಕ್ಕದ ತಾಪದಲ್ಲಿ ವೆಂಕಟಸುಬ್ಬಯ್ಯನ ಮೈ ಬೆವರಿತು. ಆ ಸಿಕ್ಕದ ತಾಳದ ಗೊಂದಲದಲ್ಲಿ ಶ್ರುತಿಯೂ ತಪ್ಪ ತೊಡಗಿತು. ತಾಳದ ಕಡೆ ನೋಡಿದರೆ ಶ್ರುತಿ, ಶ್ರುತಿಯ ಕಡೆ ನೋಡಿದರೆ ತಾಳ – ಒಂದು ಸಿಕ್ಕರೆ ಮತ್ತೊಂದು ತಪ್ಪುತ್ತದೆ, ಹೀಗಾಗಿ ವೆಂಕಟಸುಬ್ಬಯ್ಯನ ಸಂಗೀತ, ಅಭ್ಯಾಸವಿಲ್ಲದವರು, ಕಟ್ಟಿದ್ದ ತಂತಿಯ ಮೇಲೆ ನಡೆದ ಹಾಗಾಗುತ್ತಿದೆ."

"ತಾಳದ ಜೊತೆಗೆ ಶ್ರುತಿಯೂ ತಪ್ಪುತ್ತಿದೆಯಲ್ಲಾ, ಸ್ವಾಮಿ. ಸಂಗೀತ ತಿಳಿದವರು ಹೀಗೆ ಹಾಡಬಹುದೇ ?" ಎಂದ ಹುಡುಗ. ಆ ಹೊತ್ತಿನಲ್ಲೇ ಅವನ ಮಾತು ಕೇಳಿ ಸಭೆಯಲ್ಲಿ ಯಾರೋ ನಕ್ಕರು. ವೆಂಕಟಸುಬ್ಬಯ್ಯ ಪಾತಾಳಕ್ಕಿಳಿದುಹೋದ. ಅಪಮಾನದ ಕಾವಿಗೆ ಅವನ ಮುಖ ಬಾಡಿ ಹೋಯಿತು.

"ಇದಕ್ಕೇನೇ ತಾವು ನನಗೆ ಅನುಮತಿ ಕೊಡಲು ಹಿಂದೆ ಮುಂದೆ ನೋಡಿದ್ದು?'' ಹುಡುಗನ ಪ್ರಶ್ನೆ ಚಾವಟಿಯ ಏಟಿನಂತೆ ಬಿತ್ತು ವೆಂಕಟಸುಬ್ಬಯ್ಯನೋರ ಮಿದುಳ ಮೇಲೆ; ಚಾವಟಿಯ ಏಟು ತಿಂದ ಜಾತಿಕುದುರೆಯಂತೆ ಒದ್ದಾಡಿದ. ಯಾರೋ ಹುಡುಗನ ಪ್ರಶ್ನೆಗೆ ಬೆಂಬಲ ಕೊಟ್ಟಂತೆ ಚಪ್ಪಾಳೆ ತಟ್ಟಿದರು. ಇದ್ದಕ್ಕಿದ್ದಹಾಗೇ ಸಭೆಯಲ್ಲೆಲ್ಲಾ ಅಪಮಾನಗೊಳಿಸುವ ಮಾತು, ಕುಹಕ ನಗೆ, ಅಣಕದ ಚಪ್ಪಾಳೆಯಸದ್ದಿನಿಂದ ತುಂಬಿದಂತಾಯಿತು. ನೂರಾರು ಕಣ್ಣುಗಳು ಅವನ ಕೀರ್ತಿಯ ಕೊಲೆಯಾಗುವುದನ್ನೇ ನೋಡುತ್ತಾ ನಿಂತಿದ್ದಂತೆ ಭಾಸವಾಯಿತು. ಘಾಟಿನ ಹೊಗೆಯಂತೆ ಅಪಮಾನದ ಭಾವನೆ ಅವನನ್ನು ಅವರಿಸಿತು.

“ವೆಂಕಟಸುಬ್ಬಯ್ಯ ಅಪಮಾನದ ಉರಿ ಹೊತ್ತಿದ ಸಭೆಯಲ್ಲಿ ಕುಳ್ಳಿರಲಾರದೆ ತಟಕ್ಕನೆ ಎದ್ದು ಸಭೆಯಿಂದ ಹೊರಟುಹೋದ. ಸಭೆಯಲ್ಲಿ ಯಾರೋ ನಕ್ಕಸದ್ದು, ಅವನನ್ನು, ಜೀವವನ್ನು ಹಿಂಬಾಲಿಸುವ ದೇಹದ ಪಾಪದಂತೆ ಹಿಂಬಾಲಿಸಿತು.”

“ವೀಳೆಯದವನು, ದೀವಟಿಗೆಯವನು – ಯಾರೂ ಜೊತೆಗೆ ಬರಲು ಬಿಡದೆ, ಎಲ್ಲರನ್ನೂ ಗದರಿಕೊಂಡು ವೇಗವಾಗಿ ನಡೆದ ವೆಂಕಟಸುಬ್ಬಯ್ಯ. ಅಂದು ಆತನ ಗರ್ವಗಿರಿಗೆ ಸಿಡಿಲಾಘಾತವಾಗಿತ್ತು. ಒಳಗೊಳಗೆ ಉಸಿರು ಕಟ್ಟಿಸುವಂಥ ಕಾವು ಗಳಿಗೆಗಳಿಗೆಗೂ ಹೆಚ್ಚಾಗಿ ಹರಡುತ್ತಿತ್ತು. ಮುಳ್ಳಿನ ಮೇಲೆ ಮಿದುಳನ್ನು ಎಳೆದಂತಿತ್ತು. ನಗುವಿನ ಕೀಚುಧ್ವನಿ ತಂತಿಯ ಚಾವಟಿಯಂತೆ ಹೋದತ್ತ ಬಂದತ್ತ ಜಡಿಯುತ್ತಿತ್ತು. ಸುತ್ತಲ ಪ್ರಪಂಚಕ್ಕೆ ಕುರುಡಾಗಿ ನಡೆದ ವೆಂಕಟಸುಬ್ಬಯ್ಯ – ಎತ್ತ ಹೋಗುವೆನೆಂಬ ಅರಿವೂ ಇಲ್ಲದೆ. ಪೇಟೆಯಲ್ಲಿ ಓಡಾಡುವ ಜನ ವೆಂಕಟಸುಬ್ಬಯ್ಯನವರು ಹೀಗೇಕೆ, ಎಲ್ಲಿಗೆ ಹೋಗುತ್ತಿದ್ದಾರೆ?” ಎಂದು ವಿಸ್ಮಯದಿಂದ ನೋಡುತ್ತಿದ್ದರು.

“ಇಲ್ಲಿಗೆ ನಿನ್ನ ಇತಿಹಾಸ ಮುಗಿಯಿತು. ಸಣ್ಣ ಹುಡುಗನೊಬ್ಬನಿಗೆ ಸೋತು, ಇನ್ನು ಸಂಗೀತಗಾರನೆಂದು ಊರಿನಲ್ಲಿ ಮುಖ ತೋರಿಸಲಿಕ್ಕುಂಟೆ ? ನನಗೆ ಸರಿಯೇ ಇಲ್ಲವೆಂದು ಹೆಮ್ಮೆಯಿಂದ ಮೆರೆಯುತ್ತಿದ್ದೆಯಲ್ಲಾ ? ಇನ್ನೆಲ್ಲಿ ನಿನ್ನ ಹೆಮ್ಮೆ ? ಎಂದು ಯಾರೋ ಆತನನ್ನು ಘಟ್ಟಿಸಿ ಘಟ್ಟಿಸಿ ಕೇಳಿದಂತಾಗುತ್ತಿತ್ತು. ನಿನ್ನ ಸಮಾನ ಇಲ್ಲವೆನ್ನುತ್ತಿದ್ದೆಯಲ್ಲಾ ಸಂಗೀತದಲ್ಲಿ. ಇಷ್ಟೇನೇ ನಿನ್ನ ವಿದ್ಯೆಯ ಆಳ ?” ಆ ಶಿಷ್ಯನ ಶಿಷ್ಯನಾಗುವ ಯೋಗ್ಯತೆ ಇಲ್ಲದವನು ಗುರುವೆಂದು ಅಹಂಕಾರಪಡುತ್ತಿದ್ದೆಯಲ್ಲಾ ? ಈಗ ಏನು ಮಾಡುತ್ತೀಯ ? ಅಪಮಾನದ ಉರಿಯ ಹೊರೆ ಹೊತ್ತು, ಶಿರೋಮಣಿಯನ್ನು ಕಳೆದುಕೊಂಡ ಅಶ್ವತ್ಥಾಮನಂತೆ, ದಿಕ್ಕಿಲ್ಲದೆ ಕಾಡುಮೇಡು ಅಲೆಯುತ್ತೀಯ ? ಹೀಗೆ ಹತ್ತು ಸಾವಿರ ಪ್ರಶ್ನೆ ಆತನ ಮಿದುಳಿನಲ್ಲಿ, ಸುಳಿಯಲ್ಲಿ ಸಿಕ್ಕ ಎಲೆಗಳಂತೆ ಸುತ್ತುತ್ತಿದ್ದವು.

“ಈ ಚಿಂತೆಯಲ್ಲಿ ಕುದಿಯುತ್ತಲೆ, ಜನರ ಗಲಿಬಿಲಿಯಿಂದ ದೂರವಾಗಿ ಸಂತೆಯ ಬಾಗಿಲನ್ನು ದಾಟಿ, ಊರ ಹೊರಗಿನ ಲಿಂಗಣ್ಣನ ತೋಪಿನ ಬಳಿ ಬಂದಿದ್ದನು. ನಿರ್ಜನ ನಿಶ್ಶಬ್ದವಾದ ತೋಪಿನ ತಂಪುಗತ್ತಲೆಯಲ್ಲಿ ಹುಲ್ಲಿನ ಮೇಲೆ ಮಲಗಿಕೊಂಡ, ಹುಲ್ಲೂ ಬಿಸಿಯಾದಂತಿತ್ತು ಎದೆಯ ಬೇಗುದಿಯಲ್ಲಿ, ಗಾಳಿಯೂ ನಿಟ್ಟುಸಿರಿನಂತೆ ಭಾರವಾಗಿ ಸುಡುತ್ತಿತ್ತು– ‘ಮುಂದೇನು ದಾರಿ?’ ಎಂಬ ಪ್ರಶ್ನೆ ಭೂತಾಕಾರವಾಗಿ ಕಣ್ಣುಮುಂದೆ ನಿಂತಿತ್ತು.”



“ಇದ್ದಕ್ಕಿದ್ದಹಾಗೇ, ಆ ಹೊತ್ತಿನಲ್ಲಿ ವೆಂಕಟಸುಬ್ಬಯ್ಯನಿಗೆ ತಿರುಮಲಯ್ಯನ ಸಾವು ನೆನಪಾಯಿತು. ಮಲಗಿದ್ದವನು ಹಾವು ತುಳಿದವನಂತೆ ಸಿಡಿದು ಎದ್ದು ಕುಳಿತ. ‘ಆ ಪಾಪದ ಫಲವೇ ಇದು? ಅಂದು ಗುರುವಿನ ಮರ್ಯಾದೆಯ ಭಂಗಮಾಡಿದುದರ ಪರಿಣಾಮವೇ ಇಂದಾದ ಈ ಮುಖ ಭಂಗ? ನಿಜ – ಅದೇ ಇದು’ ಎನಿಸಿತು, ಆ ಯೋಚನೆ ಬೆಳೆದಾಗ, ಅಂದು ಶಿಷ್ಯನಿಂದ ಮುಖಭಂಗವಾದ ತಿರುಮಲಯ್ಯ ಮತ್ತೆ ಯಾರಿಗೂ ಬದುಕಿ ಮುಖ ತೋರಿಸಿರಲಿಲ್ಲ. ಮಾನವಂತನಾದವನಿಗೆ ಬೇರೇನು ದಾರಿ? ಅಪಮಾನದಿಂದ ಕಲಂಕಿತವಾದ ಮುಖ ಹೊತ್ತು ಜೀವಂತ ಬದುಕುವುದಕ್ಕಿಂತ ಒಳ್ಳೆಯ ಹೆಸರಾಗಿ ಬದುಕುವುದೇ ಮೇಲಲ್ಲವೇ? ‘ಅದೇ ಸರಿ’ ಎಂದಿತು, ಸೋಲಿಗೆ ಹೇಸಿದ ಮನಸ್ಸು, ಆಗ ಕಣ್ಣಿನಿಂದ ಧಾರಾಕಾರವಾಗಿ ನೀರು ಹರಿಯಿತು. ತಿರುಮಲಯ್ಯನನ್ನು ನೆನಸಿಕೊಂಡು – ‘ನನ್ನನ್ನು ಕ್ಷಮಿಸಿ. ಅರಿಯದೆ ಮಹಾ ಅಪರಾಧ ಮಾಡಿದೆ, ಅಜ್ಜ’ ಎಂದು ಕತ್ತಲಿಗೆ ಕೈಮುಗಿದ. ತಾಯಿಯನ್ನೂ ಮಾವನನ್ನೂ ಎಲ್ಲರನ್ನೂ ನೆನಸಿಕೊಂಡ. ಗುರುಗಳನ್ನು ಜ್ಞಾಪಿಸಿಕೊಂಡು ‘ಗುರುಗಳೇ, ನನ್ನನ್ನು ಕ್ಷಮಿಸಿ. ನಿಮಗೆ ಹೆಸರು ತರುವ ಶಿಷ್ಯನಾಗಲಿಲ್ಲ. ಮುಂದಿನ ಜನ್ಮಕ್ಕಾದರೂ ಆ ಯೋಗ್ಯತೆ ಬರಲೆಂದು, ಇದ್ದಲ್ಲಿಂದಲೇ ಹರಸಿ’ ಎಂದ. ತಂದೆಗೂ ಕಂಬನಿಯ ಕೈಚಾಚಿ ಕ್ಷಮಾಭಿಕ್ಷೆ ಬೇಡಿದ. ಇದ್ದಕ್ಕಿದ್ದಂತೆಯೇ ತೋಪಿನ ಬಳಿಯ ಬಾವಿ ಅವನನ್ನು ಕೂಗಿ ಕರೆದಂತಾಯಿತು. ತಟಕ್ಕನೆ ತಾನು ಬಂದಿರುವುದೂ ತಿರುಮಲಯ್ಯ ತೇಲಿದ ಲಿಂಗಣ್ಣನ ವರತಿಯ ಬಳಿಯೇ ಎಂಬುದು ಅರಿವಾಯಿತು. ವಿಧಿಯ ವಿಕಟಾಟ್ಟಹಾಸವನ್ನು ಕಂಡು ಗಡಗಡ ನಡುಗಿದ, ವೆಂಕಟಸುಬ್ಬಯ್ಯ. ‘ಸರಿ, ಸರಿ, ಈ ಜಲಕುಂಡದಲ್ಲೇ ಪ್ರಾಯಶ್ಚಿತ್ತವಾಗಬೇಕು’ ಎಂದುಕೊಂಡು, ಮೆಟ್ಟಲು ಬಾವಿಯ ಕಡೆ ಹೆಜ್ಜೆ ಹಾಕಿದ – ಸಾವು ಸೆಳೆದವನಂತೆ. ಕತ್ತಲಿಗಿಂತಲೂ ಕಪ್ಪಾದ ಬಾವಿಯ ತಣ್ಣೀರು ಸಾವಿನ ಕಪ್ಪು ಕಣ್ಣಿನಂತೆ ಅವನನ್ನು ದಿಟ್ಟಿಸಿ ನೋಡಿತು.”

“ಇನ್ನೇನು ವೆಂಕಟಸುಬ್ಬಯ್ಯ ನೀರಿನಲ್ಲಿ ಹಾರಬೇಕು. ಅಷ್ಟರಲ್ಲಿ ಯಾರೋ ಹಿಂದಿನಿಂದ, ಆತನನ್ನು ಹಿಡಿದು ಎಳೆದರು. ಏನೋ ಎಂದು ಒಂದು ಗಳಿಗೆ ಗಾಬರಿಯಾಯಿತು. ಹಿಂದಿರುಗಿ ನೋಡಿದ. ಕತ್ತಲಿನಲ್ಲಿ ಯಾರೆಂಬುದು ಸ್ಪಷ್ಟವಾಗಿ ತಿಳಿಯದು. ಅಂತೂ ಯಾರೋ ಅವನ ಕೈ ಹಿಡಿದಿದ್ದರು.”

“ಬಿಡಿ ನನ್ನ ಕೈ; ಯಾರು ನೀವು ?”

– ಎಂದು ಕೇಳಿದ ವೆಂಕಟಸುಬ್ಬಯ್ಯ, ನಿರಾಶೆ, ವ್ಯಥೆ, ಅಸಹನೆಗಳು ಬೆರೆತ ಗಡುಸಾದ ಧ್ವನಿಯಲ್ಲಿ.

“ನನ್ನ ಪರಿಚಯ ನಿನಗಿಲ್ಲ. ನಿನ್ನನ್ನು ನಾನು ಬಲ್ಲೆ. ಹೀಗಾಗಬಹುದು, ನೀನು ಈ ಹೇಡಿ ಕೆಲಸಕ್ಕೆ ಮನಮಾಡಬಹುದು ಎಂದು ಊಹಿಸಿಯೇ ಹಿಂಬಾಲಿಸಿ ಬಂದೆ. ನನ್ನ ಊಹೆ ತಪ್ಪಾಗಲಿಲ್ಲ.”–ಅಪರಿಚಿತ ವ್ಯಕ್ತಿ ಕಟುವಾಗಿ ಹೇಳಿತು.

“ಇರಬಹುದು, ನನ್ನ ಪಾಡಿಗೆ ನನ್ನನ್ನು ಬಿಟ್ಟು ತಾವು ದಯಮಾಡಿಸಿ.”

“ನಾನು ಹೇಳುವ ನಾಲ್ಕು ಮಾತು ಕೇಳು. ಬಳಿಕ ನೀನು ಮಾಡುವುದೇ ಸರಿ ಎನಿಸಿದರೆ ಹಾಗೇ ಮಾಡು.”

“ಮೊದಲು ನೀವು ಯಾರೆಂದು ಹೇಳಿ.”

“ನಾನೊಬ್ಬ ಬಡಸಂನ್ಯಾಸಿ. ನಿನ್ನ ಸಂಗೀತ ಕೇಳಬೇಕೆಂದು ಹೇಳಿ ಕಳುಹಿಸಿದಾಗ ನೂರು ವರಹ ಕೊಡಬೇಕು ಎಂದು ನೀನು ಯಾರಿಗೆ ಹೇಳಿ ಕಳಿಸಿದೆಯೋ ಆತನೇ ನಾನು. ನಿನ್ನ ಕೀರ್ತಿಯನ್ನು ಬಲ್ಲೆ, ನಿನ್ನ ಗುರುವನ್ನೂ ನಾನು ಬಲ್ಲೆ. ಇಂದು ನಿನ್ನ ಗರ್ವ ಮುರಿದವನು ನನ್ನ ಶಿಷ್ಯ. ನಿನ್ನ ಕಣ್ಣು ತೆರೆಸಲೆಂದೇ ಹಾಗೆ ಮಾಡಿಸಿದೆ.”

“ನಿಮ್ಮ ಮಾತು ನಾನು ನಡೆಸಲಿಲ್ಲ. ಅದಕ್ಕಾಗಿ ಸೇಡುತೀರಿಸಿ ಕೊಂಡಿರಿ ಅಲ್ಲವೇ ? ನಿಮ್ಮ ಬಯಕೆ ಈಡೇರಿತಲ್ಲಾ – ಬೇಕಾದ ಹಾಗೆ ಸಂತೋಷಪಡಿ”– ವ್ಯಂಗ್ಯವಾಗಿ ಹೇಳಿದ ವೆಂಕಟಸುಬ್ಬಯ್ಯ.

“ಸೇಡು ತೀರಿಸಿಕೊಳ್ಳುವುದಷ್ಟೇ ನನ್ನ ಉದ್ದೇಶವಾಗಿದ್ದರೆ, ಇಷ್ಟುದೂರ ಬಂದು ಸಾಯಲು ಹೋಗುತ್ತಿದ್ದ ನಿನ್ನ ಕೈ ಹಿಡಿಯುತ್ತಿರಲಿಲ್ಲ. ಮಾಯೆ ಮುಸುಕಿದ ನಿನ್ನ ಕಣ್ಣು ಕಾಣುವುದು ಅದು ಸೇಡು ಎನ್ನುವಷ್ಟೇ ದೂರ. ಇನ್ನಷ್ಟು ದೂರ ಕಾಣುವುದೇ, ಯೋಚಿಸು ನೋಡೋಣ.”

“ಏನು ನೋಡಬೇಕು ?”

“ಅಜ್ಞಾನದ ಅಂಧಕಾರದಾಚೆ ಥಳಥಳಿಸುತ್ತಿರುವ ಜ್ಞಾನವನ್ನು! ಅಹಂಕಾರದ ಗರ್ಭದಲ್ಲಿ ಹುದುಗಿದ – ನಾಹಂ – ಬ್ರಹ್ಮ–ನನ್ನು. ದೇವರು ನಿನ್ನಲ್ಲಿ ಅದ್ಭುತಶಕ್ತಿ ಇಟ್ಟಿದ್ದಾನೆ. ಆದರೆ ಕೀರ್ತಿಲಾಭದಿಂದ ನಿನ್ನ ಕಣ್ಣು ಕುರುಡಾಗಿ, ನಾನು ಕಲಿಯುವುದು ಏನೂ ಇಲ್ಲ, ಸಕಲಕಲಾಪಂಡಿತ ಎಂಬ ಅಹಂಭಾವ ಬೆಳೆದು, ನೀನು ಹಾಳಾಗುತ್ತಿದ್ದೀಯೆ. ಯಾವುದು ದೈವೀ ಪ್ರಸಾದವಾಗಿ ಲಭಿಸಿತೋ ಅದನ್ನು ಕೀರ್ತಿ, ಧನಕ್ಕಾಗಿ ವೇಶ್ಯೆಯಂತೆ ವಿಕ್ರಯ ಮಾಡುತ್ತಿದ್ದೀಯ. ನಿನ್ನ ಬೆಳವಣಿಗೆಗೆ ಅಡ್ಡವಾದ ಅಹಂಭಾವವನ್ನು ಮುರಿಸಲೆಂದೇ ಇವತ್ತಿನ ಆಟ ಕಟ್ಟಬೇಕಾಯಿತು. ಇಂದು ನಿನ್ನನ್ನು ಸೋಲಿಸಿದುದು. ನನ್ನ ಶಿಷ್ಯನ ಪಾಂಡಿತ್ಯವಲ್ಲ....”

“ಮತ್ತಾವುದು ?”



“ನಿನ್ನ ಅಹಂಕಾರ! ಮನುಷ್ಯನಿಗೆ ಅವನ ಅಹಂಕಾರವೇ ಪರಮವೈರಿ. ಅಹಂಕಾರ ಭಂಗವಾದಾಗ, ಅದು ತನ್ನೊಂದಿಗೆ ನಿನ್ನನ್ನೂ ಮುರಿಯಲೆತ್ನಿಸುತ್ತದೆ. ಆಗ ಅದಕ್ಕೆ ಬಾಗದೆ, ತಾನಾಗಿ ಮುರಿದ ಅದನ್ನು ಪೂರಾ ಗೆದ್ದು ನಿಲ್ಲುವುದು ಪುರುಷಲಕ್ಷಣ. ಅಹಂಕಾರ ಒಂದು ಜಾಡ್ಯ, ಆತ್ಮನಾಶಿಯಾದರೋಗ. ಆ ರೋಗ ಹೋಯಿತೆಂದು ನಗದೆ, ಅಯ್ಯೋ ಅದು ಹೋಯಿತಲ್ಲಾ ಎಂದು ಅದಕ್ಕಾಗಿ ಜೀವ ಕೊಡುವುದು ಮೂರ್ಖತನವಲ್ಲವೆ ?”

“ಮಾನ ಹೋದಮೇಲೆ ಬದುಕಿ ಏನು ಸಾರ್ಥಕ ?”

“ಅದು ಮತ್ತೊಂದು ಬಗೆಯ ಮುರ್ಖತನ. ಇಂದು ಹೋದುದು ಮಾನವೇ?”

“ಮಾನವಲ್ಲದೆ ಮತ್ತೇನು ?”

“ಮಾನವಲ್ಲ, ಅಜ್ಞಾನ; ಅಜ್ಞಾನದ ಮೂರ್ತಸ್ವರೂಪವಾದ ಅಹಂಭಾವ. ಎಂದು ನೀನು ನೂರು ವರಹಕ್ಕೆ ಹಾಡುತ್ತೇನೆ, ಬಂಗಾರದ ಕಪ್ಪಕ್ಕೆ ಹಾಡುತ್ತೇನೆ, ಹೆಗಲುದೀವಟಿಗೆಗೆ ಹಾಡುತ್ತೇನೆ ಎಂದೆಯೋ; ಎಂದು ನೀನೇ ನಿನ್ನ ಬೆಲೆಯನ್ನು ಕಟ್ಟಿಕೊಂಡೆಯೋ, ಅಂದೇ ನಿನ್ನ ಮಾನ ಹೋಯಿತು; ಇಂದಲ್ಲ. ನಿನ್ನೊಳಗಿನ ಅಹಂಭಾವ, ಅಪಮಾನವೇ ಮಾನವೆಂಬ ಮಾಯೆಯನ್ನು ಕವಿಸಿತ್ತು, ಅಷ್ಟೆ. ಈಗ ಸೋಲಿನ ಅಘಾತದಿಂದ, ನಿನ್ನ ವಿಚಾರದ ಕಣ್ಣು ತೆರೆಯುವ ವೇಳೆಯಲ್ಲಿ, ಆ ಅಹಂಭಾವ ತನ್ನ ಮಾಯೆಯನ್ನು ನಿನ್ನ ಇದಿರು ನಿಲ್ಲಿಸಿದೆ.”

“ಇರಬಹುದು, ಆದರೆ ಲೋಕದ ದೃಷ್ಟಿಯಲ್ಲಿ ಇಂದು ನನಗಾದದ್ದು ಅವಮಾನ. ಅದನ್ನು ತಲೆಯ ಮೇಲೆ ಹೊತ್ತು ಹೀಗೆ ಬದುಕಿದರೆ ಜನ ನಗುವುದಿಲ್ಲವೇ ?”

“ಹಾಗಾದರೆ ಅವರಿಗಾಗಿ ನಿನ್ನ ಬದುಕೇ? ನಿನ್ನಿಂದ ತಪ್ಪಾಯಿತು. ತಪ್ಪಾಯಿತು ಎನ್ನು. ಸತ್ಯ ಹೇಳುವುದು, ಸತ್ಯವನ್ನು ಒಪ್ಪಿಕೊಳ್ಳುವುದು ಅಪಮಾನವೇ ? ಒಂದು ವೇಳೆ ತಿಳಿಯದ ಜನ ಅರಿಯದೆ ನಕ್ಕರೆನ್ನು. ಅವರ ಮೂರ್ಖತೆಗೆ ನಿನ್ನ ಬಾಳಿನ ಬಲಿಗೊಡುತ್ತೀಯಾ ? ಈ ವೃಥಾಭಿಮಾನ ಬಿಡು. ನೀನಿನ್ನೂ ಬೆಳೆಯುವ ಗಿಡ. ಇನ್ನೂ ಬೆಳೆದು ಹೂ ಬಿಡಬೇಕು. ಅಹಂಕಾರ ಬೆಳೆವ ಗಿಡಕ್ಕೆ ಹತ್ತುವ ರೋಗ. ಅದನ್ನು ಮೆಟ್ಟಿ ಬಾಳು. ಸಂಗೀತದಲ್ಲಿ ನೀನು ಸಾಧಿಸಿರುವುದು ಅಲ್ಪ; ಸಾಧಿಸಬೇಕಾದುದು ಇನ್ನೂಬೆಟ್ಟದಷ್ಟಿದೆ. ಅತ್ತ ಕಡೆ, ಬೆಳೆಯುವ ಕಡೆ ಮನಸ್ಸು ಮಾಡು. ನಿನ್ನ ಗುರು ನಿನಗೆ ಏನು ಸಾಧಿಸಬೇಕೆಂದು ಹೇಳಿದ್ದರು ? ಅದನ್ನು ನೀನು ಮಾಡಿದೆಯಾ ? ಯೋಚಿಸು.”

"ಆ ಮಾತು ಕೇಳಿ ವೆಂಕಟಸುಬ್ಬಯ್ಯನಿಗೆ ತಾನು ಸಾಧನೆಯನ್ನೇ ಬಿಟ್ಟುದು ನೆನಪಾಗಿ, ನಾಚಿಕೆಯಾಯಿತು. 'ರಾಗವು ಒಂದು ದೇವತೆ, ಯಾವುದನ್ನಾದರೂ ಒಂದು ರಾಗದೇವತೆಯನ್ನು ಒಲಿಸಿಕೊಳ್ಳುವವರೆಗೂ ಸಂಗೀತಗಾರನ ಬಾಳು ಪೂರ್ಣವಲ್ಲ' ಎಂದು ಬುವಾ ಹೇಳಿದುದು, ನಿಶ್ಶಬ್ದ ನಿಶೆಯಲ್ಲಿ ಬಹು ಸ್ಪಷ್ಟವಾಗಿ ಕೇಳಿಬರುವ ಘಂಟಾನಾದದಂತೆ ಕೇಳಿಸಿತು. ಹಾಗೇ ಯೋಚಿಸಿದ, ಇಷ್ಟು ದಿನ ಆತನಿಗದು ಮರೆತುಹೋಗಿತ್ತು. 'ನಿಜ, ಕೀರ್ತಿಯ ಮೋಹದಲ್ಲಿ ಕುರುಡಾಗಿ ಅವಿವೇಕಿಯಾಗಿದ್ದೆ. ಸುಮ್ಮನೆ ಬಾಳು ವ್ಯರ್ಥ ಮಾಡಿದೆನಲ್ಲಾ' ಎನಿಸಿತು. ಕೂಡಲೇ ಸ್ವಾಮಿಗಳ ಕಾಲಿಗೆ ಬಿದ್ದು ಹೇಳಿದ:"

"ಅಜ್ಞಾನದಲ್ಲಿ ಅಂಧನಾಗಿದ್ದ ನನಗೆ ಬೆಳಕಾಗಿ ಬಂದು ದಾರಿ ತೋರಿದಿರಿ, ಗುರುದೇವಾ."

"ಇನ್ನು ಜ್ಞಾನಿಯಾಗಿ ಬಾಳು, ಕೀರ್ತಿಗಲ್ಲ. ಸಂಗೀತಕ್ಕೆ ನಿನ್ನ ಬಾಳು ಮೀಸಲಾಗಲಿ. ಇವತ್ತೊಂದು ಮಾತು ಹೇಳುತ್ತೇನೆ – ಮರೆಯಬೇಡ."

"ಏನು ?"

"ನೋಡು, ನಿನ್ನ ಕಲೆ ದೈವದತ್ತವಾದುದು. ಕಡಲಜಲದಲ್ಲಿ ಹುಟ್ಟಿದ ಮೋಡ, ಮಳೆಯಾಗಿ, ನದಿಯಾಗಿ, ಲೋಕಕ್ಕೆ ತಂಪು ನೀಡಿ, ಮತ್ತೆ ಹೇಗೆ ಕಡಲನ್ನು ಸೇರುವುದೋ, ಕಲಾವಿದನ ಬಾಳೂ ಹಾಗೇ ಆಗಬೇಕು. ದೈವಾನುಗ್ರಹದಿಂದ ಅರಳಿದ ಪ್ರತಿಭಾಪುಷ್ಪ, ದೈವಾನುಗ್ರಹಕಾತರವಾಗಿ, ಮಾರ್ಗ ಮಧ್ಯದಲ್ಲಿ ಆದಷ್ಟು ದೈವಸೃಷ್ಟಿಯ ಸೇವೆಮಾಡಿ, ಕೊನೆಗೆ ದಿವ್ಯಪಾದಗಳಲ್ಲಿ ಲೀನವಾಗಬೇಕು. ದೈವೀಕೃಪೆಯ ಮಂತ್ರದಂಡ, ತನ್ನಾವುದೋ ಕಾರ್ಯಕ್ಕಾಗಿ ಅರಳಿದ ಹೂವು ಜನತೆಗೆ ನೀಡುವ ತನ್ನ ಪರಿಮಳಕ್ಕೆ ಸುಂಕ ಕೇಳುತ್ತದೆಯೇ ? ಹಾಗೆಯೇ ನೀನು; ಹೂವಾಗಿ ಅರಳು. ಯಾರು ಪರಿಮಳ ಹೀರ ಬೇಕೆಂದರೂ ಅಡ್ಡಬರಬೇಡ. ಸೂರ್ಯ ಕಾಸು ಕೊಟ್ಟವರಿಗೆ ಬೆಳಕು ಕೊಡುತ್ತೇನೆ ಎನ್ನುತ್ತಾನೆಯೇ ? ಹಾಗೆ ನಿನ್ನ ಕಲೆ ಸೂರ್ಯಕಾಂತಿಯಾಗಲಿ, ಮಾರಿಗೆಯ ದೀಪವಾಗದಿರಲಿ. ಹಣತೆಯ ಕುಡಿಯಿಂದ ಸೂರ್ಯನಾಗುವ ಶಕ್ತಿ ಸಾಧಿಸು."

"ನೀವು ತೋರಿದ ದಾರಿಯಲ್ಲಿ ನಡೆಯುತ್ತೇನೆ, ಗುರುದೇವ" ಎಂದ ವೆಂಕಟಸುಬ್ಬಯ್ಯ.

"ಸರಿ. ಹಾಗಾದರೆ ಮನೆಯ ಕಡೆ ಹೊರಡು. ಊರಲ್ಲಿ ನೀನು ಹುಚ್ಚಾಗಿ ಹೊರಟದ್ದನ್ನು ಕಂಡು ಗಲಿಬಿಲಿಯಾಗಿದ್ದೆ. ನಿನ್ನ ತಾಯಿ ಎಷ್ಟು ಒದ್ದಾಡುತ್ತಿದ್ದಾಳೋ ಏನೋ" ಎಂದರು ಸ್ವಾಮಿಗಳು. ಇಬ್ಬರೂ ತೋಪಿನಿಂದ ಊರಿನ ಕಡೆ



ಹೊರಟರು. ದಾರಿಯುದ್ದಕ್ಕೂ ವೆಂಕಟಸುಬ್ಬಯ್ಯ ಮಾತನಾಡದೆ ಅವರು ಹೇಳಿದುದನ್ನೆ ಚಿಂತಿಸುತ್ತಿದ್ದ. ಯೋಚಿಸಿದ ಹಾಗೆ ಅವರು ಹೇಳಿದ ಒಂದೊಂದು ಮಾತೂ ನಿಜವೆಂದೂ ತೋರಿ, ಆತ್ಮಹತ್ಯೆಗೆ ಮನಸ್ಸು ಮಾಡಿದ ತನ್ನ ಸಣ್ಣ ತನಕ್ಕೆ ತನಗೇ ನಾಚಿಕೆಯಾಯಿತು. ಇದ್ದಕ್ಕಿದ್ದ ಹಾಗೇ ಏನೋ ಕೇಳಬೇಕೆನಿಸಿತು. ಕೇಳಿದ :

"ನಿಮ್ಮ ಶಿಷ್ಯನಲ್ಲೂ ಅದ್ಭುತಶಕ್ತಿಯಿದೆ."

"ಊಹೂ, ಅವನಲ್ಲಿ ಏನೂ ಶಕ್ತಿಯಿಲ್ಲ."

"ಹಾಗಾದರೆ ಇವತ್ತು ಅಷ್ಟು ಸೊಗಸಾಗಿ ಮದ್ದಲೆ ಹೇಗೆ ನುಡಿಸಿದ ?"

"ನೀನು ತಿರುಮಲಯ್ಯನನ್ನು ಸೋಲಿಸಿದ ದಿನ ಹೇಗೆ ಹಾಡಿದೆ ? ಅದು ಕಲಿತ ವಿದ್ಯೆಯೇ?"

"ಊಹೂ. ಅಂದು ನಾನು ಹೇಗೆ ಹಾಡಿದೆನೆಂದು ನನಗಿನ್ನೂ ಅರ್ಥವಾಗಿಲ್ಲ."

"ನನ್ನ ಶಿಷ್ಯ ಇಂದು ಮದ್ದಲೆ ಬಾರಿಸಿದುದೂ ಹಾಗೆಯೇ. ಸಾಧನೆ ಮಾಡಿ ಸಿದ್ಧನಾಗು. ಬಳಿಕ ನಿನಗೇ – ಅಂದು ಹೇಗೆ ಹಾಡಿದೆನೆಂಬುದು, ನನ್ನ ಶಿಷ್ಯ ಇಂದು ಅಷ್ಟು ಸೊಗಸಾಗಿ ಮದ್ದಲೆ ಹೇಗೆ ನುಡಿಸಿದನೆಂಬುದು ಅರ್ಥವಾಗುತ್ತದೆ" ಎಂದರು ಸ್ವಾಮಿಗಳು. ಮಾತು ಮುಗಿಯುವ ವೇಳೆಗೆ ಅವರಿಬ್ಬರೂ ಸಂತೆಯ ಬಾಗಿಲ ಬಳಿ ಬಂದಿದ್ದರು. ಅಲ್ಲೆ ಪಂಜುಗಳನ್ನು ಹಿಡಿದು ವೆಂಕಟಸುಬ್ಬಯ್ಯನನ್ನು ಹುಡುಕಹೊರಟ ಜನವೂ ಇದಿರಾದರು.

"ಆ ಘಟನೆ ವೆಂಕಟಸುಬ್ಬಯ್ಯನವರ ಜೀವನದಲ್ಲಿ ಅದ್ಭುತ ಪರಿಣಾಮವನ್ನುಂಟು ಮಾಡಿತು. ಅದಾದ ಕೆಲವು ದಿನಗಳಲ್ಲೇ ಪಾಳೆಯಗಾರರು ಕೊಟ್ಟ ಮರ್ಯಾದೆಗಳನ್ನೆಲ್ಲಾ ಹಿಂದಕ್ಕೆ ಕಳಿಸಿ, ವೈಭವಕ್ಕೆಲ್ಲಾ ತಿಲಾಂಜಲಿ ಕೊಟ್ಟು, ಮತ್ತೆ ಸಾಧಕರಾದರು. ಊರ ಜನಕ್ಕೆ ಅವರ ನಡತೆ ವಿಚಿತ್ರವಾಗಿ ತೋರಿದರೂ, ಯಾರೂ ಗಟ್ಟಿಯಾಗಿ ಮಾತಾಡುವ ಧೈರ್ಯ ಮಾಡಲಿಲ್ಲ. ಅಂದಿನವರೆಗೂ ಶ್ರೀಮಂತರಿಗೆ, ಅರಮನೆಯವರಿಗೆ ಮಾತ್ರ ಲಭ್ಯವಾಗಿದ್ದ ವೆಂಕಟಸುಬ್ಬಯ್ಯನವರ ಸಂಗೀತ, ಅಂದಿನಿಂದ ಎಲ್ಲರಿಗೂ ಲಭ್ಯವಾಯಿತು. ಯಾರು ಎಲ್ಲಿ ಕರೆದರೂ ಹೋಗಿ ಹಾಡುವರು. ಮೂರು ಹೊತ್ತೂ ತಮ್ಮ ಸಾಧನೆಯ ಚಿಂತೆ ಮಾಡುವರು."

"ಆ ದಿನ ಅವರಿಗೆ, ಹಿಂದೆ ಬುವಾ ಹೇಳಿ, ಬಳಿಕ ಮರೆತುಹೋಗಿದ್ದ ಮಾತು 'ಯಾವುದಾದರೊಂದು ರಾಗವನ್ನು ಒಲಿಸಿಕೋ' ಎಂಬುದು ನೆನಪಾಗಿತ್ತು. ಮತ್ತೆ ಅದರ ಶೋಧನೆಗೆ, ಸಾಧನೆಗೆ ತೊಡಗಿದರು. ಯಾವ ರಾಗವನ್ನು ಯಾವ

ಹೊತ್ತು ಹೇಳಬೇಕೋ, ಆ ಹೊತ್ತಿನಲ್ಲಿ ಅದನ್ನು ಹಾಡುವರು. ರಾಗದ ಚಿಂತೆಯನ್ನೇ ಮಾಡುತ್ತಾ, ಅದರ ಅಧಿದೇವತೆಯ ಸ್ವರೂಪ ಏನಿರಬಹುದೆಂದು ಚಿಂತಿಸುವರು. ಪ್ರಣವಬ್ರಹ್ಮ ಸಾಧನೆಗೆ ನಾದೋಪಾಸನೆ ಮಾಡ ತೊಡಗಿದರು ವೆಂಕಟಸುಬ್ಬಯ್ಯ."

"ಯಾರಾದರೂ ಉಪಾಸನೆ, ತಪಸ್ಸು ಮಾಡುತ್ತಿದ್ದರೆ, ಅದರ ಭಂಗಕ್ಕಾಗಿ ದೇವತೆಗಳು, ಅಪ್ಸರೆಯರನ್ನು ಕಳಿಸುತ್ತಾರೆ; ಅವರನ್ನು ಗೆದ್ದು ತಪಸ್ವಿ ಋಷಿಂಯಾಗುತ್ತಾನೆ ಎಂಬ ಪುರಾಣದ ಕಥೆ ಸುಳ್ಳಲ್ಲ, ಸ್ವಾಮಿ ವೆಂಕಟಸುಬ್ಬಯ್ಯನವರಿಗೂ ಹಾಗೇ ಆಯಿತು. ಇದ್ದಕ್ಕಿದ್ದಹಾಗೇ ಒಂದು ಸಾರಿ, ರಾಗದ ಹುಚ್ಚು ಬಿಟ್ಟು ಹೆಣ್ಣಿನ ಹುಚ್ಚು ಹಿಡಿದುಬಿಟ್ಟಿತು ಅವರಿಗೆ"– ಎಂದ ಚಿನ್ನಪ್ಪ.

ಆ ಮಾತು ಕೇಳಿ ನನ್ನ ಕಿವಿ ನಿಮಿರಿತು. ಚಿನ್ನಪ್ಪ ಹೇಳಿದ ಕಥೆಯನ್ನು ಕೇಳಿ ನನ್ನ ಮನಸ್ಸು ಪವಾಡ ಕಂಡ ಮಗುವಿನ ಮನಸ್ಸಿನಂತೆ ಮುಗ್ಧವಾಗಿತ್ತು. ಆ ಕುತೂಹಲ, ಉತ್ಸಾಹದಲ್ಲಿ ನಿದ್ರೆಯ ನೆನಪೇ ಹಾರಿಹೋಗಿತ್ತು.

"ಕಥೆ ಹೇಳ್ತಾ ಹೇಳ್ತಾ ಹಗಲೇ ಆಗಿಹೋಯ್ತು" ಎಂದು ಚಿನ್ನಪ್ಪ ಹೊತ್ತನ್ನು ಜ್ಞಾಪಿಸಿದ. ಮುಂದೆ ಮಾಡಿದ ತಲೆಬಾಗಿಲಿನ ಕಿಂಡಿಯಲ್ಲಿ ಮುಂಜಾವಿನ ಸೂರ್ಯನ ಕೆಂಗಿರಣ ಇಣಿಕಿಹಾಕಿ 'ನಿಜ, ಹಗಲಾಗಿದೆ' ಎಂದಿತು. ಹಳ್ಳಿಯ ಕೋಳಿಗಳೂ ಅದನ್ನೆ ಹೇಳುತ್ತಿದ್ದವು. ನಿದ್ರೆಗೆಟ್ಟು ಕೆಂಪಾದ ಚಿನ್ನಪ್ಪನ ಕಣ್ಣು ಸಾಕ್ಷಿ ಹೇಳಿತು. ಆದರೂ ನನಗೆ ಕಥೆ ಕೇಳುವ ಉತ್ಸಾಹ ಕುಗ್ಗಿರಲಿಲ್ಲ.

"ಹಗಲಾದರೆ ಅನುಕೂಲವೇ ಆಯಿತು. ನಿದ್ರೆಯ ಚಿಂತೆಯೇ ತಪ್ಪಿತು. ಮುಂದಿನದು ಈಗ ಹೇಳಿದುದಕ್ಕಿಂತ ಸ್ವಾರಸ್ಯವಾಗಿರಬೇಕು, ಅದನ್ನೂ ಹೇಳಿ ಮುಗಿಸಿಬಿಡಿ" ಎಂದೆ.

"ದುರ್ಗದಲ್ಲಿ ಯಾರೂ ನಿಮಗೆ ಅದನ್ನು ಹೇಳಲಿಲ್ಲವೇ?"

"ಊಹೂಂ."

"ದುರ್ಗದಲ್ಲೇ ಒಬ್ಬರು ಈ ಕಥೆ ಹೇಳುವವರಿದ್ದಾರೆ. ಅವರಿಂದಲೇ ಕೇಳಿ."

"ಯಾರು ?"

"ಆದರೆ ನೀವು ಆ ಮನೆಗೆ ಹೋಗ್ತೀರೋ ಇಲ್ಲವೊ.... ?"

"ಏಕೆ ?"



"ಅದು ಸೂಳೆಯೋರ ಮನೆ. ಬುರುಜಿನಹಟ್ಟೀಲಿ ವ್ಯಾಸರಾಯ ಮಠ ಇಲ್ವಾ– ಅದರ ತಾವ ಇದೆ, ಪುಟ್ಟತಾಯಮ್ಮನ ಮನೆ. ಆಕೇನೇ ಕೇಳಿ; ಚಂದಾಗಿ ಹೇಳ್ತಾಳೆ. ನಾನೂ ಆಕೆಯ ಬಾಯಿಂದಲೇ ಕೇಳಿದ್ದು."

"ನಿಮಗೆ ಆಕೆಯ ಪರಿಚಯ ಇದೆಯೇ?"

"ಚೆನ್ನಾಗಿದೆ."

"ಹಾಗಾದರೆ ನನ್ನ ಜೊತೆಗೆ ನೀವೂ ಬಂದರೆ ಮೇಲು. ಈವೊತ್ತು ಬಿಡುವು ಮಾಡಿಕೊಂಡು ಬನ್ನಿ – ಕೆಟ್ಟುಹೋಗುವ ಕೆಲಸವಿಲ್ಲದಿದ್ದರೆ."

"ಅಂಥ ತಲೆ ಹೋಗೋ ಕೆಲಸವೇನೂ ಇಲ್ಲ. ಆದ್ರೂ ದುರ್ಗಕ್ಕೆ ಬಂದರೆ ವೃಥಾ ಖರ್ಚು."

"ಅದರ ಚಿಂತೆ ನನ್ನದು. ಬರುತ್ತೀರ?"

"ಹೂಂ, ಆದ್ರೆ ಮೊದ್ಲು ಹೊಟ್ಟೆಗೇನಾರು ಅಷ್ಟು ನೋಡಿಕೊಳ್ಳೋಣ. ನಿದ್ರೆ ಅಂತೂ ತಪ್ಪಿತು. ಇನ್ನು ದುರ್ಗಕ್ಕೆ ಹೋಗಬೇಕೆಂದರೆ ಹೆಣಾ ಬೀಳೋ ಹಾಗೆ ನಡೆಯಬೇಕು. ಹೊಟ್ಟೆಗೆ ಗಡದ್ದಾಗಿ ಬಿದ್ದರೆ ಆಮೇಲೆ ಮುಂದಿನ ವಿಚಾರ" ಎಂದ ಚಿನ್ನಪ್ಪ. ಆ ಮಾತಿಗೆ ನನ್ನದೂ ಪೂರ್ಣ ಸಮ್ಮತಿ ಇತ್ತು.

## ೬

ಹಳ್ಳಿಯಲ್ಲಿ ಸಿಕ್ಕ ಹಾಲು, ಪುರಿಯಲ್ಲಿ ಹೊಟ್ಟೆಯ ಚಿಂತೆ ತೀರಿಸಿ ಇಬ್ಬರೂ ದುರ್ಗದತ್ತ ಹೊರಟೆವು. ನನಗೆ ಸಂಗೀತದ ವಿಚಾರ ಹೆಚ್ಚೇನೂ ತಿಳಿಯದಿದ್ದರೂ ಚಿನ್ನಪ್ಪ ಹೇಳಿದ ಕಥೆ ಕೇಳಿದಾಗಿನಿಂದ ಒಂದು ಸಂಶಯ ಮನಸ್ಸಿನಲ್ಲಿ ಸಣ್ಣಗೆ ಕೊರೆಯುತ್ತಿತ್ತು. ಆತ ಹೇಳಿದ, ವೆಂಕಟಸುಬ್ಬಯ್ಯನವರು ಕಲಿತ ಸಂಗೀತದ ವಿವರಣೆ ಕೇಳಿದಾಗ, ಅವನಿಗೆ ಅದನ್ನು ಕಲಿಸಿದಾತ ಉತ್ತರದ ಕಡೆಯ ಬುವಾ ಒಬ್ಬರು ಎಂದು ತಿಳಿದಾಗ, ಅದು ನಾವು ಈಗ ಕರ್ನಾಟಕ ಸಂಗೀತ ಎಂದು ಕರೆಯುವ ರೀತಿಗೆ ಸರಿಹೋಗದ, ಉತ್ತರಾದಿ ಎಂದು ಕರೆಯುವ ಸಂಗೀತ ಪದ್ಧತಿಗೆ ಸರಿಹೋಗುತ್ತಿತ್ತು. ಹಾಗಾದರೆ ವೆಂಕಟಸುಬ್ಬಯ್ಯನವರು ಕಲಿತುದು ಉತ್ತರಾದಿ ಸಂಗೀತವೇ ಅಥವಾ ದಕ್ಷಿಣಾದಿ ಸಂಗೀತವೇ ? ಚಿನ್ನಪ್ಪನನ್ನೇ ಕೇಳಿದರೆ, ಹೆಚ್ಚು ಅಲ್ಲವಾದರೆ ಹೋಗಲಿ, ನನಗಿಂತ ಹೆಚ್ಚು ಸಂಗೀತದ ವಿಚಾರ ತಿಳಿದ ಆತ ಅಲ್ಪ ಸ್ವಲ್ಪವಾದರೂ ನನ್ನ ಸಂಶಯ ನಿವಾರಣೆ ಮಾಡಬಹುದು ಎಂದು ತೋರಿ, ಆತನನ್ನೇ ಕೇಳಿದೆ :

"ಅಲ್ಲ ಚಿನ್ನಪ್ಪ, ವೆಂಕಟಸುಬ್ಬಯ್ಯನವರು ಕಲಿತುದು ಯಾವ ರೀತಿ ಸಂಗೀತ? ಉತ್ತರಾದಿಯೋ ದಕ್ಷಿಣಾದಿಯೋ ?"

"ಉತ್ತರಾದಿಯೂ ಅಲ್ಲ, ದಕ್ಷಿಣಾದಿಯೂ ಅಲ್ಲ – ನಮ್ಮ ಸಂಗೀತವನ್ನೆ, ಕರ್ನಾಟಕದ ಸಂಗೀತವನ್ನೇ" ಎಂದ ಚಿನ್ನಪ್ಪ ನಗುತ್ತಾ. ಆತನ ಮಾತಿನ ಅರ್ಥ ನನಗೆ ಆಗಲಿಲ್ಲ. ಹಾಗೆಂದರೇನು ? ಉತ್ತರಾದಿ, ದಕ್ಷಿಣಾದಿಯಲ್ಲದೆ, ನಮ್ಮದೇ ಅದೇ ಸಂಗೀತವೆಂಬುದೂ ಒಂದುಂಟೆ! ಹಾಗಿದೆ ಎಂದು ನಾನೆಲ್ಲೂ ಕೇಳಿರಲಿಲ್ಲ. ಇದೇನೋ ಹೊಸ ವಿಚಾರ ಹೇಳುತ್ತಿದ್ದಾನೆ ಎನಿಸಿತು.

"ಇದೇನು ಹೀಗೆ ಉತ್ತರ ಕೊಡುತ್ತೀರಿ ?" ಎಂದೆ.

"ಹೌದು ಸ್ವಾಮಿ, ಸರಿಯಾದ ಉತ್ತರವನ್ನೇ ಕೊಟ್ಟೆ. ದಕ್ಷಿಣಾದಿ ಉತ್ತರಾದಿ ಎಂದು ಕರೆಯುವುದೆಲ್ಲಾ ಈಗಿನದು; ಅಂದರೆ ತ್ಯಾಗರಾಜಸ್ವಾಮಿಗಳು, ಶ್ಯಾಮಾಶಾಸ್ತ್ರಿಗಳು, ಮುತ್ತುಸ್ವಾಮಿ ದೀಕ್ಷಿತರ ಕಾಲದ ನಂತರ ಬಂದ ಹೆಸರು. ಅವರೇ ಈ ಮಾರ್ಗ ಪರಿಷ್ಕಾರ ಮಾಡಿದೋರು. ಅದಕ್ಕಿಂತ ಮುಂಚೆ ಎರಡು ಪದ್ಧತೀಲೂ ಅಷ್ಟು ವ್ಯತ್ಯಾಸವಿರಲಿಲ್ಲ. ದೇಶ ಕಾಲಕ್ಕನುಸಾರವಾಗಿ ಕೊಂಚ ವ್ಯತ್ಯಾಸ ಇತ್ತೇನೋ. ಅಷ್ಟೇ ಹೊರತು, ಈಗಿನ ಹಾಗೆ ಅದೇ ಬೇರೆ, ಇದೇ ಬೇರೆ ಎನ್ನುವ ಹಾಗಿರಲಿಲ್ಲ. ನಮ್ಮ ಪುರಂದರದಾಸರು, ತ್ಯಾಗರಾಜರು, ದೀಕ್ಷಿತರಿಗಿಂತ ಹಿಂದಿನೋರು. ಈಗ ನಾವು ಉತ್ತರ ಕರ್ನಾಟಕ ಎಂದು ಕರೆಯೋ ಸೀಮೆಯವರು. ಕನಕದಾಸರು ಕಾಗಿನೆಲೆಯೋರು, ಅದಿರೋದು ಈಗ ಉತ್ತರಾದಿ ಹೆಚ್ಚು ಬಳಕೆ ಇರೋ ಉತ್ತರ ಕರ್ನಾಟಕದಲ್ಲಿ. ಆದ್ದರಿಂದ ಅವರು ಹಾಕಿದ ರಾಗ ಯಾವ ಸಂಪ್ರದಾಯದ್ದು ? ಸಂಗೀತದ ವಿಚಾರ ನನಗೂ ಹೆಚ್ಚು ತಿಳಿಯದು. ಇಷ್ಟೋ ಅಷ್ಟೋ ಓದಿಕೊಂಡಿದೀನಿ. ಹಳೆಯವರಿಂದ ಕೇಳಿ ತಿಳಿದುಕೊಂಡಿದೀನಿ. ಕೆಳದಿ ಬಸಪ್ಪನಾಯಕ ಬರೆದಿರೋ 'ಶಿವತತ್ವರತ್ನಾಕರ'ದಲ್ಲಿ ಸಂಗೀತ ವಿಷಯಾನು ಅಷ್ಟು ಬರ್ತದೆ. ಆತ ಬರೆದಿರೋ ರೀತಿಯಲ್ಲಿ ಹಾಡಿದರೆ, ಆ ರಾಗಕ್ಕೂ ಈಗ ನಾವು ಆ ರಾಗವೆಂದು ಕರೆಯುವುದಕ್ಕೂ ಎಷ್ಟೋ ಬಿಡ್ತದೆ. ಉತ್ತರಾದಿ ಹಾಗೆ ನಮ್ಮ ರಾಗಗಳಿಗೂ ಅದರಲ್ಲಿ ಸ್ತ್ರೀರಾಗ, ಪುರುಷರಾಗ, ಅವುಗಳಲ್ಲಿ ಗಂಡ ಹೆಂಡತಿ ಮಕ್ಕಳು ಮರಿ ಎಲ್ಲಾ ಹೇಳಿದ್ದಾನೆ. 'ಶಿವತತ್ವರತ್ನಾಕರ' ಸುಮಾರು ವೆಂಕಟಸುಬ್ಬಯ್ಯನೋರ ಕಾಲದ ಗ್ರಂಥ. ತ್ಯಾಗರಾಜರು, ದೀಕ್ಷಿತರು ಎಲ್ಲಾ ವೆಂಕಟಸುಬ್ಬಯ್ಯನೋರ ಕಾಲ ಆದಮೇಲೆ ಬಂದೋರೋ ಅಥವಾ ಹೆಚ್ಚು ಕಡಿಮೆ ಆ ಕಾಲದಲ್ಲೇ ಇದ್ದೋರೋ. ಆದ್ದರಿಂದ ಅವರ ಕಾಲಕ್ಕೆ ವ್ಯತ್ಯಾಸ ಈಗಿನಷ್ಟಿರಲಿಕ್ಕಿಲ್ಲ."



ಚಿನ್ನಪ್ಪ ಕೊಟ್ಟ ಉತ್ತರ ಕೇಳಿ ನಾನು ಚಕಿತನಾದೆ. ಆತನಿಂದ ನಾನು ಈ ಬಗೆಯ ಉತ್ತರ ಜ್ಞಾನವನ್ನು ನಿರೀಕ್ಷಿಸಿರಲಿಲ್ಲ. ಎಷ್ಟು ವಿಷಯ ತಿಳಿದುಕೊಂಡಿದ್ದಾನೆ ಈತ! ಇಂಥವರು ಹೊಟ್ಟೆಯಪಾಡಿಗೆ ಹೆಣಗಬೇಕೇ ಎನಿಸಿತು. ಆದರೆ ನಮ್ಮ ದೇಶದಲ್ಲಿ ಹೆಣಗದಿರುವವರು ಯಾರು? ಸಾಧ್ಯವಾದರೆ ಆತನಿಂದ ಮತ್ತಷ್ಟು ವಿಷಯ ತಿಳಿದುಕೊಳ್ಳಬೇಕೆನಿಸಿತು.

"ಹಾಗಾದರೆ ಆ ಕಾಲಕ್ಕೆ ಈ ಭೇದವೇ ಇರಲಿಲ್ಲವೇ ?"

"ಏನಿತ್ತೋ ಭಗವಂತನೇ ಬಲ್ಲ. ಈಗ ಯಾವುದೋ ಒಂದು ರಾಗವನ್ನು ತಗೊಳ್ಳಿ – ಒಂದೇ ಸ್ವರ, ಒಂದೇ ತಾಳ, ಒಂದೇ ಕೃತಿ. ಆದರೂ ಒಬ್ಬರು ಹಾಡಿದ ಹಾಗೆ ಇನ್ನೊಬ್ಬರು ಹಾಡೋಲ್ಲ; ಒಬ್ಬರ ಬಾಯಲ್ಲಿ ನುಡಿದ ಹಾಗೆ ಇನ್ನೊಬ್ಬರ ಬಾಯಲ್ಲಿ ನುಡಿಯೋಲ್ಲ. ಉದಾಹರಣೆಗೆ ತ್ಯಾಗರಾಜರದೆ ಒಂದು ಉದಾಹರಣೆ ಹೇಳ್ತೀನಿ ನೋಡಿ. ಅವರದು 'ಮರಿಯಾದಗಾದಯ್ಯ' ಅಂತ ಒಂದು ಕೃತಿ ಇದೆ. ಅದರಲ್ಲಿ ಆರಂಭ ಯಮನ್ ಕಲ್ಯಾಣಿಯಲ್ಲಿ, ಮುಂದಿನದು ಭೈರವಿ; ಜೀವಸ್ವರದಲ್ಲೇ ವ್ಯತ್ಯಾಸ ಇಟ್ಟಿದ್ದಾರೆ. ಎಷ್ಟು ಜನ ಅದನ್ನು ತಿಳಿದು ಹಾಡ್ತಾರೆ. ಅದು ಹಾಗೆ ಏಕೆ, ಏನು ಎಂತ ಎಷ್ಟು ಜನಕ್ಕೆ ಅರ್ಥವಾಗಿದೆ ? ಅವರು ಹೇಗೆ ಹಾಡ್ತಾ ಇದ್ರೋ ಏನೋ ಅದೇ ಗೊತ್ತಿಲ್ಲ. ರಾಗದ ಹೆಸರು ನೋಡಿಕೊಂಡು ಹೀಗರಬಹುದು ಅಂತ ಹಾಡ್ತೀವಿ. ಅಷ್ಟೇ ಅಲ್ಲ – ಒಂದು ಹಾಡಿಗೆ ಅವರು ಹಾಕಿದ ರಾಗದಲ್ಲೇ ಅದೋ ಇದೋ ಎಂಬ ಜಿಜ್ಞಾಸೆಗೆ ಕಾರಣವಾಗಿದೆ. ದೀಕ್ಷಿತರ 'ಮಾಯೆ ತ್ವಂ ಪಾಹಿ' ಕೀರ್ತನೆ ಇದೆ. ಅದು ಈಗಿನವರು ಹೇಳೋ ಹಾಗೆ ಸುಧಾತರಂಗಿಣಿ ರಾಗವೊ ಅಥವಾ ಕೆಲವರು ಹೇಳೋ ಹಾಗೆ ತರಂಗಿಣಿ ರಾಗವೋ – ಇದೇ ನಿಶ್ಚಯವಿಲ್ಲ. ಎಲ್ಲಾ ಕುರುಡು ಪಾಠ. ಅಲ್ಲದೆ, ಎಲ್ಲಾ ಉತ್ತರಾದಿ ರಾಗಗಳೂ ನಮ್ಮ ರಾಗಗಳೂ ಹೆಸರು ವಿನಾ, ಬೇರೆಯೆಲ್ಲಾ ಒಂದೇ. ಅವರು ಮಾಲಕೌಂಸ ಅನ್ನೋದನ್ನ ನಾವು ಹಿಂದೋಳ ಅನ್ತೀವಿ; ನಾವು ಹನುಮತೋಡಿ ಅನ್ನೋದನ್ನ ಅವರು ಭೈರವಿ ಅನ್ತಾರೆ – ಹೀಗೇ. ಈಗ ಉತ್ತರಾದಿಯವರಿಗೆ ಶ್ರುತಿ ಅಂದರೆ ಪ್ರಾಣ, ನಮ್ಮವರಿಗೆ ತಾಳ ಮುಖ್ಯ. ಹೀಗಾಗಿ ಒಂದಕ್ಕೊಂದು ಬೇರೆ ಎನ್ನುವ ಹಾಗಾಗಿದೆ. ಹಿಂದೆ ಹೀಗಿದ್ದಿರಲಿಕ್ಕಿಲ್ಲ ಅನ್ನೋಹಂಗೆ ಕಾಣ್ತದೆ. ಅಷ್ಟ್ಯಾಕೆ ಸ್ವಾಮಿ, ಪುರಂದರದಾಸರ ಕೀರ್ತನೇಲೆ ಸುಳಾದಿ, ಉಗಾಭೋಗ ಅಂತಾರಲ್ಲಾ – ಅದರ ಸ್ವರೂಪ ಹೀಗೇ ಅಂತ ಹಾಡೋರು ಯಾರಿದಾರೆ ಹೇಳಿ? ಎಲ್ಲಾ ಮರೆತು ಸಂತೆಕೂಗು ಕೂಗೋ ಜನಾ ಆಗಿ ಹೋಗಿದೀವಿ ನಾವು!" ಎಂದ ಚಿನ್ನಪ್ಪ.

"ನಿಜ, ನಿನ್ನ ಮಾತು" ಎಂದು ನಾನೂ ತಲೆಹಾಕಿದೆ. ಅದು ವಿನಾ ಬೇರೆ ದಾರಿಯೇ ಇರಲಿಲ್ಲ ನನಗೆ.

ಹೀಗೆ ಹತ್ತಾರು ಮಾತು ಆಡಿಕೊಳ್ಳುತ್ತಾ, ಬೆಳಿಗ್ಗೆ ಒಂಬತ್ತು ಗಂಟೆಯ ವೇಳೆಗೆ ದುರ್ಗವನ್ನು ಸೇರಿದೆವು. ಕುರುಮರಡಿಯಲ್ಲಿ ಹೊಟ್ಟೆಗೆ ಹಾಕಿದುದು ದುರ್ಗಕ್ಕೆ ಬರುವ ವೇಳೆಗೆ ಕರಗಿತ್ತು. ಆ ಊರಿನೊಳಗೆ ಕಾಲಿಡುತ್ತಿದ್ದಹಾಗೆ ಮತ್ತೆ ದಾರಿಯಲ್ಲೇ ಉದರೋಪಚಾರ ಮುಗಿಸಿದಮೇಲೆ–

"ಪುಟ್ಟತಾಯಮ್ಮನ ಮನೆಗೆ ಈಗಲೇ ಹೋಗೋಣವೆ ?" ಎಂದೆ.

"ಹೂಂ, ಈಗ ಹೋದ್ರೇನೇ ಒಳ್ಳೇದು. ಸಂಜೆ ವ್ಯಾಪಾರದ ಹೊತ್ತು. ಕೆಲಸವಿಲ್ಲದೆ ನಿಮ್ಮಂಥೋರು ಹೋಗಬಾರದು" ಎಂದ ಚಿನ್ನಪ್ಪ. ನನಗೂ ಅದು ಸರಿ ಎಂದು ತೋರಿತು. ಇಬ್ಬರೂ ಬುರುಜಿನಹಟ್ಟಿಯತ್ತ ಹೆಜ್ಜೆ ಹಾಕಿದವು.

ಹಿಂದೊಂದು ಕಾಲಕ್ಕೆ ಬುರುಜಿನಹಟ್ಟಿ ಚಿತ್ರದುರ್ಗದ ರಸಿಕರ ಬೀದಿ, ವೇಶ್ಯಾವಾಟಿ; ಚಂದ್ರಿಕಾವಿಹಾರಮಾರ್ಗ. ಈಗ ಅದಾವುದು ಇಲ್ಲ. ಬರೀ ಅಗ್ಗದ ಸೂಳೆಗೇರಿ. ಸಂಜೆಯ ಹೊತ್ತು ಬುರುಜಿನಹಟ್ಟಿಯ ಕಡೆ ಹೋಗಿ ಬರುವುದೆಂದರೆ, ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದಂತೆ – ಅಪವಾದಕ್ಕೆ ದಾರಿ. ಆದರೆ ಈಚೆಗೆ ಅಲ್ಲಷ್ಟು ವೇಶ್ಯೆಯರು ಕಾಣುವುದಿಲ್ಲವಾದರೂ ಬೀದಿಗೆ ಆ ಹೆಸರು ತಪ್ಪಿಲ್ಲ; ಅಲ್ಲಿಗೆ ಹೋಗಿ ಬಂದವನನ್ನು 'ಬುರುಜಿನಹಟ್ಟಿ ಕಾಮ' ಎಂದು ಕರೆಯುವುದನ್ನು ಬಿಟ್ಟಿಲ್ಲ. ಆದುದರಿಂದ ಹಗಲು ಹೊತ್ತಾದುದರಿಂದ ಅಳುಕಿಲ್ಲದೆ ನಾನು ಚಿನ್ನಪ್ಪನ ಜೊತೆಯಲ್ಲಿ ಅಲ್ಲಿಗೆ ಹೊರಟೆ.

ವ್ಯಾಸರಾಯ ಮಠದಿಂದ ಇನ್ನೂ ಕೊಂಚ ಮುಂದೆ ಹೋಗಿ, ಎಡ ಪಕ್ಕದ ಗಲ್ಲಿಯೊಳಗೆ ತಿರುಗಿ ಎರಡು ಮನೆ ದಾಟಿದರೆ ಪುಟ್ಟತಾಯಮ್ಮನ ಮನೆ. ಆ ಗಲ್ಲಿಯೊಳಗೆ ಕಾಲಿಡುವುದೇ ನನಗೆ ಕಷ್ಟವಾಯಿತು. ಗಲ್ಲಿಯ ನಡುವಿನಲ್ಲೇ ನಾಲ್ಕಾರು ಮನೆಗಳ ಬಚ್ಚಲುನೀರು ಹರಿದು ಕೊಚ್ಚೆಯಾಗಿತ್ತು. ಅದರ ಇಬ್ಬದಿಯಲ್ಲೂ ಬಾಲಶೌಚ. ಅದರ ನಡುವೆ ಕಾಲು ಕೆಡಿಸಿಕೊಳ್ಳದೆ ನಡೆಯುವುದು, ಕಂಬಿಯ ಮೇಲೆ ಸಾಮು ಮಾಡುವಷ್ಟು ಕಷ್ಟವಾಗಿತ್ತು.

"ತುಂಬಾ ಹೊಲಸು ಬೀದಿ. ಇಂಥ ಕಡೆ ಜನ ಹೇಗೆ ಬರ್ತಾರೋ?" – ಎಂದೆ.

"ಹೇಗೆ ಅಂದ್ರೆ. ಕುರುಡರಾಗಿ ಬರ್ತಾರೆ, ಸ್ವಾಮಿ. ಅವರು ಬೀದಿ ನೋಡೋಕೆ ಬರೊಲ್ಲ. ತೆವಲು ತೀರಿಸಿಕೊಂಡು ಹೋಗಾಕೆ ಬರ್ತಾರೆ."



"ಏನೋ, ಆ ವೃತ್ತಿಯಷ್ಟೇ ಹೊಲಸಾಗಿದೆ ಈ ಸ್ಥಳ. ಎಂದು ತೊಲಗುತ್ತೋ ಇದು."

"ಲೋಕಾರೂಢಿ ಮಾತು ನೀವೂ ಆಡ್ತೀರ. ಅವರೇನು ಖುಷೀಗೆ ಈ ಕಸಬುಮಾಡ್ತಾರಾ, ಸ್ವಾಮಿ? ಹೊಟ್ಟೆಗಿಲ್ಲದ್ದಕ್ಕೆ ಇದು ಒಂದು ಆಟ. ಇದು ಇಲ್ಲಿ ಇವರು ಮಾಡೋದು ವ್ಯಾಪಾರ; ಸಂಸಾರದಲ್ಲಿದ್ದು ಮಾಡೋದು ವ್ಯಭಿಚಾರ. ಹೋಟಲು ತಿಂಡಿ ಬೇಕು ಅನ್ನೋ ಚಪಲ ನಮಗೆ ಇರೋವರೆಗೂ ಹೋಟಲು ಹೇಗೆ ಹೋಗಲ್ಲವೋ, ಹಾಗೆ ಇದು. ದುಡ್ಡಿದ್ದೋರಿಗೆ ಚಪಲಕ್ಕೆ ಬೇಕು, ದುಡ್ಡಿಲ್ಲದವರಿಗೆ ಬೇರೆ ದಾರಿ ಇಲ್ಲದೇ ಬೇಕು. ಅಲ್ವೇ ಹೇಳಿ? ಮದುವೆಯಾಗಿ, ಸಂಸಾರ ನಡೆಸೋ ಶಕ್ತಿ ಇಲ್ಲದ ನನ್ನಂಥೋರು ಏನು ಮಾಡಬೇಕು ? ಕಂಡವರ ಸಂಸಾರ ಕೆಡಸೋಕಿಂತ ಇದು ಒಳ್ಳೆಯದಲ್ಲವೆ ? ನಾನು ಹೇಳ್ತೀನಿ ಕೇಳಿ, ಸ್ವಾಮಿ–ಬಡತನ ಹೋಗೋವರ್ಗ್ಗೂ ಇದು ಹೋಗೋಲ್ಲ."

ಚಿನ್ನಪ್ಪನ ಮಾತು ಯಥಾರ್ಥವಾಗಿತ್ತು. ಅಷ್ಟು ಹೊತ್ತಿಗೆ ಪುಟ್ಟತಾಯಮ್ಮನ ಮನೆ ಬಂದುದರಿಂದ ಆ ಮಾತು ಬೆಳಸದೆ ಸುಮ್ಮನಾದೆ. ಮುಂದೆಮಾಡಿದ ಪುಟ್ಟತಾಯಮ್ಮನ ಮನೆಬಾಗಿಲು ತಟ್ಟಿದವು. ಯಾರೋ ಬಾಗಿಲು ತೆರೆದರು. ಬಾಗಿಲು ದಾಟಿ ಒಳಗೆ ಹೋಗುತ್ತಿದ್ದಹಾಗೆ ಸಣ್ಣದಾದ ನಡುಮನೆ. ನಡುಮನೆಯಲ್ಲಿ ಕಾಲಿಟ್ಟಿದ್ದು ಕೋಳಿಯ ಗೂಡಿನಲ್ಲಿ ಕಾಲಿಟ್ಟಂತಾಯಿತು. ಅಲ್ಲೇ ಕೂತ್ತಿದ್ದ ಆರೇಳು ಜನ ಹೆಂಗಸರು ಧಡಧಡ ಎದ್ದು ಕೋಣೆಗಳಿಗೆ ಸೇರಿಕೊಂಡರು. ಸ್ವಲ್ಪ ವಯೋವೃದ್ಧೆಯಾಗಿ ಎಲೆ ಅಡಿಕೆ ಮೆಲ್ಲುತ್ತಾ ಕುಳಿತಿದ್ದವಳೊಬ್ಬಳು, ಚಿನ್ನಪ್ಪನನ್ನು ನೋಡಿ.....

"ಓ, ಏನು ಚಿನ್ನಣ್ಣ. ಹಗಲೊತ್ನಾಗೇ ಬಂದ್ಬಿಟ್ಟೆ. ಬಾಳ ದಿವ್ಸಾ ಆಗಿತ್ತು ಇತ್ಲಾಗೆ ಬರ್ದೆ. ಯಾರೋ ಸ್ನೇಹಿತನರ್ನೂ ಕರ್ಕೊಂಡು ಬಂದಿದೀಯ. ಒಂದೆಲ್ಡು ಹೊಸ ಮಾಲು ಬಂದಿವೆ. ಚೌಕಾಸಿ ಮಾಡೋಕಾಗ್ದು, ಕರೀಲೇನು ?"–ಎಂದಳು.

"ನಿನಗಂತೂ ಯಾವಾಗ್ಲೂ ಅದರ ಅವಸರಾನೇ. ನಾವೀಗ ಅದಕ್ಕೆ ಬಂದಿಲ್ಲ."

"ವಳ್ಳೇ ಗಂಡ್ಸು! ಮತ್ಯಾಕೆ, ಕಣ್ಣಾಗೆ ನೋಡಿ ತೃಪ್ತಿ ಪಡೋಕೆ ಬಂದ್ಯಾ ?"

"ನಿನ್ನ ಮಾತೇ ನಿನಗಾಯ್ತು. ಪುಟ್ಟತಾಯಮ್ಮ ಇದಾಳ, ಲಕ್ಕವ್ವ ?"

"ಊಂ. ಇಲ್ದೆ ಎಲ್ಲೋಗ್ತಾಳೆ, ಒಳಗೆಲ್ಲೋ ಮಲಗಿರಬೋದು."

"ಸ್ವಲ್ಪ ನೋಡೋದಿತ್ತಲ್ಲಾ ? ರಾಯರು ಆಕೆ ಬಾಯಿಂದ ಚಂದ್ರವ್ವನ ಕಥೆ ಕೇಳಾಕೆ ಬಂದಿದಾರೆ."

"ಓ, ಅಷ್ಟೇನಾ ?" ಲಕ್ಕವ್ವನ ಮಾತಿನಲ್ಲಿ ತೀವ್ರನಿರಾಶೆ ಮಿಡಿಯಿತು.

"ಇದ್ದೋರ ಮಾತು ಬಿಟ್ಟು, ಸತ್ತೋರ ಕಥೆ ಕೇಳಾಕೆ ಕರಕೊಂಡು ಬಂದ್ಯಾ.... ಈಚೋರಿ ಕೋಣೇಲಿ ಮಲಗವ್ಳೆ. ಹೋಗ್ರಿ."

ನಡುಮನೆಯ ಹಿಂಬದಿಯ ಬಾಗಿಲು ದಾಟಿ, ಒಳಗೆ ಪುಟ್ಟತಾಯಮ್ಮ ಮಲಗಿದ್ದ ಕೋಣೆಗೆ ಹೋದೆವು. ಹಗಲಿನಲ್ಲೂ ಕೋಣೆಯಲ್ಲಿ ಮಬ್ಬುಗತ್ತಲು ತುಂಬಿತ್ತು. ನಾವು ಬಾಗಿಲು ತೆರೆದ ಸದ್ದು ಕೇಳಿ ಒಳಗೆ ಮಲಗಿದ್ದಾಕೆ "ಯಾರದು?"ಎಂದು ಕೇಳಿದಳು.

"ನಾನಜ್ಜಿ, ಕುರುಮರಡಿ ಚಿನ್ನಪ್ಪ" ಎಂದು ಹೇಳಿದ ಚಿನ್ನಪ್ಪ.

"ನೀನೇನಾ ? ಭಾಳ ದಿನಕ್ಕೆ ಬಂದಾಗಾಯ್ತು. ಬಾ ಸಂದಾಕಿದೀಯಾ ಚಿನ್ನಣ್ಣ ?"

"ಹಿಂಗಿವ್ನಿ; ನಮ್ಮ ರಾಯ್ರು ಕುರುಮರಡೀಗೆ ವೆಂಕಟಸುಬ್ಬಯ್ಯನೋರ ಕಥೆ ಕೇಳ್ಬೇಕೂಂತ ಬಂದಿದ್ರು. ಅದ್ಕೆ ನಿನ್ತಾವ ಚಂದ್ರವ್ವನ ಕಥೆ ಕೇಳ್ಳಿಕ್ಕೆಂತ ಕರಕೊಂಬಂದೆ."

"ಅಂಗಾ ? ಭಾಳ ಸಂತೋಷ."

"ಏನು, ಪೂರಾ ಮಲ್ಗೇ ಬಿಟ್ಟೆ ?"

"ಮಲ್ಗದೆ ಇನ್ನೇನೈತೆ. ವಯಸ್ಸಾಗೋಯ್ತು. ಇನ್ನೆಲ್ಲಾ ದಿನ ಗಂಟೆ ಎಣಿಸೋ ಲೆಕ್ಕ. ಓಡಾಡೋಕೋ ಆಯಾಕಿಲ್ಲ. ಕೀಲೆಲ್ಲಾ ಹಿಡ್ಕೊಂಬಿಟ್ಟಿದೆ. ಇಲ್ಲೆಲ್ಲಿ ಕೂತ್ಕೋತೀರ ? ನೀನೇ ಹೇಳಿದ್ರಾಗ್ತಿರಲಿಲ್ವಾ ? ಈ ನರಕದಾಗೆ ಯಾಕೆ ಕರಕೊಂಬಂದೆ."

"ಮನುಷ್ಯರು ಮಾಡಿದ ನರಕ ಮನುಷ್ಯರು ನೋಡದೇ ಮರ ನೋಡ್ತದಾ? ನೋಡಲೇಳು. ನಾನಾಗ್ಲೇ ರಾಯರಿಗೆ ಹೇಳಿದೀನಿ. ಅವರೇ ಒಪ್ಪಿ ಬಂದದ್ರೆ. ನೀನೇನೂ ತಿಳ್ಕೋಬೇಡ."

"ನಿಜ, ಪುಟ್ಟತಾಯಮ್ಮ. ವಿಷಯ ತಿಳಿದುಕೊಳ್ಳಬೇಕೊಂದರೆ, ಅದು ಇದ್ದಲ್ಲಿಗೇ ಹೋಗಬೇಕು. ನಾವಿದ್ದಲ್ಲಿಗೆ ಅದು ಬರಬೇಕೂಂದರೆ ಸಾಧ್ಯವೇ ? ನಾನು ಬಂದಿರೋದು ನಿಮಗೆ ತೊಂದರೆ ಕೊಡಲಿಕ್ಕೆ."

"ಎಂಥ ತೊಂದ್ರೆ – ತಿಳಿದ ವಿಚಾರ ಹೇಳೋದೂ ತೊಂದ್ರೆಯಾ ? ಏನಾದ್ರಾಗ್ಲಿ, ದೊಡ್ಡೋರು ಮನೇತನ್ಕ ಬಂದದ್ದು ನಮ್ಮ ಪುಣ್ಯ" ಎಂದಳು ಪುಟ್ಟತಾಯಮ್ಮ.



"ಹಾಗಲ್ಲ. ನಿಮಗೆ ಮೈಯಲ್ಲಿ ಚೆನ್ನಾಗಿಲ್ಲಾಂದಿರಿ. ತೊಂದರೆಯಾದರೆ ಮತ್ತೊಂದು ಸಲ ಬರುತ್ತೇನೆ. ಪರಿಚಯವಿಲ್ಲಾಂತ ಚಿನ್ನಪ್ಪನನ್ನು ಕರೆದು ಕೊಂಡು ಬಂದೆ."

"ನಿಮ್ಮಂಥೋರು ಹಂಗೆ ಹಗಲೆಲ್ಲಾ ಇತ್ಲಾಕಡೆ ಬರಬಾರ್ದು. ಅರೀದ ಜನ ಆಡ್ಕೋತಾವೆ. ಈಗಿನ ಹುಡುಗೇರೂ ಅಷ್ಟೆ. ಕರೆಯೋತನಕ ದೂರ ಇರಬೇಕು ಅನ್ನೊಲ್ಲ. ಹಸಿದ ಬೆಕ್ಕಿನ ಹಾಗೆ ಮ್ಯಾಲೇ ಬೀಳ್ತವೆ. ಅವು ತಾನೇ ಏನು ಮಾಡಿಯಾವು, ಪಾಪ! ಅವಕ್ಕೂ ಹೊಟ್ಟೆ ಆತುರ. ಅದ್ಕೆ ವಯಸ್ಸಿಗೆ ಬಂದ ಹುಡುಗ್ರು ಇಂಥ ಜಾಗದಿಂದ ಆದಷ್ಟು ದೂರ ಇರಬೇಕು."

"ಅದೆಲ್ಲಾ ಈಗ್ಯಾಕೆ ಹೇಳು." ಚಿನ್ನಪ್ಪ ನಡುವೆ ಬಾಯಿಹಾಕಿ ಹೇಳಿದ.

"ಹಂಗಲ್ಲಾ ಚಿನ್ನಣ್ಣ, ನೀನೇನೇ ಹೇಳು. ಈಗ ಬರೋವು ಅಡ್ಡ ಕಸಬಿ ಹುಡುಗೀರು. ಕಸಬಿನ ಮರ್ವಾದೇನೇ ಮರೆತವ್ರೆ. ಯಾರಾದ್ರೂ ಸಿಕ್ಕಾರೇನೋ, ನಾಲ್ಕು ಕಾಸು ಕಿತ್ಕೊಂಡು ತಿಂದೇವೇನೋಂತ ಬಾಯಿ ಬಿಡ್ತವೆ. ನಮ್ಮ ಕಾಲ್ಕೆ ಇಂಗಿರಲಿಲ್ಲ."

"ನಿಮ್ಮ ಕಾಲಕ್ಕೆ ಮಾನ ಇತ್ತು, ಮರ್ಯಾದೆ ಇತ್ತು, ಕೈತುಂಬ ದುಡ್ಡು ಕೊಟ್ಟು ಸಾಕೋರು ಇದ್ರು; ಈಗೇನಿದೆ? ನಾಲ್ಕಾಣೆ ಕೊಟ್ಟು ಬರೋರು ತಮ್ಮ ತೆವಲು ತೀರಿಸ್ಕೊಂಡು ಗುಡ್ಸೆಟ್ಟಿ ಅಂತ ಬೈದುಹೋಗುತ್ತಾರೆ – ಎಲ್ಲಾ ಕಾಲಕ್ಕೆ ತಕ್ಕಹಾಗೆ ಇರ್ತದೆ." ಚಿನ್ನಪ್ಪ ಕಟುವಾಗಿ ಹೇಳಿದ.

"ಅದ್ನಿಜಾನ್ನು, ನಮ್ಮ ಕಾಲ್ಕೆ ಒಬ್ಬ ಧಣೀನ ನೆಚ್ಕೊಂಡು, ತಾಳಿ ಕಟ್ಟಿಸಿಕೊಳ್ದೆ ಇದ್ರೂ ಹೆಂಡತಿ ಹಂಗೆ ಇರ್ತಾ ಇದ್ವಿ, ಅವ್ರೂ ಹಂಗೇ ಸಾಕೋರು. ಈಗೇನದೆ ? ಬಂದೋರ್ಗೆಲ್ಲಾ ಬಾಳ್ವೆ ಮಾಡಿದ್ರೂ ಒಪ್ಪೊತ್ತಿನ ಕೂಳು ಬೇಯಾಕಿಲ್ಲ. ಕಾಸು ವಿಷಾ ಆಗಿದೆ. ಬದುಕಿದ ಬಾಳಲ್ಲ, ಸತ್ತ ಸಾವಲ್ಲ!" ಪುಟ್ಟತಾಯಮ್ಮ ನಿಟ್ಟುಸಿರಿಟ್ಟು ಹೇಳಿದಳು.

"ಹೋಗ್ಲಿ, ಆ ಪುರಾಣ ಈಗ್ಯಾಕೆ ? ಚಂದ್ರವ್ವನ ಕಥೆ ಹೇಳು. ರಾಯ್ರು ಕೇಳ್ಕೊಂಡು ಹೋಗ್ಲಿ. ಬಾಕಿ ಮಾತೆಲ್ಲಾ ನಿಧಾನವಾಗಿ ಆಡ್ಕೋಬೋದು. ನಿನ್ನೆಯಿಂದ ಅವ್ರಿಗೆ ಊಟ, ತಿಂಡಿ, ನಿದ್ರೆ ಯಾವ್ದೂ ಇಲ್ಲ."

"ಯಾಕೆ ?"

ಚಿನ್ನಪ್ಪ ಆಕೆಗೆ ನಾನು ಕುರುಮರಡಿಗೆ ಬಂದದ್ದು, ಅಲ್ಲಿ ನಡೆದದ್ದು ಎಲ್ಲಾ ಹೇಳಿದ.

"ಅಯ್ಯೋ ಶಿವನೆ, ಅಂಗಾ! ಮೊದ್ಲೆ ಹೇಳಾಕಿಲ್ಲ, ವಸಿ ಹಾಲಾದ್ರೂ ತರಸ್ತಿದ್ದೆ. ಏ.... ಲಕ್ಕೀ... ಲಕ್ಕೀ...." ಎಂದು ಶಕ್ತಿ ಬಿಟ್ಟು ಕೂಗಿದಳು ಪುಟ್ಟತಾಯಮ್ಮ. ಆಕೆಯ ಕೂಗು ಕೇಳಿ ಲಕ್ಕವ್ವ ಅಲ್ಲಿಗೆ ಬಂದಳು.

"ರಾತ್ರಿಯಿಂದ ಇಬ್ರಿಗೂ ಊಟಾ ನಿದ್ದೆ ಇಲ್ಲಂತೆ. ವಸಿ ಹಾಲಿದ್ರೆ ಕಾಯಿಸ್ಕೊಡು. ದೊಡ್ಡೋರ ಹೆಸರು ಕೇಳ್ಕೊಂಡು ಬಂದವ್ರೆ. ಅಂಥೋರ ಮನೇಲಿ ಮಿಳ್ಳೆ ಹಾಲು ಹುಟ್ಲಿಲ್ಲ ಅಂದಾರು."

ತನ್ನ ಹಿರಿಯರ ಬಗ್ಗೆ ಪುಟ್ಟತಾಯಮ್ಮ ವ್ಯಕ್ತಪಡಿಸಿದ ಅಭಿಮಾನವನ್ನು ಕಂಡು ನನಗೆ ಆಶ್ಚರ್ಯವಾಯಿತು. ತಟಕ್ಕನೆ ಲಿಂಗಾಜೋಯಿಸರ ಬಳಿ ಹೋದಾಗ ಅವರು ತೋರಿಸಿದ ತಾತ್ಸಾರವೂ ನೆನಪಾಯಿತು. ನಾವು ಕೀಳೆಂದು ಕರೆಯುವವರಲ್ಲಿ ಎಂಥ ದೊಡ್ಡ ಗುಣವಿದೆ! ಮನಸ್ಸಿನಲ್ಲೇ ಆಕೆಯನ್ನು ಮೆಚ್ಚಿಕೊಂಡೆ. ಸ್ವಲ್ಪ ಹೊತ್ತು ಚಿನ್ನಪ್ಪ, ಆಕೆ ಇಬ್ಬರೂ ಏನೇನೋ ಮಾತಾಡುತ್ತ ಇದ್ದರು. ಅಷ್ಟುಹೊತ್ತಿಗೆ, ಲಕ್ಕವ್ವ ಹಾಲು ತಂದು ಕೊಟ್ಟಳು. ನಾವು ಹಾಲು ಕುಡಿದಾದಮೇಲೆ ಪುಟ್ಟತಾಯಮ್ಮ ಚಂದ್ರಮ್ಮನ ಕಥೆ ಹೇಳಲಾರಂಭಿಸಿದಳು :

## ೧೦

"ವೆಂಕಟಸುಬ್ಬಯ್ಯನೋರಿಗೆ ಹಾಡಿನ ಹುಚ್ಚು ಬಿಟ್ಟು ಚಂದ್ರಾಸಾನಿಯ ಹುಚ್ಚು ಹಿಡಿದದ್ದು ಹೀಗೆ:"

"ಚಿನ್ನಪ್ಪ ಹೇಳಿದ ಹಾಗೆ, ಸ್ವಾಮಿಗಳ ಶಿಷ್ಯನಿಂದ ಪರಾಭವ ಆಗಿ, ಕಣ್ಣು ತೆರೆದಮೇಲೆ, ವೆಂಕಟಸುಬ್ಬಯ್ಯನವರಿಗೆ ರಾಗ ಸಾಧಿಸುವ ಹುಚ್ಚು ಹಿಡಿಯಿತು. ಹುಚ್ಚೆಂದರೆ ಅದು ಹುಚ್ಚೇ. ಹಿಂದಿನ ಕಾಲದಲ್ಲಿ ದೇವರನ್ನು ಒಲಿಸಿಕೊಳ್ಳೋಕೆ ತಪಸ್ಸು ಮಡ್ತಾ ಇದ್ರಂತಲ್ಲಾ ಹಾಗೆ, ಇವರು ರಾಗದ ತಪಸ್ಸು ಆರಂಭಿಸಿಬಿಟ್ಟರು. ಹುಡುಗನಿಂದ ತಮಗೆ ಸೋಲಾದ ಮರುದಿನವೇ ಇನ್ನು ಯಾವುದಾದರೂ ರಾಗವನ್ನು ಒಲಿಸಿಕೊಳ್ಳದೆ, ಮತ್ತೆ ಹಾಡಿಗೆ ತಂಬೂರಿ ಹಿಡಿಯುವುದಿಲ್ಲವೆಂದು ಶಪಥ ಮಾಡಿ, ಸಾಧನೆ ಆರಂಭಿಸಿದರು. ಆ ಸಾಧನೆಗೆ ಹೊತ್ತಿಲ್ಲ. ಇಪ್ಪತ್ತುನಾಲ್ಕು ಗಂಟೆ ಕಾಲವೂ ಅದೇ ಧ್ಯಾನ. ಸಂಗೀತಶಾಸ್ತ್ರದ ಮೇಲಿನ ಹಳೇ ಗ್ರಂಥಗಳನ್ನೋದಿ, ಯಾವ ರಾಗಕ್ಕೆ ಯಾವ ಹೊತ್ತು, ಯಾವ ದೇವತೆ ಎಂದರಿತು, ಆ ಹೊತ್ತಿನಲ್ಲಿ ಎಲ್ಲಾದರೂ ಒಂದು ನಿರ್ಜನಸ್ಥಳ ಸೇರಿ ಆ ರಾಗಧ್ಯಾನ ಮಾಡಲಾರಂಭಿಸಿದರು. ಒಂದು ದಿನ ಹೀಗೆ ಭೈರವಿ ರಾಗ ಧ್ಯಾನ ಮಾಡಬೇಕು ಎನಿಸಿತು. ಭೈರವಿಯು ಪೂರ್ವಯಾಮದ ರಾಗ, ಸೂರ್ಯ ಮೂಡುವ ಮೊದಲು ಅದನ್ನು ಹಾಡಬೇಕು. ಹಾಗೆ ಹಾಡಿದರೆ ಆ ರಾಗ ಸಿದ್ಧಿಸುತ್ತದೆ ಎನ್ನುತ್ತಾರೆ. ವೆಂಕಟಸುಬ್ಬಯ್ಯನವರು ಆ ದಿನದ ಹಿಂದಿನ ರಾತ್ರಿಯೇ ಮನೆ ಬಿಟ್ಟು ಊರ ಹೊರಗಿರುವ ಕೇಶವದೇವರ ಗುಡಿಯಲ್ಲೇ ಮಲಗಿದರು – ಸರಿಯಾದ ಹೊತ್ತಿಗೆ ಎದ್ದು ರಾಗಾಭ್ಯಾಸ ಮಾಡಬಹುದೆಂದು. ಅದರ ಚಿಂತೆಯಲ್ಲಿ ನಿದ್ದೆಯೇ ಬರಲಿಲ್ಲ, ಅವರಿಗೆ, ಹಾಗೇ ಹೊರಳಾಡುತ್ತಿದ್ದು, ಬೆಳ್ಳಿ ಮೂಡುವ ಹೊತ್ತಿಗೆ ಎದ್ದು, ದೇವಾಲಯದ ಹಿಂದಿನ ಕೊಳದಲ್ಲಿ ಮುಖ, ಕೈಕಾಲು ತೊಳೆದುಕೊಂಡು ಬಂದು ಅಲ್ಲೇ ಬಳಿಯಲ್ಲಿರುವ ಅದ್ರಿ ಹೂವಿನ ಮರದ ಅಡಿಯಲ್ಲಿ ಕುಳಿತಿದ್ದರು – ಸರಿಯಾದ ಹೊತ್ತು ಬರುವುದನ್ನು ಕಾಯುತ್ತಾ; ಮನಸ್ಸನ್ನು ರಾಗಕ್ಕೆ ಶ್ರುತಿ ಮಾಡಿಕೊಳ್ಳುತ್ತಾ."

"ಕಣ್ಣು ಮುಚ್ಚಿ ರಾಗಧ್ಯಾನ ಮಾಡುತ್ತಾ, ಜಗತ್ತನ್ನೇ ಮರೆತು ಕೂತಿದ್ದರು ವೆಂಕಟಸುಬ್ಬಯ್ಯ. ಇದ್ದಕ್ಕಿದ್ದಹಾಗೆ ಬಳಿಯ ಕೊಳದೆಡೆಯಿಂದ ಯಾರೋ ಹೆಂಗಸು ಹೆದರಿ, ಚೀರಿದ ಧ್ವನಿ ಕೇಳಿಸಿ, ಧಡಕ್ಕನೆ ಮೇಲೆದ್ದು ಕೊಳದ ಬಳಿ ಓಡಿದರು. ಯಾರೋ ಹೆಂಗಸು ಕಾಲುಜಾರಿ ಕೊಳದಲ್ಲಿ ಬಿದ್ದು ಮುಳುಗಿ ಮೇಲೆದ್ದು, ಮತ್ತೆ ಮುಳುಗುವುದರಲ್ಲಿದ್ದಳು. ಹಿಂದೆಮುಂದೆ ಯೋಚಿಸದೆ, ವೆಂಕಟಸುಬ್ಬಯ್ಯ ಕೊಳಕ್ಕೆ ಹಾರಿ, ಮುಳುಗಿದ ಹೆಂಗಸನ್ನು ದಡಕ್ಕೆ ತಂದರು. ಆ ವೇಳೆಗೆ ಆಕೆಗೆ ಪ್ರಜ್ಞೆ ತಪ್ಪಿತ್ತು. ನೀರ ಬದಿಯ ಮೆಟ್ಟಿಲ ಮೇಲೆ ಆಕೆಯ ಒಣಗಿದ ಸೀರೆ, ಅರಿಶಿನ ಕುಂಕುಮ ಕಾಣಿಸಿತು. ಆಗ ಅವರಿಗೆ ಅದು ಮಾಘಮಾಸವೆಂದೂ, ಆಕೆ ಯಾರೋ ಮಾಘಸ್ನಾನಕ್ಕೆ ಬಂದು ಕಾಲು ಜಾರಿರಬೇಕೆಂದೂ ಅರ್ಥವಾಯಿತು. ಹಾಗೇ ಆಕೆಯನ್ನು ಹೊತ್ತು ತಂದು ದಡದ ಮಂಟಪದಲ್ಲಿ ಮಲಗಿಸಿದರು."

"ನೀರಿನಲ್ಲಿ ಮುಳುಗಿದ ಹೆಂಗಸು ಆಗಲೇ ಸಾಕಷ್ಟು ನೀರು ಕುಡಿದಿದಿದ್ದಳು. ಆಕೆಯನ್ನು ಬೆನ್ನು ಮೇಲಾಗಿ ಮಲಗಿಸಿ, ಹೊಟ್ಟೆಯನ್ನು ಹಿಸುಕಿ ಕುಡಿದ ನೀರು ಹೊರಡಿಸಿದರು. ತಾವು ಛಳಿಗೆ ಕಾವಲೆಂದು ಹೊತ್ತಿಸಿಕೊಂಡಿದ್ದ ಬೆಂಕಿಯ ಬಿಸಿಬೂದಿಯನ್ನು ತಂದು, ಆಕೆಯ ಒದ್ದೆ ಬಟ್ಟೆ ಸುಸಿ, ಅಂಗಾಂಗಗಳಿಗೆ ಚೆನ್ನಾಗಿ ತಿಕ್ಕಿ, ಮೈಯಲ್ಲಿ ಬಿಸಿ ಹುಟ್ಟಿದಮೇಲೆ, ಆಕೆ ತಂದ ಒಣಸೀರೆಯನ್ನು ಹೊದಿಸಿ, ಹತ್ತಿರದಲ್ಲೇ ಕೂತರು".

"ಅಲ್ಲಿಯವರೆಗೂ, ಜೀವ ಉಳಿಸುವ ಆತುರದಲ್ಲಿ ಆಕೆ ಹೆಂಗಸು ಎಂಬುದು ಅವರಿಗೆ ಎಚ್ಚರವಿರಲಿಲ್ಲ. ಆ ಜೀವಕ್ಕೆ ಭಯವಿಲ್ಲ ಎಂದು ಅರ್ಥವಾಗಿ ಉಸಿರಾಡಿಕೊಳ್ಳಲು ಬಿಡುವಾದಾಗ, ತಾವು ಬದುಕಿಸಿದ ಜೀವ ಹೆಣ್ಣು" ಎಂಬುದು ಅವರಿಗೆ ಅರಿವಾಯಿತು.

"ಆಗ ಅವರಿಗೆ ಒಳ್ಳೇ ಇಪ್ಪತ್ತನಾಲ್ಕು – ಇಪ್ಪತ್ತೈದು ವರ್ಷದ ಪ್ರಾಯ. ಆದರೂ ಅದುವರೆಗೂ ತಾಯಿಯನ್ನಲ್ಲದೆ ಬೇರೊಬ್ಬ ಹೆಣ್ಣನ್ನು ತಲೆಯೆತ್ತಿ ನೋಡಿರಲಿಲ್ಲ. ಹಿಂದೆಂದೋ ಒಮ್ಮೆ ಯಾರೋ ಒಬ್ಬ ಹೆಣ್ಣನ್ನು ನೋಡ ಹೋಗಿ, ಅವರ ಗುರುಗಳಿಂದ ಬೈಸಿಕೊಂಡರಂತೆ ಅವರು. ಅಂದಿನಿಂದ ಹೆಣ್ಣಿನ ಚಿಂತೆಯನ್ನೇ ಮರೆತಿದ್ದರು. ಸಂಗೀತ ಸಾಧನೆಯಲ್ಲಿ ನಿರತರಾದ ಅವರಿಗೆ ಹೆಣ್ಣಿನ ಚಿಂತೆಯೇ ಬಂದಿರಲಿಲ್ಲ. ಆ ದಿನ ಮೊದಲ ಬಾರಿಗೆ, ಅವರಿಗೆ ನಗ್ನಸ್ತ್ರೀ ಸೌಂದರ್ಯದ ದರ್ಶನವಾಯಿತು. ತಾವೇ ಹೊದಿಸಿದ ತೆಳುವಾದ ಸೀರೆಯಡಿಯಲ್ಲಿ ಮಲಗಿದ ಹೆಣ್ಣನ್ನು ದಿಟ್ಟಿಸಿ ನೋಡಿದರು. ಕಣ್ಣು ತೆರೆಯದೆ ಮಲಗಿದ ರೂಪಜ್ವಾಲೆ ಮಿಂಚಿನಂತೆ ಅವರ ಮೈಯಲ್ಲಿ ಹರಿಯಿತು. ಆಯಾಸದಿಂದ ಭಾರವಾದ ಎಳೆವ ಉಸಿರಿಗೆ ಏರಿಳಿವ ಎದೆಯ ಮಿಡಿತ, ಅವರ ಮೈಯ ನರನರವನ್ನೂ ಬೆಂಕಿಯ ಬೆರಳಿನಿಂದ ಮಿಡಿದು, ಅವರನ್ನು ವಿಹ್ವಲಗೊಳಿಸಿತು. ಅದುವರೆಗೂ, ಅವರಿಗೆ ಅರಿವಾಗದಂತೆ ಸುಪ್ತವಾಗಿದ್ದ, ಯಾವುದೋ ಪ್ರಖರ ಭಾವ ಜಾಗ್ರತವಾಗಿ ಹುಚ್ಚು ಹೊಳೆಯಂತೆ ಮೊರೆಯತೊಡಗಿತು. ಕಣ್ಣೆದುರು ಮಲಗಿದ ವಿಲಾಸದ ಹೊಳೆಯಲ್ಲಿ ಮೈಯನ್ನು ತೂರಿಬಿಡಬೇಕು ಎನ್ನಿಸಿ, ಮೈ ಬಿಗಿದು ಕಾವಾಯಿತು."

"ಮರುಗಳಿಗೆಯೇ ಒಂದು ಕ್ಷಣ ಕಣ್ಣುಮರೆಯಾದ ವಿವೇಚನೆ – 'ಛೇ! ಇದು ಪಾಪ ಯೋಚನೆ. ಪರಸ್ತ್ರೀಯ ಬಗ್ಗೆ ಇಂಥ ಕೀಳು ಯೋಚನೆ ಸಲ್ಲದು. ಯಾವ ಮನೆಯ ಮಂಗಳ ದೀಪವೋ ಆಕೆ. ಆಕೆಯ ಜೀವ ಉಳಿಸಿ ಈ ಆಲೋಚನೆ ಮಾಡುವುದೇ, ನೀಚ!' ಎಂದಿತು. ಕೂಡಲೇ ಮಂಟಪದಿಂದ ಹೊರಗೆ ಬಂದು ತಂಗಾಳಿಯಲ್ಲಿ ಕುಳಿತರು, ಕಣ್ಣು ತೆರೆಯಲು ಕೂಡ ಧೈರ್ಯವಿರಲಿಲ್ಲ. ಕಾಡುಕುದುರೆಯಂತೆ ಕುಣಿವ ಮನಸ್ಸಿಗೆ ಸಂಯಮದ ಕಡಿವಾಣ ಬಿಗಿಯುತ್ತಾ, ಹೆಣ್ಣನ್ನು ಮರೆಯಲೆತ್ನಿಸುತ್ತಾ ಕುಳಿತಿದ್ದರು."

"ಸ್ವಲ್ಪ ಹೊತ್ತಾದಮೇಲೆ, ಒಳಗೆ ಮಲಗಿದ ಹೆಣ್ಣು, ಅಲುಗಾಡುವ ಸದ್ದಾಯಿತು. ಅವರ ಮನಸ್ಸು ಒಂದೊಂದು ಗಳಿಗೆಯೂ, ಈಗ ಆಕೆ ಏನು ಮಾಡುತ್ತಿರಬಹುದು ಎಂದೇ ಊಹಿಸುತ್ತಿತ್ತು. ಹಾಗೇ ಹತ್ತು ಗಳಿಗೆ ಕಳೆದ ಮೇಲೆ, ಆಕೆ ಎದ್ದು ಓಡಾಡುವ ಸದ್ದು ಕೇಳಿಸಿತು. ವೆಂಕಟಸುಬ್ಬಯ್ಯ ಕಣ್ಣನ್ನು ಮತ್ತಷ್ಟು ಬಿಗಿಯಾಗಿ ಮುಚ್ಚಿದರು. ಆಕೆ ಮಂಟಪದಿಂದ ಹೊರ ಬರುವ ಸದ್ದಾಯಿತು."

"ಈ ದಿನ ನನ್ನ ಜೀವ ಉಳಿಸಿದಿರಿ. ಎಂದೂ ನಿಮ್ಮ ಉಪಕಾರವನ್ನು ಮರೆಯಲಾರೆ."



"ಹೆಣ್ಣು ಆತನ ಕಾಲು ಹಿಡಿದು, ಹಣೆ ಸೋಕಿಸಿ ಹೇಳಿತು. ತೆರೆಯದಿದ್ದರೆ ಸಿಡಿಯುವವನೆಂಬ ಕಣ್ಣನ್ನು ಮುಚ್ಚಲಾರದೆ, ವೆಂಕಟಸುಬ್ಬಯ್ಯ ಮುಂಜಾವಿನ ಬೆಳಕಿನಲ್ಲಿ, ಅವರ ಮುಖವನ್ನೇ ಕೃತಜ್ಞತೆಯಿಂದ ದಿಟ್ಟಿಸುತ್ತಿರುವ ಹೊಳಪು ಕಣ್ಣನ್ನು ನೋಡಿದರು. ಮಂಟಪದೊಳಗಿನ ಕತ್ತಲಿನಲ್ಲೂ ಆಕೆ ರೂಪವತಿ ಎಂದು ತಿಳಿದಿತ್ತು, ಮೂಡಲ ಕೆಂಬೆಳಕು, ಆ ರೂಪಕ್ಕೆ ಮೆರಗು ಕೊಟ್ಟಿತು. ಆಯಾಸದಿಂದ ಬಳಲಿದರೂ, ತುಂಬುಯೌವನದ ಉಜ್ವಲತೆಯಿಂದ ಪ್ರಕಾಶವಾದ ಹೆಣ್ಣ ಸಹಜಸೌಂದರ್ಯ ಅವರ ಕಣ್ಣುಕುಕ್ಕಿತು. ರೂಪಮುಗ್ಧವಾದ ನಾಲಗೆಗೆ ಮಾತನಾಡುವ ಶಕ್ತಿಯೇ ಇರಲಿಲ್ಲ ಹಾಗೂ ಪ್ರಯತ್ನಪಟ್ಟು ಹೇಳಿದರು."

"ನಿಮ್ಮ ಜೀವ ಉಳಿಸಿದವನು ನಾನಲ್ಲ, ನಿಮ್ಮ ಪಾಲಿನ ದೇವರು ನಿಮ್ಮನ್ನು ಕಾಪಾಡಿದ."

"ನಿಜ. ನಿಮ್ಮ ರೂಪದಲ್ಲಿ ಬಂದು ಕಾಪಾಡಿದ, ನನ್ನ ಪಾಲಿನ ದೇವರು."

"ಏನೋ, ಆದರೂ ಹೊತ್ತಲ್ಲದ ಹೊತ್ತಿನಲ್ಲಿ ಹೀಗೆ ಒಂಟಿಯಾಗಿ ಸ್ನಾನಕ್ಕೆ ಬರಬಾರದು."– ಮುಖವನ್ನು ಎತ್ತಲೋ ತಿರುಗಿಸಿ ಹೇಳಿದರು ವೆಂಕಟಸುಬ್ಬಯ್ಯ.

"ದಿನವೂ ಮಾಘಸ್ನಾನಕ್ಕೆ ಇಲ್ಲಿಗೆ ಬರುತ್ತಿದ್ದೆ. ಈ ದಿನ ಬೆಳ್ಳಿಯ ಬೆಳಕು ಮೋಸಮಾಡಿತು. ಹೊತ್ತು ತಿಳಿಯದೆ ಬಂದೆ. ಕತ್ತಲಿನಲ್ಲಿ ಕಾಲುಜಾರಿತು."

"ವೆಂಕಟಸುಬ್ಬಯ್ಯನವರ ಮನಸ್ಸು ಆಕೆಯ ಮಾತು ಕೇಳದೆ, ಆಕೆಯ ಮಾಧುರ್ಯವನ್ನೇ ಸವಿಯುತ್ತಿತ್ತು. ಆದರೆ ಆಕೆ ಏನು ಹೇಳಿದಳೆಂದು ತಿಳಿಯದೆ ಸುಮ್ಮನೆ 'ಹೂಂ' " ಎಂದರು.

"ನನ್ನ ಪುಣ್ಯವಶಾತ್ ಈ ದಿನ ನೀವು ಇಲ್ಲಿದ್ದುದರಿಂದ ಬದುಕಿದೆ."

"ಹೂಂ...... ಆದರೆ ಹೆಚ್ಚು ಹೊತ್ತು ಛಳಿಗೆ ಮೈ ಬಿಡಬೇಡಿ. ಮನೆಗೆ ಹೋಗಿ. ಜೊತೆಗೆ ಅಷ್ಟು ದೂರ ಬರಲೆ?"

"ಬೇಡಿ, ನಾನೇ ಹೋಗುತ್ತೇನೆ. ನಿಮಗೇಕೆ ವೃಥಾ ತೊಂದರೆ. ಏನೋ ಯೋಚಿಸುತ್ತಿದ್ದೀರೆಂದು ಕಾಣುತ್ತದೆ."

"ಹೂಂ."

"ಮಾತಾಡಿ ನಿಮ್ಮ ಯೋಚನೆಗೆ ವಿಘ್ನವಾಗಲಾರೆ. ನಾನಿನ್ನು ಬರಲೆ ?"

ಎಂದು ಹೇಳಿ ಹೆಣ್ಣು ಮತ್ತೊಮ್ಮೆ ಅವರಿಗೆ ನಮಸ್ಕರಿಸಿತು. ಆಕೆಯ ಕೈ ಸೋಕಿದ ಮೈ ಕಿಡಿಸೋಕಿದ ಕರ್ಪೂರದಂತೆ ಉರಿಯಿತು.

"ಹೂಂ, ಹೋಗಿ ಬನ್ನಿ."

"ಹೆಣ್ಣು ಒದ್ದೆಯ ಬಟ್ಟೆ, ಅರಿಶಿನ ಕುಂಕುಮದ ಬಟ್ಟಲುಗಳನ್ನು ತೆಗೆದುಕೊಂಡು ಹೊರಟಿತು. ಆಕೆಯ ಕಣ್ಣುಮರೆಯಾಗಿ ಬೆನ್ನು ಕಂಡ ಕೂಡಲೇ ಆಕೆಯನ್ನೇ ನೋಡತೊಡಗಿದರು ವೆಂಕಟಸುಬ್ಬಯ್ಯ. ಸಡಲಿದ ಜಡೆ ಮುಡಿಯಿಂದ ನಡುವಿನವರೆಗೂ ಹರಡಿ, ಬಳ್ಳಿಯ ನಡಿಗೆಯೇ ತಾಳಕ್ಕೆ ಮೈನಾಟ್ಯವಾಡುತ್ತಿದೆ. ಆಕೆ ಗಳಿಗೆ ಗಳಿಗೆಗೆ ತನ್ನಿಂದ ದೂರವಾಗುತ್ತಿದ್ದಾಳೆ– ಎಂಬುದು ಅರಿವಾದಾಗ, ಆಕೆ ಯಾರೆಂದು ಕೇಳಲಿಲ್ಲವಲ್ಲಾ, ಹೆಸರು ಕೂಡ ತಿಳಿದುಕೊಳ್ಳಲಿಲ್ಲವಲ್ಲಾ ಎಂಬುದು ತಟಕ್ಕನೆ ಹೊಳೆದು, ಎದ್ದು, ಆಕೆಯ ಗಮನ ಸೆಳೆಯಲು ಕೈಚಪ್ಪಾಳೆ ತಟ್ಟಿ, ವೇಗವಾಗಿ ಆಕೆಯತ್ತ ಹೆಜ್ಜೆಹಾಕಿದರು."

"ಅವರ ಕೈಸದ್ದು ಕೇಳಿ ಆಕೆ ತಿರುಗಿ ನಿಂತಳು. ಅವರ ನಡಿಗೆಯ ವೇಗವನ್ನು ಕಂಡು ಆಕೆಯ ಕಣ್ಣಲ್ಲಿ ಏನೋ ಭೀತಿ–ಸಂಶಯ ಸುಳಿಯಿತು."

"ಕ್ಷಮಿಸಿ, ಎಲ್ಲೋ ಧ್ಯಾನದಲ್ಲಿ ನಿಮ್ಮ ಹೆಸರು ಕೇಳುವುದೂ ಮರೆತು ಹೋಯಿತು. ಅದಕ್ಕೆ ನಿಲ್ಲಿಸಿದೆ."

"ಅವರ ಪ್ರಶ್ನೆ, ಅದನ್ನು ಅವರು ಕೇಳಿದ ರೀತಿಯನ್ನು ಕಂಡು ಆಕೆಯ ಕಣ್ಣಲ್ಲಿ ಕವಿದ ಭೀತಿ ತೊಲಗಿ, ಮೃದುಹಾಸ್ಯ ಮಿಂಚಿತು."

"ನನ್ನ ಹೆಸರು ಚಂದ್ರಾ–ನಿಮ್ಮನ್ನು ನಾನು ಹೆಸರು ಕೇಳಿ ಬಲ್ಲೆ."

"ಆ! ನಿಮ್ಮ ಹೆಸರು ಏನೆಂದಿರಿ ?"

"ಚಂದ್ರಾಸಾನಿ!"

"ಹೆಣ್ಣು ನಾಚಿ ನುಡಿಯಿತು ತನ್ನ ಹೆಸರನ್ನು. ಹೆಸರು ಹೇಳುವಾಗ ಆಕೆಯ ಮುಖ ಆರಕ್ತವಾಯಿತು. ಆ ಹೆಸರು ಕೇಳಿ ವೆಂಕಟಸುಬ್ಬಯ್ಯನವರೂ ಮಾತು ಸೋತವರಂತೆ ನಿಂತಿದ್ದರು."

"ನಾನಿನ್ನು ಬರಲೆ? ಅಪ್ಪಣೆ ಕೊಡಬೇಕು" ಎಂದು ಹೇಳಿ, ಅವರು ಅಪ್ಪಣೆ ಕೊಡುವವರೆಗೂ ಕಾಯದೆ, ಬೇಗ ಹೆಜ್ಜೆ ಹಾಕಿ ಹೋದಳು ಆಕೆ. ಅಷ್ಟು ದೂರ ಹೋಗಿ ಏಕೋ ತಿರುಗಿ ನೋಡಿದಳು. ನೆಲಕ್ಕೆ ಕಾಲು ಕೀಲಿಸಿದವರಂತೆ, ವೆಂಕಟಸುಬ್ಬಯ್ಯ ಬಿಟ್ಟ ಕಣ್ಣಿಂದ ಅವಳ ಕಡೆಯೇ ನೋಡುತ್ತಾ ನಿಂತಿದಾರೆ. ಮತ್ತೆ ಆಕೆ ಹಿಂದಿರುಗಿ ನೋಡಲಿಲ್ಲ; ಮುಂಜಾವಿನ ಹೊಂಬೆಳಕಿನಲ್ಲಿ ಸುಂದರ ಕನಸಿನಂತೆ ಕರಗಿಹೋದಳು.

"ಚಂದ್ರಾ.... ಚಂದ್ರಾ...."

"ನಾಡಿಯ ಮಿಡಿತಕ್ಕೊಂದು ಬಾರಿ ವೆಂಕಟಸುಬ್ಬಯ್ಯನವರ ಮನಸ್ಸು ಆ ಹೆಸರನ್ನು ನುಡಿಯುತ್ತಿತ್ತು. ಹತ್ತು ಕಡೆಯಿಂದ ಬೀಳುತ್ತಿರುವ ಕಲ್ಲಿನ ಸುರಿಮಳೆಯಲ್ಲಿ



ಪ್ರಕ್ಷುಬ್ಧವಾದ ಕೊಳದ ನೀರಿನಂತಿತ್ತು ಅವರ ಮನಸ್ಸು."

"ಚಂದ್ರಾಸಾನಿಯನ್ನು ಅದುವರೆಗೂ ವೆಂಕಟಸುಬ್ಬಯ್ಯನವರು ನೋಡದಿದ್ದರೂ, ಆಕೆಯ ಹೆಸರನ್ನು ಕೇಳಿದ್ದರು– 'ನಗರದ ವೇಶ್ಯೆಯರಲ್ಲೆ ಅತ್ಯಂತ ಚೆಲುವೆ'ಯೆಂದು. ಓ! ಎಂಥ ಸೌಂದರ್ಯ, ಅವರ ಕಲ್ಪನೆ ಆ ಸಜೀವ ಸೌಂದರ್ಯದ ಅಂಚನ್ನೂ ಮುಟ್ಟಿರಲಿಲ್ಲ. ತನಗೆ ದರ್ಶನ ಕೊಡಲೆಂದೇ ಈ ಅವಸ್ಥೆಯಲ್ಲಿ, ನಿರಾಭರಣ ಸಹಜತೆಯಲ್ಲಿ, ಕೊಳದ ನೀರಿನಲ್ಲಿ ಮೂಡಿಬಂದಳೇ ಈ ರೂಪಲಕ್ಷ್ಮಿ ! ಅವಳ ಅವಯವ ಸೌಭಾಗ್ಯವನ್ನು ಸ್ಪರ್ಶಿಸಿದ ಮೈ, ನೆನಪಿರಲ್ಲಿ ಪುಳಕಿತವಾಗಿ ಉತ್ಸಾಹಿತವಾಯಿತು. ಕಣ್ಣುಮರೆಯಾದ ರೂಪವನ್ನು ಕರೆಕರೆದು ಚಿಂತಿಸಿತು ಮನಸ್ಸು. ಅದುವರೆಗೂ ಅವರ ಬಾಳಿನಲ್ಲಿ ಎಲ್ಲೋ ಅಡಗಿದ್ದ ಬಯಕೆ, ಉನ್ಮತ್ತವಾಗಿ ವಿಜೃಂಭಿಸಿ ತೃಪ್ತಿಯ ಸುಂಕ ಬೇಡಿತು."

"ಹುಚ್ಚಾದ ಮನಸ್ಸನ್ನು ಹತೋಟಿಗೆ ತರಲೆತ್ನಿಸಿದರು ವೆಂಕಟಸುಬ್ಬಯ್ಯ, ಸಾಧ್ಯವಾಗಲಿಲ್ಲ. ಆ ಗಳಿಗೆಯಲ್ಲಿ ಹಿಂದೆ ಬುವಾ ಹೆಣ್ಣಿನ ವಿಷಯದಲ್ಲಿ ಹೇಳಿದ ಎಚ್ಚರಿಕೆಯನ್ನು ನೆನಪಿಗೆ ತಂದುಕೊಳ್ಳಲೆತ್ನಿಸಿದರು. ಆ ಎಚ್ಚರಿಕೆಯ ನೆನಪು ಅಂದು ಕಂಡ ರೂಪದ ಬಿರುಗಾಳಿಯ ಇದಿರು ತರಗೆಲೆಯಂತೆ ಹಾರಿಹೋಯಿತು. ಸಂಗೀತದ ಆಭ್ಯಾಸದಲ್ಲಿ ಈ ಸಲ್ಲದ ಬಯಕೆಯನ್ನು ತುಳಿಯಲೆತ್ನಿಸಿದರು. ನೀರಿನಲ್ಲಿ ತುಳಿದು ಹಗುರಾದ ಚೆಂಡಿನಂತೆ ಮತ್ತೆ ಹೊರಹಾರುತ್ತಿತ್ತು, ಅದಮ್ಯ ಆಕಾಂಕ್ಷೆ. ಒಂದು ದಿನವಾಯಿತು, ಎರಡು ದಿನವಾಯಿತು – ಅದೇ ರೂಪದಾಹ. ಎಷ್ಟೆಷ್ಟು ಮರೆಯಲೆತ್ನಿಸಿದರೂ, ಚಂಡಿಹಿಡಿದ ಮಗುವಿನಂತೆ, ಮುಚ್ಚಿದ ಕಣ್ಣು ಅದನ್ನೇ ಕಾಣುತ್ತದೆ."

"ಕೇದಿಗೆಯ ಕಾಂತಿಯಲ್ಲಿ ಗುಲಾಬಿಯ ಹೊಳಪನ್ನು ಬೆರೆಸಿದ ದಂತದಲ್ಲಿ ಕೆತ್ತಿದ ಮೈ; ಬಯಕೆಯ ಹೂ ಅರಳಿದಂತೆ ಬಿರಿದ ಚೆಂದುಟ; ಚೆಂದುಟಿಗೆ ತೋರುಬೆರಳಂತೆ ರಂಜಿಸುವ ಎಸಳಾದ ನಾಸಿಕ; ಯೌವನಭರದಿಂದ ಮತ್ತವಾಗಿ, ಕಾಮಕಾಂತಿಯಿಂದ ಉಜ್ವಲವಾಗಿ, ಮಸೆದ ಮಿಂಚಿನ ಆಲುಗಿನಂತೆ, ಬಿಳಿನೈದಿಲೆಯ ತೋಳಲ್ಲಿ ಸೆರಸಿಕ್ಕ ದುಂಬಿಯಂತೆ, ಸಂಚಲಿಸುವ ಚಂಚಲನೇತ್ರ...."

"ಕಣ್ಣೆದುರು ಸದಾ ಆ ಚಿತ್ರ, ಮನಸ್ಸಿನಲ್ಲಿ ಆ ಹೆಸರು, ಚೆಲುವಿನ ಹೊಳೆ ತುಳುಕಿಸುವ ಹೆಸರು ಚಂದ್ರಾ! ಸಪ್ತಸ್ವರಗಳ ಸಮಸ್ತಮಧುರತೆಯನ್ನು ಆ ಹೆಸರಿನ ಎರಡಕ್ಷರಗಳಲ್ಲಿ ಭಟ್ಟಿ ಇಳಿಸಿದಂತೆ ತೋರಿತು ಅವರಿಗೆ. ಅವಳ ತುಟಿಯ ಹವಳದ ತೊಟ್ಟಿಲಿನಲ್ಲಿ ಕೋಟಿ ರಾಗಗಳ ಸಮ್ಮೋಹಕತೆ ಮಲಗಿ ಕೈಬೀಸಿ ಕರೆದಂತೆ ಕೇಳಿಸಿತು. ಅವಳ ವಿದ್ಯುತ್ ಸಾಮೀಪ್ಯವಿಲ್ಲದ ಬಾಳು, ಬೇಸರದ

ಶೂನ್ಯವೆನಿಸಿತು. ಅವರ ಮೈಯೊಳಗೆ ಕುದಿವ ರಕ್ತ, ಅವಳೆದೆಯ ತಿಳಿಗೊಳದಲ್ಲಿ ಮೀಯಲೆಳಸಿತು."

"ಈ ಬಯಕೆಯ ಬೇಟೆಯಲ್ಲಿ ಬಲಿಯ ಪಶುವಾಗಿ, ನಾಲ್ಕಾರು ದಿನ ಉನ್ಮತ್ತನಂತೆ ಅಲೆದರು ವೆಂಕಟಸುಬ್ಬಯ್ಯ. ಕಡೆಗೊಂದು ದಿನ ಅವರ ಎಲ್ಲ ವಿವೇಚನೆಯೂ ಸೋತು, ಕಾಲು ತಾನೇ ಅವರನ್ನು ಚಂದ್ರಾಸಾನಿಯ ಮನೆಯ ಬಾಗಿಲಿಗೆ ನಡೆಸಿತು."

"ಚಂದ್ರಾಸಾನಿ ಚಿತ್ರದುರ್ಗದ ವೇಶ್ಯಾವಾಟಿಯಲ್ಲಿ ನಾಯಕರತ್ನ. ಆಕೆಯ ಸೌಂದರ್ಯದ ವಿಚಾರದಲ್ಲಿ ಸಾವಿರ ಕಥೆಗಳೇ ಊರಲ್ಲಿ ಹಬ್ಬಿದ್ದರೂ, ಆಕೆಯನ್ನು ಕಂಡವರು ಬಹಳ ಸ್ವಲ್ಪ ಜನ. ಆಕೆ ಮನೆ ಬಿಟ್ಟು ಬರುವುದೇ ಅಪರೂಪ. ಬಂದರೂ ರೇಶಿಮೆಯ ತೆರೆ ಮುಚ್ಚಿದ, ಚಿತ್ರಗೆಲಸದ ಮ್ಯಾನದಲ್ಲಿ ಬರುವಳು. ಗಾಳಿಗೆ ತೆರೆ ಸರಿದಾಗ, ಹಗಲಿನ ಮಿಂಚಿನಂತೆ ಎಲ್ಲೋ ಕೊಂಚ ಕಂಡು ಮಾಯವಾಗುವುದು ಆಕೆಯ ಮುಖಚಂದ್ರ. ಭರತನಾಟ್ಯದಲ್ಲಿ, ಸಂಗೀತದಲ್ಲಿ ಆಕೆ ಚದುರೆ, ಆಕೆಯ ಮನೆಯಲ್ಲಿ ಆಗಾಗ ಅವುಗಳ ಪ್ರದರ್ಶನವಾಗುವುದು. ಅದನ್ನು ನೋಡಹೋಗಲು ನೂರು ವರಹ ಕೊಡಬಲ್ಲವರಿಗೆ ಮಾತ್ರ ಸಾಧ್ಯ. ಅಲ್ಲೂ ತೆಳುವಾದ ಜವನಿಕೆಯ ಮರೆಯಲ್ಲಿ ಆಕೆಯನ್ನು ಕಾಣಬೇಕು. ಹೆಚ್ಚಿನ ಸುಖ ಬೇಕೆಂದರೆ ಸಾವಿರ ಹೊನ್ನು ಸುಂಕ. ಅದೂ ಆಕೆ ಒಪ್ಪಿದರೆ; ಇಲ್ಲವೆಂದರೆ ಕೋಟಿ ವರಹ ತಂದವರೂ ಬಾಗಿಲು ನೋಡಿ ಹಿಂದಿರುಗಬೇಕು."

"ಆಕೆ ವಿಲಾಸವತಿಯಾದರೂ, ದೇವರನ್ನು ಮರೆತವಳಲ್ಲ. ದೇವರು ಎಂದರೆ ತುಂಬಾ ಭಕ್ತಿ. ದಿನವೂ ಪೂಜೆ ನಮಸ್ಕಾರ ಮಾಡುವಳು. ವ್ರತ ನೇಮಗಳನ್ನು ನಡೆಸುವಳು, ಅದೆಲ್ಲವೂ ಮನೆಯಲ್ಲಿ. ಊರಿನ ಎಲ್ಲಾ ದೇವಾಲಯಗಳಿಂದಲೂ ಆಕೆಗೆ ಪ್ರಸಾದ ಬರುವುದು. ಮಾಘ ಮಾಸದಲ್ಲಿ ಮಾತ್ರ ಕೇಶವದೇವರ ಗುಡಿಯ ಬಳಿಯ ಕೊಳದಲ್ಲಿ ಸ್ನಾನ ಮಾಡಿ, ದೇವರ ದರ್ಶನ ಮಾಡಿ ಬರುವಳು. ಅದೂ ಯಾರಿಗೂ ತಿಳಿಯದಂತೆಯೇ; ಇತರರು ಬರುವ ಮೊದಲು; ಅಕಸ್ಮಾತ್ತಾಗಿ ಯಾರಾದರೂ ಆಕೆಯನ್ನು ಕಂಡರೂ ಇಂಥವಳೇ ಎಂದು ಊಹಿಸಲಾಗದಷ್ಟು ಸಾದಾ ಉಡುಪಿನಲ್ಲಿ. ಆಕೆಯ ದೈವಭಕ್ತಿಯೇ ವೆಂಕಟಸುಬ್ಬಯ್ಯನವರು ಆಕೆಯನ್ನು ನೋಡಲು ಕಾರಣವಾಯಿತು. ಆಕೆಗೆ ಆಗ ಇಪ್ಪತ್ತೆರಡು ಇಪ್ಪತ್ತಮೂರರ ಪ್ರಾಯ; ಸೌಂದರ್ಯ ಯೌವನಗಳೆರಡು ಪೂರ್ಣಕಾಂತಿಯಿಂದ ಪ್ರಕಾಶಿಸುವ ಪೂರ್ಣಿಮಾ ಕಾಲ. ಆ ಹೊತ್ತಿನಲ್ಲಿ ಆಕೆ ವೆಂಕಟಸುಬ್ಬಯ್ಯನವರ ಸ್ತ್ರೀರೂಪದ ಪ್ರಖರತೆಯನ್ನರಿಯದ ಮುಗ್ಧ ನೇತ್ರಗಳಿದಿರು ಮಿಂಚಿದಳು."



"ಚಂದ್ರಾಸಾನಿಯ ಮನೆಯಂದರೆ ರಾಜಭವನ. ಅಂತಿಂಥವರು ಅವರ ಬಳಿ ಸುಳಿಯುವುದೇ ಬಿಗಿ. ಹಿಂದು ಮುಂದು ತಿಳಿಯದ ವೆಂಕಟಸುಬ್ಬಯ್ಯ ಹುಚ್ಚನಂತೆ ಅಲ್ಲಿಗೆ ಬಂದಿದ್ದರು. ಮನೆಯ ಮುಂದಿನ ಉದ್ಯಾನದ ಬಾಗಿಲಿನಲ್ಲೆ ಆಳು ಅವರನ್ನು ತಡೆದ."

"ಏನಾಗಬೇಕು ನಿಮಗೆ ?"

"ಚಂದ್ರಾಸಾನಿಯನ್ನು ನೋಡಲು ಬಂದಿದೇನೆ. ಆಕೆ ಮನೆಯಲ್ಲಿಲ್ಲವೇ?"

"ಯಾರು ನೀವು ?"

"ನಾನು ವೆಂಕಟಸುಬ್ಬಯ್ಯ."

"ಆ ಹೆಸರು ಕೇಳಿ, ಅವರ ಹೆಸರು–ಕೀರ್ತಿ ಕೇಳಿದ ಆಳಿಗೆ ಅವರನ್ನು ತಡೆಯಲು ಧೈರ್ಯವಾಗಲಿಲ್ಲ."

"ಒಳಗೆ ಹೋಗಿ ದಾಸಿಯನ್ನು ವಿಚಾರಿಸಿ" ಎಂದ ಆಳು. ಆದರೆ ಅವರಿಗೆ ದಾಸಿಯನ್ನು ವಿಚಾರಿಸುವಷ್ಟು ಸಹನೆಯಾಗಲಿ, ಸಭ್ಯತೆಯ ನೆನಪಾಗಲಿ ಇರಲಿಲ್ಲ, ರೂಪೋನ್ಮಾದ ಕವಿದ ಆ ಕಾಲದಲ್ಲಿ. ವಿದ್ಯುದಾಕರ್ಷಿತರಂತೆ ವೆಂಕಟಸುಬ್ಬಯ್ಯ ಒಳಗೆ ನುಗ್ಗಿ 'ಚಂದ್ರಾ–ಚಂದ್ರಾ!' ಎಂದು ಕೂಗಿದರು. ಅವರ ಕೂಗು ಕೇಳಿ, ನಾಲ್ಕಾರು ಜನ ದಾಸಿಯರು ಓಡಿಬಂದು, ಅವರ ಕೂಗು ತಡೆದು–

"ಕೂಗಬೇಡಿ! ಇದು ಸಂತೆಯ ಮಾಳವಲ್ಲ" ಎಂದು ಹೇಳಿದರು.

"ನಾನು ಚಂದ್ರಾಸಾನಿಯನ್ನು ನೋಡಬೇಕು."

– ದಾಸಿಯರ ಮಾತು ಕೇಳಿ ಅಸಹನೆಯಿಂದ, ಮಾತಿನಿಂದಲೇ ಅವರನ್ನು ತಮ್ಮ ದಾರಿಯಿಂದ ತಳ್ಳುತ್ತಾ ಹೇಳಿದರು ವೆಂಕಟಸುಬ್ಬಯ್ಯ.

"ನೋಡಲು ಇದು ಸಮಯವಲ್ಲ. ಏನಾಗಬೇಕೆಂದು ಹೇಳಿದರೆ ನಾವು ತಿಳಿಸುತ್ತೇವೆ."

"ನೀವೇ ತಿಳಿಸುತ್ತೀರಾ ? ನಾನೇ ಹೇಳಕೂಡದೆ ?"

"ಅಹುದು. ಅದು ಈ ಮನೆಯ ಮರ್ಯಾದೆ."

"ನಾನು ಹೇಳಿದುದನ್ನು ಹೇಳುತ್ತೀರಾ ?"

"ಆಗಬಹುದು."

"ವೆಂಕಟಸುಬ್ಬಯ್ಯ ನಿನ್ನಲ್ಲಿ ಪ್ರಣಯಭಿಕ್ಷುಕನಾಗಿ ಬಂದಿದ್ದಾನೆಂದು ಹೇಳಿ."

"ಭಿಕ್ಷುಕರಿಗೆ ತಾವಿಲ್ಲ, ಪ್ರಣಯಕ್ಕೆ ಸಾವಿರ ಹೊನ್ನು ಬೆಲೆ. ತಂದಿದ್ದೀರಾ?"

"ಆ ಪ್ರಶ್ನೆ ಕೇಳಿ ವೆಂಕಟಸುಬ್ಬಯ್ಯ ಅವಾಕ್ಕಾದರು–ಸಾವಿರ ಹೊನ್ನು! ಚಂದ್ರಾಸಾನಿಯ ರೂಪಕ್ಕೆ ಮರುಳಾಗಿ, ಮೈಮರೆತು ಬಂದಾಗ, ಅದು

ಹಣದೊಂದಿಗೆ ಹೋಗಬೇಕಾದ ಮನೆಯೆಂಬುದು ಅವರಿಗೆ ನೆನಪಿರಲಿಲ್ಲ. ಎಲ್ಲ ವ್ಯವಹಾರಜ್ಞಾನವನ್ನೂ ಮರೆತು ಹುಚ್ಚರಂತೆ ಬಂದಿದ್ದರು. ಎಂತಲೇ ದಾಸಿಯರ ಬಾಯಿಂದ ಹಣದ ಮಾತು ಕೇಳಿ, ವೇಗವಾಗಿ ಓಡುವ ಕುದುರೆಗೆ ತಟಕ್ಕನೆ ಕಡಿವಾಣ ಹಾಕಿದಾಗ ಅದು ಮುಗ್ಗರಿಸುವಂತೆ, ತಡವರಿಸಿದರು ವೆಂಕಟಸುಬ್ಬಯ್ಯ. ಅವರ ಪೆಚ್ಚುಮುಖ ಕಂಡು ದಾಸಿಯರು ಸದ್ದಾಗದಂತೆ ನಕ್ಕರು. ಹಣದ ಯೋಚನೆ ಬಂದು ಕಣ್ಣು ತೆರೆಸಿದಾಗ ಒಂದು ಗಳಿಗೆ ನಿರಾಶೆ ಕವಿಯಿತು ವೆಂಕಟಸುಬ್ಬಯ್ಯನವರ ಹೃದಯದಲ್ಲಿ. ಸಾವಿರ ಹೊನ್ನು! ಅಷ್ಟು ಹಣ ತರುವುದು ಸಾಧ್ಯವಾದೀತೆ ? ಹಾಗೆಂದು ಬಯಕೆಯನ್ನು ಸಮಾಧಿ ಮಾಡಿ ಹೋಗುವುದೇ ? ಏನೋ ಹುಚ್ಚು ಧೈರ್ಯ – ಸಾವಿರ ಹೊನ್ನು ತರ ಬಹುದು ಎಂದಿತು."

"ತಂದರೆ ಆಕೆಯನ್ನು ನೋಡಬಹುದೇ ?"

"ಅಗತ್ಯವಾಗಿ."

"ಹಾಗಾದರೆ ಸಾವಿರ ಹೊನ್ನನೊಂದಿಗೆ ನಾನು ಬರುವುದಾಗಿ ಹೇಳಿ."

"ಯಾವಾಗ ?"

"ನಾಳೆಯ ಸಂಜೆ."

"ಆಗಲಿ."

"ಅಷ್ಟು ಹೇಳಿದವರೇ ವೆಂಕಟಸುಬ್ಬಯ್ಯ ಅಲ್ಲಿಂದ ಹೊರಟುಬಿಟ್ಟರು. ದಾಸಿಯರು ವೆಂಕಟಸುಬ್ಬಯ್ಯನವರ ಮಾತು ನಂಬದೆ ಹೋದರೂ, ವಿನೋದವೆಂದು ಅವರು ಬಂದ ಸುದ್ದಿಯನ್ನು ಚಂದ್ರಾಸಾನಿಗೆ ತಿಳಿಸಿದರು."

"ದಂತದ ಕೆತ್ತನೆಗೆಲಸದ, ಹಂಸಾಕಾರದ ಪೀಠದ ಮೇಲೆ, ಜರತಾರಿಯ ಕಸೂತಿ ಚಿತ್ರದ ಮಖಮಲಿನ ಮೆತ್ತೆಯ ಮೇಲೆ, ಮೈಚಾಚಿ ಮಲಗಿದ್ದ ಚಂದ್ರಾಸಾನಿ, ದಾಸಿ ಹೇಳಿದುದನ್ನು ಕೇಳಿ, ತಟಕ್ಕನೆ ಎದ್ದು ಕುಳಿತು ಚುರುಕಾಗಿ ಕೇಳಿದಳು :"

"ಬಂದಿದ್ದವರು ಯಾರೆಂದೆ ?"

"ವೆಂಕಟಸುಬ್ಬಯ್ಯನವರು."

"ಯಾರು, ಸಂಗೀತವಿದ್ವಾಂಸರೆ ?"

"ಹೂಂ, ಅವರೇ."

"ಪ್ರಣಯಭಿಕ್ಷೆಗೆ ಬಂದಿದ್ದೇನೆ ಎಂದರು. ನಿಯಮದಂತೆ ಸಾವಿರ ಹೊನ್ನು ತಂದಾಗ ಬನ್ನಿ ಎಂದೆ."



"ಏನು ಆಡಬಾರದ ಮಾತಾಡಿದೆಯೆ, ನಿರ್ಭಾಗ್ಯೆ! ಸಿಟ್ಟಾಗಿಹೋದರೆ ಅವರು?"

– ತಟಕ್ಕನೆ ದುಃಖದಿಂದ ಭಾರವಾದ, ಕೊರಗು ತುಳುಕುವ ಧ್ವನಿಯಲ್ಲಿ ಕೇಳಿದಳು ಚಂದ್ರಾಸಾನಿ.

"ವೆಂಕಟಸುಬ್ಬಯ್ಯನವರು ಚಂದ್ರಾಸಾನಿಯ ಜೀವ ಉಳಿಸಿದ್ದರೆಂಬು ದನ್ನರಿಯದ ದಾಸಿ, ಆಕೆಯ ಮಾತು ಕೇಳಿ ಚಕಿತಳಾದಳು. ಏನು ಉತ್ತರ ಕೊಡಬೇಕೆಂದು ಆಕೆಗೆ ತೋಚಲಿಲ್ಲ."

"ಮತ್ತೆ ಬರುವುದಾಗಿ ಹೇಳಿದರೇ ಅವರು ?" – ಕಾತರತೆಯಿಂದ ಕೇಳಿದಳು ಚಂದ್ರಾಸಾನಿ.

"ಹೂಂ, ನಾಳೆ ಸಂಜೆ ಬರುವುದಾಗಿ ಹೇಳಿದರು."

"ನಾಳೆ ಸಂಜೆ ಬಂದರೆ ಹಣ ತರಲಿ, ಬಿಡಲಿ, ಇಲ್ಲಿಗೆ ಕರೆದು ತಾ. ನೀನೇ ಉತ್ತರ ಹೇಳುವ ಉದ್ಧಟತನ ಮಾಡಬೇಡ."

"ಆ ಮಾತು ಕೇಳಿ ದಾಸಿ ಮತ್ತಷ್ಟು ಚಕಿತಳಾದಳು – ಆದರೆ ಚಂದ್ರಾ ಸಾನಿಯ ಅಂದಿನ ವಿಚಿತ್ರ ನಡತೆಗೆ ಕಾರಣವನ್ನು ಕೇಳುವಷ್ಟು ಧೈರ್ಯವಿರಲ್ಲಿ. ಏನಾದರೆ ತನಗೇನು, ಹೇಳಿದಷ್ಟು ಮಾಡಿದರಾಯಿತು ಎಂದು ಸುಮ್ಮನಾದಳು."

"ದಾಸಿ ಇದುರಿನಿಂದ ಹೋದಮೇಲೆ, ಚಂದ್ರಾಸಾನಿ ಚಿಂತಾಮಗ್ನಳಾದಳು. ವೆಂಕಟಸುಬ್ಬಯ್ಯನವರ, ಅವರ ಹಾಡುಗಾರಿಕೆಯ ವಿಚಾರ ಆಕೆ ಸಾಕಷ್ಟು ಕೇಳಿದ್ದಳು. ಒಂದು ಬಾರಿ ಪಾಳೆಯಗಾರರ ಅರಮನೆಯಲ್ಲಿ ಅವರ ಕಛೇರಿಯಾದಾಗ ತಾನೂ ಕೇಳಿ ಮೆಚ್ಚಿಕೊಂಡಿದ್ದಳು. ಜನರ ಬಾಯಲ್ಲಿ ಕಥೆಯಾಗಿ ಹರಡಿದ ಅವರ ಜೀವನದ ವಿಷಯ ಅವಳ ಕಿವಿಗೆ ಬಿದ್ದು, ಅವರ ಬಗ್ಗೆ ತುಂಬಾ ಗೌರವವಿತ್ತು. ಅಂಥವರು ತನ್ನ ಮನೆಬಾಗಿಲಿಗೆ ಪ್ರಣಯ ಭಿಕ್ಷುಕರಾಗಿ ಬಂದರೆಂದರೆ, ನಂಬುವುದೇ ಕಷ್ಟವಾಯಿತು. ಸುಮ್ಮನೆ ನೋಡಲು ಬಂದು, ದಾಸಿಯರು ತಡೆದುದರಿಂದ, ಸಿಟ್ಟಾಗಿ ಹಾಗೆ ಹೇಳಿ ಹೋದರೋ ಏನೋ ? ಜೀವ ಉಳಿಸಿದಾತನಿಗೆ, ತನ್ನ ಮನೆಯಲ್ಲೇ ಇಂಥ ಅನಾದರ ನಡೆಯಿತಲ್ಲಾ ಎಂದು ಕುದಿದಳು. ದಾಸಿಯ ಕೈಲಿ 'ತಪ್ಪಾಯಿತು, ಬನ್ನಿ' ಎಂದು ಹೇಳಿಕಳಿಸಲೇ ಎಂದು ಯೋಚಿಸಿದಳು. ಆದರೆ ತನ್ನಂಥವಳು ಹೇಳಿ ಕಳಿಸಿದರೆ ಏನು ತಪ್ಪೋ, ಹೇಳಿಕಳಿಸದಿದ್ದರೆ ಏನು ಅಪಚಾರವೋ ಎಂದು ಹೊಯ್ದಾಡಿದಳು. ಏನು ಮಾಡುವುದೂ ಆಕೆಗೆ ತೋಚಲಿಲ್ಲ. 'ಚಂದ್ರಾ, ಚಂದ್ರಾ' ಎಂದು ಒಂದೇ ಸಮನೆ ಕೂಗುತ್ತಿದ್ದ ಪಂಜರದ ಗಿಳಿಯನ್ನು ಗದರಿಸಿ, ಹೇಗೂ ನಾಳೆ ಸಂಜೆ ಬರುವೆನೆಂದು

ಹೇಳಿದರಲ್ಲಾ, ಬರಲಿ, ಬಂದಾಗ ತಪ್ಪಾಯಿತು ಎನ್ನುವುದು; ಒಂದು ವೇಳೆ ಬರೆದಿದ್ದರೆ ಹೇಳಿಕಳು ಹಿಸಿವುದು ಎಂದುಕೊಂಡು ಸುಮ್ಮನಾದಳು."

"ಚಂದ್ರಾಸಾನಿಯ ಮನೆಯಿಂದ ಹಿಂದಿರುಗಿದ ವೆಂಕಟಸುಬ್ಬಯ್ಯ ಏನು ಮಾಡುವುದೆಂದು ಮಿದುಳನ್ನು ಕಡೆದರು. ತಮ್ಮ ಬಯಕೆಗೂ ತೃಪ್ತಿಗೂ ನಡುವೆ ಹೊನ್ನಿನ ಗೋಡೆ ಅಡ್ಡಬರಬಹುದೆಂದು ಅವರು ಊಹಿಸಿರಲಿಲ್ಲ. ಅದನ್ನು ನೆನಸಿಕೊಂಡಾಗ, ಜೀವ ಉಳಿಸಿದ ಕೃತಜ್ಞತೆಯನ್ನು ಮರೆತು, ಮುಖವನ್ನೂ ತೋರಿಸದೆ ಹಣದ ಅಡ್ಡವಿಟ್ಟ ಚಂದ್ರಾಸಾನಿಯ ಮೇಲೆ ಸಿಟ್ಟು ಬರುವುದು. ಮರುಗಳಿಗೆಯೇ 'ಆಕೆಯಲ್ಲ ಹೇಳಿದುದು, ಆಕೆಯ ದಾಸಿಯರು. ಅವರೂ ಮಾಮೂಲಿನ ಮಾತನಾಡಿದರು. ಅದರಲ್ಲಿ ಆಕೆಯದೇನು ತಪ್ಪು ?' ಎಂದುಕೊಳ್ಳುವರು. ಚಂದ್ರಾಸಾನಿಯ ಮುಖ, ನೀರಿನಲ್ಲಿ ತೇಲಿಬರುವ ಹೂವಿನಂತೆ ನೆನಪಿನಲ್ಲಿ ತೇಲಿಬಂದು, ಉಳಿದೆಲ್ಲವನ್ನೂ ಮರೆತು ಹುಚ್ಚಾಗುವರು. ಆದರೆ ಸಾವಿರ ಹೊನ್ನು ಎಲ್ಲಿಂದ ತರುವುದು? ಐದು, ಹತ್ತಾಗಿದ್ದರೆ ಹೇಗಾದರೂ ಮಾಡಬಹುದಿತ್ತು. ಹತ್ತಲ್ಲ, ನೂರಲ್ಲ – ಸಾವಿರ ಬೇಕು. ಆದರೆ ಯಾರು ಕೊಡುವರು ? ಒಂದು ಕ್ಷಣ ತಾಯಿಯ ಬಳಿ ಇರುವ ಒಡವೆಗಳನ್ನು ಎಲ್ಲಾದರೂ ಒತ್ತೆಯಿಟ್ಟು ತರುವುದು ಅಂದುಕೊಂಡರು. ನಿಜ, ಈಗ ಆಕೆ ಅದನ್ನು ತೊಡುತ್ತಿಲ್ಲ. ಆದರೂ ಏತಕ್ಕೆಂದು ಹೇಳಿ ಕೇಳುವುದು ? ಆಕೆಯ ಒಡವೆಯನ್ನು ತಮ್ಮ ಕಾಮಕ್ಕಾಗಿ ವಿನಿಯೋಗಿಸುವುದೇ ಎನಿಸಿ, ಆ ಯೋಚನೆಯೂ ಅಸಹ್ಯವಾಯಿತು. ಹಾಗಾದರೆ ಹಣಕ್ಕೇನು ಮಾಡುವುದು ? ಹಣದ ಚಿಂತೆ ಹೆಚ್ಚಿದಾಗ ಈ ಬಯಕೆಯೇ ಬೇಡ ಎನಿಸುವುದು. ಆದರೆ ಮರುಗಳಿಗೆಯಲ್ಲಿಯೇ ಆ ಸೌಂದರ್ಯಕ್ಕೆ ಇದು ಎಲ್ಲಿಯ ಬೆಲೆ ? ಇಷ್ಟಕ್ಕೆ ಹೆದರಿ ಅದರಿಂದ ದೂರವಾಗಬೇಕೇ ಎನಿಸುವುದು. ಎಷ್ಟು ಹತ್ತಿರ, ಆದರೆ ಎಷ್ಟು ದೂರ ಆಕೆಯ ಪ್ರೇಮ! ಹೇಗೆ ಮಾಡುವುದೆಂದು ತೋಚದೆ, ಕಣ್ಣು ಮುಚ್ಚದೆ ರಾತ್ರಿ ಕಳೆದರು. ಹಗಲು ಹರಿಯಲಿ ಮುಂದೆ ನೋಡೋಣ" ಎಂದು ಕೊಂಡರು.

"ಹಗಲಾಯಿತು. ಆದರೆ ಸಮಸ್ಯೆ ಮಾತ್ರ ತೀರಲಿಲ್ಲ. ಕಡೆಗೆ ಬೇರಾವದಾರಿಯೂ ತೋರದೆ, ತಮ್ಮಲ್ಲಿ ವಿಶ್ವಾಸವಿಟ್ಟಿದ್ದ ಪಟ್ಟಣಶೆಟ್ಟರನ್ನು ಕೇಳುವುದು ಎಂದು ಕೊಂಡು, ಅವರ ಬಳಿ ಹೋದರು. ಕರೆಸದೆ ಎಂದೂ ಯಾರ ಮನೆಗೂ ಬರದ ವೆಂಕಟಸುಬ್ಬಯ್ಯ ತಾವೇ ಬಂದುದನ್ನು ಕಂಡು ಪಟ್ಟಣಶೆಟ್ಟರಿಗೆ ಆಶ್ಚರ್ಯವಾಯಿತು. ಸಂಗೀತಪ್ರಿಯರಾದ ಅವರಿಗೆ, ವೆಂಕಟಸುಬ್ಬಯ್ಯನವರಲ್ಲಿ ಪರಮ ವಿಶ್ವಾಸವಿತ್ತು. ಎಂತಲೇ ಅವರೇ ತಾವಾಗಿ



ತಮ್ಮ ಮನೆಯ ಬಳಿಗೆ ಬಂದುದನ್ನು ಕಂಡು ಪಟ್ಟಣಶೆಟ್ಟರಿಗೆ ಆಶ್ಚರ್ಯದೊಂದಿಗೆ ಸಂತೋಷವೂ ಆಯಿತು."

"ಬರಬೇಕು" ಎಂದು ಕರೆದು ಅಸನವಿತ್ತು ಗೌರವಿಸಿದರು.

"ವಿರೂಪಾಕ್ಷಪ್ಪ, ಇಂದು ನಿಮ್ಮಿಂದ ನನಗೆ ಒಂದು ಕೆಲಸವಾಗಬೇಕಾಗಿದೆ."

– ಕುಳಿತುಕೊಳ್ಳುವುದಕ್ಕೂ ಬಿಡುವಿಲ್ಲವೆಂಬಂತೆ ಒಳಗೆ ಕಾಲಿಟ್ಟ ಒಡನೆಯೇ ಕೇಳಿದರು ವೆಂಕಟಸುಬ್ಬಯ್ಯ.

"ಅಪ್ಪಣೆಯಾಗಲಿ, ಕೈಲಾದುದನ್ನು ಮಾಡಲು ಸಿದ್ಧನಾಗಿದ್ದೇನೆ. ಏನೆಂದು ತಿಳಿಸಬೇಕು."

"ನನಗೀಗ ಒಂದು ಸಾವಿರ ಹೊನ್ನು ಬೇಕಾಗಿದೆ, ಕೊಡುತ್ತೀರಾ?"

"ಆ ಮಾತು ಕೇಳಿ ಶ್ರೀಮಂತರಾದ ಅವರಿಗೂ ಆಶ್ಚರ್ಯವಾಯಿತು. ಸಾವಿರ ಹೊನ್ನು ಕಡಿಮೆಯಲ್ಲ. ಒಬ್ಬ ಆಳು ಹೊರುವಷ್ಟು ಹಣ. ಇದ್ದಕ್ಕಿದ್ದ ಹಾಗೆ ಅಷ್ಟೇಕೆ ಬೇಕಾಯಿತು ಅವರಿಗೆ?"

"ಹಣವನ್ನೇನೋ ಕೊಡಬಹುದು. ಯಾವಾಗ ಬೇಕಿತ್ತು!"

– ಕೇಳಿದ ಕೂಡಲೇ ಇಲ್ಲವೆನ್ನಲಾಗದೆ ಕೇಳಿದರು ಪಟ್ಟಣಶೆಟ್ಟರು.

"ಈ ಸಂಜೆಯೇ, ಕೊಡುವುದಾದರೆ ನಾನೇ ಒಂದು ತೆಗೆದುಕಂಡು ಹೋಗುತ್ತೇನೆ."

"ಅದೇನು ಇಷ್ಟು ಹಣದ ಅವಸರ ?"

"ಏನೆಂದು ಕೇಳಬೇಡಿ, ಹೇಳಲಾರೆ. ಕೊಡಲು ಸಾಧ್ಯವೆ ?"

"ಪಟ್ಟಣಶೆಟ್ಟರಾದ ವಿರೂಪಾಕ್ಷಪ್ಪನವರಿಗೆ ಸಾವಿರ ಹೊನ್ನು ಕೊಡುವುದ ಅಸಾಧ್ಯವಾಗಿರಲಿಲ್ಲ. ಆದರೆ ವ್ಯವಹಾರಸ್ಥರಾದ ಅವರ ಮನಸ್ಸು, ಯಾವ ಆಧಾರದ ಮೇಲೆ ಹಣ ಕೊಡುವುದು ಎಂದು ಚಿಂತಿಸಿತು. ನೂರಾದರೆ ಮಾತನಾಡದೆ ಕೊಡಬಹುದು. ಸಾವಿರ ಕೊಡುವುದು ಸುಲಭವಲ್ಲ. ವೆಂಕಟಸುಬ್ಬಯ್ಯನವರಲ್ಲಿ ವಿಶ್ವಾಸವಿದ್ದರೂ, ವಿಶ್ವಾಸಕ್ಕೂ ವ್ಯವಹಾರಕ್ಕೂ ತಳಕು ಹಾಕಲು ಮನಸ್ಸಾಗಲಿಲ್ಲ. ಹಾಗೆಂದು ಇಲ್ಲವೆನ್ನಲೂ ಮನಸ್ಸು ಬರಲಿಲ್ಲ."

"ನಿಮಗೆ ಇಲ್ಲವೆನ್ನಲಾರೆ. ಆದರೂ ಈಗಲೇ ಹಣ ನನ್ನ ಬಳಿ ಇಲ್ಲ. ಬೇರೆ ಕಡೆ ತರಬೇಕು. ಅದಕ್ಕೆ ಆಧಾರವೇನಾದರೂ ಕೊಡಬಲ್ಲಿರಾ ?"

"ನನ್ನ ಬಳಿ ಹಣ ತೀರಿಸುವ ನಂಬಿಕೆಯಲ್ಲದೆ ಬೇರೇನು ಇದೆ? ಸ್ವಯಾರ್ಜಿತವೆಂದು ನನ್ನ ಬಳಿ ಇರುವುದು ಸಂಗೀತವೊಂದೇ, ಆದರೆ ಅದು ವ್ಯವಹಾರದ ದೃಷ್ಟಿಯಲ್ಲಿ ಆಸ್ತಿಯಲ್ಲ, ತಾಯಿಯ ಒಡವೆಯನ್ನು ಕೊಡಲಾರೆ.

ತಾಯಿಗೆ ತಿಳಿಯದೆ, ತಂದೆ ಗಳಿಸಿದ ಯಾವುದನ್ನೂ ಅಡವು ಇಡಲಾರೆ. ಈಗ ಯಾರಿಗೂ ಹೇಳುವಂತಿಲ್ಲ. ನನ್ನ ನಂಬಿಕೆಯ ಮೇಲೆ ಕೊಡ ಬೇಕು. ಇಂದಲ್ಲ ನಾಳೆ ತೀರಿಸುತ್ತೇನೆ. ನನ್ನಲ್ಲಿ ನಂಬಿಕೆಯಿದ್ದರೆ ಕೊಡಿ."

"ಪಟ್ಟಣಶೆಟ್ಟರಿಗೆ ಇದೊಂದು ದೊಡ್ಡ ಸಮಸ್ಯೆಯಾಯಿತು. ನನ್ನದೇನೂ ಇಲ್ಲ ಎನ್ನುವವರಿಗೆ ಯಾವ ಆಧಾರದ ಮೇಲೆ ಸಾಲ ಕೊಡುವುದು ? ಈಗ ಅವರು ಹಣದ ಗಳಿಕೆಗಾಗಿ ಹಾಡುವುದನ್ನು ಬಿಟ್ಟಿದ್ದಾರೆ. ಮತ್ತೆ ಕಛೇರಿ ಮಾಡಿದರೆ ಸಾವಿರ ಹೊನ್ನು ತೀರಿಸುವುದು ಅವರಿಗೆ ದೊಡ್ಡದಲ್ಲ. ಆದರೆ ಅವರು ಕಛೇರಿ ಮಾಡುವ ನಂಬಿಕೆ ಏನು? – ಹೀಗೆ ಏನೇನೋ ಯೋಚಿಸಿ" ಕಡೆಗೆ ಹೇಳಿದರು–

"ಒಂದು ಮಾತು. ತಾವು ಅನ್ಯಥಾಭಾವಿಸಬಾರದು. ತಮ್ಮ ಮಾತಿನಲ್ಲಿ ನನಗೆ ನಂಬಿಕೆಯಿದೆ. ಒಂದು ಮಾತಿಗೆ ತಾವು ಒಪ್ಪಿದರೆ, ಹಣ ಜೋಡಿಸಿ ಕೊಡುತ್ತೇನೆ."

"ಏನು ಹೇಳಿ ?"

"ಇದು ಯಾರೂ ಮಾಡದ ವ್ಯವಹಾರ. ನಿಮ್ಮ ಮೇಲಿನ ನಂಬಿಕೆಯಿಂದ ನಾನು ಈ ವ್ಯವಹಾರ ಮಾಡುತ್ತಿದ್ದೇನೆ. ನನ್ನ ಹಣಕ್ಕೆ ಆಧಾರ ಕೊಡಲು ನಿಮ್ಮ ಬಳಿ, ನಿಮ್ಮದಾಗಿ, ಸಂಗೀತವಲ್ಲದೆ ಬೇರೇನೂ ಇಲ್ಲವೆಂದಿರಿ. ಅದನ್ನೇ ಆಧಾರವಾಗಿಟ್ಟರೆ ಹಣ ಕೊಡುತ್ತೇನೆ."

"ಅಂದರೆ......?"

"ನಿಮ್ಮ ಪ್ರೀತಿಯ ರಾಗಗಳಲ್ಲಿ ನಾನು ಕೇಳಿದ ಎರಡು ರಾಗಗಳನ್ನು ಒತ್ತೆ ಇಡಬೇಕು. ನನ್ನ ಹಣ ತೀರಿಸುವವರೆಗೂ ಆ ರಾಗಗಳನ್ನು ಎಲ್ಲೂ ಹಾಡಬಾರದು. ಹಾಗೆಂದು ಬರೆದುಕೊಡಬೇಕು. ಆದೀತೆ ?"

"ಆ ಮಾತು ಕೇಳಿ ವೆಂಕಟಸುಬ್ಬಯ್ಯನಿಗೆ ಚೂರಿಯಿಂದ ಇರಿದಂತೆ ಆಯಿತು. ಯಾವುದು ತನ್ನ ದೇವರೆಂದು ತಿಳಿದಿದ್ದರೋ ಅದನ್ನೇ ಒತ್ತೆ ಇಡುವುದೇ ? ಅದು ಬಿಟ್ಟರೆ ಬೇರೇನು ದಾರಿ? ಬೇರೆ ದಾರಿಯನ್ನು ಯೋಚಿಸುವ ಕಾಲಾವಕಾಶವೂ ಇರಲಿಲ್ಲ. ಎಂತಲೇ ಬೇರೆ ದಾರಿ ತಿಳಿಯದೆ, ಪಟ್ಟಣಶೆಟ್ಟರ ಮಾತಿಗೆ ಒಪ್ಪಿದರು. ಅವರೇ ಅರಿಸಿದ ಎರಡು ರಾಗಗಳನ್ನು ಆಧಾರವಾಗಿಟ್ಟು ಪತ್ರ ಬರೆದುಕೊಟ್ಟು, ಸಂಜೆಗೆ ಬಂದು ಹಣ ತೆಗೆದುಕೊಂಡು ಹೋಗುವುದಾಗಿ ಹೇಳಿಹೋದರು."

"ಹಣ ಸಿಗುವುದೆಂದು ಖಚಿತವಾದಮೇಲೆ, ಅದಕ್ಕಾಗಿ ರಾಗವನ್ನು ಒತ್ತೆಯಾಗಿಟ್ಟು, ಮುಳ್ಳಿನಂತೆ ಅಳುಕುತ್ತಿದ್ದರೂ, ತನ್ನ ಬಯಕೆಯ ತೃಪ್ತಿ ಸಾಧ್ಯವಾಯಿತಲ್ಲಾ ಎಂದು ಸಂತೋಷವಾಯಿತು. ಹೊತ್ತು ಸರಿದಂತೆ ಬಯಕೆ ಬಲಿತು, ಬೇರೆಲ್ಲವೂ ಮರೆಯಾಯಿತು."



## ೧೧

"ವೆಂಕಟಸುಬ್ಬಯ್ಯನವರ ಬಯಕೆ ಹಣ್ಣಾದಂತೆ, ಪಡವಲು ಕೆಂಪಾಗಿ, ಸಂಜೆ ಬಳಿಸಾರಿತು. ಕೆಂಪು ಆರಿ, ಮಾಸಿದ ಮುತ್ತಿನ ಬಣ್ಣವಾಗಿ, ಮುಗಿಲು ಕಪ್ಪಾಗುತ್ತಿದ್ದ ಹಾಗೆಯೇ ವೆಂಕಟಸುಬ್ಬಯ್ಯ ಹಣದೊಂದಿಗೆ ಚಂದ್ರಾಸಾನಿಯ ಮನೆಯತ್ತ ಹೊರಟರು."

"ಚಂದ್ರಾಸಾನಿಯ ಮನೆ ಅವರ ಸ್ವಾಗತಕ್ಕೆ ಸಿದ್ಧವಾಗಿತ್ತು. ಹಿಂದಿನ ದಿನದಂತೆ ಉದ್ಯಾನದ ಬಾಗಿಲ ಆಳು ಏಕೆ ಬಂದಿರೆಂದು ಕೇಳದೆ, ನಮಸ್ಕರಿಸಿ ತಲೆಬಾಗಿಲವರೆಗೂ ದಾರಿ ತೋರಿಸಿ ಕರೆದೊಯ್ದ. ಬಾಗಿಲ ಬಳಿಯಲ್ಲಿ ದಾಸಿಯರು ಅವರನ್ನು ಇದಿರುಗೊಂಡು ಒಳಗೆ ಕರೆದೊಯ್ದು ಕೂಡಲು ವಿರಾಮಾಸನ ತೋರಿದರು. ವೆಂಕಟಸುಬ್ಬಯ್ಯನವರಿಗೆ ಅವರ ಸ್ವಾಗತವಾಗಲಿ, ಉಪಚಾರವಾಗಲಿ ಯಾವುದೂ ಬೇಕಾಗಿರಲಿಲ್ಲ. ಚಂದ್ರಾಸಾನಿಯ ದರ್ಶನಕ್ಕೆ ಅವರ ಹೃದಯ ಹುಚ್ಚಾಗಿ ಹಂಬಲಿಸುತ್ತಿತ್ತು. ಬಯಕೆಯ ತೀವ್ರತೆಯಲ್ಲವರು ಅಮಲೇರಿದಂತಿದ್ದರು. ಹಣದ ಚೀಲಗಳನ್ನು ದಾಸಿಯರ ಇದಿರು ಕಸದಂತೆ ಬಿಸುಟು –"

"ಚಂದ್ರಾಸಾನಿ ಎಲ್ಲಿ?" ಎಂದು ಕೇಳಿದರು.

"ನಿಮಗಾಗಿ ಕಾಯುತ್ತಿದ್ದಾರೆ."

"ಎಲ್ಲಿ, ಮೊದಲು ದಾರಿ ತೋರಿಸು."

"ಅಷ್ಟು ಅವಸರವೇಕೆ ? ಬಿಸಿನೀರು ಸಿದ್ಧವಾಗಿದೆ. ಮೀಯುವುದಿಲ್ಲವೆ?"

"ಸ್ನಾನವೂ ಬೇಡ, ಪಾನವೂ ಬೇಡ. ನಿಮ್ಮ ಮಾತುಗಳೂ ಬೇಕಿಲ್ಲ. ಆಕೆ ಎಲ್ಲಿ ?"– ಆತುರದ ಅಸಹನೆಯಿಂದ ಸಿಡಿದು ಕೇಳಿದರು.

"ಮಹಡಿಯ ಮೇಲೆ. ಬಂದೆ–ದಾರಿ ತೋರಿಸುತ್ತೇನೆ" ಎಂದಳು ದಾಸಿ.

"ದಾಸಿ ದಾರಿ ತೋರುವವರೆಗೂ ಕಾಯುವಷ್ಟು ತಾಳ್ಮೆಯೂ ಅವರಿಗೆ ಇರಲಿಲ್ಲ. ಕಣ್ಣು ಎದುರು ಕಾಣುತ್ತಿದ್ದ ಮಹಡಿಯ ಮೆಟ್ಟಲನ್ನು ಬಿರುಗಾಳಿಯಂತೆ ಏರಿ ನುಗ್ಗಿದರು. ಹಲಗೆಯ ಮೆಟ್ಟಲನ್ನು ಅವರು ಏರಿದ ವೇಗದ ಸದ್ದಿಗೆ ಮನೆಯೇ ನಡುಗುವಂತಿತ್ತು."

"ಮಹಡಿಯ ಮೇಲಿನ ನರ್ತನಶಾಲೆಯ ಅಂದವಾಗಲಿ, ಓರಣವಾಗಲಿ ಯಾವುದೂ ಅವರ ಕಣ್ಣಿಗೆ ಕಾಣಲಿಲ್ಲ. ನರ್ತನಶಾಲೆಯಲ್ಲಿ ಇದುರುಬದಿಗೆ ತೆಳುವಾದ ರೇಶಿಮೆಯ ತೆರೆ ಹಾಕಿದ ಬಾಗಿಲ ಮರೆಯಿಂದ ಮಬ್ಬಾಗಿ ಬರುವ ಬೆಳಕು ಅವರನ್ನು ಆಕರ್ಷಿಸಿತು. 'ಚಂದ್ರಾ!' ಎಂದು ಕೂಗಿ ಒಳನುಗ್ಗಿದರು. ಬಾಗಿಲು ದಾಟಿದವರೇ ಒಳಗೆ ನೋಡಿ ವಿಗ್ರಹದಂತೆ ನಿಂತುಬಿಟ್ಟರು."

"ಕೋಣೆಯ ಒಳಗಿದ್ದ ಚಂದ್ರಾಸಾನಿ, ಅವರ ಕೂಗು ಕೇಳಿ ಕುಳಿತಿದ್ದವಳು ಎದ್ದುನಿಂತಿದ್ದಳು. ಸ್ವರ್ಗದಿಂದಿಳಿದುಬಂದ ಅಪ್ಸರೆಯೇ ಕಣ್ಣೆದುರು ನಿಂತಂತಿತ್ತು, ಆಕೆಯ ನಿಲುವು. ಕೋಣೆಯನ್ನೆಲ್ಲಾ ತುಂಬಿದಂತಿತ್ತು, ಆಕೆಯ ಲಾವಣ್ಯಕಾಂತಿ, ಅಲ್ಲಲ್ಲಿ ನಕ್ಷತ್ರದಂತೆ ಜರತಾರಿಯ ಎಳೆಗಳು ಹೊಳೆವ ಬಹುನವಿರಾದ, ಮುಗಿಲಬಣ್ಣದ ಸೀರೆಯುಟ್ಟಿದ್ದಳು, ಚಂದ್ರಾಸಾನಿ. ಅದಕ್ಕೆ ಒಪ್ಪುವ ತೆಳುಹಸಿರುಬಣ್ಣದ ಕುಪ್ಪುಸ, ತೋಳು ಎದೆಯನ್ನು ಬಿಗಿದು, ಅಂಗಸೌಷ್ಠವವನ್ನು ಎತ್ತಿ ತೋರಿಸುತ್ತಿದೆ. ಅಗಲವಾದ ಪಚ್ಚೆಯ, ಪದಕದ ಮುತ್ತಿನ ಹಾರ, ಕಣ್ಣನ್ನು ಕೆಣಕಿ ಎದೆಯ ಮೇಲೆ ಏರಿಳಿದು ಹರಡಿವೆ. ನಡುವಿನಲ್ಲಿ ಸಣ್ಣ ದೀಪದಂತೆ ಹೊಳೆವ ಪದ್ಮಾರಾಗದ ಪದಕದ ಡಾಬು. ಮುಡಿಯ ಮೇಲೆ ಮುತ್ತಿನ ತುರಾಯಿ. ನೆಲಕ್ಕೆ ಹಾಸಿದ ಮೃದುವಾದ ಹಾಲುನೊರೆಯ ಬಣ್ಣದ ರತ್ನಗಂಬಳಿಯ ಮೇಲೆ, ದಂತದಲ್ಲಿ ಕಡೆದು ಸಿಂಗಾರವಾದ ರತಿಯ ವಿಗ್ರಹದಂತೆ ನಿಂತಿದ್ದಾಳೆ, ಚಂದ್ರಾಸಾನಿ. ಎಲ್ಲೋ ಹೊತ್ತಿಸಿದ, ಕೋಣೆಯಲ್ಲಿ ಹಿತವಾಗಿ ಹರಡಿದ ಗಂಧದಕಡ್ಡಿಯ ಕೋಮಲ ಪರಿಮಳಮಯ ಧೂಮ, ಕಣ್ಣಿಗೆ ಹಿತವಾಗಿ ದೀಪದ ಬೆಳಕಿನೊಂದಿಗೆ ಬೆರೆತು, ಕೋಣೆಗೆ ಕನಸಿನ ಬಣ್ಣ ಕಟ್ಟಿದೆ."

"ಕೊಳದ ತಡಿಯಲ್ಲಿ ವೆಂಕಟಸುಬ್ಬಯ್ಯ ಚಂದ್ರಾಸಾನಿಯ ಸಹಜ ಸೌಂದರ್ಯವನ್ನು ಕಂಡೇ ಮಾರುಹೋಗಿದ್ದರು. ಇಂದದು, ಶೃಂಗಾರಾಭರಣ ಪೋಷಿತವಾಗಿ, ಮದನನ ಮಸೆದ ಕರವಾಳವಾಗಿದೆ. ಅವರು ಕನಸುಮನಸಿನಲ್ಲಿಯೂ ಊಹಿಸದ ಲಾವಣ್ಯಪ್ರಕಾಶ ಅವರ ಕಣ್ಣನ್ನು ವಿಮ್ಮಲ್ಲತಾ ಪ್ರಕಾಶದಿಂದ ಕೋರೈಸಿತು. ಅದನ್ನು ನೋಡಿದ್ದ ವೆಂಕಟಸುಬ್ಬಯ್ಯನವರ ಉಸಿರು ಬಿಗಿದಂತಾಯಿತು."

"ಚಂದ್ರಾ....." ಎಂದು ಕೂಗಿ ಆಕೆಯ ಬಳಿಗೆ ಸಾರಿ, ಬಯಕೆಯ ಭಾರ ತಾಳಲಾರದವರಂತೆ ಆಕೆಯ ಕಾಲ ಬಳಿ ಕುಸಿದರು.

"ಅವರ ಭಾವೋದ್ರೇಕವನ್ನು ಕಂಡು ಚಂದ್ರಾಸಾನಿ ಚಕಿತಳಾದಳು. ಕೆದರಿದ ತಲೆ, ಮಾಸಿದ ಬಟ್ಟೆ, ರಾಗಾವೇಶದಿಂದ ಬಿಗಿದ ಮೋರೆಯನ್ನು ಕಂಡು



ಕನಿಕರವಾಯಿತು ಅವಳಿಗೆ. ಕೆಳಗೆ ಕುಸಿದ ಅವರನ್ನು ಮೃದುವಾಗಿ ಮೇಲೆತ್ತಿ ನಿಲ್ಲಿಸಿದಳು. ಮಾತಾಡುವ ಶಕ್ತಿಯೂ ಉಡುಗಿದಂತಿತ್ತು. ಅವರ ಕೆದರಿದ ತಲೆಕೂದಲನ್ನು ಮೃದುವಾಗಿ ನೇವರಿಸುತ್ತಾ ಕೇಳಿದಳು ಚಂದ್ರಾಸಾನಿ–"

"ದಾಸಿಯ ಮನೆಗೆ ದೊರೆ ಹೀಗೆ ಬರುವುದೇ ?"

"ಆಂ!"– ಆಕೆಯ ಮಾತು ತಿಳಿಯದವರಂತೆ ಕೇಳಿದರು ವೆಂಕಟಸುಬ್ಬಯ್ಯ.

"ಇದೇನು ವೇಷ ?"

"ಬಟ್ಟೆಯೇ ?"

"ಬಟ್ಟೆಯೊಂದೇ ಅಲ್ಲ, ಮುಖ ನೋಡಿಕೊಳ್ಳಿ. ಈ ಕೆದರಿದ ತಲೆಯೇನು? ಇದೇನು ಉದ್ರೇಕ?"

"ನನಗೇನೂ ತಿಳಿಯಲಿಲ್ಲ. ಮೂರು ದಿನದಿಂದ ನಿನ್ನನ್ನು ನೋಡುವ ಹುಚ್ಚಿನಲ್ಲಿ ಇದಾವುದೂ ಗೊತ್ತಾಗಲಿಲ್ಲ" ಎಂದು ಎಳೆಯ ಮಗುವಿನಂತೆ ಹೇಳಿ "ನಾನು ಹೀಗೆ ಬರಬಾರದಾಗಿತ್ತೆ ?" ಎಂದು ಕೇಳಿದರು. ಆ ಮಾತು ಅದನ್ನು ಆಡಿದ ಮುಗ್ಧರೀತಿ ಅವಳ ಹೃದಯವನ್ನು ಮಿಡಿಯಿತು."

"ಹಾಗೆಂದೆನೇ ನಾನು ? ನನ್ನ ದೊರೆ ಹೇಗೆ ಬಂದರೂ ಚಂದವೇ. ಆದರೂ ಇಷ್ಟು ಹುಚ್ಚೆ?"

"ನೀನರಿಯೆ, ಚಂದ್ರಾ! – ನಿನ್ನನ್ನು ನೋಡಿದಾಗಿನಿಂದ ನನಗೇನೋ ಆಗಿಹೋಗಿದೆ. ನಾನು ಮನುಷ್ಯನಲ್ಲ."

"ಹಾಗಾದರೆ ಮತ್ತೇನು ?"

"ನಿನ್ನ ಸೌಂದರ್ಯದ ಬಂದಿ, ಲಾವಣ್ಯದ ಗುಲಾಮ! ನನ್ನನ್ನು ಸ್ವೀಕರಿಸುತ್ತೀಯಾ, ಚಂದ್ರಾ?"

"ವೇಶ್ಯೆಯಾದ ಚಂದ್ರಾಸಾನಿಯನ್ನು ಹಣ ಕೊಟ್ಟು ಬಂದವರಾರೂ ಈ ರೀತಿ ಕೇಳಿರಲಿಲ್ಲ. ವೆಂಕಟಸುಬ್ಬಯ್ಯನವರ ಹೃದಯದಾಳದಿಂದ ಸಹಜವಾಗಿ ಮೂಡಿಬಂದ ಪ್ರಣಯಾರ್ತ ಧ್ವನಿ ಅವಳ ಹೃದಯವನ್ನು ಹಿಂಡಿತು. ಕಣ್ಣಲ್ಲಿ ಕಂಬನಿ ಒಡೆಯಿತು. ಹಿಂದೆಂದೂ ಅವಳು ಅನುಭವಿಸದ ಹೊಸ ಭಾವನೆಯೊಂದು ಭೂಂಕಾರ ಮಾಡಿತು."

"ಏನು ಮಾತು, ದೊರೆ ? ನನ್ನನ್ನು ನೀವು ಬೇಡುವುದೇ ?"– ಅವಳ ಮಾತೂ ಎದೆಯಾಳದಲ್ಲಿ ಅರಳಿದ ಕಂಬನಿಯಲ್ಲಿ ತೊಯ್ದು ಮೃದುವಾಗಿತ್ತು.

"ಬೇಡದೆ ಮತ್ತೇನು ಮಾಡಲಿ?"

"ಏಕೆ ?"

"ನಿನ್ನ ಚೆಲುವು, ಜಗತ್ತಿನ ರಾಣಿ, ಅದರೆದುರು ನಾವೆಲ್ಲರೂ ದಾಸರು, ಚಂದ್ರಾ, ಭಿಕ್ಷೆ ಬೇಡಿ ಬಂದ ಭಿಕಾರಿಗಳು. ಇಂದು ನನ್ನ ಸಾವು–ಬದುಕು ನಿನ್ನದು."

"ಸತ್ಯದ ಸಹಜತೀವ್ರತೆಯಿಂದ ಒಡಮೂಡಿದ ಆ ಮಾತು ಕೇಳಿ ಚಂದ್ರಾಸಾನಿಯ ಮೈ ನಡುಗಿತು. ಎದೆಯೊರಗಿ ನಿಂತಿರುವುದು ಮಾನವನಲ್ಲ, ಬೆಂಕಿ ಎನಿಸಿತು.!"

"ಆ ಮಾತು ಬಿಡಿ. ನಾನು ನಿಮ್ಮವಳು, ಅಲ್ಲವೇ ?"

"ಚಂದ್ರಾಸಾನಿಯನ್ನು ತೋಳಲ್ಲಿ ಬಿಗಿಯುತ್ತಾ ಹೇಳಿದರು ವೆಂಕಟಸುಬ್ಬಯ್ಯ"

"ನಿಜ, ನೀನು ನನ್ನವಳು, ಚಂದ್ರಾ.... ನನ್ನವಳೇ. ಇಂದಿಗೇ ಅಲ್ಲ, ಎಂದೆಂದಿಗೂ." ಪರಮಸತ್ಯವನ್ನು ಸಾರುವ ಪ್ರವಾದಿಯ ಧ್ವನಿಯಲ್ಲಿ ಹೇಳಿದರು ಆ ಮಾತನ್ನು. ಅದನ್ನು ಕೇಳಿ ಚಂದ್ರಾಸಾನಿಗೆ ಆ ಮಾತು ಮುಂದುವರಿಸಲು ಏಕೋ ಹೆದರಿಕೆಯಾಯಿತು. ಆ ಮಾತು ಮರೆಸಲು ಹೇಳಿದಳು:

"ಏಳಿ, ಮಾತಿನಲ್ಲಿ ಹೊತ್ತು ಕಳೆಯುತ್ತಿದೆ. ಸ್ನಾನಮಾಡಿ, ಬೇರೆ ಬಟ್ಟೆಯುಟ್ಟು ಬನ್ನಿ. ಊಟ ಮುಗಿಸಿ, ಮಲಗಿ ಮಾತನಾಡೋಣ."

"ಸ್ನಾನ, ಊಟ, ಮಾತು, ನಿದ್ರೆ–ಯಾವುದೂ ನನಗೆ ಬೇಡ."

"ಹಾಗಾದರೇನು ಬೇಕು ?"

"ಹೀಗೇ, ನಿನ್ನನ್ನು ನೋಡುತ್ತಾ ಇದ್ದು ಬಿಡುತ್ತೇನೆ. ಏಕೋ ನನಗೆ ಹೆದರಿಕೆಯಾಗುತ್ತಿದೆ. ಚಂದ್ರಾ."

"ಏಕೆ ?"

"ಇಂಥ ಸೌಂದರ್ಯ ಭೂಮಿಯಲ್ಲಿರುವುದ ಸಾಧ್ಯವೇ ? ಕಣ್ಣು ಮುಚ್ಚಿದರೆ ಎಲ್ಲಿ ದೇವತೆಗಳು ಇದನ್ನು ಕದ್ದು ಮಾಯ ಮಾಡುತ್ತಾರೋ ಎಂದು ದಿಗಿಲಾಗುತ್ತಿದೆ. ಬೇರೇನೂ ಬೇಡ, ಚಂದ್ರಾ... ಹೀಗೇ ನಿನ್ನನ್ನು ನೋಡುತ್ತಾ ಇದ್ದು ಬಿಡುತ್ತೇನೆ."

"ಅವನ ಮಾತು ಕೇಳಿ ಆಕೆಗೂ ಹಾಗೇ ಇದ್ದು ಬಿಡಬಹುದಾದರೆ ಎಷ್ಟು ಸೊಗಸು ಎನಿಸಿತು. ಆದರೆ ಇರುವುದು ಸಾಧ್ಯವೇ ?"

"ಒತ್ತಾಯ ಮಾಡಿ ಅವರಿಗೆ ಸ್ನಾನ, ಊಟ ಮಾಡಿಸಿ, ಬಳಿಕ ಕೇಳಿದಳು:"

"ನಾಟ್ಯವನ್ನು ನೋಡುತ್ತೀರಾ?"

"ಬೇಡ, ನಿನ್ನ ಕಣ್ಣ ಮಿಂಚಿನ ಕುಣಿತದ ಇದಿರು ಬೇರಾವ ನಾಟ್ಯವೂ ಬೇಡ" ಎಂದರು.

"ಹಾಗಾದರೆ ಮಲಗಲು ಹೋಗೋಣವೇ ?"



"ಹೂಂ."

"ಅಂದು ಚಂದ್ರಾಸಾನಿಯ ಶಯ್ಯಾಗೃಹ ಇಂದ್ರನ ವಿಲಾಸಕ್ಕೆಂಬಂತೆ ಸಜ್ಜಾಗಿತ್ತು. ತೆಳುವಾದ ತೆರೆ ಕಟ್ಟಿದ, ವಿಶಾಲ ಕರಿಯ ಮರದ ಮಂಚದಮೇಲೆ. ಬೆಳದಿಂಗಳನ್ನು ಹರಡಿದಂತಿರುವ ಶುದ್ಧ ಬಿಳಿಯ ಹಾಸು ಹೊದೆಸಿದ ಹಾಸಿಗೆಯ ಮೇಲೆ, ವಾಸನೆಗೆಂದು ಜಾಜಿಯ ಹೂವು ಹರಡಿದ್ದರು. ಆಳೆತ್ತರದ ಕಂಚಿನ ಸ್ತ್ರೀವಿಗ್ರಹದ ಕೈಬೊಗಸೆಯಲ್ಲಿ ಸಣ್ಣದಾಗಿ, ಆದರೆ ಹೊಳಪಾಗಿ, ಉರಿವ ಗಂಧದೆಣ್ಣೆಯ ದೀಪ, ಆ ಮಂಚದತ್ತ ದಾರಿ ತೋರಿಸುತ್ತಿದೆ. ಆ ಮಂಚದ ಬಳಿ ಅವರನ್ನು ಬಿಟ್ಟು–"

"ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ, ಉಡುಪು ಬದಲಿಸಿ ಬರುತ್ತೇನೆ" ಎಂದು ಹೇಳಿ ಪಕ್ಕದ ಕೊಠಡಿಗೆ ಹೋದಳು ಚಂದ್ರಾಸಾನಿ. ಮಂಚದ ಪಕ್ಕದಲ್ಲಿ ನಿಂತ ವೆಂಕಟಸುಬ್ಬಯ್ಯ ಮಲಗದೇ ಹಾಗೇ ನಿಂತಿದ್ದರು. ಅವರ ಕಣ್ಣು ಮಂಚದ ಪಕ್ಕದಲ್ಲಿದ್ದ ಕೀಲುಗೊಂಬೆಯ ಕೈಯ ಬೀಸಣಿಗೆಯ ಗಾಳಿಗೆ ಸಣ್ಣದಾಗಿ ಪರಿಮಳ ಕೆದರುತ್ತಾ, ನೆಲಕ್ಕೆ ಬಿದ್ದ ತಾರೆಗಳಂತಿರುವ ಹಾಸಿಗೆಯ ಮೇಲಿನ ಜಾಜಿಯ ಹೂವಿನ ಮೇಲಿತ್ತು. ಒಂದು ಹೂವನ್ನು ಕೈಯಲ್ಲಿ ತೆಗೆದುಕೊಂಡು ನೋಡಿದರು. ಎಷ್ಟು ಕೋಮಲವಾದ ಹೂವು, ಎಂಥ ಸೌರಭ! ಆ ಹೂವುಗಳನ್ನು ನೋಡುತ್ತಿದ್ದಂತೆಯೇ, ಕೈ ಬೆರಳುಗಳು ಹೂವಿನ ದಳದ ಕೋಮಲತೆಯನ್ನು ನೇವರಿಸುತ್ತಿದ್ದಂತೆಯೇ. ತಟಕ್ಕನೆ ವಿಚಿತ್ರ ಭಾವವೊಂದು ಮೂಡಿತು, ಅವರ ಮನಸ್ಸಿನಲ್ಲಿ. ಈ ಸುಮದ ಸೌಂದರ್ಯ, ಕೋಮಲತೆ, ಕಮನೀಯ ಕಂಪು– ಎಲ್ಲವೂ ಮೈಬಿಸಿಗೆ, ಯಾರದೋ ವಿಲಾಸವೈಭವಕ್ಕೆ ಬಾಡಿ ಬಳಲಬೇಕೆ ? ಎಂಥ ಕ್ರೌರ್ಯ! ಆ ಯೋಚನೆ ಬಂದು ಅವರ ಕರುಳು ಹಿಸುಕಿದಂತಾಯಿತು. ಗಟ್ಟಿಯಾಗಿ ಮುಟ್ಟಿದರೆ ಹೂವಿಗೆ ಎಲ್ಲಿ ನೋವಾಗುವುದೋ ಎಂಬಂತೆ ಮೃದುವಾಗಿ, ಒಂದೊಂದಾಗಿ ಆ ಹೂವುಗಳನ್ನು ಹಾಸಿಗೆಯಿಂದ ಎತ್ತಲಾರಂಭಿಸಿದರು.

"ಉಡುಪು ಬದಲಿಸಲೆಂದು ಹೋದ ಚಂದ್ರಾಸಾನಿ, ಉಡುಪು ಬದಲಿಸಿ ಬಂದು ನೋಡಿದಳು–ಅವರು ಮಾಡುತ್ತಿರುವುದನ್ನು"

"ಮಲಗುವುದನ್ನು ಬಿಟ್ಟು ಇದೇನು ಮಾಡುತ್ತಿದ್ದೀರಿ ?"

"ವೆಂಕಟಸುಬ್ಬಯ್ಯ ತಲೆಯೆತ್ತಿ ಚಂದ್ರಾಸಾನಿಯನ್ನು ನೋಡಿದರು. ಅವರ ಕಣ್ಣಿನಲ್ಲಿ ಹೊಳೆವ ಕಂಬನಿಯನ್ನು ಕಂಡು ಆಕೆಗೆ ಆಶ್ಚರ್ಯವಾಯಿತು."

"ಇದೇಕೆ ಕಣ್ಣೀರು ?"

“ಹಾಸಿಗೆಯ ಮೇಲೆ ಹಾಕಿದ ಹೂವನ್ನು ನೋಡಿದೆ, ಚಂದ್ರಾ, ವ್ಯಥೆಯಾಯಿತು.”

“ಏಕೆ ?”– ಆ ಉತ್ತರದಿಂದ ಮತ್ತಷ್ಟು ಚಕಿತಳಾಗಿ ಕೇಳಿದಳು.

“ಸೌಂದರ್ಯದ ಮುಡಿಯೇರಿಯೋ, ಭಗವಂತನ ಪಾದ ಸೇರಿಯೋ ಪುನೀತವಾಗಬೇಕಾದ ಹೂವು ಭೋಗದ ಕಾವಿಗೆ ಸಿಕ್ಕಿ ಮಡಿಯಬೇಕೆ? ಎಂಥ ದುರಂತ! ಆ ಹೂವಿನ ಮನಸ್ಸಿಗೆ ಎಷ್ಟು ನೋವಾಗಬೇಡ. ದಿನವೂ ಹೀಗೆ ಹೂವು ಬಾಡಿಸುತ್ತೀಯಾ, ಚಂದ್ರಾ ? ಕೋಮಲವಾದ ಹೂವಿಗೆ ಈ ಹಿಂಸೆ ಮಾಡಬಾರದು.”

“ಅದಕ್ಕಾಗಿ ಕಣ್ಣೀರಿಟ್ಟಿರಾ ?”

“ನಿನಗೂ ಕಂಬನಿ ಬರುವುದಿಲ್ಲವೇ ? ಹಸುಗೂಸಿನಂತೆ ಹೂವುಗಳು; ಅವನ್ನು ನಲಿಸಬೇಕು, ನಲುಗಿಸಬಾರದು.”

“ಇನ್ನುಮೇಲೆ ಹೀಗೆ ಮಾಡುವುದಿಲ್ಲ. ಬಿಡಿ–ನಾನೇ ತೆಗೆಯುತ್ತೇನೆ.” ಎಂದು ಚಂದ್ರಾಸಾನಿ ಹೂವುಗಳನ್ನೆಲ್ಲಾ ಅರಿಸಿ ಅರಿಸಿ ತೆಗೆದಳು.

“ಹೋಗಲಿ, ಈಗಲಾದರೂ ಮಲಗಿ.”

“ವೆಂಕಟಸುಬ್ಬಯ್ಯ ಆಕೆಯನ್ನು ದಿಟ್ಟಿಸಿ ನೋಡುತ್ತಿದ್ದರು. ಹಾವಿನ ಪೊರೆಯಷ್ಟು ತೆಳುವಾದ ಬಳಿಯ ರೇಶಿಮೆಯ ಸೀರೆಯುಟ್ಟು, ಅಷ್ಟೇ ತೆಳುವಾದ ಅದೇ ಬಣ್ಣದ ಕುಪ್ಪಸ ಧರಿಸಿ, ಮುತ್ತಿನ ಹಾರವೊಂದಲ್ಲದೆ ಬೇರಾವ ಆಭರಣವೂ ಇಲ್ಲದೆ, ಮುಡಿಯ ಮಲ್ಲಿಗೆಯ, ಮೈಗೆ ತೊಡೆದ ಗಂಧದ ನರುಗಂಪು ಬೀರುವ, ಅಮೃತಶಿಲೆಯಲ್ಲಿ ಕಡೆದ ವಿಗ್ರಹದಂತಿರುವ ಚಂದ್ರಾಸಾನಿಯಲ್ಲಿ ಅವರ ಕಣ್ಣು ಕೀಲಿಸಿತ್ತು. ತಿದ್ದಿದ ಕುಡಿಹುಬ್ಬು, ಕಾಡಿಗೆ ಹಚ್ಚಿ ಹೊಳೆವ ಅಗಲವಾದ ಮಿಂಚುಗಣ್ಣು, ಗುಲಾಬಿಯ ಬಣ್ಣದ ಮೃದುವಾದ ತುಟಿಯನ್ನು ದಿಟ್ಟಿಸಿ ನೋಡಿದರು. ರೇಶಿಮೆಯಷ್ಟು ಮೃದುವಾಗಿ ಸಡಿಲವಾಗಿ ಜಾರಿದ, ಕಪ್ಪಾಗಿ ಹೊಳೆವ ಕೇಶರಾಶಿಯನ್ನು ನೇವರಿಸಿದರು. ಮಾಯವಾದ ಕಂಬನಿ ಮತ್ತೆ ಅವರ ಕಣ್ಣಲ್ಲಿ ಮೂಡಿತು.”

“ಮತ್ತೇಕೆ ಕಣ್ಣೀರು ?”

“ನನ್ನ ಕಠೋರತೆಗಾಗಿ, ಚಂದ್ರಾ.”

“ನೀವೇನು ಮಾಡಿದಿರಿ ?”

“ಹೂವು ನಲುಗಿತಲ್ಲಾ ಎಂದು ವ್ಯಥೆಪಟ್ಟೆ, ಚಂದ್ರಾ... ನೀನೂ ಒಂದು ಹೂವೇ. ನಿನ್ನನ್ನು ಹೇಗೆ ನಲುಗಿಸಲಿ, ಚಂದ್ರಾ ? ಕಾಮಾಂಧನಾಗಿ ನಿನ್ನನ್ನು



ಬಯಸಿದ ನಾನು ಶುದ್ಧ ಪಶು!... ಹಾಯಾಗಿ ಮಲಗು ಚಂದ್ರಾ, ನಾನು ಬರುತ್ತೇನೆ.”

–ಬಾಗಿಲ ಕಡೆ ತಿರುಗಿ ಹೇಳಿದರು ವೆಂಕಟಸುಬ್ಬಯ್ಯ.

“ಚಂದ್ರಾಸಾನಿ ಎಂದೂ ಯಾರಿಂದಲೂ ಅಂಥ ಮಾತು ಕೇಳಿರಲಿಲ್ಲ. ಏಕೊ, ಅವಳ ಎದೆ ಆ ಮಾತಿಗೆ ಸೋತುಹೋಯಿತು. ಒಂದು ಗಳಿಗೆ ಹಾಗೇ ವೆಂಕಟಸುಬ್ಬಯ್ಯನವರನ್ನು ನೋಡಿದಳು. ಅವಳೆಂದೂ ಅರಿಯದ ಅಪೂರ್ವ ಮಧುರ ಯಾತನೆಯ ಹೊಳೆ ಅವಳ ಮೈಯಲ್ಲಿ ನೆರೆಯಾಗಿ ಹರಿಯಿತು. ತಟಕ್ಕನೆ ಅವರನ್ನು ತೋಳಲ್ಲಿ ಬಾಚಿ, ಎದೆಗೆ ಬಿಗಿದುಕೊಂಡು ಹೇಳಿದಳು”

“ನನ್ನನ್ನು ಬಯಸಿ ನೀವು ನೋಯಿಸುತ್ತಿಲ್ಲ ದೊರೆಯೇ, ಆ ಮಾತಾಡಿ ಕೊಲ್ಲುತ್ತಿದೀರ. ಬೇಡಿ... ಮತ್ತೆ ಆ ಮಾತಾಡಬೇಡಿ.”

“ನನ್ನನ್ನು ಬಿಡು, ಚಂದ್ರಾ... ಮತ್ತೆ ಬಯಕೆ ಕೆರಳಿ ಪಶುವಾದೇನು.”

– ಅವಳ ತೋಳು ಬಿಡಿಸಿಕೊಳ್ಳುತ್ತಾ ಬೇಡಿದರು ವೆಂಕಟಸುಬ್ಬಯ್ಯ.

“ಉಹೂ, ನೀವು ನನ್ನ ಬಳಿಯಿಂದ ಹೋಗಕೂಡದು.”

“ಆ ಮಾತಾಡಬೇಡ, ಚಂದ್ರಾ.... ನನ್ನನ್ನು ಬಿಡು.”

“ನನ್ನ ದೊರೆಗೆ ನಾನಿಷ್ಟು ಬೇಗ ಬೇಡವಾದೆನೆ?” ಎಂದು ಬಿಕ್ಕುತ್ತ ಹೇಳಿದಳು ಚಂದ್ರಾಸಾನಿ; “ಯಾವುದೋ ಪುಣ್ಯದಿಂದ ನಿಮ್ಮ ದರ್ಶನವಾಯಿತೆಂದಿದ್ದೆ. ಆದರೆ ನನ್ನ ಪಾಪವೇ ಗೆದ್ದಿತು. ನನ್ನನ್ನು ಬಯಸಿಬಂದ ನಿಮಗೂ ನಾನು ಬೇಡವಾದೆ. ಹೂವಿನ ಮೇಲೆ ಕರುಣವಿರುವ ನಿಮಗೆ ನನ್ನ ಮೇಲೆ ಕರುಣ ಬರಲಿಲ್ಲ. ಮುಡಿಯುವ ಮೊದಲೇ ನನ್ನನ್ನೇಕೆ ಬಿಸುಡುತ್ತೀರ ?”

ಹೆಣ್ಣಿನ ಕಣ್ಣ ಕಂಬನಿಯ ಇದಿರು ವೆಂಕಟಸುಬ್ಬಯ್ಯನವರ ನಿರ್ಧಾರ ಸಡಲಿತು.

“ನನ್ನ ಮಾತಿನಿಂದ ನಿನಗಿಷ್ಟು ನೋವಾಗುವುದೆಂದು ನಾನರಿತಿರಲಿಲ್ಲ, ಚಂದ್ರಾ. ನನ್ನನ್ನು ಕ್ಷಮಿಸು. ನಿನ್ನನ್ನು ನೋಯಿಸಲು ಆ ಮಾತಾಡಲಿಲ್ಲ.”

“ಅದು ನಿಜವಾದರೆ ಮುತ್ತು ಕೊಟ್ಟು ಹೇಳಿ.”

“ತೋಳಲ್ಲಿ ಅವರನ್ನು ತಬ್ಬಿ, ತುಟಿಯ ಬಳಿ ತುಟಿಯೊಯ್ದು ಕೇಳಿದಳು ಚಂದ್ರಾಸಾನಿ. ಕಂಬನಿ ಕಂಬನಿಯೊಂದಿಗೆ ಬೆರೆತು. ತುಟಿಗೆ ತುಟಿ ಸೇರಿತು. ಬಯಕೆ ಮೈಗಳನ್ನು ಬೆಸೆಯಿತು.”

“ನನ್ನ ಬಾಳು ಇಂದು ಧನ್ಯವಾಯಿತು. ಚಂದ್ರಾ.”

“ಧನ್ಯಳಾದವಳು ನಾನು.ನನಗಾದ ಲಾಭ ನಿಮಗೆ ತಿಳಿಯದು, ಪ್ರಭು.”

"ನಿನಗೇನು ಲಾಭಾವಾಯಿತು, ಚಂದ್ರಾ ? ಲಾಭ ನನ್ನದು."

"ಅಲ್ಲ–ದೊರೆ. ಎಲ್ಲರಂತೆ ನೀವೂ ಕಾಮತೃಪ್ತಿ ಬಯಸಿಬಂದವರು ಎಂದಿದ್ದೆ. ಆದರೆ ನೀವು ನನ್ನ ವಿಲಾಸದ ಅಮಲಿನಲ್ಲಿ ಕುರುಡಾದ ಪ್ರೇಮದ ಕಣ್ಣಿಗೆ ಬೆಳಕಿತ್ತು ಉದ್ಧಾರಮಾಡಿದಿರಿ. ಇಂದಿನಿಂದ ನನ್ನ ಬಾಳು ನಿಮಗೆ ಮೀಸಲು; ನಾನು ನಿಮ್ಮ ಚರಣದಾಸಿ" ಎಂದು ಹೇಳಿ, ಚಂದ್ರಾಸಾನಿ ಅವರ ಕಾಲಧೂಳನ್ನು ಹಣೆಗೆ ತೊಡೆದುಕೊಂಡಳು.

"ನಿಜವೇ ಚಂದ್ರಾ, ನಾನಷ್ಟು ಭಾಗ್ಯವಂತನೇ ?" ಆ ಮಾತು ನಂಬದವರಂತೆ ಕೇಳಿದರು ವೆಂಕಟಸುಬ್ಬಯ್ಯ.

"ವೇಶ್ಯೆಯ ಮಾತು ನಂಬಲು ಕಷ್ಟವೇ ? ಸಂದೇಹ ಬೇಡಿ. ನಾನು ನಿಮ್ಮವಳು."

"ಖಂಡಿತವಾಗಿಯೂ ?"

"ನನ್ನ ಕೊರಳಾಣೆಯಾಗಿಯೂ. ನನ್ನ ಮಾತಿಗೆ ಏಕನಾಥೇಶ್ವರಿಯೇ ಸಾಕ್ಷಿ."

"ಹಾಗಾದರೆ ಆ ಕಿಟಕಿ ಮುಚ್ಚಿ ಬಿಡು."

"ಏಕೆ ?"

"ನೀನು ನನಗೆ ಮೀಸಲು ಎನ್ನಲಿಲ್ಲವೇ ?"

"ಹೂಂ."

"ಕಳ್ಳಚಂದ್ರ ನನ್ನೊಂದಿಗೆ ನಿನ್ನರೂಪ ಸವಿದು, ನಿನ್ನ ಮಾತು ಸುಳ್ಳು, ಮಾಡುತ್ತಿದ್ದಾನೆ! ನನಗೂ ಅಸೂಯೆಯಿದೆ, ಚಂದ್ರಾ. ಚಂದ್ರನಿಗೇ ಆದರೂ ನಿನ್ನ ಸೌಂದರ್ಯದ ಸವಿಯನ್ನು ಹಂಚಿಕೊಡಲಾರೆ." – ನಗುತ್ತಾ ಹೇಳಿದರು ವೆಂಕಟಸುಬ್ಬಯ್ಯ. ಅವರ ಮಾತು ಕೇಳಿ ಚಂದ್ರಾಸಾನಿಗೂ ನಗು ಬಂತು. ಆ ಮಾತಾಡಿದ ಅವರ ಮೇಲೆ ಒಲವಿನ ಅಭಿಮಾನ ಉಕ್ಕಿಬಂತು. ಸಣ್ಣಗೆ ಅವರ ತುಟಿ ಕಚ್ಚಿ ಹೇಳಿದಳು–

"ನೀವು ಸಂಗೀತಗಾರರೆಂದು ಕೇಳಿದ್ದೆ. ಕವಿಗಳೆಂದು ಗೊತ್ತಿರಲಿಲ್ಲ."

"ಹಾಗಾಗಿದ್ದರೆ ಅದು ನಿನ್ನ ಸಹವಾಸದೋಷ"–ಎಂದರು ವೆಂಕಟಸುಬ್ಬಯ್ಯ, ಆಕೆಯನ್ನು ತಬ್ಬಿಕೊಂಡು.

"ಅಂದಿನಿಂದ ಅವರಿಬ್ಬರ ಬಾಳು ಒಂದಾಗಿಹೋಯಿತು."

"ಅಂದಿನಿಂದ ಚಂದ್ರಾಸಾನಿಯ ಬಾಳು ಬೇರೆ ದಾರಿ ಹಿಡಿಯಿತು. ಚಂದ್ರಾಸಾನಿ, ವೆಂಕಟಸುಬ್ಬಯ್ಯನವರ 'ಚಂದ್ರ'; ಬೇರೆಯವರಿಗೆ ಚಂದ್ರವ್ವ. 'ಸಾನಿ' ಎಂಬ ವಿಶೇಷಣ ಆ ದಿನ ಅವಳ ಪಾಲಿಗೆ ಸತ್ತು ಹೋಯಿತು. ಬೇರೆಯವರ



ಪಾಲಿಗೆ ಆಕೆಯ ಮನೆಯ ಬಾಗಿಲು ಮುಚ್ಚಿ ಹೋಯಿತು. ವೆಂಕಟಸುಬ್ಬಯ್ಯನವರ ಪ್ರೇಮ–ಕಾಮದ ಕೈಗೊಂಬೆಯಾದವಳನ್ನು ಪ್ರೇಮಪೂಜಾರಿಯಾಗಿ ಮಾರ್ಪಡಿಸಿತು. ಅವಳ ಪಾಲಿಗೆ ಅವರು ಪ್ರಿಯತಮನಲ್ಲ. ನಲ್ಲನ ರೂಪತಾಳಿಬಂದ ದೇವರು. ಎಷ್ಟು ಬಗೆಯಲ್ಲಿ ಅವರ ಸೇವೆಮಾಡಿದರೂ ಅವಳಿಗೆ ತೃಪ್ತಿಯಿಲ್ಲ. ಅವಳ ತನುಮನಧನಗಳು ಅವರ ಸೇವೆಗೆ ಮೀಸಲಾಯಿತು. ವೆಂಕಟಸುಬ್ಬಯ್ಯನವರೂ ಅಷ್ಟೆ – ತಮ್ಮನ್ನು ತಾವೇ ಆಕೆಗೆ ಅರ್ಪಿಸಿಬಿಟ್ಟಿದ್ದರು. ಕನಸಿನಲ್ಲಿದ್ದವರಂತೆ, ದೇಶಕಾಲಗಳನ್ನು ಮರೆತು, ಪ್ರಣಯೋದ್ಯಾನದ ಪತಂಗಗಳಾಗಿ ವಿಹರಿಸುತ್ತಿದ್ದರು."

"ಕೆಲವು ಕಾಲ ರಹಸ್ಯವಾಗಿದ್ದ ಅವರ ಸ್ನೇಹ, ಬರಬರುತ್ತಾ ಊರ ಜನಕ್ಕೆಲ್ಲಾ ಗೊತ್ತಾಯಿತು. ಎಷ್ಟೋ ಜನ ವೆಂಕಟಸುಬ್ಬಯ್ಯನವರಿಗೆ ಬುದ್ಧಿ ಹೇಳಿದರು; ಚಂದ್ರಾಸಾನಿಗೂ ಇದು ಸಲ್ಲ ಎಂದರು. ಅಪಹಾಸ್ಯಮಾಡಿದರು, ಅಣಕದ ನಗೆ ನಕ್ಕರು, ತಿರಸ್ಕಾರವಾಗಿ ಕಂಡರು–ಯಾವುದೂ ಪಥ್ಯವಾಗಲಿಲ್ಲ."

"ವೆಂಕಟಸುಬ್ಬಯ್ಯನವರ ತಾಯಿಗೂ ಈ ವಿಚಾರ ತಿಳಿಯಿತು. ಅವರೂ ಕಣ್ಣೀರಿಟ್ಟು ಹೇಳಿದರು. ಆಕೆಗೂ 'ಇದೊಂದು ಮಾತಿನಲ್ಲಿ ಅಡ್ಡಿ ಬರಬೇಡ' ಎಂದುಬಿಟ್ಟರು ವೆಂಕಟಸುಬ್ಬಯ್ಯ. ಮಗನಿಗೆ ಹಿಡಿದ ಈ ವ್ಯಾಮೋಹಜಾಡ್ಯ ಮದುವೆಮಾಡಿದರೆ ಸರಿಹೋಗಬಹುದೇನೋ ಎಂದು ಯೋಚಿಸಿ, ತಾವೇ ಮಗನ ಮುಂದೆ ಆ ಮಾತು ಆಡಿದರು. ಅವರಿವರ ಕೈಯಲ್ಲೂ ಆ ಮಾತು ಹೇಳಿಸಿ ನೋಡಿದರು. ಆದರೆ ವೆಂಕಟಸುಬ್ಬಯ್ಯನವರು ಮದುವೆ ಮಾತಿಗೆ ಕಿವಿಯನ್ನೇ ಕೊಡಲಿಲ್ಲ. ಈಗಾಗಲೇ ನನಗೆ ಒಂದು ಮದುವೆಯಾಗಿದೆ. ಹೆಣ್ಣಿನ ಮೇಲೆ ಹೆಣ್ಣನ್ನು ತಂದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ" ಎಂದುಬಿಟ್ಟರು. ಮಗನ ಬಾಯಿಂದ ಆ ಮಾತು ಕೇಳಿದ ಬಳಿಕ ಜಾನಕಮ್ಮನವರಿಗೆ ಎದೆ ಬಿರಿದಂತಾಯಿತು.

"ಜಾನಕಮ್ಮ ಮನೆಗೆ ಬಂದ ತಮ್ಮನೊಂದಿಗೆ, ತಮ್ಮ ದುಃಖವನ್ನು ತೋಡಿಕೊಂಡು ಅತ್ತರು. ಅನಂತೂ, ಈ ಸಂಕಟದಿಂದ ಹೇಗಾದರೂ ಪಾರುಮಾಡು, ಇದ್ದ ಮಗ ಹೀಗಾದರೆ ನಾನು ಹೇಗೆ ಜೀವ ಹಿಡಿದಿರಲಿ ? ಎಂದರು. ನಾಲ್ಕು ದಿನ ತಡಿ, ಜಾನಕಿ. ಇನ್ನೂ ಹೊಸ ಹುಚ್ಚು. ಈಗ ಯಾರ ಮಾತೂ ನಾಟುವುದಿಲ್ಲ. ಈಗ ಬುದ್ಧಿ ಹೇಳಹೋದವರು ತಾವೇ ಕೆಟ್ಟವರಾಗಬೇಕಾಗುತ್ತದೆ" ಎಂದು ಸಮಾಧಾನ ಹೇಳಿದರು ಅನಂತಯ್ಯ.

"ವೆಂಕಟಸುಬ್ಬಯ್ಯ ಹೆಣ್ಣ ಮೋಹಕ್ಕೆ ಬಲಿಯಾದುದು ಅನಂತಯ್ಯನವರಿಗೆ ಅಷ್ಟು ದುಸ್ಸಹವಾಗ ತೋರಲಿಲ್ಲ. ಅಂದಿನವರೆಗೂ ವೆಂಕಟಸುಬ್ಬಯ್ಯನವರ ಬಾಳಿನಲ್ಲಿ ಹೆಣ್ಣು ಸುಳಿಯದೇ ಇದ್ದುದು ಅವರಿಗೆ ತಿಳಿದಿತ್ತು. ಅದುವರೆಗೂ

ಸಂಗೀತಾಭ್ಯಾಸದಲ್ಲಿ ನಿರತರಾಗಿ, ಪ್ರಕೃತಿಸಹಜವಾದ ಪ್ರೇಮವನ್ನೇ ಮರೆತಿದ್ದ ವೆಂಕಟಸುಬ್ಬಯ್ಯನವರ ಮೇಲೆ, ಪ್ರಥಮ ಸ್ತ್ರೀ ಪ್ರಭಾವ, ಅದರಲ್ಲೂ ಚಂದ್ರಾಸಾನಿಯಂಥ ರೂಪವತಿಯದು, ಎಷ್ಟು ಪ್ರಖರವಾಗಿರಬೇಕು ಎಂದು ಅವರು ಊಹಿಸಬಲ್ಲವರಾಗಿದ್ದರು. ಹಾಗೇ ಅವರಿಗೆ, ನಾಲ್ಕು ದಿನ ಹುಚ್ಚಾಗಿ ಏರಿಬಂದ ಕಾಮದ ಹೊಳೆ ಇಳಿದ ಬಳಿಕ, ವೆಂಕಟಸುಬ್ಬಯ್ಯನವರ ತಿಳಿವಿನ ಕಣ್ಣು ಮತ್ತೆ ತೆರೆದು, ನೇರವಾದ ಮಾರ್ಗಕ್ಕೆ ಬರುತ್ತಾರೆ ಎಂಬ ನಂಬಿಕೆಯೂ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಇಂಥ ಪ್ರಣಯ, ಪ್ರತಿಭಟನೆಯಿಂದ ಉಕ್ಕಾಗುವುದೇ ಹೊರತು, ಕಡಿಯುವುದಿಲ್ಲವೆನ್ನುವ ಅರಿವೂ ಅವರಿಗಿತ್ತು. ಎಂತಲೇ ನಾಲ್ಕು ದಿನದ ಹುಚ್ಚು 'ನಡೆಯಲಿ' ಎಂದಿದ್ದರು. ಆದರೆ ಅವರಿಗೆ ಯಾತನೆಯನ್ನುಂಟುಮಾಡಿದುದು, ಈ ವಿಲಾಸದಲ್ಲಿ ವೆಂಕಟಸುಬ್ಬಯ್ಯ ಸಂಗೀತವನ್ನು ಮರೆತದ್ದು, ಕಾಮದ ಅಗ್ನಿಕುಂಡದಲ್ಲಿ ಕಲೆಯ ಬಲಿಕೊಡುತ್ತಿದ್ದಾನಲ್ಲಾ!" ಎಂದು ಮರುಗಿದರು. ಅವರು ಒಂದೆರಡು ಬಾರಿ ಆ ವಿಷಯದಲ್ಲಿ ಅವನನ್ನು ಎಚ್ಚರಿಸಿದರು.

"ಏನಪ್ಪಾ ವೆಂಕಟಸುಬ್ಬೂ, ಸಂಗೀತಕ್ಕೆ ತಿಲಾಂಜಲಿಯನ್ನು ಕೊಟ್ಟು ಬಿಟ್ಟೆಯಾ? ನೀನು ಆಕೆಯ ಸಹವಾಸ ಮಾಡಿದ್ದಕ್ಕೆ ನಾನೇನೂ ಅನ್ನುವುದಿಲ್ಲ. ಆದರೆ ವ್ಯಾಮೋಹ ಇದಕ್ಕೆ ಅಡ್ಡಿಯಾಗಬಾರದು."

"ಇಲ್ಲ ಮಾವ, ಸಂಗೀತವನ್ನು ಮರೆತಿಲ್ಲ–" ಎನ್ನುವರು ವೆಂಕಟಸುಬ್ಬಯ್ಯ, ಹಾರಿಕೆಯ ಧ್ವನಿಯಲ್ಲಿ. ಅನಂತಯ್ಯನವರಿಂದ ಆ ಮಾತು ಕೇಳಿದಾಗ, ಅವರಿಗೆ ಪಟ್ಟಣಶೆಟ್ಟರ ಬಳಿ ರಾಗಗಳನ್ನು ಒತ್ತೆ ಇಟ್ಟುದು ನೆನಪಾಗುವುದು. ತಾನು ಮಾಡಿದುದು ಸರಿಯೇ ಎಂದು ಸಂಶಯವಾಗುವುದು. ಆದರೆ ಮರುಗಳಿಗೆಯೇ 'ಚಂದ್ರಾ ತನ್ನ ಬಾಳನ್ನೇ ನನಗೆ ಅರ್ಪಿಸಿದಾಗ, ಆಕೆಗೆ ನಾನು ಎರಡು ರಾಗ ಒತ್ತೆ ಇಟ್ಟುದು ಹೆಚ್ಚೆ ? ಆದಷ್ಟು ಬೇಗ ಅವನ್ನು ಬಿಡಿಸಿಕೊಳ್ಳಬೇಕು' ಎಂದುಕೊಳ್ಳುವರು. ಮತ್ತೆ ಅವಳ ದರ್ಶನವಾದಕೂಡಲೆ ಅದು ಮರೆತುಹೋಗುವುದು. ಹೀಗೇ ಎಷ್ಟೋ ತಿಂಗಳು ಕಳೆಯಿತು....



## ೧೨

"ತಾನು ಪಟ್ಟಣಶೆಟ್ಟಿ ವಿರೂಪಾಕ್ಷಪ್ಪನವರ ಬಳಿ ರಾಗವನ್ನು ಒತ್ತೆ ಇಟ್ಟುದನ್ನು ವೆಂಕಟಸುಬ್ಬಯ್ಯ ಯಾರಿಗೂ ತಿಳಿಸಿರಲಿಲ್ಲ. ಚಂದ್ರಾಸಾನಿಗೆ ಕೂಡ ಹೇಳಿರಲಿಲ್ಲ. ಒಂದು ದಿನ ಆಕಸ್ಮಿಕವಾಗಿ ಈ ವಿಚಾರ ಅನಂತಯ್ಯನವರಿಗೆ ತಿಳಿಯಿತು."

"ಒಂದು ದಿನ ಪೇಟೆಯಲ್ಲಿ ಅನಂತಯ್ಯನವರಿಗೆ ಸಿಕ್ಕಿದ ವಿರೂಪಾಕ್ಷಪ್ಪ ಆ ಮಾತು ಈ ಮಾತು ಆಡುತ್ತಾ, ಅವರ ಮಾತು ವೆಂಕಟಸುಬ್ಬಯ್ಯನವರ ವಿಚಾರಕ್ಕೆ ಬಂದಾಗ–"

"ತಾವು ನನ್ನನ್ನು ಬಯ್ಯಬಹುದು, ಅನಂತಯ್ಯನವರೆ, ಆದರೂ ಇದ್ದ ವಿಚಾರ ಹೇಳುತ್ತೇನೆ. ವೆಂಕಟಸುಬ್ಬಯ್ಯನವರು ಕೆಡಲು ನಾನೇ ಕಾರಣ ನಾದಹಾಗಾಯಿತು"– ಎಂದರು. ಅನಂತಯ್ಯನವರಿಗೆ ಆ ಮಾತು ಕೇಳಿ ಆಶ್ಚರ್ಯವಾಯಿತು.

"ಏಕೆ, ನೀವೇನು ಮಾಡಿದಿರಿ ?"

"ಆ ಪ್ರಶ್ನೆಗೆ ಉತ್ತರವಾಗಿ ವಿರೂಪಾಕ್ಷಪ್ಪ, ವೆಂಕಟಸುಬ್ಬಯ್ಯನವರು ಸಾವಿರ ಹೊನ್ನಿನ ಸಾಲಕ್ಕೆ ಬಂದದ್ದು, ತಾನು ರಾಗಗಳನ್ನು ಒತ್ತೆ ಇಟ್ಟು ಕೊಂಡು ಸಾಲ ಕೊಟ್ಟದ್ದು ಹೇಳಿ–"

"ಹೀಗೆ ಎಂದು ತಿಳಿದಿದ್ದರೆ ಕೊಡುತ್ತಿರಲಿಲ್ಲ, ಸ್ವಾಮಿ. ನಾನೇ ಬೆಳೆಯೊ ಗಿಡಕ್ಕೆ ಕೊಡಲಿ ಹಾಕಿದ ಹಾಗಾಯಿತು!" ಎಂದರು.

"ಆತ ಹೇಳಿದುದನ್ನು ಕೇಳಿ ಅನಂತಯ್ಯನವರಿಗೆ ಸಿಡಿಲು ಬಡಿದಹಾಗಾಯಿತು. ಆದರೆ ಅದನ್ನು ತೋರಗೊಡದೆ–"

"ಇರಲಿ, ಇದನ್ನು ನೀವು ಯಾರ ಮುಂದೂ ಹೇಳಬೇಡಿ. ಹೇಗೆ ಸರಿ ಮಾಡಬಹುದೋ, ನೋಡೋಣ–" ಎಂದರು. ಅವರು ಆ ವಿಷಯವನ್ನು ಯಾರಿಗೂ ಹೇಳಲಿಲ್ಲ. ಆದರೂ ಈ ಮೋಹಕ್ಕೆ ಬೇಗ ಮದ್ದು ಮಾಡಲೇಬೇಕು ಎಂದು ಹಟ ಹುಟ್ಟಿ ದುರ್ಗದಲ್ಲೇ ಕೂತರು. ಹೇಗೆ ಮಾಡಬೇಕು, ಯಾರಿಂದ ಹೇಳಿಸಿ ಕಣ್ಣು ತೆರೆಸಬೇಕು ಎಂದು ಯೋಚಿಸಿ ಯೋಚಿಸಿ, ಕಡೆಗೆ ವೆಂಕಟಸುಬ್ಬಯ್ಯನವರು ಬುದ್ಧಿಯನ್ನು ತಿರುಗಿಸಲು ಶಕ್ತಿಯಿದ್ದ ಚಂದ್ರಾ ಸಾನಿಯಿಂದಲೇ ಹೇಳಿಸಿ ನೋಡಬೇಕೆಂದು ಲೆಕ್ಕಹಾಕಿದರು. ಅದಕ್ಕೆ ಮೊದಲು ಆಕೆ ಹೇಗೆಂದು ಅವರು ತಿಳಿದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಅವರು ಒಂದು ದಿನ ವೆಂಕಟಸುಬ್ಬಯ್ಯನವರನ್ನೇ ಕೇಳಿದರು:

"ಏನಪ್ಪಾ ವೆಂಕಟಸುಬ್ಬು, ಮೂರುಹೊತ್ತು ನೀನಾಯಿತು, ನಿನ್ನ ರಾಣಿಯಾಯಿತು, ನಮ್ಮನ್ನೆಲ್ಲಾ ಮರೆತುಬಿಟ್ಟೆ."

"ಛೆ! ಎಲ್ಲಾದರೂ ಉಂಟೇ, ಮಾವ? ನಿಮ್ಮನ್ನು ನಾನು ಮರೆಯುವುದೇ? ಜಗತ್ತನ್ನೇ ಮರೆಯಬಹುದು, ಆದರೆ ನಿಮ್ಮನ್ನು ಮರೆಯಲಾರೆ, ನಿಮ್ಮನ್ನು ಬಿಟ್ಟು ನನಗೆ ಬೇರೆ ಹಿತೈಷಿಗಳು ಯಾರಿದಾರೆ ?"

"ಮೊದಲು ನಾನು ಹಾಗೆಂದೇ ನಂಬಿದ್ದೆ. ಆದರೆ ಈಚೀಚೆಗೆ..."

"ಈಚೀಚೆಗೆ ಏನಾಯಿತು, ಮಾವ?"

"ಹೊಸ ನೀರು ಬಂದು ಹಳೆಯ ನೀರು ಕೊಚ್ಚಿಕೊಂಡು ಹೋಯಿತು ಎಂಬ ಹಾಗಾಗಿದೆ. ಅದೆಲ್ಲಾದರೂ ಹೋಗಲಿ–ನನಗೆ ಇಷ್ಟು ಅನ್ಯಾಯ ಮಾಡೋದೇ?"

"ಅನ್ಯಾಯ....ನನ್ನಿಂದ...ನಿಮಗೆ! ಅದೇನು, ಮಾವ?"

"ಅಲ್ಲ–ನೀನು ನನ್ನ ತೊಡೆಯ ಮೇಲೆ ಆಡುತ್ತಿದ್ದ ದಿನದಿಂದಲೂ, ನಿನಗೊಂದು ಮದುವೆ ಮಾಡಿ, ಗಂಡಹೆಂಡಿರು ಸುಖವಾಗಿ ಸಂಸಾರ ಮಾಡಿ ಕೊಂಡಿರೋದನ್ನ ನೋಡಬೇಕೂಂತ ಎಷ್ಟೋ ಆಸೆ ಇಟ್ಟುಕೊಂಡಿದ್ದೆ. ಈಗ ಕೇಳಿದರೆ–ಚಂದ್ರಾನೇ ನನ್ನ ಸರ್ವಸ್ವ, ನನಗೆ ಬೇರೆ ಮದುವೆಯೇ ಬೇಡ – ಎನ್ನುತ್ತೀಯ. ಹಾಗೂ ಆಗಲಿ. ನಿನಗೆ ಬೇಕಾದವಳೇ ನಿನ್ನ ಪಟ್ಟದ ರಾಣಿಯಾಗಲಿ. ನೀನು ಹಿಟ್ಟಿದ ದಿನದಿಂದ, ನಿನ್ನ ಹೆಂಡತಿಯ ಮುಖ ನೋಡಬೇಕೆಂದು ಕಾತರಿಸುತ್ತಿದ್ದ ನಮಗೆ, ಒಂದು ಸಲ ಆಕೆಯ ಮುಖ ತೋರಿಸಿ – ಇಗೋ, ನಿಮ್ಮ ಸೊಸೆ– ಎಂದೂ ಹೇಳಬಾರದೇ ? ಅಷ್ಟಕ್ಕೂ ನಾವು ಅರ್ಹರಲ್ಲವೇ?"– ಬೇಸರವಾದಂತೆ ಕೇಳಿದರು ಅನಂತಯ್ಯ.

"ಛೆ! ಏನು ಮಾತು ಮಾವ, ಚಂದ್ರಾನ ನೋಡೋಕೆ ನಿಮಗೆ ಅಡ್ಡಿಯೇ, ಮಾವ? ನನ್ನ ಬಾಳಿಗೆ ಎರಡು ದೀಪಸ್ತಂಭ – ಒಂದು ನೀವು, ಇನ್ನೊಂದು ಚಂದ್ರಾ. ನಾನೇ ಕರೆದುಕೊಂಡು ಹೋಗಬೇಕೆಂದಿದ್ದೆ. ಆದರೆ ಕರೆಯಲು ಧೈರ್ಯ ಬರಲಿಲ್ಲ. ಯಾವಾಗ ಬೇಕಾದರೂ ಕರೆದುಕೊಂಡು ಹೋಗುತ್ತೇನೆ."

"ಹಾಗಾದರೆ ಯಾವಾಗ ಹೋಗೋಣ ?"

"ನಾಳೆಯೇ ಹೋಗೋಣ"–ಎಂದರು ವೆಂಕಟಸುಬ್ಬಯ್ಯ.

"ವೆಂಕಟಸುಬ್ಬಯ್ಯನವರಿಂದ ಅನಂತಯ್ಯನವರ ವಿಚಾರವನ್ನು ಆಗಾಗ ಕೇಳಿದ ಚಂದ್ರಾಸಾನಿ ಅವರನ್ನು ತನ್ನವರು ಎಂಬ ವಿಶ್ವಾಸದಿಂದ ಆದರಿಸಿದಳು. ಅವರು ಆಕೆಯ ಮನೆಗೆ ಬಂದಾಗ, ಆಕೆಯ ಮಾತಿನ ವಿನಯಪೂರ್ಣ ನಯ– ನಡತೆಯ ಸಜ್ಜನಿಕೆ, ಸ್ನೇಹಪರತೆಯನ್ನು ಕಂಡು ಅನಂತಯ್ಯನವರಿಗೂ ವೆಂಕಟಸುಬ್ಬಯ್ಯ ಆಕೆಯಲ್ಲಿ ಅನುರಕ್ತನಾದುದು ತಪ್ಪಲ್ಲ ಎಂದೆನಿಸಿತು. ಬಂಗಾರದ ಹೂವಿಗೆ ಪರಿಮಳ ಬಂದಾಗ ಅದಕ್ಕೆ ಮಾರುಹೋಗದವರೂ ಉಂಟೆ? ಅವರಿಗೆ ಆಕೆಯ ಅದರದಲ್ಲಿ, ಅಂತಃಕರಣಕ್ಕೆ ಸೋಕುವ ಮಾತಿನ ರೀತಿಯಲ್ಲಿ, ಕೃತ್ರಿಮವೇನೂ ಕಾಣಲಿಲ್ಲ. ಅದಕ್ಕೆ ಬದಲು ಒಂದೊಂದು ಮಾತಿನಲ್ಲೂ, ನೋಟದಲ್ಲೂ ಆಕೆಯ ಬಾಳು ವೆಂಕಟಸುಬ್ಬಯ್ಯನವರ ಬಾಳಿನೊಂದಿಗೆ, ಹಾಲಿನಲ್ಲಿ ಬೆರೆತ ಸಕ್ಕರೆಯಂತೆ ಕರಗಿರುವುದು ಕಾಣುತ್ತಿತ್ತು."



"ಒಲಿದು ಒಂದಾದ ಆ ಜೀವಗಳನ್ನು ನೋಡಿದ ಬಳಿಕ ಆಕೆಯ ಮನ ನೋಯಿಸುವ ಮಾತನ್ನು, 'ನಿನ್ನಿಂದ ಆತನ ಸಂಗೀತದ ಬಾಳು ಕುಂಠಿತವಾಗಿದೆ' ಎಂದು ಹೇಗೆ ಹೇಳುವುದು ಎನಿಸಿತು. ಆ ಬೆಸುಗೆಯನ್ನು ಮುರಿಯಬೇಕು ಎಂದುಕೊಂಡ ತಮ್ಮ ಬಗ್ಗೆಯೇ ಬೇಸರವಾಯಿತು. ತಮ್ಮ ಹೆಗಲ ಮೇಲೆ ಆ ನಿಷ್ಠುರ ಕರ್ತವ್ಯವನ್ನು ಹೇರಿದ ವಿಧಿಯನ್ನು ಶಪಿಸಿದರು. ಅವರಿಬ್ಬರ ಬಾಳಿನ ಅಪೂರ್ವ ರಸಮಯ ಸ್ನೇಹವನ್ನು ಕಂಡು 'ನಾನೇಕೆ ಇದನ್ನು ಮುರಿವ ಕಟುಕನಾಗಲಿ, ದೇವರೇ ತನಗೆ ಬೇಕಾದಾಗ ಹೇಗೆ ಬೇಕೋ ಹಾಗೆ ಆ ಬೆಸುಗೆಯನ್ನು ಬಿಡಿಸಲಿ. ಪ್ರಣಯದ ಸುಂದರ ವಿಗ್ರಹವನ್ನು ಒಡೆಯುವ ಪಾಪ ನನಗೇಕೆ?' ಎಂದಂದುಕೊಂಡರು. ಆದರೆ ಹಾಗೇ ವಿಧಿಗೆ ಬಿಟ್ಟರೆ ಮುಂದೆ ವೆಂಕಟಸುಬ್ಬಯ್ಯನವರ ಭವಿಷ್ಯ? ಅಪೂರ್ವ ಸುಂದರ ಸೂಚನೆಗಳ ಒಡನೆ ಅರಳಿದ ಕಲಾಪುಷ್ಪ, ಕಾಮಕೇಳಿಯ ಕಂಠಮಾಲೆಯಾಗಿ ಬಾಡಬೇಕೆ? ಲೋಕದ ಸಂತೋಷ ಒಬ್ಬ ಹೆಣ್ಣಿಗಾಗಿ ಬತ್ತಿಹೋಗಬೇಕೇ ? ಹಾಗಾಗದಂತೆ ತಡೆಯುವುದು ತಮ್ಮ ಕರ್ತವ್ಯ, ಅದು ಕಟು ನಿಜ. ಆದರೆ ಕರ್ತವ್ಯ ಕಟುವೆಂದು ನಿರ್ವಹಿಸದೆ ಇರುವುದುಂಟೆ ? ಆ ದಿನ ಆದ ಪರಿಚಯದ ಬಲದ ಮೇಲೆ, ನಾಲ್ಕಾರು ದಿನ ಕಳೆದನಂತರ ವೆಂಕಟಸುಬ್ಬಯ್ಯ ಇಲ್ಲದ ಹೊತ್ತನ್ನು ಸಾಧಿಸಿ, ಆಕೆಯ ಮನೆಗೆ ಹೋಗಿ ಅವಳನ್ನು ಕಂಡರು ಅನಂತಯ್ಯ."

"ಬನ್ನಿ, ಅವರು ಮನೆಯಲಿಲ್ಲ, ಬೇಗ ಬರಬಹುದು."

– ಒಂಟಿಯಾಗಿ ಬಂದ ಅನಂತಯ್ಯನವರನ್ನು ಕಂಡು, ಸ್ವಾಗತಿಸಿ ಚಂದ್ರಾಸಾನಿ ಹೇಳಿದಳು.

"ಅವನನ್ನು ನೋಡಲು ಬರಲಿಲ್ಲ. ನಿಮ್ಮನ್ನೇ ನೋಡಲು ಬಂದೆ...."

– ಎಂದು ಅನಂತಯ್ಯ ತಾವು ಹೇಳಬೇಕೆಂದು ಬಂದ ಮಾತಿಗೆ ಪೀಠಿಕೆ ಹಾಕಿದರು.

"ನನ್ನನ್ನೇ ನೋಡಲು ಬಂದಿರಾ! ನನ್ನಿಂದ ಏನಾಗಬೇಕು ಹೇಳಿ?"

– ಅನಂತಯ್ಯನವರ ಅನಿರೀಕ್ಷಿತ ಮಾತುಗಳನ್ನು ಕೇಳಿ ಚಕಿತಳಾಗಿ ಕೇಳಿದಳು ಚಂದ್ರಾಸಾನಿ.

"ಆ ಪ್ರಶ್ನೆಗೆ ತಟಕ್ಕನೆ ಉತ್ತರ ಹೇಳದೆ ಅನಂತಯ್ಯ ಒಂದು ಗಳಿಗೆ ಆಕೆಯನ್ನು ದುರುಗುಟ್ಟಿ ನೋಡಿದರು. ಆ ನೋಟದ ತೀವ್ರತೆಯ ಅನುಭವವಾಗಿ ಆಕೆಗೆ ಏಕೋ ದಿಗಿಲಾಯಿತು."

"ವೆಂಕಟಸುಬ್ಬಯ್ಯ ನಿನ್ನ ಪ್ರಾಣಪದಕ. ನನಗೂ ಅವನು ಅಷ್ಟೇ. ನಿಮ್ಮಿಬ್ಬರ ಸ್ನೇಹ ನಮ್ಮನ್ನು ನಿನ್ನ ನಂಟರನ್ನಾಗಿ ಮಾಡಿದೆ, ಅಲ್ಲವೇ ?"

"ನಿಜ, ಅವರ ಕಾಲು ತುಳಿದ ಮಣ್ಣಿನ ಕಣವೂ ನನಗೆ ಮುತ್ತಿನಹಾರ. ಹಾಗಿರುವಾಗ ಅವರಿಗೆ ಅಷ್ಟು ಬೇಕಾದ ನೀವು ನನಗೆ ಖಂಡಿತವಾಗಿಯೂ ನಂಟರೇ. ಬರೇ ನಂಟರೇ ಏನು, ಅವರಿಗೆ ಹೇಗೋ ಹಾಗೆ ನನಗೂ ನೀವು ತಂದೆಯಿದ್ದಂತೆ. ಏನು ಹೇಳುವುದಿದ್ದರೂ, ನಾನು ನಿಮ್ಮ ಮಗಳು ಎಂದು ಕೊಂಡು ಹೇಳಿ."

"ಕೆಲವು ವೇಳೆ ಕಟುವಾದರೂ, ಸತ್ಯವನ್ನು ಮರೆಮಾಚದೆ ಹೇಳುವುದು ಆಪ್ತರ ಕರ್ತವ್ಯ. ಅಲ್ಲವೇ ತಾಯೀ ?"

"ನಿಜ" ಮಾತಿಗೆ ಸಮ್ಮತಿ ಸೂಚಿಸಿ ತಲೆಹಾಕಿದಳು ಚಂದ್ರಾ.

"ನಿಮ್ಮಿಬ್ಬರಿಗೂ ಒಬ್ಬರಲ್ಲೊಬ್ಬರಿಗೆ ತುಂಬಾ ಪ್ರೇಮವಿದೆ. ಜನ ಏನು ಹೇಳಿದರೂ ನನಗೇನೋ ತುಂಬಾ ಸಂತೋಷ. ಇದೇ ನಿಜವಾದ ದಾಂಪತ್ಯ. ಅವನು ನನಗೆ ಮಗ ಆದರೆ, ನೀನು ಸೊಸೆ. ನಿನಗೂ ನನ್ನ ವಿಷಯದಲ್ಲಿ ಅದೇ ಭಾವನೆ ಇದೆ. ಈ ದಿನ ನೀನೇ ಅದನ್ನು ಬಾಯಾರ ಹೇಳಿದೆ. ನೀನು ಹೇಳುವ ಮೊದಲು ನನಗೆ ಅದೇ ಭಾವನೆ ಇತ್ತು. ಆದ್ದರಿಂದಲೇ ಸಲಿಗೆ ವಹಿಸಿ ಒಂದು ಮಾತು ಹೇಳಬೇಕೆಂದು ಬಂದೆ."

"ಎಲ್ಲೋ ಅಡ್ಡಾಡುತ್ತಾ, ಆಕೆಗೆ ಕಾಣದ ಯಾವುದೋ ಗುರಿಯ ಕಡೆಗೆ ನಡೆಯುತ್ತಿರುವ ಅವರ ಮಾತನ್ನು ಕೇಳಿ ಚಂದ್ರಾಸಾನಿಯ ಎದೆಯಲ್ಲಿ ಕವಿದ ದಿಗಿಲು ಹೆಚ್ಚಾಯಿತು. ಮಾತನಾಡದೆ ಹೆದರಿದ ಹಕ್ಕಿಯಂತೆ, ಅಗಲವಾದ ಕಣ್ಣು ತೆರೆದು ಅವರನ್ನು ನೋಡಿದಳು."

"ವೆಂಕಟಸುಬ್ಬುವಿನ ಮೇಲೆ ನಿನಗೆ ತುಂಬಾ ಪ್ರೇಮವಿದೆಯಲ್ಲವೇ ? ಇದೆ. ಆ ಪ್ರಶ್ನೆಯನ್ನು ನಾನು ಕೇಳಬೇಕಾದುದೇ ಇಲ್ಲ. ಪ್ರೇಮವಿದೆ ಎನ್ನುವುದಕ್ಕೆ, ಅವನ ಹೆಸರು ಕೇಳಿದ ಕೂಡಲೇ ಹೊಳೆಯುವ ನಿನ್ನ ಕಣ್ಣುಗಳೇ ಸಾಕ್ಷಿ. ಆದರೆ



ಪ್ರೇಮಕ್ಕೂ ಕಾಮಕ್ಕೂ ಇರುವ ನಡುವಿನ ಅಂತರ ಬಹುನವಿರು, ತಾಯಿ, ಎಂದಾದರೂ ನೀನು ಅದನ್ನು ಯೋಚನೆ ಮಾಡಿದ್ದೀಯೆ ?"

"ಊಹೂ."

"ನಾನು ಬಲ್ಲೆ. ನೀನೊಬ್ಬಳೇನು, ಪ್ರಣಯಾಂಧರಾದ ಯಾರೂ ಅದನ್ನು ಯೋಚಿಸುವುದಿಲ್ಲ. ಹೊಳೆಯಲ್ಲಿ ಮುಳುಗಿದವರು ಆ ನೀರು ಉಪ್ಪೇ ಸಿಹಿಯೇ ಎಂದು ಯೋಚಿಸುತ್ತಾರೆಯೇ ? ಹಾಗೇ ಪ್ರಣಯದ ಹೊಳೆಯಲ್ಲಿ ಮುಳುಗಿದವರು ಕೂಡ. ಆದರೂ ತಿಳಿದುಕೊಳ್ಳಬೇಕೆಂದು ಒಂದು ದಾರಿ ಇದೆ."

"ಏನು ?"

"ಪ್ರೇಮ ತನ್ನ ಕೃಪೆಗೆ ಪಾತ್ರವಾದ ವ್ಯಕ್ತಿಯನ್ನು ಉದ್ಧಾರ ಮಾಡುತ್ತದೆ; ಕಾಮ ಪಾತಾಳಕ್ಕೆ ತಳ್ಳುತ್ತದೆ; ಒಂದರಲ್ಲಿ ಅರಿವು ಅರಳಿದರೆ ಇನ್ನೊಂದರಲ್ಲಿ ವಿಸ್ಮೃತಿ ಕವಿಯುತ್ತದೆ. ಮೊಗ್ಗನ್ನು ಅರಳಿಸಿ ಜಗತ್ತಿಗೇ ಅದರ ಸೌಂದರ್ಯ ನರುಗಂಪನ್ನು ನೀಡುವುದು ಪ್ರೇಮ; ಅರಳಿದ ಹೂವನ್ನು ಬಾಡಿಸಿ ಕೊಲ್ಲುವ ಬಿಸಿಲು ಕಾಮ. ನಿಮ್ಮ ಪ್ರಣಯ ಎಂಥದೋ ಯೋಚಿಸಿ ನೋಡು, ತಾಯಿ."

"ನಾನು ಅರಿಯದ ಹೆಣ್ಣು, ತಾವೇ ಹೇಳಬೇಕು."

"ಹೇಳಲೇ ? ನನ್ನ ಮಾತು ತೀರ ಕಟುವಾದರೆ ಕ್ಷಮಿಸುತ್ತೀಯಾ ?"

"ಹೇಳಿ ಎಂದು" ಎದೆ ನಡುಗುತ್ತಿದ್ದರೂ, ಏಕೋ ಅವರನ್ನು ಮಾತು ಮುಂದುವರಿಸಲು ಬಿಟ್ಟರೆ ಏನೋ ಅಪಾಯ ಒದಗಬಹುದೆಂದು ಎದೆ ಶಂಕಿಸುತ್ತಿದ್ದರೂ, ಕೇಳಿದಳು ಚಂದ್ರಾಸಾನಿ.

"ನಿನ್ನದು ಪ್ರೇಮವಿರಬಹುದು, ತಾಯಿ, ಆದರೆ ವೆಂಕಟಸುಬ್ಬುವಿನದು ಮಾತ್ರ ಕಾಮ, ಅದು ಅವನನ್ನು ದಿನದಿನಕ್ಕೆ ಪಾತಾಳಕ್ಕೆ ತುಳಿಯುತ್ತಿದೆ. ನಿನ್ನ ಮೇಲಿನ ಮೋಹದಲ್ಲಿ ಅವನನ್ನೇ ಮರೆತ ಅವನು, ಕರ್ತವ್ಯ ಭ್ರಷ್ಟನಾಗುತ್ತಿದ್ದಾನೆ; ಅವನನ್ನೇ ಅವನು ಮರೆತಿದ್ದಾನೆ. ಸಂಗೀತ ತನ್ನ ಬಾಳ ಉಸಿರು ಎಂದುಕೊಂಡವನು ಅವನು. ಅವನೇ ಆರಿಸಿಕೊಂಡ ಅವನ ದಾರಿಯಲ್ಲಿ ಅವನು ನಡೆಯಲು ಅವನಿಗೆ ಯಾರೂ ಅಡ್ಡವಾಗಲಿಲ್ಲ. ಇವನು ಅವನ ತಂದೆಗೆ ಇದ್ದ ಒಬ್ಬನೇ ಮಗ. ಮಗ ತಮ್ಮ ದಾರಿಗೆ ಬರದಿದ್ದನ್ನು ಕಂಡು ಕೊರಗಿ, ಆದರೂ ಅವನಿಗೆ ಅಡ್ಡಿಯಾಗದೆ ಮುಂದೆ ಬರಲಿ ಎಂದು ಆ ತಂದೆ ಕಣ್ಣು ಮುಚ್ಚಿದರು. ನಾವು, ಅವನ ಆಪ್ತರು ಇಷ್ಟರು. ಎಲ್ಲರೂ ಅವನ ದಾರಿಯಲ್ಲಿ ಅವನು ಮುಂದೆ ಬರಲಿ ಎಂದು ಹಾರೈಸಿದೆವು, ಅವನಿಂದ ನಾವು ಬೇರೇನನ್ನೂ ಬಯಸಲಿಲ್ಲ. ಅವನಿಗಿದ್ದುದೂ ಅದೊಂದೇ ಬಯಕೆ. ಈಗ–ಎಲ್ಲರ ಬಯಕೆಯೂ ಅವನ

ವಿಪರೀತ ಮೋಹದ ಚಿತೆಯ ಮೇಲೆ ಮಲಗಿದೆ. ನಿನ್ನ ಸಂಗದಲ್ಲವನು ಎಲ್ಲವನ್ನೂ ಮರೆತಿದ್ದಾನೆ. ನಿನಗೂ ಅವನ ಮೇಲೆ ಪ್ರಚಂಡ ವ್ಯಾಮೋಹ. ಆದರೂ, ನೀನಾದರೂ ಈಗ, ಅವನು ಸಂಗೀತಾಭ್ಯಾಸ ಮಾಡುತ್ತಿದ್ದಾನೆಯೇ ಎಂದು ವಿಚಾರಿಸಿದೆಯಾ ?....ಊಹೂ–ಇಲ್ಲ. ನಿನಗೂ ಅದು ಬೇಕಾಗಿಲ್ಲ. ಅವನಿಗಂತೂ ಅದು ಮರೆತೇ ಹೋಗಿದೆ. ಅಷ್ಟೇ ಅಲ್ಲ ಇನ್ನೂ ದೂರ ಹೋಗಿದೆ ಅವನ ಇಳಿತ. ನೀನರಿಯೆ. ಅವನು ಹೇಳಿಲ್ಲ. ನಿನಗಾಗಿ ಅವನು ಮಾಡಬಾರದುದನ್ನು ಮಾಡಿದಾನೆ–"

– ಅನಂತಯ್ಯನವರ ಮಾತು ಗಳಿಗೆಗಳಿಗೆಗೆ ಬಿರುಸಾಗುತ್ತಿತ್ತು.

"ಏನು ಮಾಡಿದರು ಅವರು?"

– ಭೀತಿಕಾತರಳಾಗಿ, ಬಿಗಿದ ಧ್ವನಿಯಲ್ಲಿ ಕೇಳಿದಳು, ಚಂದ್ರಾಸಾನಿ. ಬರಿಮನೆಯಲ್ಲಿ ಕವಿದ ಕತ್ತಲೆಯಂತೆ, ಅವಳ ಎದೆಯಲ್ಲಿ ಭೀತಿ ಬಲಿಯುತ್ತಿತ್ತು. ಅನಂತಯ್ಯನವರಾಡಿದ ಮಾತನ್ನು ಕೇಳಿ ಉಸಿರು ಹತ್ತಿಬಂದಂತೆ ಆಯಿತು.

"ನಿನ್ನ ಬಳಿಗೆ ಬರುವಾಗ ಅವನು ಸಾವಿರ ಹೊನ್ನು ತರಲಿಲ್ಲವೇ ?"

"ತರಬೇಕೆಂದು ನಾನು ಹೇಳಲಿಲ್ಲ."

– ಆ ಮಾತು ಕೇಳಿ ತಟಕ್ಕನೆ ಸಿಟ್ಟು ಕೆರಳಿ ಹೇಳಿದಳು ಚಂದ್ರಾಸಾನಿ.

"ಇರಬಹುದು, ನೀನು ತರಬೇಕೆಂದು ಹೇಳಲಿಲ್ಲ. ಆದರೂ ಅವನು ಆ ಹಣ ತಂದ. ಆದರೆ ಆ ಹಣ ಎಲ್ಲಿಂದ ಬಂದಿತು, ಗೊತ್ತೆ ?– ಹಣಕ್ಕಾಗಿ ಪಟ್ಟಣಶೆಟ್ಟಿ ವಿರೂಪಾಕ್ಷಪ್ಪನವರ ಬಳಿ ಎರಡು ರಾಗಗಳನ್ನು ಒತ್ತೆಯಿಟ್ಟು ತಂದಿದಾನೆ. ಆ ಹಣ ತೀರುವಂತಿಲ್ಲ; ಅವನಿನ್ನು ಆ ರಾಗಗಳನ್ನು ಹಾಡುವಂತಿಲ್ಲ, ಸಂಗೀತವೇ ಬೇಡವಾದವನಿಗೆ ರಾಗದ ಚಿಂತೆಯೇಕೆಂದು ಎಲ್ಲಕ್ಕೂ ಎಳ್ಳುನೀರು ಬಿಟ್ಟಿದ್ದಾನೆ. ಈಗ ಹೇಳು– ಈ ಪ್ರೇಮದಿಂದ ಅವನ ಉದ್ಧಾರವಾಗಿದೆಯೋ, ಅಧಃಪತನವಾಗಿದೆಯೋ ?"

ಚಂದ್ರಾಸಾನಿಯ ಮುಖಕ್ಕೆ ಹೊಡೆದ ಹಾಗೆ ಕೇಳಿದರು ಅನಂತಯ್ಯ.

"ಅನಂತಯ್ಯನವರು ಹೇಳಿದುದನ್ನು ಕೇಳಿ ಆಕೆಗೆ ಉಸಿರು ತಿರುಗಿಸಲು ಅವಕಾಶ ಕೊಡದೆ ಕೆನ್ನೆಗೆ ಹೊಡೆದಂತಾಯಿತು."

"ನಿಜವೇ ನೀವು ಹೇಳುವ ಈ ಮಾತು ? ರಾಗಗಳನ್ನು ಒತ್ತೆಯಿಟ್ಟರೇ ಅವರು ?"– ಅರ್ತಳಾಗಿ ಕೇಳಿದಳು ಚಂದ್ರಾಸಾನಿ.

"ಅಯ್ಯೋ – ಇದೇನು ಮಾಡಿದರು ? ನನಗಾದರೂ ಒಂದು ಮಾತು ಹೇಳಲಿಲ್ಲ...."



– ಎಂದು ಚಂದ್ರಾಸಾನಿ ತಲೆತಗ್ಗಿಸಿ, ವೆಂಕಟಸುಬ್ಬಯ್ಯನವರು ಮಾಡಿದ ಕೆಲಸದಿಂದ ಎದೆ ಇರಿದಂತಾಗಿ ಕಂಬನಿಗರೆಯುತ್ತಾ ಕುಳಿತಳು.

"ಊರಿನಲ್ಲಿರುವ ಜನ ಏನಾಡುತ್ತಾರೆಂದು ಗೊತ್ತೆ ?– ಚಂದ್ರಾಸಾನಿ ವೆಂಕಟಸುಬ್ಬಯ್ಯನನ್ನು ಹಾಳುಮಾಡುತ್ತಿದ್ದಾಳೆ. ಅವಳಿಗೆ ಹಣ ಒದಗಿಸಲು ಇವನು ರಾಗಗಳನ್ನು ಒತ್ತೆ ಇಡಲೂ ಹೇಸಲಿಲ್ಲ – ಎಂದು."

"ನೀವು ನಂಬಿದಿರಾ ಆ ಮಾತನ್ನು ? ನಿಮ್ಮಾಣೆ....ನನ್ನಾಣೆ....ನನಗೆ ಅವರ ಹಣ ಬೇಡ. ಅದರ ಪ್ರೀತಿಯೊಂದೇ ಸಾಕು. ಅದಕ್ಕಾಗಿ ಬೇಕಾದುದನ್ನು ಮಾಡಲು ಸಿದ್ಧವಾಗಿದ್ದೇನೆ– ಹೋಗಿ, ಮೊದಲು ಆ ರಾಗಗಳನ್ನು ಬಿಡಿಸಿ...."

– ಎಂದು ಚಂದ್ರಾಸಾನಿ ತನ್ನ ಕತ್ತಿನಲ್ಲಿದ್ದ ಹಾರ, ಕೈಯಲ್ಲಿದ್ದ ವಜ್ರದ ಕಂಕಣವನ್ನು ತೆಗೆದು ಅನಂತಯ್ಯನವರ ಕಾಲ ಬಳಿ ಸರಿಸಿದಳು. "ತೆಗೆದುಕೊಂಡು ಹೋಗಿ–ನಾನು ಕೊಟ್ಟೆನೆಂದು ಮಾತ್ರ ಅವರಿಗೆ ಹೇಳಬೇಡಿ. ನನ್ನ ಮೇಲೆ ಸಿಟ್ಟಾದಾರು."

"ತಮ್ಮ ಕಾಲ ಬಳಿ ಚಂದ್ರಾಸಾನಿ ಹರಡಿದ ಹರಳಿನ ಮಾಲೆ, ವಜ್ರ ಕಂಕಣವನ್ನು ನೋಡಿ, ಅನಂತಯ್ಯನವರಿಗೆ, ಅವು ಹರಳುಗಳಲ್ಲ, ಚಂದ್ರಾ ಸಾನಿಯ ಹೃದಯವಾಸಿಯಾದ ಪವಿತ್ರಪ್ರೇಮ, ತನ್ನ ಭಕ್ತನ ಪತನನ್ನು ಕಂಡು ಕರೆದ ಕಂಬನಿಯಲ್ಲಿ ಕೋದ ಮಾಲೆ, ಕಂಕಣ ಎನ್ನಿಸಿತು. ಅದನ್ನು ಮುಟ್ಟಲೂ ಅವರಿಗೆ ಮನಸ್ಸು ಬರಲಿಲ್ಲ. ಹಾಗೇ ವೆಂಕಟಸುಬ್ಬಯ್ಯನವರ ವಿಷಯದಲ್ಲಿ ಆಕೆಗಿದ್ದ ಅಸೀಮಪ್ರೇಮದ ಅರಿವಾಗಿ, ಅದರೊಂದಿಗೆ ತಾವು ಬಂದ ಕೆಲಸವೂ ನೆನಪಾಗಿ, 'ಛೆ, ಇದೇನು ಹೊಲೆಗೆಲಸ ಮಾಡುತ್ತಿದ್ದೇನೆ ನಾನು. ಎಷ್ಟು ಜನ್ಮಗಳ ತಪಸ್ಸು, ಈ ಪ್ರೇಮಮೂರ್ತಿಯನ್ನು ಕಡೆದಿದೆಯೋ. ಯಾವುದೋ ಬೆದರಿಕೆಗೆ ಆಳಾಗಿ, ಇದನ್ನು ನಾನೇಕೆ ಮುರಿಯಬೇಕು ? ನನ್ನ ಕೆಲಸ ನಿಜವಾಗಿಯೂ ದೇವರಿಗೆ ಪ್ರೀತಿಯಾಗಬಹುದೇ? ಅವನ ಸಂಗೀತಕ್ಕಾಗಿ, ಅಮೃತಸ್ನೇಹವನ್ನು ಮುರಿಯುತ್ತಿದ್ದೇನಲ್ಲಾ ?– ಸಂಗೀತದಷ್ಟೇ ಈ ಪ್ರೇಮವೂ ಸುಂದರವಾಗಿಲ್ಲವೇ? ಒಂದು ಬಗೆಯ ಸೌಂದರ್ಯಕ್ಕಾಗಿ, ಮತ್ತೊಂದು ಬಗೆಯ ಸೌಂದರ್ಯವನ್ನು ಕೊಲೆಮಾಡುವುದೇ ?' ಎಂದು ಮರುಗಿದರು. ಆ ಭಾವನೆ ಬಂದಾಗ ಕಣ್ಣಿನಲ್ಲೂ ನೀರು ಬರುವಹಾಗಾಯಿತು. ಆದರೆ ಮರುಗಳಿಗೆಯೇ ಕರ್ತವ್ಯದ ನೆನಪಾಗಿ, ಕಣ್ಣಿನಲ್ಲಿ ಒಸರಿದ ನೀರು ಹೊರಗೆ ಕಾಣದಂತೆ ತಡೆದು, ಮೃದುವಾದ ನೇವರಿಸುವ ಧ್ವನಿಯಲ್ಲಿ ಹೇಳಿದರು: "

"ನಾನೂ ನಿನ್ನಿಂದ ಬೇಡಲೆಂದೇ ಬಂದಿದ್ದೆ, ತಾಯೀ, ಆದರೆ ಹಣವನ್ನಲ್ಲ..."

"ಏನು ಬೇಕು ಹೇಳಿ. ಅವರಿಗಾಗಿ, ನೀವು ಕೇಳಿದುದನ್ನು ಕೊಡಲು ಸಿದ್ಧವಾಗಿದ್ದೇನೆ."

"ಖಂಡಿತವೇ ಆ ಮಾತು ?"

"ಸೂರ್ಯಚಂದ್ರರೇ ಸಾಕ್ಷಿ"

"ಮಾತುಕೊಟ್ಟ ಬಳಿಕ ಹಿಂಜರಿಯಕೂಡದು."

"ಇಲ್ಲ ಎಂದಿಗೂ ಇಲ್ಲ."

"ಸರಿ. ಇಗೋ ತಾಯಿ, ನಾನು ಬ್ರಾಹ್ಮಣ. ಆದರೂ ಎಂದೂ ಕೈ ಚಾಚಿ ಯಾರಲ್ಲೂ ಬೇಡಿದವನಲ್ಲ. ಇಂದು ಬೇಡುತ್ತೇನೆ – ಭಿಕ್ಷೆ ಎಂದು ಅವನನ್ನು ನನ್ನ ಉಡಿಯಲ್ಲಿ ಹಾಕು. ಇಂದು ಕೊಟ್ಟುದುದನ್ನು ಮತ್ತೆ ನನಗೆ ಬೇಕೆಂದು ಬೇಡಿ ದತ್ತಾಪಹಾರಕ್ಕೆ ಮನಸ್ಸು ಮಾಡಬೇಡ."

– ಚಂದ್ರಾಸಾನಿಯ ಮುಂದೆ, ಮೈಮೇಲೆ ಹೊದ್ದುಕೊಂಡಿದ್ದ ಉತ್ತರೀಯವನ್ನು ಚಾಚಿ ಕೇಳಿದರು ಅನಂತಯ್ಯ.

ಸಿಡಿಲನ್ನು ಸೆಳೆದುಬಿಟ್ಟಂತಾಯಿತು, ಆಕೆಗೆ ಆ ಮಾತು ಕೇಳಿ.

"ಅಯ್ಯೋ, ಇದೇನು ನನ್ನ ಬಾಳು ಬರಿದುಮಾಡುವ ಭಿಕ್ಷೆ ಬೇಡಿದಿರಿ!"

"ನನಗಾಗಿ ಅವನನ್ನು ನಾನು ಬೇಡುತ್ತಿಲ್ಲ, ತಾಯಿ, ಅವನಿಗಾಗಿ ನಿನ್ನಿಂದ ಅವನನ್ನು ಬೇಡುತ್ತಿದ್ದೇನೆ. ನಿನ್ನ ವ್ಯಥೆಯನ್ನು ನಾನು ಬಲ್ಲೆ ತಾಯಿ, ನಿನ್ನನ್ನು ಅಗಲಿದ ಅವನಿಗೂ ಎಷ್ಟು ವ್ಯಥೆಯಾಗುವುದೆಂದು ಬಲ್ಲೆ. ಆದರೆ ತ್ಯಾಗದ ಮೂಸೆಯಲ್ಲಿ, ಯಾತನೆಯ ಕಿಚ್ಚಿನಲ್ಲಿ ಬೇಯದೆ ಕಾಮ, ಪ್ರೇಮವಾಗದು. ಹೆದರಿ ಹಿಂಜರಿಯಬೇಡ; ಭಿಕ್ಷೆ ನೀಡು, ತಾಯಿ."

– ಅದುವರೆಗೂ ಕುಳಿತು ಮಾತನಾಡುತ್ತಿದ್ದ ಅನಂತಯ್ಯ ತಟಕ್ಕನೆ ಎದ್ದು ನಿಂತು ಬೇಡಿದರು. ಅವರಾಡಿದ ಮಾತನ್ನು ತಲೆತಗ್ಗಿಸಿ ಕುಳಿತು ಕೇಳುತ್ತಿದ್ದ ಚಂದ್ರಾಸಾನಿ, ತಲೆಯೆತ್ತಿ ಅನಂತಯ್ಯನವರ ಮುಖವನ್ನು ನೋಡಿದಳು – ಬೇಟೆಗಾರನಿಂದ ಜೀವದಾನ ಬೇಡುವ ಹುಲ್ಲೆಯಂತೆ. ಆಕೆಯ ಕಣ್ಣುಗಳಿಂದ ಮುತ್ತುಮುತ್ತಾಗಿ ಉರುಳುತ್ತಿದ್ದ ನೂರು ಕಂಬನಿ ಹನಿಗಳು 'ಬೇಡ...ಬೇಡ...ಇಂಥ ಭಿಕ್ಷೆಯನ್ನು ಬೇಡಿ ಕೊಲ್ಲಬೇಡ' ಎಂದು ನೂರು ಕಂಠದಲ್ಲಿ ಆಕೆಗಾಗಿ ಬೇಡಿದವು. ಗಳಿಗೆಗಳಿಗೆಗೂ ಹೃದಯಪಾತ್ರೆಯಲ್ಲಿ ತುಂಬುತ್ತಿದ್ದ ದುಃಖಭಾರದಿಂದ ಆಕೆಯ ಮೈ ಕಂಪಿಸುತ್ತಿತ್ತು. 'ನನ್ನನ್ನೇಕೆ ಕೊಲ್ಲುತ್ತೀರಿ, ಉಳಿಸಿ' ಎಂದು ಬೇಡುವಂತೆ ನೋಡಿದಳು ಚಂದ್ರಾಸಾನಿ–



"ಅನಂತಯ್ಯನವರೂ ಆಕೆಯತ್ತ ನೋಡಿದರು."

"ವಸಂತದ ಪ್ರಥಮ ಪ್ರಭಾತದಲ್ಲಿ ಅರಳಿ ಕಳಕಳಿಸುತ್ತಿದ್ದ ನವಕೋಮಲ ಪುಷ್ಪದಂತಿದ್ದ ಆಕೆಯ ಮೊಗ ಬಾಡಿ ಬೆಂಡಾಗಿತ್ತು; ಪ್ರಣಯಕಾಂತಿಯಿಂದ ಜೋಡಿ ಶುಕ್ರನಕ್ಷತ್ರದಂತೆ ಥಳಥಳಿಸುತ್ತಿದ್ದ ಆಕೆಯ ಕಣ್ಣುಗಳು ಬಿಸಿಲು ಸತ್ತ ಹಗಲಿನಂತೆ ಮಂಕಾಗಿದ್ದವು; ಮುಟ್ಟಿದರೆ ರಸ ಒಸರುವುದೇನೋ ಎಂಬ ಪಕ್ವ ಬಿಂಬಾಫಲದಂತಿದ್ದ ತುಟಿಗಳು, ಬೆಳ್ಳಗೆ ಬಿಳಚಿಕೊಂಡಿದ್ದವು."

"ವಿಶ್ವಶಿಲ್ಪಿಯ ದಿವ್ಯಪ್ರತಿಭೆಯ ಅಪೂರ್ವ ಸೌಂದರ್ಯಾಕೃತಿಯಂತಿದ್ದ ಚಂದ್ರಾಸಾನಿ, ಈಗ ಸುಂದರಚಿತ್ರವನ್ನು ಕಠೋರಹಸ್ತವೊಂದು ಕೊಳಚೆಯ ಕೈಗಳಿಂದ ಹೊಲೆಗೆಡಿಸಿದಂತಿದ್ದಳು. ಅದನ್ನು ನೋಡಿ ಅನಂತಯ್ಯನವರ ಹೃದಯವನ್ನು ಹಿಸುಕಿದಂತಾಯಿತು."

"ಜೀವಭಿಕ್ಷೆ ಬೇಡುವಂತೆ ನೋಡಿದಳು ಚಂದ್ರಾಸಾನಿ–"

"ಅನಂತಯ್ಯನವರೂ ಎದೆಯಾಳದಲ್ಲೆಲ್ಲೋ ಕಂಬನಿಗರೆಯುತ್ತ ನೋಡಿದರು..."

"ಆಕೆಯ ಕಣ್ಣಿನಲ್ಲಿ ನೆಟ್ಟ ನೋಟ ಚಲಿಸುವ ಅವಕಾಶ ಕೊಡದೆ ಹೊತ್ತು ಬಂದ ಕರ್ತವ್ಯದಂತೆಯೇ ನಿಷ್ಠುರವಾದ ದೃಷ್ಟಿಯಿಂದ ನೋಡಿದರು."

"ಕಡೆಯುಸಿರೆಳೆವ ಮುನ್ನ ಕಂಪಿಸುವ ಮೈಯಂತೆ, ಆಕೆಯ ದೇಹ ಕಂಪಿಸಿತು. ತನ್ನ ಹೃದಯದಂತೆಯೇ ಅತ್ತಿತ್ತ ಸುಳಿದು ಹೊಯ್ದಾಡುತ್ತಿದ್ದ ನೋಟವನ್ನು. ತಟಕ್ಕನೆ ಒಂದು ನೆಲೆಗೆ ನಿಲ್ಲಿಸಿ, ಅನಂತಯ್ಯನವರನ್ನೇ ನೋಡುತ್ತಾ...."

"ಆಗಲಿ. ಅವರನ್ನು ಕಳಿಸುತ್ತೇನೆ...." ಎಂದು ಎದೆಯ ಕರುಳನ್ನೇ ಕಿತ್ತು ಹೊರಚೆಲ್ಲಿದಂತೆ ನುಡಿದು, ಕೆಳಗುರುಳಿದಳು ಚಂದ್ರಾ. ಉಗ್ರವ್ಯಥೆಯ ದಾವಾನಲದಲ್ಲಿ ಸಿಲುಕಿ, ಬೆಂಕಿಯಲ್ಲಿ ಸಿಕ್ಕ ಹಕ್ಕಿಯಂತೆ, ಎದೆಯಲ್ಲಿ ಸೂಜಿಯನ್ನು ಸಿಕ್ಕಿಸಿದ ಪತಂಗದಂತೆ ಹೊಯ್ದಾಡುತ್ತಿದ್ದಳಾಕೆ. ಅನಂತಯ್ಯನವರಿಗೂ ಅದನ್ನು ನೋಡುವುದಾಗಲಿಲ್ಲ. ಅದುವರೆಗೂ ಪ್ರಯತ್ನ ಪೂರ್ವಕವಾಗಿ ತಡೆದ ಕಂಬನಿ ತುಳುಕಿ ಹೊರಚೆಲ್ಲಿ ಕಣ್ಣು ಮಂಜಾಯಿತು. ಆಕೆಯ ಬಳಿಯಲ್ಲಿ ಕುಳಿತು, ತನ್ನ ಕಠೋರಶಿಕ್ಷೆಯಿಂದ ನೊಂದ ಮಗುವನ್ನು ಸಂತೈಸುವ ತಾಯಿಯಂತೆ ಆಕೆಯ ತಲೆಯನ್ನು ಮೃದುವಾಗಿ ನೇವರಿಸಿ–

"ತಾಯೀ! ನೀನು ಈ ಲೋಕದ ಮನುಷ್ಯಳಲ್ಲ, ದೇವತಾಸ್ತ್ರೀ" ಎಂದು ಹೇಳಿ, ಉಕ್ಕಿಬರುವ ಅಳುವನ್ನು ಬಿಗಿಹಿಡಿಯುತ್ತಾ, "ನನ್ನನ್ನು ಕ್ಷಮಿಸು ತಾಯಿ....ನಾನು ಚಂಡಾಲ!" ಎಂದು ನುಡಿದು, ಅಲ್ಲಿ ನಿಲ್ಲಲಾಗದೆ ಹೋಗಿಬಿಟ್ಟರು.

"ಎಷ್ಟು ಹೊತ್ತು ಹಾಗುರುಳಿದ್ದಳೋ ಏನೋ ಚಂದ್ರಾಸಾನಿ.... ಎದ್ದಾಗ ಅವಳ ಎದೆ ಮಸಣವಾಗಿತ್ತು. ಕಠೋರ ಕರ್ತವ್ಯಪಾಲನೆಯ ದೃಢ ನಿರ್ಧಾರ ಅವಳ ಮುಖದಲ್ಲಿ ಚಿತಾಗ್ನಿಯಂತೆ ಉರಿಯುತ್ತಿತ್ತು. ಮಂಕಾದ ಕಣ್ಣಿನಿಂದ, ಬರಿ ಮುಗಿಲನ್ನು ದಿಟ್ಟಿಸುತ್ತ ಕುಳಿತಿದ್ದು, ಸ್ವಲ್ಪ ಸಮಯಾ ನಂತರ ದಾಸಿಯನ್ನು ಕೂಗಿ ಹೇಳಿದಳು–"

"ಹಿಂದೆಂದೂ ಇರದಷ್ಟು ಸೊಗಸಾಗಿ ಇಂದು ಶಯ್ಯಾಗೃಹವನ್ನು ಸಿಂಗರಿಸು."

"ಹೊತ್ತಾಗಿದೆ, ನೀವು ಶೃಂಗಾರ ಮಾಡಿಕೊಳ್ಳುವುದಿಲ್ಲವೇ, ತಾಯಿ?"

"ನನಗೆ ಶೃಂಗಾರ! – ಹೂಂ, ನಾಳೆ ಮಾಡುವೆಯಂತೆ..."

– ಪ್ರಶ್ನೆ ಮಾಡಿದ ದಾಸಿಯ ಮುಖವನ್ನು ನೋಡದೆ, ಎತ್ತಲೋ ನೋಡುತ್ತಾ, ನಿರ್ಜೀವವಾದ ಸ್ವರದಲ್ಲಿ ಹೇಳಿದಳು, ಚಂದ್ರಾಸಾನಿ.

"ಏಕೆ ತಾಯಿ, ಅತ್ತ ಹಾಗಿದೆ?"– ಕಂಬನಿಯ ಕರೆಗಟ್ಟಿದ ಚಂದ್ರಾ ಸಾನಿಯ ಮುಖವನ್ನು ನೋಡಿ, ಆಕೆಯ ಮಾತಿನ ವಿಚಿತ್ರಧ್ವನಿ ಕೇಳಿ ಚಕಿತಳಾಗಿ ಹೇಳಿದಳು ದಾಸಿ.

"ಆ ಮಾತಿಗೆ ಉತ್ತರ ಕೊಡದೆ ಚಂದ್ರಾಸಾನಿ ಪ್ರಶ್ನೆಮಾಡಿದ ದಾಸಿಯ ಬೆನ್ನನ್ನು ನೇವರಿಸಿದಳು – ನಡುಗುವ ಕೈಬೆರಳುಗಳಿಂದ."

"ಆ ದಿನ ಶಯ್ಯಾಗೃಹವನ್ನು ಹೊಕ್ಕಾಗ ವೆಂಕಟಸುಬ್ಬಯ್ಯ, ಅದರ ಶೃಂಗಾರವೈಭವವನ್ನು ಕಂಡು ಬೆರಗಾದರು. ಹಿಂದೆಂದೂ ಹಾಗೆ ಸಿಂಗರಿಸಿರಲಿಲ್ಲ ಅದನ್ನು ಕಾಲಿಟ್ಟರೆ ಎಲ್ಲಿ ಆ ಸೌಂದರ್ಯ ಮುಕ್ಕಾಗುವುದೋ ಎನಿಸಿತು, ಮೃದುವಾಗಿ ಹೆಜ್ಜೆ ಇಡುತ್ತಾ ನಡೆದು ಮಂಚದ ಬಳಿ ಸಾರಿದರು."

"ಮಂಚದ ಮೇಲೆ ಹಾಸಿಗೆಯ ಬದಲು ಜಾಜಿಯ ಹೂವನ್ನೇ ಹಾಸಿ ದಂತಿದೆ; ಬಳಿಸಾರಿ ನೋಡಿದರು. ನೋಡಿ ತಟಕ್ಕನೆ ಹಿಮ್ಮೆಟ್ಟಿದರು–"

"ಅದನ್ನು ನೋಡಿ ಅವರಿಗೆ ಮೊದಲರಾತ್ರಿಯ ನೆನಪಾಯಿತು. ಅಂದೇ ಹೂವು ಹಾಸಿಗೆಯಾಗಬಾರದು ಎಂದಿದ್ದರು. ಅಂದಿನಿಂದ ಅದು ತಪ್ಪಿತ್ತು. ಇಂದೇಕೆ ಮತ್ತಿದು? ಬೇಡವೆಂದುದನ್ನು ಮಾಡುವ ಹಟವೇ ?"

"ಚಂದ್ರಾ....ಚಂದ್ರಾ...!"

– ಅಸಹನೆ ತುಳುಕುವ ಧ್ವನಿಯಲ್ಲಿ ಕೂಗಿದರು ವೆಂಕಟಸುಬ್ಬಯ್ಯ.

"ಅವರ ಕರೆಗೆ ಚಂದ್ರಾಸಾನಿ. ಓ ಕೊಡಲಿಲ್ಲ. ಎಂದಿನಂತೆ ಅವರ ಕೂಗು ಕೇಳಿದ ಕೂಡಲೇ ಹಕ್ಕಿಯಂತೆ ಅವರೆಡೆಗೆ ಹಾರಿಬರಲಿಲ್ಲ. ಕರೆವ ಮೊದಲೇ



ತೋಳೊಳಗಿರುವ ಹೆಣ್ಣು, ಇಂದು ಕರೆದರೂ ಬರದೆ ತಡಮಾಡುವುದೇಕೆ ? ಇದೇನು ವಿಚಿತ್ರ ? ಹೀಗೇಕೆ ಎಂದು ವೆಂಕಟಸುಬ್ಬಯ್ಯನವರು ಯೋಚಿಸಿದರು. ನಿಜ, ಸಂಜೆಯಿಂದಲೂ ಹಾಗೇ, ಆಕೆಯಲ್ಲಿ ಇಂದು ದಿನದ ಉಲ್ಲಾಸವಿಲ್ಲ. ಏನೋ ಮ್ಲಾನತೆ ಕವಿದಿದೆ. ಏಕೋ ತಮ್ಮ ಕಡೆ ನೋಡುವಾಗ ಕಣ್ಣೊಳಗೆ ಬಂಧಿಸಿದ ಕಂಬನಿ ಹೊಳೆಯುವಂತೆ ಕಾಣುತ್ತದೆ. ಮಾತು ಏಕೋ ಬಿರಿದುಬರುತ್ತಿತ್ತು. ಏಕೆ? ತನ್ನ ಮೇಲೆ ಸಿಟ್ಟೇ ? ಏನು ಕಾರಣ? ಹಾಸಿಗೆಯ ಮೇಲಿನ ನಿಷಿದ್ಧ ಸುಮರಾಶಿಗೂ ಆಕೆಯ ವಿಚಿತ್ರಚರ್ಯೆಗೂ ಏನು ಸಂಬಂಧ? ಯಾವ ಕಾರಣಕ್ಕಾಗಿಯಾದರೂ ಅವಳಿಗೆ ತಮ್ಮ ಮೇಲೆ ಬೇಸರವಾಗಿದೆಯೇ? ಯೋಚಿಸಿದರು. ಎಷ್ಟು ಯೋಚಿಸಿದರೂ ಸಿಟ್ಟಿಗಾಗಲಿ, ಬೇಸರಕ್ಕಾಗಲಿ ಕಾರಣ ಕಾಣಲಿಲ್ಲ. ಒಂದು ವೇಳೆ ತಮಗೇ ತಿಳಿಯದಂತೆ ತಮ್ಮಿಂದೇನಾದರೂ ಅಪಚಾರ ಆಗಿರಬಹುದೇ ? ಒಂದು ವೇಳೆ ತಮಗೆ ತಿಳಿಯದೆ ಆಗಿದ್ದರೆ – ಅದಕ್ಕಾಗಿ ಮಾಡಬೇಡವೆಂದುದನ್ನು ಮಾಡಬೇಕೆ ? ಮತ್ತೊಮ್ಮೆ ಕೂಗಿದರು, ಆಕೆಯನ್ನು, ಮಳೆ ತುಂಬಿದ ಮೋಡ ನಿಧಾನವಾಗಿ ಚಲಿಸಿ ಬರುವಂತೆ ಬಂದಳು ಚಂದ್ರಾ. ಬಂದರೂ ಹತ್ತಿರ ಬರದೆ ಅಷ್ಟು ದೂರ ನಿಂತಿದ್ದಾಳೆ."

"ಇದೇನು ವಿಚಿತ್ರ ಈ ದಿನ, ಚಂದ್ರಾ ?"

"ಏನು ವಿಚಿತ್ರವಿಲ್ಲ." ಮಾತು ಬೇಡವೆಂದು ಆಡುವಂತಿದೆ ಆ ಮಾತು.

"ಇದೇನು ಮತ್ತೆ ಹಾಸಿಗೆ ಮೇಲೆ ಹೂ. ಅಂದೇ ಬೇಡವೆನ್ನಲಿಲ್ಲವೇ ?"

"ಹೂವು ಹಾಸಿದರೇನಾಯಿತು ?"

"ಹೂವು ಮೈಕಾವಿಗೆ ಬಾಡಬಾರದೆಂದು ಹೇಳಲಿಲ್ಲವೆ ? ತಿಳಿಯದಂತೆ ಕೇಳುತ್ತೀಯಲ್ಲಾ ?"

"ಹೂವು ಬಾಡಲಿ, ಹಾಳಾಗಲಿ, ಬೆಂಕಿಗೆ ಬಿದ್ದು ಉರಿದು ಬೂದಿಯಾಗಿ ಹೋಗಲಿ! ಏನಾದರೆ ನಿಮಗೇನು ? ತಮ್ಮ ಬೆಲೆಯೇ ತಮಗೆ ತಿಳಿಯದವರಿಗೆ ಹೂವಿನ ಬೆಲೆಯೇನು ಗೊತ್ತು?" ಅದುವರೆವಿಗೆ ತಡೆತಡೆದು ಮಾತನಾಡುತ್ತಿದ್ದ ಚಂದ್ರಾಸಾನಿ, ಇದ್ದಕ್ಕಿದ್ದಹಾಗೆ ವೆಂಕಟಸುಬ್ಬಯ್ಯನವರ ನೆತ್ತಿಯ ಮೇಲೆ ಬೆಂಕಿಯ ಮಳೆಗರೆಯುವವಳಂತೆ, ಆ ಮಾತಿನ ಮಳೆಗರೆದು ಮಾತಿನ ಮುಷ್ಟಿಯಿಂದ ಅವರ ಮುಖವನ್ನು ಅಪ್ಪಳಿಸುವಂತೆ ಕೇಳಿದಳು. ಆ ಮಾತನ್ನು ಕೇಳಿ ವೆಂಕಟಸುಬ್ಬಯ್ಯನವರ ಸ್ಥಿತಿ, ಎಂದೂ ಏಟು ತಿನ್ನದ ಜಾತಿಕುದುರೆ, ಕಾರಣ ತಿಳಿಯದೆ ಹತ್ತಾರು ಏಟುತಿಂದಂತೆ ಆಯಿತು. ಆಕೆಯ ಅನಿರೀಕ್ಷಿತ ವರ್ತನೆಯಿಂದ,

ನೋಯಿಸಲೆಂದೇ ಆಡಿದ ಕಟುಮಾತುಗಳಿಂದ ನೊಂದು, ದಿಗ್ಭ್ರಾಂತರಾಗಿ ಕೇಳಿದರು–

"ನಿನ್ನ ಮಾತೇ ನನಗೆ ಅರ್ಥವಾಗುತ್ತಿಲ್ಲ, ಚಂದ್ರಾ."

"ಹೇಗಾಗುವುದು ಹೇಳಿ. ಹೂವಿಗಾಗಿ ಅಳುತ್ತೀರಾ ? ನಿಮಗಾಗಿ ಅಳುವುದಿಲ್ಲವೇ ?"– ಮೊದಲ ಪ್ರಶ್ನೆಗಿಂತ ವಿಚಿತ್ರವಾಗಿತ್ತು ಆಕೆಯ ಎರಡನೆಯ ಪ್ರಶ್ನೆ.

"ವೆಂಕಟಸುಬ್ಬಯ್ಯ ಮಾತನಾಡುವಾಗ ಮಿಂಚಿನಂತೆ ಉರಿವ ಆಕೆಯ ಕಣ್ಣುಗಳನ್ನೇ ನೋಡುತ್ತಿದ್ದರು. ಆ ಮಾತಿನಿಂದಾದ ಅಚ್ಚರಿ, ವ್ಯಥೆಯಲ್ಲಿ ಉತ್ತರ ಹೇಳಲೂ ತೋಚಲಿಲ್ಲ ಅವರಿಗೆ. ಎತ್ತಲೋ ನೋಡುತ್ತ, ಬಿರುಸಾದ ಧ್ವನಿಯಲ್ಲಿ, ಬೆಂಕಿಯ ನೀರನ್ನು ಹನಿಹನಿಯಾಗಿ ಅವರ ಹೃದಯದ ಮೇಲೆ ಚೆಲ್ಲುವಂತೆ, ತಾನೇ ಮಾತು ಮುಂದುವರಿಸಿ ಹೇಳಿದಳು ಚಂದ್ರಾಸಾನಿ"

"ನಿಮ್ಮ ಬಾಳಿಗೆ ಬೆಂಕಿ ಹೊತ್ತಿಸಿಕೊಂಡು ಹೂವಿಗಾಗಿ ಕಂಬನಿ ಕರೆಯುತ್ತೀರಾ ? ನಿಮ್ಮ ಬಾಳು, ಆಸೆ, ಕನಸು ಎಲ್ಲಕ್ಕೂ ಸೂಡು ಒಟ್ಟಿ, ಹೇಗೂ ಬಾಡುವ ಹೂವಿಗೆ ಮರುಗುತ್ತೀರಾ?... ಎಲ್ಲಾ ನಟನೆ.... ಸುಳ್ಳು.... ನಿಮ್ಮ ಪ್ರೀತಿಯೂ ಸುಳ್ಳು. ಸೂಳೆಯ ಪ್ರೇಮಕ್ಕೆ ಸುಳ್ಳಿನ ಬೆಲೆ ಕೊಟ್ಟವರು ನೀವು."

"ಚಂದ್ರಾ... ಚಂದ್ರಾ, ನಿನಗೆಲ್ಲೋ ಇವತ್ತು ಹುಚ್ಚು ಹಿಡಿದಿದೆ – ಏನು ಮಾತಾಡುತ್ತಿದ್ದೀಯೆ? ನಿನಗೆ ಯಾರೋ ಏನೋ ಹೇಳಿದ್ದಾರೆ – ನನ್ನ ಪ್ರೀತಿ ಸುಳ್ಳಲ್ಲ, ಚಂದ್ರಾ.... ಆ ಮಾತಾಡಿ ನನ್ನ ಕರುಳಿಗೆ ಉರಿಹೊತ್ತಿಸಬೇಡ."– ವಿಹ್ವಲವಾಗಿ ಕೂಗಿದರು ವೆಂಕಟಸುಬ್ಬಯ್ಯ.

"ಸುಳ್ಳಲ್ಲ, ಮೋಸ! ನನ್ನ ಮೇಲೆ ಇದ್ದಹಾಗೇ ಸಂಗೀತದ ಮೇಲೂ ನಿಮಗೆ ಪ್ರೀತಿ ಇತ್ತಲ್ಲವೆ? ಆದರೂ ನನಗಾಗಿ ರಾಗಗಳನ್ನು ಒತ್ತೆಯಿಟ್ಟಿರಿ. ತಾಯಿಯನ್ನು ಒತ್ತೆಯಿಟ್ಟಿರಿ. ಒತ್ತೆ ಇಟ್ಟು ಮರೆತೂಬಿಟ್ಟಿರಿ. ನಿಮ್ಮ ಪ್ರೇಮಕ್ಕೆ ಅಷ್ಟೇ ಬೆಲೆ. ರಾಗವನ್ನು ಒತ್ತೆ ಇಡುವಾಗ ದುಃಖವಾಗಲಿಲ್ಲವೇ ನಿಮಗೆ? ನಿಮ್ಮ ಕಲೆಗೆ ಮೋಹದ ಉರಿ ಹೊತ್ತಿದಾಗ ಕಂಬನಿಯೇಕೆ ಕರೆಯಲಿಲ್ಲ–ಹೂವಿಗಾಗಿ ಕಂಬನಿಗರೆಯುತ್ತೀರಾ ? ಸಂಗೀತಕ್ಕೆ ಗೋರಿ ಕಟ್ಟಿದಮೇಲೆ, ನಿಮ್ಮಲ್ಲಿ ಎಲ್ಲರೂ ಇಟ್ಟ ಕನಸಿಗೆ ಬೆಂಕಿ ಇಟ್ಟಮೇಲೆ, ಇದಕ್ಕೇಕೆ ಅಳುತ್ತೀರ? ತುಳಿದುಬಿಡಿ, ನಿರ್ದಯವಾಗಿ ತುಳಿದುಬಿಡಿ, ಈ ಹೂವನ್ನು – ನನ್ನನ್ನೂ ತುಳಿದುಬಿಡಿ!–" ಎಂದು ಚಂದ್ರಾ ಅವರ ಕಾಲ ಮೇಲೆ ಉರುಳಿದಳು.



"ಕಾರ್ಗಾಲದ ಸೊಕ್ಕಿನಲ್ಲಿ ಮಲೆತು ಭೋರ್ಗರೆಯುವ ಜಲ ಪಾತದಂತೆ ಮಾತು ಸುರಿಯಿತು. ಗರಬಡಿದವರಂತೆ ನಿಂತು ಕೇಳಿದರು ವೆಂಕಟಸುಬ್ಬಯ್ಯ. ಏನೋ ಮಿಂಚು ಬಡಿದಂತಾಯಿತು.... ತಲೆ ಸುತ್ತಿ ಬಂತು. ಒಂದು ಗಳಿಗೆ ತಲೆ ಸಿಡಿದುಹೋಗುವುದೇನೋ ಎನಿಸಿತು. ಉಜ್ವಲ ವರ್ಣವೈಭವದಿಂದ ಹೊಳೆಯುತ್ತಿದ್ದ ಸುಂದರ ಸ್ವಪ್ನವೊಂದು, ಬುದ್ಬುದದ ಹಾಗೆ ಅವರ ಕಣ್ಣೆದಿರು ಸಿಡಿದುಹೋಯಿತು. ಹಾಸಿಗೆಯಲ್ಲಿ ಹಾಸಿದ ಹೂವು ಅವರನ್ನು ಅಪಹಾಸ್ಯಮಾಡಿ ನಕ್ಕಂತಾಯಿತು. ನೆಲದ ಮೇಲೆ ಭಗ್ನದೇವತಾ ವಿಗ್ರಹದಂತೆ ಉರುಳಿದ ಚಂದ್ರಾಳನ್ನು ನೋಡಿದರು. ನೋಡುನೋಡುತ್ತಾ ಕಣ್ಣಿನಲ್ಲಿ ಕಂಬನಿ ಕೋಡಿಯಾಗಿ ಹರಿಯಿತು."

"ನೀನಾಡಿದುದು ನಿಜ, ಚಂದ್ರಾ–ನಾನು ದ್ರೋಹಿ, ತಾಯಿಗೆ ದ್ರೋಹ ಮಾಡಿದೆ– ನಾನಾವುದಕ್ಕೂ ಅರ್ಹನಲ್ಲ; ನಿನ್ನ ಪ್ರೀತಿಗೂ ಅರ್ಹನಲ್ಲ–ಚಂದ್ರಾ, ನೀನು ಬೆಳಕಾದೆ–ನನ್ನ ಬಾಳಿಗೆ ಬೆಳಕಾದೆ – ಬರುತ್ತೇನೆ ಚಂದ್ರಾ, ದ್ರೋಹಮಾಡಿದ ಮುಖ ಮತ್ತೆ ನಿನಗೆ ತೋರುವುದಿಲ್ಲ."

"ಮುಖ ಮುಚ್ಚಿ, ವಿರುದ್ಧ ದಿಕ್ಕುಗಳಲ್ಲಿ ಸೆಳೆಯುತ್ತಿರುವ ಹಲಬಗೆಯ ದುಃಖದ ಅಲೆಗಳ ಅಘಾತದಲ್ಲಿ ಹೊಯ್ದಾಡುತ್ತಾ ಬಾಗಿಲ ಕಡೆ ಹೊರಟರು, ವೆಂಕಟಸುಬ್ಬಯ್ಯ. ಚಂದ್ರಾ ಅವರ ಕಾಲನ್ನು ಬಿಗಿಯಾಗಿ ಹಿಡಿದಿದ್ದಳು. ಹಾಗೇ ಅವರ ಕಾಲನ್ನು ಕಂಬನಿಯಿಂದ ತೊಳೆಯುತ್ತಾ, ಅವರ ಮುಖವನ್ನು ನೋಡಲಾಗದೆ, ಅವರ ಅಡಿಯಲ್ಲಿ ಮುಖ ಹುದುಗಿಸಿ ಹೇಳಿದರು"

"ನನ್ನ ದೊರೆಯೇ, ಕ್ಷಮಿಸಿ. ನಿಮ್ಮ ಮನ ನೋಯಿಸಿದೆ ನಾನು."

"ನಿನ್ನನ್ನು ಕ್ಷಮಿಸಬೇಕೆ ?.... ನಾನು? ಕುರುಡನಿಗೆ ಕಣ್ಣು ಕೊಟ್ಟ ನಿನ್ನನ್ನು ಕ್ಷಮಿಸಬೇಕೆ?... ಚಂದ್ರಾ. ನೀನು ನನ್ನ ಗುರುವಾದೆ; ದಾರಿ ತೋರಿಸಿದೆ, ಚಂದ್ರಾ – ಈ ಪಾಪಿಯನ್ನು ಉದ್ಧಾರಮಾಡಿದೆ. ನನ್ನಕಾಲು ಬಿಡು, ಚಂದ್ರಾ. ಇಲ್ಲಿ ನಿಂತು ಈ ಪ್ರೇಮದ ಪವಿತ್ರಮಂದಿರವನ್ನು ನನ್ನ ಉಸಿರಿನಿಂದ ಕಲುಷಿತಗೊಳಿಸಲಾರೆ...."

"ಹೋಗು, ನನ್ನ ದೊರೆ, ಜಗತ್ತನ್ನು ಗೆದ್ದು ಬಾಳಬೇಕಾದವರು ಹೆಣ್ಣಿನ ಆಳಾಗಬಾರದು ಆದರೆ ಈ ದಾಸಿಯ ಒಂದು ಮಾತು...."

"ಏನು? ಏನು ಕೇಳು, ಚಂದ್ರಾ...."

"ನನ್ನ ದೊರೆಗಿಂದು ಎಷ್ಟು ದುಃಖವಾಗುತ್ತಿದೆಯೆಂದು ನಾನು ಬಲ್ಲೆ, ಈ ದುಃಖದಲ್ಲಿ ಜೀವಕ್ಕೆ ಅಪಾಯ ಮಾಡಿಕೊಳ್ಳುವುದಿಲ್ಲ ಎಂದು ಮಾತು ಕೊಡಬೇಕು. ಆ ಮಾತು ಕೊಡುವವರೆಗೂ ನಿಮ್ಮ ಕಾಲು ಬಿಡುವುದಿಲ್ಲ."

“ಆ ಮಾತು ಕೇಳಿ ವೆಂಕಟಸುಬ್ಬಯ್ಯನವರ ಮೈ–ಮನಸ್ಸಿಗೆ ಒಮ್ಮೆಲೇ ಉರಿ ಹತ್ತಿಸಿದಂತಾಯಿತು.”

“ಚಂದ್ರಾ... ಚಂದ್ರಾ... ನಿನಗೆ ನನ್ನ ಮೇಲೆಷ್ಟು ಪ್ರೀತಿ... ಈಗಲೂ ನನ್ನ ಚಿಂತೆಯೇ ?”

“ಮಾತುಕೊಡಿ, ದೊರೆ.”

“ಈ ಪಾಪಿಯ ಜೀವಕ್ಕೆ ಇಷ್ಟು ಬೆಲೆಯೇ ? ದೇವತೆ ಕಾಲುಕಟ್ಟಿ ಬೇಡಬೇಕೇ? ಆಗಲಿ, ಚಂದ್ರಾ... ನಿನ್ನ ಮಾತಿಗೆ ಇಲ್ಲವೆನ್ನಲಾರೆ.”

“ಆ ಮಾತು ಕೇಳಿ ಚಂದ್ರಾ ಮೇಲೆದ್ದು ನಿಂತು ಹೇಳಿದಳು–”

“ಇನ್ನು ಹೋಗಿ... ಈ ಕೂಪದಿಂದ ಹೊರಗೆ ಹೋಗಿ....ಆದರೆ... ಹೋಗುವ ಮುನ್ನ ಕಡೆಯ ಬಾರಿಗೆ....”

– ಎಂದು ಆ ಮಾತು ಆಡಲಾರದೆ ಚಂದ್ರಾ ತುಟಿಯೊತ್ತಿದಳು. ತನ್ನ ಜೀವವನ್ನೇ ಧಾರೆ ಎರೆದಂತೆ, ಮುತ್ತಿಟ್ಟು, ವೆಂಕಟಸುಬ್ಬಯ್ಯ ನಿಲ್ಲಲಾರದೆ ಅಲ್ಲಿಂದ ಓಡಿಹೋದರು. ಕುರುಡನಂತೆ ಗೋಡೆ, ಬಾಗಿಲು ಕಾಣದೆ ತಡವರಿಸುತ್ತಾ, ಅಡ್ಡವಾದ ಮಂಚಕ್ಕೆ, ಗೋಡೆಗೆ, ಬಾಗಿಲಿಗೆ ತಲೆ ಹೊಡೆಯುತ್ತಾ ಬೀಳುತ್ತಾ, ಏಳುತ್ತಾ, “ಚಂದ್ರಾ... ಚಂದ್ರಾ... ಚಂದ್ರಾ...” ಎಂದು ಅರ್ತ ಧ್ವನಿಯಲ್ಲಿ ಕೂಗುತ್ತಾ ಓಡಿದರು.

“ಸಿಡಿಲು ಹೊಡೆದ ಮರುಗಳಿಗೆಯಂತೆ, ದಿಗ್ಗನೆ ಮೌನ ಕವಿಯಿತು– ಕೋಣೆಯಲ್ಲಿ, ಆಕೆಯ ಬಾಳಿನಲ್ಲಿ, ಬರಿದಾದ ರುದ್ರಮೌನದ ಪ್ರಳಯ ತಾಂಡವ ನಡೆಯಿತು. ಒಂದು ಗಳಿಗೆ ಬರಿದಾದ ಬಾಗಿಲನ್ನು ದಿಟ್ಟಿಸುತ್ತಾ ಎಚ್ಚರತಪ್ಪಿದಂತೆ ನಿಂತಿದ್ದಳು, ಚಂದ್ರಾ. ಇದ್ದಕ್ಕಿದ್ದಹಾಗೇ ಕತ್ತಲ ಮಳೆ ಸುರಿದಂತಾಗಿ, ಹುಚ್ಚಾಗಿ ಕೋಣೆಯನ್ನೆಲ್ಲಾ ದಿಟ್ಟಿಸಿದಳು–”

“ಮಂಚ.... ಹೂಮಾಲೆ.... ಕಂಚಿನ ವಿಗ್ರಹ.... ಪರಿಮಳಧೂಪ, ಎಲ್ಲೋ ಚಂದ್ರಾ.... ಚಂದ್ರಾ.... ಎಂದು ಕೂಗುವ ಅಸ್ಪಷ್ಟ ಕೂಗು – ಎಲ್ಲವೂ ಅಗ್ನಿ ಚಕ್ರದಂತೆ ಸುತ್ತಿ, ಅವಳೆದೆಯ ಮೇಲೆ ಎರಗಿತು. ಆ ಹೊಡೆತವನ್ನು ತಾಳಲಾರದೆ, ತತ್ತರಿಸಿ ಝೊಂಪಿಸಿ ಕೆಳಗೆ ಬಿದ್ದಳು. ಹೆಪ್ಪು ಗಟ್ಟಿದ ಮೌನ, ಕಿಡಿ ಸೋಕಿದ ಮದ್ದಿನಂತೆ ಆಸ್ಫೋಟವಾಗಿ ಆಳು ಹೊರಹೊಮ್ಮಿತು.”

“ಚಂದ್ರಾ ಬಿಕ್ಕಿಬಿಕ್ಕಿ ಅತ್ತಳು. ನೆಲದಲ್ಲಿ ಹೊರಳಾಡಿದಳು. ಹುಚ್ಚಿಯಂತೆ ಮಂಚವನ್ನು, ವಿಗ್ರಹವನ್ನು, ನೆಲವನ್ನೇ ತಬ್ಬಿ ಅತ್ತಳು. ಮೃದುವಾದ ರತ್ನಗಂಬಳಿಯಲ್ಲಿ ಆತನ ಹೆಜ್ಜೆಗುರುತಿದ್ದ ಕಡೆ ಹೂವು ಹಾಕಿ ಮುತ್ತಿಟ್ಟಳು. ಮಂಚಕ್ಕೆ ಹಾಕಿದ



ಹೂವಿನ ಮಾಲೆಗಳನ್ನು ಕಿತ್ತು ಮೈಮೇಲೆ ಹಾಕಿಕೊಂಡಳು. ಓಡಿಹೋದ ಅವರನ್ನು ಹಿಡಿಯುವಂತೆ ಓಡಿದಳು. ಗಾಳಿಯನ್ನೇ ಬಿಗಿದು ತಬ್ಬಿ ನಿಲ್ಲಲಾರದೆ ಹೊಯ್ದಾಡಿದಳು. ಗೋಡೆಗೆ ಹಣೆ ಘಟ್ಟಿಸಿದಳು ‘ನೀವಿಲ್ಲದೆ ನಾನು ಬದುಕಲಾರೆ, ದೊರೇ...!’ ಎಂದು ಚೀರಿ ಕೆಳಗುರುಳಿದಳು– ಕೀಲು ಕಳಚಿದ ತಾರೆಯಂತೆ.”

* * *

“ಮರುದಿನ ಚಂದ್ರಾಸಾನಿ ಮೂಗುಬೊಟ್ಟಿನ ವಜ್ರವನ್ನು ಅರೆದು ಕುಡಿದು ಮೃತಳಾದಳೆಂದು ತಿಳಿದು, ಊರಿನ ಜನ ವ್ಯಥೆಪಟ್ಟರು. ರಾಶಿರಾಶಿಯಾಗಿ ಒಟ್ಟಿದ ಹೂವಿನ ಹಾಸಿಗೆಯ ಮೇಲೆ ಆಕೆಯ ಮೈಯನ್ನು ಮಲಗಿಸಿ, ಊರುಕೇರಿಯಲ್ಲೆಲ್ಲಾ ಆಕೆಯ ಕೀರ್ತಿಯನ್ನು ಹರಡುವಂತೆ ಅರಿಶಿನ ಕುಂಕುಮ ತೂರುತ್ತಾ, ಆಕೆಯ ಮೈ ನಡೆವ ದಾರಿಯಲ್ಲಿ ಹೆಜ್ಜೆಹೆಜ್ಜೆಗೂ ಕಂಬನಿಯ ಮುತ್ತುಗಳನ್ನು ಹರಡುತ್ತಾ ಕೊಂಡೊಯ್ದು, ಅಗರು ಚಂದನ ಕಸ್ತೂರಿ ಕರ್ಪೂರಗಳಿಂದ ಸುವಾಸಿತಳಾದ ಭೂತಾಯಿಯ ತೊಡೆಯ ಮೇಲೆ, ಚಂದ್ರಾಸಾನಿಯನ್ನು ಮಲಗಿಸಿ, ಆಕೆಯನ್ನು ಆಳೆತ್ತರದ ಹೂವಿನಿಂದ ಮುಚ್ಚಿದರು.”

“ಚಂದ್ರಾಸಾನಿ–ಇನ್ನೆಲ್ಲಿಯ ಚಂದ್ರಾಸಾನಿ!”

“ಸುಂದರವಾದ ಗೊಂಬೆಯನ್ನು ಕಳೆದುಕೊಂಡು ಕಂಬನಿಗರೆವ ಮಗುವಿನಂತೆ ಮರುಗಿತು ಚಿತ್ರದುರ್ಗದ ಜನ.”

“ಅನಂತಯ್ಯ ಮೂರುದಿನ ವೆಂಕಟಸುಬ್ಬಯ್ಯನವರನ್ನು ಮನೆಯಿಂದ ಹೊರಗೆ ಬಿಡಲಿಲ್ಲ. ಊಟ, ನಿದ್ರೆಯನ್ನು ಬಿಟ್ಟು ನಾಲ್ಕಾರು ದಿನ ಸುಮ್ಮನೆ ಕಂಬನಿಗರೆಯುತ್ತಾ, ಶಿಲಾವಿಗ್ರಹದಂತೆ ಕುಳಿತಿದ್ದ ವೆಂಕಟಸುಬ್ಬಯ್ಯ. ಕಡೆಗೊಂದು ದಿನ, ತಮ್ಮನ್ನು ಕಾವಲು ಕಾಯುತ್ತಿದ್ದ ಅನಂತಯ್ಯನವರಿಗೆ ಒಣಗಿದ ಕಾಷ್ಠದಂತೆ ಕಠೋರನೀರಸವಾಗಿದ್ದ ಧ್ವನಿಯಲ್ಲಿ ಹೇಳಿದರು–”

“ಹೆದರಬೇಡಿ ಮಾವ, ನಾನು ಸಾಯುವುದಿಲ್ಲ. ನನ್ನ ದೇವತೆಗೆ ಮಾತು ಕೊಟ್ಟಿದ್ದೇನೆ.”

“ಏನೆಂದು ?”

“ನನ್ನ ಕೈಯಾರೆ ನನ್ನ ಜೀವಕ್ಕೆ ಅಪಾಯಮಾಡಿಕೊಳ್ಳುವುದಿಲ್ಲವೆಂದು. ತಾನು ಸಾಯುವ ನಿಶ್ಚಯಮಾಡಿ, ನನ್ನ ಬದುಕಿಗೆ ಭದ್ರತೆ ಮಾಡಿದಳು, ನನ್ನ ಚಂದ್ರಾ...”

“ಆ ಮಾತು ಕೇಳಿ ಅನಂತಯ್ಯನವರಿಗೂ ಉಕ್ಕಿಬಂದ ಅಳುವನ್ನು ತಡೆಯಲಾಗಲಿಲ್ಲ. ಮಗುವಿನ ಹಾಗೆ ಅತ್ತು ಹೇಳಿದರು”

"ಆಕೆ ಈ ಲೋಕದ ಹೆಣ್ಣಲ್ಲ, ವೆಂಕಟಸುಬ್ಬೂ–ನಮ್ಮನ್ನು ಅನುಗ್ರಹಿಸಲು ಬಂದ ದೇವತೆ!"

೧೩

"ಹೀಗೆ ಎಲ್ಲರ ಕೈಲೂ ದೇವತೆ ಎಂದು ಹೊಗಳಿಸಿಕೊಂಡು, ಪುಣ್ಯಾತ್ಮಗಿತ್ತಿ ಕೈಲಾಸ ಸೇರಿದಳು...."

– ಎಂದಳು, ತಾನು ಅಳುತ್ತಲೇ ಕಥೆ ಮುಗಿಸುತ್ತ ಪುಟ್ಟತಾಯಮ್ಮ, ಅದನ್ನು ಕೇಳುತ್ತಿದ್ದ ನಮ್ಮ ಕಣ್ಣೂ ಕಂಬನಿಯ ಚಿಲುಮೆಯಾಗಿತ್ತು.

ನನಗಂತೂ ಈ ಕಥೆ ಕೇಳಿದಮೇಲೆ ಯಾವುದೋ ಪರಿಮಳಮಯ ಪವಿತ್ರಕಾಂತಿಯುತ ಲೋಕದಿಂದ, ಕೊಳಚೆಗೆ ಇಳಿದಂತಾಯಿತು. ಈ ಲೋಕದ ಅರಿವು. ಆ ಕತ್ತಲೆಯಲ್ಲಿ ಕೂತಿರಲಾರದೆ, ಮಾತೂ ಮುಂದುವರಿಸಲಾರದೆ ಪುಟ್ಟತಾಯಮ್ಮನಿಗೆ ನಮಸ್ಕಾರ ಹೇಳಿ, ಎದ್ದು ಹೊರಬಂದೆ. ಬೀದಿಯ ಬಾಗಿಲ ಬಳಿ ಕುಳಿತಿದ್ದ ಲಕ್ಕವ್ವ –

"ಏನ್ರಣ್ಣಾ, ಮನೆಗೆ ಬಂದು ಅಂಗೇ ಓಗ್ತಿರಾ, ಎಲಡಕ್ಕೇಗಾದ್ರೂ ಎಲ್ಡಾಣೆ ಕೊಡಲ್ವಾ?" ಎಂದಳು. ಆಕೆಯನ್ನು ದಿಟ್ಟಿಸಿ ನೋಡಿದೆ. ಚಂದ್ರಾಸಾನಿ ಎಲ್ಲಿ, ಆ ವಂಶದಲ್ಲೇ ಹುಟ್ಟಿದ ಲಕ್ಕವ್ವ ಎಲ್ಲಿ ? ಏಕೋ ಕನಿಕರವಾಯಿತು. ನನ್ನ ಮೇಲೆ ನನಗೇ ಸಿಟ್ಟುಬಂತು. ಮಾತನಾಡದೆ ಜೇಬಿನಲ್ಲಿದ್ದಷ್ಟು ಚಿಲ್ಲರೆಯನ್ನು ಕೈಗೆ ಹಾಕಿ, ಹೊರಬಂದು, ಚಿನ್ನಪ್ಪ ಬರುವುದನ್ನೇ ಕಾದೆ.

ಸ್ವಲ್ಪ ಹೊತ್ತಿನಲ್ಲೇ ಚಿನ್ನಪ್ಪನೂ ಬಂದ. ಆತನ ಮುಖವೂ ಭಾರವಾಗಿತ್ತು. ಮಾತನಾಡದೆ ಬೀಡಿ ಎಳೆಯುತ್ತಾ ನಡೆದ. ನನಗೂ ಅದೇ ಸರಿ ಎನ್ನಿಸಿತು. ತಲೆಬಗ್ಗಿಸಿ ಹೆಜ್ಜೆ ಹಾಕಿದೆ. ಅಷ್ಟು ಹೊತ್ತಾದಮೇಲೆ ಆ ಮೌನವೂ ಏಕೋ ದುಸ್ಸಹವಾಗಿ ಹೇಳಿದೆ :

"ಕಥೆ ಕೇಳುವಷ್ಟು ಹೊತ್ತು ಎಲ್ಲೋ ಕನಸಿನಲ್ಲಿದ್ದಂತಿತ್ತು."

"ದೊಡ್ಡೋರ ಬಾಳಿನ ಸಮಾಚಾರವೇ ಹಾಗೆ. ಕೇಳಿದರೆ ಕಥೆಯೋ ಕನಸೋ ಅನ್ನುವ ಹಾಗಿರುತ್ತದೆ."

"ಚಂದ್ರಾಸಾನಿ–ವೆಂಕಟಸುಬ್ಬಯ್ಯ ಇವರ ಕಥೆ ಕೇಳಿದಾಗ ಯಾರು ದೊಡ್ಡವರು ಎಂದು ಹೇಳುವುದೇ ಕಷ್ಟವಾಗುತ್ತದೆ. ಅಂತೂ ತನ್ನ ಪ್ರೀತಿಗೆ ಬಾಳನ್ನೇ ಬಲಿಕೊಟ್ಟಳಲ್ಲ ಆ ತಾಯಿ."



"ಅವರೂ ಅಷ್ಟೇ. ಆಕೆ ಇದ್ದಾಗ ಇರಲಿ, ಸತ್ತಮೇಲೂ ಆಕೆಗೆ ತಮ್ಮ ಬಾಳು ಮೀಸಲು ಮಾಡಿದರು."

"ಅಂದರೆ?"

"ಅದೆಲ್ಲಾ ನಿಧಾನವಾಗಿ ಹೇಳೋದು–ಈಗ ಬ್ಯಾಡಿ. ಊಟ ಮುಗಿಸಿ ಮೈಗಷ್ಟು ವಿಶ್ರಾಂತಿ ಕೊಡಿ."

"ಒಂದು ಕೆಲಸ ಮಾಡೋಣವೇ, ಚಿನ್ನಪ್ಪ ?"

"ಏನು ಹೇಳಿ."

"ಹೇಗೂ ಇಲ್ಲಿಯವರೆಗೆ ಬಂದಿದ್ದೀರ. ಇವೊತ್ತು ನಮ್ಮ ಮನೆಯಲ್ಲೇ ಇದ್ದು ಬಿಡಿ. ಜೊತೆಗೇ ಊಟ ಮಾಡೋಣ. ಆಮೇಲೆ ವೆಂಕಟಸುಬ್ಬಯ್ಯ ನವರ ಕಥೆ ಪೂರಾ ಹೇಳಿ, ಊರಿಗೆ ಹೋಗುವಿರಂತೆ. ಆಗಬಹುದೇ ?"

"ಆಗಲೇಳಿ. ನನಗೇನು–ಶೆಟ್ಟಿ ಬಿಟ್ಟಲ್ಲೇ ಬಿಡಾರ."

ಮುಂದಿನ ಕಥೆ ಕೇಳುವ ಉತ್ಸಾಹದಿಂದ ಬೇಗ ಮನೆಗೆ ಹೋಗಿ, 'ರಾತ್ರಿ ಎಲ್ಲಿ ಹೋಗಿದ್ದೆ, ಎಲ್ಲಿ ಮಲಗಿದ್ದೆ, ಈತ ಯಾರು?' ಎಂಬ ಮನೆಯವರ ನೂರು ಪ್ರಶ್ನೆಗಳಿಗೆ, ಪ್ರಶ್ನೆ ಕೇಳಿದವರ ಮುಖ ಮುರಿಯುವಂತೆ ಅಸಹನೆಯ ಉತ್ತರ ಕೊಟ್ಟು, ಹೇಗೋ ಊಟ ಮುಗಿಸಿ, ಮತ್ತೆ ಕಥೆ ಕೇಳಲು ಕುಳಿತೆ. ಪಾಪ! ನಿದ್ರೆ ಬರುತ್ತಿತ್ತೋ ಏನೋ ಚಿನ್ನಪ್ಪನಿಗೆ. ಆದರೂ ನನ್ನ ಉತ್ಸಾಹಕ್ಕೆ ತಾನೂ ಬಲಿಯಾಗಿ, ಚಿನ್ನಪ್ಪ ಕಥೆಯನ್ನು ಮುಂದುವರಿಸಿದ:

"ಚಂದ್ರಾಸಾನಿಯ ಸಾವು, ವೆಂಕಟಸುಬ್ಬಯ್ಯನವರಿಗೆ ಆಕೆ ಇದ್ದಾಗ ಮರೆತುಹೋದ ಸಂಗೀತದ ಹುಚ್ಚನ್ನು, ಮತ್ತೆ ಬಲವಾಗಿ ಹಿಡಿಸಿತ್ತು. ಆಕೆಗೆ ತಮ್ಮ ಒಲವನ್ನು ಅರ್ಪಿಸಿದಂತೆ, ಆಕೆಯ ನೆನಪಿಗಾಗಿ ಸಂಗೀತಕ್ಕೆ ತಮ್ಮ ಹೃದಯವನ್ನು ಅರ್ಪಿಸಿದರು. ಆಗಾಗ ಹಾಡು ಹಾಡುತ್ತಾ ಆಕೆಯ ನೆನಪು ಉಕ್ಕಿಬಂದು ಹಾಗೇ ಕಂಬನಿಗರೆಯುತ್ತಾ ಕೈಯ ತಂಬೂರಿ ಜಾರಿಹೋದುದನ್ನೂ ಗಮನಿಸದೆ 'ಚಂದ್ರಾ... ಚಂದ್ರಾ...' ಎಂದು ತಾಯನ್ನು ಕಳೆದು ಕೊಂಡ ಎಳೆಗರುವಿನಂತೆ ಹಂಬಲಿಸುವರು. ಮತ್ತೆ ಕೆಲವು ಬಾರಿ, ಮಲಗಿದ್ದಾಗ ಆಕೆಯ ನೆನಪಾಗಿ, ವಿಯೋಗವ್ಯಥೆಯ ದುಳ್ಳುರಿಯಲ್ಲಿ ಬೇಯಲಾಗದೆ, ಅದನ್ನು ಮರೆಯಲು ತಂಬೂರಿ ಹಿಡಿದು ಹಾಡಲಾರಂಭಿಸುವರು. ಹಾಗೇ ಹಾಡು ಹಾಡುತ್ತಾ ಅರೆಮರೆವಾಗಿ, ಚಂದ್ರಾಸಾನಿಯೇ ಬಂದು ಅವರನ್ನು ನೇವರಿಸಿ ಸಂತೈಸಿದಂತಾಗುವುದು. ತಂಬೂರಿಯನ್ನೇ ತಬ್ಬಿ ಮಲಗುವರು."

"ಹೀಗೆ ಬಿಟ್ಟರೆ ಅವರಿಗೆ ಬುದ್ಧಿ ಕೆಡಬಹುದೆಂದು ಮನೆಯಲ್ಲಿ ಅವರಿಗೆ ಮದುವೆ ಮಾಡುವ ಯೋಚನೆ ಮಾಡಿದರು – ಆದರೆ ಏನೆಂದರೂ, ಎಷ್ಟು ಹೇಳಿದರೂ, ಚಂದ್ರಾಸಾನಿ ಬದುಕಿದ್ದಾಗಲೇ ಮದುವೆಗೆ ಒಪ್ಪದ ವೆಂಕಟಸುಬ್ಬಯ್ಯನವರು ಈಗಲೂ ಅದಕ್ಕೆ ಒಪ್ಪಲಿಲ್ಲ."

"ಅವಳ ಬಾಳು ನನಗಾಯಿತು. ನನ್ನ ಬಾಳು ಅವಳಿಗೆ ಮೀಸಲು, ಬೇರೆ ಹೆಣ್ಣೆಲ್ಲ ನನಗೆ ತಾಯಂದಿರು. ಆಕೆಯ ಮಾತಿಗಾಗಿ ಜೀವ ಹಿಡಿದಿದ್ದೇನೆ. ಅವಳ ಆಸೆಯನ್ನು ಸಾಧಿಸಲು ಬದುಕುತ್ತೇನೆ" ಎಂದುಬಿಟ್ಟರು.

"ಅದನ್ನು ಸಾಧಿಸುವುದಕ್ಕೆ ಎಂಬಂತೆ , ಸಂಗೀತಾಭ್ಯಾಸಕ್ಕೆ ತೊಡಗಿದರು. ಬರೀ ಅಭ್ಯಾಸವಲ್ಲ ಅದು, ತಪಸ್ಸು. ಪಂಚಾಗ್ನಿಯ ಮಧ್ಯೆ ಕುಳಿತು ತಪಸ್ಸು ಮಾಡುವ ಋಷಿಯಂತೆ, ವೆಂಕಟಸುಬ್ಬಯ್ಯನವರು ವಿಯೋಗವ್ಯಥೆಯ ದಳ್ಳುರಿಯ ಮೇಲೆ ಕುಳಿತು, ಸಂಗೀತ ತಪಸ್ಸಿಗೆ ತೊಡಗಿದರು. ಬರಬರುತ್ತಾ ಸಂಗೀತಸಾಧನೆಯಲ್ಲಿ ಆಕೆಯ ಮೈಯ ನೆನಪು ಮಾಸಿ, ನಿರಾಕಾರವಾದ ಒಲವೇ ನಾದರೂಪ ತಾಳಿ ಸಂಗೀತವಾಯಿತು. ಹಾಡುವಾಗ ಹಾಡುವಷ್ಟು ಕಾಲವೂ ಅವರಿಗೆ ಆಕೆಯ ಸಾಮೀಪ್ಯದಲ್ಲಿದ್ದಂತಾಗುವುದು. ಒಂದೊಂದು ವೇಳೆಯಂತೂ, ಮೈಮರೆತು ಹಾಡುವಾಗ, ಆಕೆ ಮೈದಾಳಿಬಂದು ತಮ್ಮ ಎದೆಯೊರಗಿ ಕುಳಿತಂತೆ ಭಾಸವಾಗುವುದು. ಆ ಹೊತ್ತಿನಲ್ಲಿ ಹಾಡುವುದನ್ನು ಮರೆತು, ಈ ಅನುಭವ ಏಕಾಯಿತೆಂದು ಚಿಂತಿಸುವರು. ಹಾಗೇ ಚಿಂತಿಸುವಾಗ ಒಮ್ಮೆ ಇದ್ದಕ್ಕಿದ್ದಹಾಗೆ ಅನಂತಯ್ಯ ಹಿಂದೆ ಹೇಳಿದುದು, 'ನಿನ್ನ ಬಯಕೆಯೊಂದು ಶಕ್ತಿ, ಪ್ರಬಲಶಕ್ತಿ. ಅದು ತೀವ್ರವಾದಷ್ಟೂ, ಉತ್ಕಟವಾದಷ್ಟೂ ಪರಿಣಾಮಕಾರಿಯಾಗುತ್ತದೆ' ಎಂದದ್ದು ನೆನಪಾಗಿ ಕತ್ತಲಲ್ಲಿ ಬೆಳಕು ಹೊಳೆದಂತಾಯಿತು. ಕಣ್ಣು ಮರೆಯಾದ ಒಲವನ್ನು ಮತ್ತೆ ಸಾಧಿಸುವ ದಾರಿ ತೋರಿದಂತಾಯಿತು. ತಮ್ಮ ಚಂದ್ರಾಳನ್ನು ಕಾಣಲು ಸ್ವರ್ಗಕ್ಕೆ ಹಾಕಿದ ಏಣಿ ಎಂದರಿತು ಸಂಗೀತಾಭ್ಯಾಸದಲ್ಲಿ ನಿರತರಾದರು. ಅವರ ಸಂಗೀತಾಭ್ಯಾಸದಲ್ಲಿ ಹಿಂದೆಂದೂ ಕಾಣದ ಉತ್ಕಟತೆ ಕಾಣಿಸಿತು. ಒಂದೊಂದು ಸ್ವರವನ್ನೂ ಸಾಧಿಸಲು ಹೊರಟರು. ಒಂದೊಂದು ಸ್ವರವೂ, ರಾಗದಲ್ಲಿ ಕೋಮಲವಾಗಲಿ, ತೀವ್ರವಾಗಲಿ, ಶುದ್ಧವಾಗಿ ನುಡಿಯಬೇಕು, ಓಂಕಾರ ನುಡಿವ ಗಂಟೆಯಂತೆ. ಗಂಟೆಗಟ್ಟಲೆ, ಏಕೆ, ದಿನಗಟ್ಟಲೆ, ಒಂದೊಂದೇ ಸ್ವರ ಸಾಧಿಸುತ್ತಾ ಕುಳಿತು ಬಿಡುವರು. ಒಮ್ಮೆ ಅದು ಖಚಿತವಾಗಿ ನುಡಿಯಿತೆಂದು ಮನಸ್ಸಿಗೆ ಬೋಧೆಯಾದಾಗ, ಸುತ್ತಿ ಸುತ್ತಿ ಮತ್ತೆ ಅದೇ ಸ್ವರವನ್ನು ನುಡಿಯುವರು– ಸುತ್ತಲೂ ಬಲೆ ಹಾಕಿ, ಮಿಗ ತಪ್ಪಿಸಿಕೊಳ್ಳದಂತೆ ಮಾಡಿ ಹಿಡಿವ ವ್ಯಾಧನಂತೆ. ಹಾಗೆ ಸ್ವರ ಶುದ್ಧವಾಗಿ ರೂಪುಗೊಂಡಾಗ, ತಟಕ್ಕನೆ ಅವರ ಕಣ್ಣೆದುರು ಕಿಡಿಯೊಂದು ಹಾರಿದಂತಾಗುವುದು."



"ಸಾಧನೆ ಬಲಿತಂತೆ, ಅವರ ಕಲ್ಪನೆಯೂ ಬೆಳೆಯಿತು. ಚಿತ್ರಭಾವದಿಂದ ರಂಗಾದುದೇ ರಾಗವಲ್ಲವೇ ? ತಮ್ಮ ಕಂಠದ ನಾದದಲ್ಲಿ ಆ ಭಾವಶಕ್ತಿಯನ್ನು ತುಂಬತೊಡಗಿದರು. ಸ್ವರ ಖಚಿತವಾಗಿ ಮೂಡಬೇಕು, ಹಾಗೆ ಮೂಡಿದುದು ಭಾವವನ್ನು ಬಿತ್ತರಿಸಬೇಕು. ಹೃದಯದ ವೇದನೆ ಕಂಬನಿಯಾಗಿ ಅವತರಿಸುವಂತೆ, ಆನಂದ ಮಂದಹಾಸವಾಗಿ ಮೂಡಿದಂತೆ ಮೂಡಿ ಬರಬೇಕು. ಅದು ಅದೇ ಎಂದು ಕುರುಡನಿಗೂ ಅರಿವಾಗಬೇಕು. ಭಾವನಾದಗಳ ಸಮನ್ವಯ ಮಾಡಿ, ನಾದಚಿತ್ರ ರಚಿಸುವ ದಾರಿಯಲ್ಲಿ ಅವರ ಸಾಧನೆ ಮುಂದುವರಿಯಿತು."

"ಅಂಥ ಹೊತ್ತಿನಲ್ಲಿ ಅವರು ಹಾಡುವುದನ್ನು ಕೇಳಿದಾಗ, ಕೇಳುವವರಿಗೆ ಹುಚ್ಚು ಹಿಡಿದಂತಾಗುವುದು. ವೆಂಕಟಸುಬ್ಬಯ್ಯನವರ ಎದೆಯನ್ನು ದಹಿಸುವ ವ್ಯಥೆ ಅವರದಾಗಿ, ಅವರೂ 'ಅಯ್ಯೋ' ಎಂದು ಹಂಬಲಿಸುವರು. ಹಾಡು ಬೆಂಕಿಯಾಗಿ ಕೇಳುವವರ ಎದೆಯನ್ನು ದಹಿಸುವುದು."

"ಅಬ್ಬಾ ! ಇದೇನು ಅದ್ಭುತ" ಎಂದುಕೊಳ್ಳುವರು. ಆದರೆ ವೆಂಕಟಸುಬ್ಬಯ್ಯನವರಿಗೆ ಮಾತ್ರ ಅದಾವುದರಿಂದಲೂ ತೃಪ್ತಿಯಿಲ್ಲ. ತುಂಬು ಹೊಳೆಯ ನಡುವೆ ಬೆಟ್ಟಗಲದ ಜಾಗ ಬತ್ತಿದಂತೆ, ಏಕೋ ಅವರ ಹಾಡಿನಲ್ಲಿ ಎಲ್ಲೋ ಅರಕೆ ಕಾಣುವುದು.

"ಒಂದು ದಿನ ಹೀಗೇ ಹಾಡುತ್ತಾ ಕುಳಿತಿದ್ದಾರೆ – ತೋಡಿ ರಾಗವನ್ನು, ತ್ರಿಲೋಕಸುಂದರಿಯಾದ ಜಗನ್ಮಾತೆಯ ವೀಣಾನಾದವನ್ನು ಕೇಳಿ ಜಿಂಕೆಗಳ ಹಿಂಡು ಆಕೆಯ ಬಳಿ ಬಂದು ಮುತ್ತುವುದಂತೆ, ಆ ರಾಗ ಹಾಡಿದಾಗ. ಅಂದು ಅವರ ಬಾಯಲ್ಲಿ ಆ ರಾಗವನ್ನು ಕೇಳುತ್ತಿರುವವರಿಗೂ ಹಾಗೇ ಆಗಿತ್ತು. ರಾಗ ತನ್ನ ಶಿಖರ ಮುಟ್ಟಿದ ಎನ್ನುವಾಗ, ತಂಬೂರಿ ಅವರ ಕೈಯಿಂದ ಜಾರಿ, ಕಂಬನಿ ಹರಿಯತೊಡಗಿತು. ಸುಮ್ಮನೆ ಅಳತೊಡಗಿದರು, ಕೇಳಬಂದವರು ಆ ಅವಸ್ಥೆಯಲ್ಲಿ ಅವರನ್ನು ಮಾತಾನಾಡಿಸಲು ಧೈರ್ಯ ಸಾಲದೆ, ಸದ್ದುಮಾಡದೆ ಎದ್ದು ಹೋದರು. ಆ ದಿನ ಅನಂತಯ್ಯನವರೂ ಅಲ್ಲಿದ್ದರು. ಎಲ್ಲರೂ ಹೋದಮೇಲೆ, ಅನಂತಯ್ಯ, ತಂಬೂರಿಯಲ್ಲಿ ಮುಖ ಮರೆಸಿ, ಹಸುಳೆಯಂತೆ ಅಳುತ್ತಿದ್ದ ಸೋದರಳಿಯನನ್ನು ಎಬ್ಬಿಸಿ–"

"ಏನಾಯಿತು ವೆಂಕಟಸುಬ್ಬ, ಈ ಅಳುವೇಕೆ ?" ಎಂದು ಕೇಳಿದರು.

"ಎಷ್ಟೆಷ್ಟು ಸಾಧನೆ ಮಾಡಿದರೂ ಸಂಗೀತ ಸಿದ್ಧಿಸುತ್ತಿಲ್ಲ. ಕೈಗೆ ಬಂದ ತುತ್ತು ಬಾಯಿಗಿಲ್ಲ, ಮಾವ. ನೆಲಕ್ಕೆ ತಲೆ ಹೊಡೆದುಕೊಂಡು ಪ್ರಾಣ ಒಪ್ಪಿಸಬೇಕೆನ್ನುವಷ್ಟು ವ್ಯಥೆಯಾಗುತ್ತದೆ."

"ಏಕೆ ?"

"ಹಾಡುವಾಗ ಎದೆಯಲ್ಲಿ ಸಾವಿರ ಭಾವ ಚಿಮ್ಮುತ್ತವೆ. ಎಲ್ಲವನ್ನೂ ಹಾಡುತ್ತೇನೆ ಎಂದು ಹೊರಟರೆ ಹತ್ತು ಸಿಗುತ್ತವೆ, ನೂರು ಜಾರಿಕೊಳ್ಳುತ್ತವೆ. ಹಾಳು ಕಂಠ ನುಡಿಯದೆ ಸೋಲುತ್ತದೆ.... ನುಡಿಯದ ಗಂಟಲ ನರವನ್ನು ಹರಿದು ಬಿಡಬೇಕೆನಿಸುತ್ತದೆ!" ಉದ್ವೇಗದಿಂದ ಹೇಳಿದರು ವೆಂಕಟಸುಬ್ಬಯ್ಯ.

"ಇರಲಿ ಬಿಡು, ಇದು ತಪ್ಪಲ್ಲ. ಸಾತ್ವಿಕ ಅತೃಪ್ತಿ, ಪ್ರಗತಿಯ ತಾಯಿ, ಕಂಠ ಇನ್ನೂ ಪಳಗಲಿ."

"ಕಂಠದ್ದೊಂದೇ ಅಲ್ಲ, ಮಾಮ."

"ಮತ್ತೆ ?"

"ರಾಗವೂ ಅಷ್ಟೆ. ಅದರಲ್ಲೂ ಏನೋ ಸಾಲದು ಎನ್ನಿಸುತ್ತದೆ."

"ಬಹುಶಃ ನಿನ್ನ ಸಾಧನೆಯಲ್ಲಿ ಲೋಪವಿರಬೇಕು."

"ಅಂದರೆ...."

"ನಿನ್ನ ಮನಸ್ಸಿನಲ್ಲಿ ಇನ್ನೂ ಹಸಿ ಇದೆ. ನಾನು ಬಲ್ಲೆ, ವೆಂಕಟಸುಬ್ಬು– ನೀನು ಇನ್ನೊಂದು ಮೆಟ್ಟಲು ಮೇಲೇರಬೇಕು."

"ಹಾಗಂದರೇನು, ಮಾವ? ಏನು ಹಸಿ ನನ್ನಲ್ಲಿ ?"

"ನಿನ್ನ ಭಾವನೆಗಳು ವ್ಯಕ್ತಿಮಟ್ಟವನ್ನು ಬಿಟ್ಟು ವಿಶ್ವದ ಮಟ್ಟಕ್ಕೆ ಏರಿಲ್ಲ; ಮಾನವತ್ವದ ಮೆಟ್ಟಲು ದಾಟಿ ದೇವತ್ವದ ಮೆಟ್ಟಲು ಸೇರಿಲ್ಲ."

"ನಿನ್ನ ಮಾತು ಅರ್ಥವಾಗದ ಒಗಟೆಯಂತಿದೆ, ಮಾವ. ಬಿಡಿಸಿ ಹೇಳಬಾರದೆ?"

"ಹೇಳಿಕೊಟ್ಟು ಕಲಿಸುವ ಕಾಲವೂ ಇತ್ತು, ವೆಂಕಟಸುಬ್ಬ. ಈಗ ನೀನೇ ಸ್ವಾನುಭವದಿಂದ ಕಲಿಯುವ ಕಾಲ. ಯೋಚಿಸಿ ನೋಡು. ನಿನಗೆ ತಿಳಿಯುತ್ತದೆ. ನಿನ್ನ ಹೃದಯದಲ್ಲಿರುವ ಸೌಂದರ್ಯ, ಪ್ರೇಮ, ಬಯಕೆ – ಎಲ್ಲವೂ ಅಣುವಿನಿಂದ ಬೃಹತ್ತಾಗಲಿ. ಕೆರೆಯನ್ನು ಬಿಟ್ಟು ಕಡಲಿಗಿಳಿ, ಮನುಷ್ಯ ಕೊಡಬಹುದಾದುದು ಒಪ್ಪತ್ತಿನ ಊಟ. ಹಸಿವನ್ನೇ ತೀರಿಸುವ ಅಮೃತವನ್ನು ದೇವರೇ ಕೊಡಬೇಕು. ಅಲ್ಲವೇ ?" ಎಂದರು ಅನಂತಯ್ಯ. ಆ ಮಾತು ಕೇಳಿ ವೆಂಕಟಸುಬ್ಬಯ್ಯನವರಿಗೆ, ಏನೋ ಮಸಕುಮಸಕಾಗಿ ಕಂಡಂತಾಯಿತು.



"ರಾಗಧ್ಯಾನದೊಂದಿಗೆ, ಆ ಮಾತಿನ ಚಿಂತನೆಗೂ ತೊಡಗಿದರು, ಅವರು. ಅಣು ಬೃಹತ್ತಾಗುವುದು, ವ್ಯಕ್ತಿ ವಿಶ್ವವಾಗುವುದು ಎಂದರೇನು? ಹಾಗಾಗಲು ಏನು ದಾರಿ ? ಆ ಮಾತಿನ ಅರ್ಥ ತಿಳಿಯಲು, ಆ ತಿಳುವಳಿಕೆಯ ದಾರಿಯನ್ನು ಕಾಣಲು ತಮ್ಮ ಅಂತರಂಗವನ್ನೇ ಮಥಿಸಿದರು. ತಮ್ಮ ಬಯಕೆಯನ್ನು ಎಳೆಎಳೆಯಾಗಿ ಹಿಂಜಿನೋಡಿದರು. ಎಷ್ಟೋ ತಿಂಗಳು ನಡೆಯಿತು ಈ ಮನೋಮಥನ."

"ಒಂದು ದಿನ ಅವರು ಏಕೋ ತಮ್ಮ ಕೋಣೆಯಲ್ಲಿ ತೂಗಾಡುತ್ತಿದ್ದ ಕನ್ನಡಿಯಲ್ಲಿ ಕಾಣುವ ತಮ್ಮ ಪ್ರತಿಬಿಂಬವನ್ನು ನೋಡಿದರು. ಆ ಕನ್ನಡಿಯಷ್ಟೇ ಅಲ್ಲ, ಅದರ ಇದಿರುಬದಿಯ ಗೋಡೆಯಲ್ಲಿದ್ದ ಮತ್ತೊಂದು ಕನ್ನಡಿಯಲ್ಲೂ ತಮ್ಮ ಪ್ರತಿಬಿಂಬ ಕಾಣುತ್ತಿದೆ. ಆ ರೀತಿ ತಮ್ಮ ಕೊಠಡಿಯಲ್ಲಿನ ಕನ್ನಡಿಗಳಲ್ಲಿ ವೆಂಕಟಸುಬ್ಬಯ್ಯನವರು ತಮ್ಮ ಪ್ರತಿಬಿಂಬಗಳನ್ನು ಎಷ್ಟೋ ಬಾರಿ ಕಂಡಿದ್ದರು. ಇಷ್ಟೋ ಬಾರಿ ಏನು, ಅದು ಅವರ ದಿನದಿನದ ಅನುಭವ. ಅದನ್ನು ನೋಡಿಯೂ ನೋಡದಂತೆ ಇರುತ್ತಿದ್ದರು. ಆದರೆ ಅಂದು ಮಾತ್ರ ಅದು ಲೌಕಿಕ ವಿಚಿತ್ರ ಘಟನೆಯಂತೆ ತೋರಿ, ಆಶ್ಚರ್ಯವಾಯಿತು. ಹಾಗೇ ಯೋಚಿಸಿದರು. ಇರುವ ಎರಡು ಕನ್ನಡಿಯಲ್ಲಿ ಎರಡು ಪ್ರತಿಬಿಂಬ ಕಾಣುತ್ತಿದೆ."

"ಒಬ್ಬ ವ್ಯಕ್ತಿ – ಎರಡು ಪ್ರತಿಬಿಂಬ!"

"ಇದ್ದಕ್ಕಿದ್ದಹಾಗೆ ಅವರು ವಿಚಾರ ಊಹೆಗೂ ನಿಲುಕದ ಯಾವುದೋ ದಾರಿಯಲ್ಲಿ ಹರಿಯತೊಡಗಿತು."

"ಎರಡು ಕನ್ನಡಿಯಲ್ಲಿ ಎರಡು ಪ್ರತಿಬಿಂಬ! ಹತ್ತು ಕನ್ನಡಿಗಳಿದ್ದರೆ ಹತ್ತರಲ್ಲೂ ಕಾಣುತ್ತಿತ್ತು. ತಾವು ಇರುವುದೊಬ್ಬರು, ಆದರೆ ಕನ್ನಡಿಯಲ್ಲಿ ಹತ್ತಾಗಿ ಕಾಣುತ್ತಾರೆ. ಈ ಹತ್ತರ ಮೂಲವೂ ಒಂದೇ ನೋಡುವ ಕಣ್ಣಿಗೆ ಜಗತ್ತಿನಲ್ಲಿ ಕೋಟ್ಯಾನುಕೋಟಿ ಪ್ರತ್ಯೇಕ ಸ್ವರೂಪವಾಗಿ ಕಾಣುವುದೆಲ್ಲವೂ ಒಂದೇ ಶಕ್ತಿಯ ಬಹು ಪ್ರತಿಬಿಂಬ. ಹಾಗೆಯೇ – ಎಲ್ಲ ಬಗೆಯ ಪ್ರೇಮವೂ ಒಂದೇ ಬಗೆಯ ಪ್ರೇಮದ ಬಹುರೂಪಿಯಾದ ಪ್ರತಿಬಿಂಬವೇ? ಇದು ಸರಿ ಎಂದರೆ ಅದೂ ಹಾಗೇ ಇರಬಾರದೇಕೆ? ಹೀಗೆ ಚಿಂತಿಸುತ್ತಾ, ಚಿಂತಿಸುತ್ತಾ ಎಲ್ಲೆಡೆಯಲ್ಲೂ ಒಂದೇ, ಏಕಮೇವಾದ್ವಿತೀಯವಾದ ಸತ್ಯ ಗೋಚರಿಸಿತು. ಆ ಮಾತು ಅರಿವಾಗಿ, ನೆಲದಲ್ಲಿ ತೆವಳುತ್ತಿದ್ದ ಅವರಿಗೆ, ಮೇಲೇರಲು ಏಣಿ ಸಿಕ್ಕಂತಾಯಿತು. ಎಲ್ಲೆಡೆಯಲ್ಲೂ ಅವರಿಗೆ ತಮ್ಮ ಪ್ರೇಯಸಿಯ ರೂಪು ಕಂಡಿತು; ಒಲವು ಸರ್ವಾಂತರ್ಯಾಮಿಯಾಗಿರುವುದು ಕಾಣಿಸಿತು; ಕಿಡಿಕರಗಿ ಬೆಳಕಿನ ಕಡಲಾಯಿತು.

ಅಗಲಿದ ಒಲವು ಜಗನ್ಮಾತೆಯಾಗಿ ಕಂಡಿತು; ಬಯಕೆ ವಿರಹ ಕಾತರ–ಭಕ್ತಿಯಾಯಿತು. ಜಗನ್ಮಾತೆಯ ವಿಶ್ವವಾತ್ಸಲ್ಯ ತಾಯಿಯಾಗಿ ಬಂದು ತನ್ನನ್ನು ತೊಟ್ಟಿಲಿನಲ್ಲಿಟ್ಟು ತೂಗಿದಂತೆ, ಚಂದ್ರಾಸಾನಿಯಾಗಿ ಬಂದು ತೋಳಲ್ಲಿಟ್ಟು ಕೊಂಡು ನಲಿಸಿದಂತೆ ತೋರಿತು. ಅಲ್ಲಿ ಮಾತೆಯಂತೆ ಚುಂಬನ, ಇಲ್ಲಿ ಪ್ರೇಯಸಿಯಂತೆ ಆಲಿಂಗನ – ಎಲ್ಲದರ ಮೂಲವೂ ಒಂದೇ. 'ಏಕಂ ಸದ್ವಿಪ್ರಾ ಬಹುಧಾ ವದಂತಿ.' ಅರಿವಿನ ಗೋಪುರದಲ್ಲಿ ಉಪನಿಷತ್ತಿನ ದಿವ್ಯವಾಣಿಮೊಳಗಿ ಸತ್ಯವನ್ನು ಮುಚ್ಚಿದ ಅಸತ್ಯದ ಬಂಗಾರದ ತಟ್ಟೆ ಸರಿದು, ಸತ್ಯಸೂರ್ಯ ಮುಕ್ತಪ್ರಕಾಶದಿಂದ ಥಳಥಳಸಿದ. ವೆಂಕಟಸುಬ್ಬಯ್ಯನವರ ಕಣ್ಣು ತೆರೆಯಿತು."

"ಅಂದು ಅವರಿಗೆ ಬುವಾ ಹೇಳಿದ ಮಾತು ನೆನಪಾಯಿತು; 'ಪ್ರಣವ ಸ್ವರೂಪವಾದ ಭಗವಂತನನ್ನು ನಾದೋಪಾಸನೆಯಿಂದ ಸಾಧಿಸಬಹುದು.' ಆ ಮಾತು ನೆನಪಾಗಿ ಅವರು ತೆವಳುತ್ತಿದ್ದ ಕಿರುದಾರಿ ಹಿಂದಾಗಿ, ರಾಜ ಮಾರ್ಗವಾಗಿ, ಅವರ ಸಾಧನೆಯಲ್ಲಿ ಹೊಸ ವೇಗ ಮೂಡಿತು."

"ಅಂದಿನಿಂದ ವೆಂಕಟಸುಬ್ಬಯ್ಯ ಹೊಸ ದಾರಿ ಹಿಡಿದರು. ಸಂಗೀತ ಸಾಧನೆ ನಾದೋಪಾಸನೆಯಾಯಿತು. ಒಂದೊಂದು ರಾಗವೂ ದೇವತೆಯನ್ನು ಒಲಿಸಿಕೊಳ್ಳುವ ದಿವ್ಯಮಂತ್ರವಾಯಿತು. ಅವರ ಹಾಡುಗಾರಿಕೆಯಲ್ಲಿ ಹಿಂದೆಂದೂ ಕಾಣದ ಪರವಶತೆ ಕಾಣತೊಡಗಿತು. ಹಾಡುಹಾಡುತ್ತಾ ಅವರ ಕಂಠವೊಂದೇ ಅಲ್ಲ, ಮೈಯ ಅಣುಅಣುವೂ ವೀಣೆಯಂತೆ ಹಾಡತೊಡಗುವುದು. ಅವರ ಸುತ್ತಲೂ ನಾದಸಮುದ್ರ ನೆರೆಯೇರಿದಂತಾಗಿ ಅದರಲ್ಲಿ ಮುಳುಗಿ, ಮೈಮರೆಯುವರು. ಉರಿಬಿಸಿಲು ಕಾವಾರಿ ಹಾಲುಬೆಳದಿಂಗಳಾದಂತಾಗುವುದು. ಆ ಕಡಲಿನಲ್ಲಿ ಅವರು ಕರಗಿಹೋಗುವರು. ಎಲ್ಲೆಡೆಯಲ್ಲೂ ಸಂಗೀತ ತಾನೇ ತಾನಾಗುವುದು."

"ಒಂದು ದಿನ ರಾತ್ರಿ ಮಲಗಿದ್ದ ವೆಂಕಟಸುಬ್ಬಯ್ಯನವರಿಗೆ ಏಕೋ ತಟಕ್ಕನೆ ಎಚ್ಚರವಾಯಿತು. ಎದ್ದರು. ಎದೆಯಲ್ಲಿ ಏನೋ ವಿಚಿತ್ರ ವ್ಯಥೆ, ದಾಹ. ಏನೋ ಹೇಳಲಾಗದ ಹಂಬಲ, ಹೃದಯದಲ್ಲಿ. ಎದ್ದುಹೋಗಿ ನೀರು ಕುಡಿದು ಬಂದರು. ಆದರೂ ದಾಹ ಅಡಗಲಿಲ್ಲ. ಏನೋ ಬಯಕೆ. ಹಸಿವು, ಬೇಗೆಯಂತೆ ಅವರ ಕರುಳನ್ನು ಕುಕ್ಕುತ್ತಿತ್ತು. ಸುಮ್ಮನೆ ಕುಳಿತುಬಿಟ್ಟರು. ಬೇಡಬೇಡವೆಂದರೂ, ಗುರುತರಿಯದ ಯಾತನೆ ಪ್ರೇಯಸಿಯ ರೂಪತಾಳಿ ನಿಂತಿತು. ಅಂದೇ ಆಕೆಯಿಂದ ಅಗಲಿದಷ್ಟು ನೋವಾಗುತ್ತಿದೆ, ಬಯಕೆ ಕೆರಳಿದ ಎದೆಗೆ. ಆ ಯಾತನಾಮಯವಾದ ಬಯಕೆಯನ್ನು ಮರೆಯಲು ಏನೇನೋ ಪ್ರಯತ್ನ ಮಾಡಿದರು. ಪ್ರಯತ್ನ



ಹೆಚ್ಚಿದಷ್ಟೂ ಆ ಯಾತನೆ ಹೆಚ್ಚಿತೇ ಹೊರತು ಹಿಂಗಲಿಲ್ಲ. ಎಷ್ಟೆಷ್ಟು ಯೋಚಿಸಿದರೂ ಆ ಬಯಕೆಯ ನೋವನ್ನು ದಮನ ಮಾಡುವ ದಾರಿ ಕಾಣಲಿಲ್ಲ. ಕಾಣದ ಬೆಂಕಿಯಂತೆ ಅವರ ಮೈಯನ್ನು ಸುಡುತ್ತಿತ್ತು, ಆ ಕೊರಗು, ಅದನ್ನು ತಾಳಲಾರದೆ, ಸ್ನಾನದ ಮನೆಗೆ ಹೋಗಿ, ಇದ್ದಷ್ಟು ತಣ್ಣೀರನ್ನು ಮೈಮೇಲೆ ಸುರಿದುಕೊಂಡರು. ಮೈ ತಣ್ಣಗಾಯಿತು; ಆದರೆ ಮನಸ್ಸು ಮಾತ್ರ ಉರಿಯುತ್ತಲೇ ಇತ್ತು. ಅದನ್ನು ಆರಿಸಲು ಬೇರಾವುದೂ ದಾರಿಕಾಣದೆ ಹಾಡಲೆಂದು ತಂಬೂರಿ ಹಿಡಿದು ಕುಳಿತರು. ಮೊದಮೊದಲು ತಂಬೂರಿಗೆ ಶ್ರುತಿ ಸೇರುವುದೇ ಕಷ್ಟವಾಯಿತು. ತಂಬೂರಿಯೊಂದು ಕಡೆ ಎಳೆದರೆ, ಕಂಠ ಬೇರೊಂದು ಕಡೆ ಎಳೆಯುತ್ತಿತ್ತು. ರಥದ ನೊಗವನ್ನು ಹೊತ್ತುಕೊಳ್ಳಲು ತಂಟೆ ಮಾಡುವ ಕುದುರೆಯಂತೆ, ಅತ್ತಿತ್ತ ಎಳೆಯುತ್ತಿದ್ದ ಕಂಠವನ್ನು ಪ್ರಯತ್ನಪಟ್ಟು, ತಂಬೂರಿಯ ಶ್ರುತಿಗೆ ಸೇರಿಸಿದರು–ಏನು ಹಾಡಬೇಕು, ಯಾವ ರಾಗ ಸಾಧನೆ ಮಾಡಬೇಕು ಎಂಬ ಯಾವ ನಿಶ್ಚಯವೂ ಇಲ್ಲದೆ. ಆದರೆ ಅವರಿಗರಿವಾಗದಂತೆಯೇ ಅವರ ಕಂಠ ಭೈರವೀ ರಾಗಾಲಾಪವನ್ನು ಆರಂಭಿಸಿತು."

"ಹಾಡು ಹೊರಹೊಮ್ಮಿದೊಡನೆಯೇ, ಸುತ್ತಮುತ್ತ ಭಯಂಕರವಾದ ಹೆಡೆಯಾಡಿಸಿ ಬೆದರಿಸುವ ಸರ್ಪಗಳು, ನಾದಮುಗ್ಧವಾಗಿ, ಹೆಡೆಯಡಗಿಸಿ ಮಲಗಿದಂತೆ, ತೀವ್ರವಿಹ್ವಲತೆಯ ತಾಂಡವದ ವೇಗ ಕಡಿಮೆಯಾಯಿತು. ರಥಕ್ಕೆ ಕಟ್ಟಿದ ಹತ್ತಾರು ಕುದುರೆಗಳು ಹುಚ್ಚಾಗಿ, ಒಂದೊಂದು ಒಂದೊಂದು ಕಡೆ ಎಳೆಯುತ್ತಿದ್ದವು. ಅದನ್ನು ನಿಲ್ಲಿಸಿ, ಶಾಂತವಾಗಿ, ಒಮ್ಮುಖವಾಗಿ ಹೆಜ್ಜೆ ಹಾಕಿದಂತಾಯಿತು. ಆಜ್ಯಾಹುತಿಯಾದ ಬಳಿಕ ಸಹಸ್ರ ಜಿಹ್ವೆಯಿಂದ ಉಗ್ರನಾಗಿ ಪ್ರಕಟನಾದ ಅಗ್ನಿ, ಕ್ರಮೇಣ ಶಾಂತನಾಗಿ, ಶುಭಶ್ವೇತವಾಗಿ, ಏಕ ಜಿಹ್ವನಾಗಿ, ಮಂಗಳಕರ ಕಾಂತಿಯ ಮಂದಹಾಸವನ್ನು ಬೀರಿದಂತಾಯಿತು. ಪ್ರವಾಹಮತ್ತನಾಗಿ ಪ್ರಕ್ಷುಬ್ಧ ವೀಚಿಮಾಲೆಗಳಿಂದ ಎದೆಗೆಡಿಸಿದ ಏರುನೆರೆ, ನಿಧಾನವಾಗಿ ಇಳಿದು ಗೆಜ್ಜೆಗಾಲಿನ ಸದ್ದುಮಾಡುತ್ತಾ ಹರಿವ ತರಂಗಿಣಿಯಾದಂತೆ, ಅವರ ಮೈಯನ್ನು ಕಡೆಯುತ್ತಿದ್ದ ಉಗ್ರಯಾತನೆ ನಿಧಾನವಾಗಿ ಕರಗಿ ಶಾಂತತೆ ಮೂಡಿತು."

"ಹಾಡುಹಾಡುತ್ತಾ ತನ್ಮಯತೆಯಾವರಿಸಿದಾಗ, ಅವರ ಮನೋನೇತ್ರ ಅರಳಿ, ಹಾಡುವ ಹಾಡೇ ಏನೋ ಒಂದು ಚಿತ್ರವಾದಂತೆ, ಅವರ ಮನೋನೇತ್ರಗಳಿದಿರು ಗೋಚರಿಸಿತು."

"ನೋಡಲು ಎಲ್ಲಾ ಮಬ್ಬು ಮಸಕು, ಸಂಜೆಯ ಮಬ್ಬುಗತ್ತಲಿನಲ್ಲಿ ಕಾಣುವ ಕಡಲಲೆಗಳಂತೆ ಅಸ್ಪಷ್ಟ. ಬಳಿಕ ಚಿತ್ರವನ್ನು ಅಸ್ಪಷ್ಟಗೊಳಿಸಿದ ತೆರೆ ಸರಿದಂತೆ,

ಮಬ್ಬಾಗಿದ್ದುದು ಸ್ಪಷ್ಟವಾಗಿ ಕಾಣತೊಡಗಿತು."

"ನೋಡಿದರು–"

"ಎಲ್ಲೋ ಕಾಣದೆಡೆಯಿಂದ ಓಂಕಾರನಾದ ಮೂಡಿಬಂದು, ವರ್ತುಲ ವರ್ತುಲವಾಗಿ ಅವರ ಎದೆಯ ಬಳಿ ಸಾರಿ ಮತ್ತೆ ಸುತ್ತಲೂ ವ್ಯಾಪಿಸಿತು. ನಾದಗರ್ಭದಿಂದ ಸ್ಫುಲಿಂಗವೊಂದು ಸಿಡಿದುಬಂದು, ಬೆಳೆಬೆಳೆದು ಶ್ವೇತಾಗ್ನಿ ಗೋಲವಾಗಿ, ಸುತ್ತಲೂ ಉಜ್ವಲ ಶೀತಲ ಕಾಂತಿಯನ್ನು ಪಸರಿಸಿತು. ಆ ಬೆಳಕಿನೊಡಲಿನಲ್ಲಿ ಜನಿಸಿದಂತೆ, ದೇವತಾಸ್ತ್ರೀಯೊಬ್ಬಳು ಮೂಡಿ, ದೂರದಿಂದ ಹತ್ತಿರ ಬಂದು ಕಾಣಿಸುತ್ತಿದ್ದಾಳೆ, ಆಕೆ–ಬೆಳದಿಂಗಳಿನಲ್ಲಿ ಕಡೆದ ದಿವ್ಯಸುಂದರ ವಿಗ್ರಹ. ಶುಭಶ್ವೇತವಸನಧಾರಿಣಿಯಾದ ತಪಸ್ವಿನಿ. ಎರಡು ಕೈಗಳಲ್ಲೂ ಬಿಳಿಯ ಕಮಲ. ಭಕ್ತಿಭಾರದಿಂದ ಅರ್ಧನಿಮೀಲಿತವಾದ ಆಕೆಯ ನೇತ್ರಗಳಿಂದ ಪವಿತ್ರಕಾಂತಿ ಹೊರಹೊಮ್ಮುತ್ತಿದೆ. ಆಕೆಯ ಮುಖದಿಂದ ಹೊರಬಿದ್ದ ಗಂಭೀರ ಮೃದುಮಧುರ ಓಂಕಾರನಾದ, ಪರಿವೇಷದಂತೆ ಆಕೆಯನ್ನು ಬಳಸುತ್ತಿದೆ. ಸಪ್ತಸ್ವರಕನ್ನಿಕೆಯರು ಆಕೆಯನ್ನು ಓಲೈಸುತ್ತಿದ್ದಾರೆ. ಆಕೆಯ ಚರಣದಡಿಯಲ್ಲಿ ಭಕ್ತನೋರ್ವನು ಮಲಗಿ 'ತಾಯೀ, ಪ್ರಸನ್ನಳಾಗು' ಎಂದು ಬೇಡುತ್ತಿದ್ದಾನೆ. ಕಮಲದಂತೆ ತಾಯಿಯ ಕಣ್ಣು ಅರಳಿ, ತೃಪ್ತಿಯ ಮಂದಹಾಸ ಮೂಡಿದೆ ಆಕೆಯ ತುಟಿಯ ಮೇಲೆ. 'ನಿನಗೆ ನಾನು ಒಲಿದೆ' ಎಂಬಂತೆ ಆಕೆಯ ಬಲಗೈಯ ಕಮಲಪುಷ್ಪ ಭಕ್ತನ ಶಿರದ ಮೇಲೆ ಬಿದ್ದಿತು–"

"ಇದ್ದಕ್ಕಿದ್ದಂತೆ ವೆಂಕಟಸುಬ್ಬಯ್ಯನವರಿಗೆ ಎಚ್ಚರವಾಯಿತು. ಎಚ್ಚರವಾದಾಗ ಅವರಿಗೆ ತಿಳಿಯಿತು– ಅವರು ಹಾಡುತ್ತಿರಲಿಲ್ಲ ಎಂಬುದು."

"ಅವರ ಕೈಯಲ್ಲಿದ್ದ ತಂಬೂರಿ ಜಾರಿ ಬಿದ್ದಿತ್ತು, ಕಣ್ಣಿನಿಂದ ಹರಿದ ನೀರಿನಿಂದ ಒದ್ದೆಯಾಗಿತ್ತು."

"ಕನಸು ಕರಗಿದರೂ ಕನಸಿನಲ್ಲಿ ಕಂಡ ಮುಖ ಮಾತ್ರ, ಗಂಧದ ಕಡ್ಡಿ ಅರಿದ ಬಳಿಕವೂ, ಗಾಳಿಯಲ್ಲಿ ಉಳಿದ ಪರಿಮಳದಂತೆ ಕಾಣುತ್ತಿತ್ತು. ಕನಸಿನಲ್ಲಿ ಕಂಡ ಆ ಮುಖ, ಆ ದೇವತಾವದನ–ಅಸ್ಪಷ್ಟವಾದರೂ ಅಪರಿಚಿತವಲ್ಲ. ಯಾರದು ಆ ಮುಖ–ತನ್ನ ತಾಯಿಯದೇ ? ಇರಬಹುದು ಎಂದೆನಿಸಿತು. ಇಲ್ಲವೇ ಚಂದ್ರಾದೇ?– ಅದೂ ಇರಬುಹುದು ಎನಿಸಿತು. ಅದೇ ಇದೇ ಎಂದು ಯೋಚಿಸುತ್ತಿರುವಾಗ, ಇದ್ದಕ್ಕಿದ್ದಂತೆ ದೇವರ ಮನೆಯ ಮಂಟಪದಲ್ಲಿ ಮಂಡಿಸಿದ್ದ ರಾಜರಾಜೇಶ್ವರಿಯ ಮುಖದ ನೆನಪಾಯಿತು."

"ಅದೇ.... ಅದೇ ತಾನು ಕನಸಿನಲ್ಲಿ ಕಂಡ ದಿವ್ಯವದನಾರವಿಂದ!"



"ಮನಸ್ಸಿನಲ್ಲಿ ಆ ಮಾತು ಮೂಡಿದ ಕೂಡಲೇ, ಇದ್ದಕ್ಕಿದ್ದಹಾಗೆ ಅವರ ಮೈ ಕಂಪಿಸಿ ರೋಮಾಂಚನವಾಯಿತು."

"ತಾಯಿ! ಕೃಪಾಮಯಿ! ಇಂದು ನೀನು ನನಗೆ ಒಲಿದೆಯಾ!" ಎಂದು ಕೂಗಿದರು ವೆಂಕಟಸುಬ್ಬಯ್ಯ, ಅನಂದೋನ್ಮಾದದಿಂದ. ಅವರು ಕಣ್ಣು ತೆರೆದಾಗ ಉಷಃಕಾಲದ ಅರುಣಕಾಂತಿ ಮುಗಿಲಿನಲ್ಲಿ ಬೆಳಕಿನ ರಂಗವಲ್ಲಿ ಹಾಕುತ್ತಿತ್ತು. ವೆಂಕಟಸುಬ್ಬಯ್ಯನವರ ಹೃದಯದಲ್ಲಂದು ವಿಚಿತ್ರ ಶಾಂತಿ, ಅಪೂರ್ವ ಉತ್ಸಾಹ; ಕಣ್ಣಲ್ಲಿ ಬಿಡುವಿಲ್ಲದ ಅನಂದಾಶ್ರು ಸುರಿಯುತ್ತಿತ್ತು. ಸುತ್ತಲು ಎತ್ತೆತ್ತಲು ಬೆಳಕು, ಶಾಂತಿ, ನಗುಗಳೇ ತುಳುಕುತ್ತಿರುವಂತೆ ತೋರಿತು ಅವರಿಗೆ– ಎದ್ದು ಹಾರುಗಾಲಿನಿಂದ ನಡೆದು, ದೇವರ ಮನೆಯ ಮಂಟಪದಲ್ಲಿದ್ದ ರಾಜರಾಜೇಶ್ವರೀ ವಿಗ್ರಹಕ್ಕೆ ಅಡ್ಡಬಿದ್ದರು. ಆ ವಿಗ್ರಹವೂ ಅವರನ್ನು ನೋಡಿ ತೃಪ್ತಿಯಿಂದ ನಕ್ಕಂತಾಗಿ ಅವರ ಮೈ ಝುಂ ಎಂದಿತು.

"ಅಂದು ಅವರಿಗೆ ಭೈರವೀ ರಾಗ ಒಲಿಯಿತು. ಅಂದಿನಿಂದ ಆ ರಾಗ ಹಾಡುವಾಗ ಅವರಿಗೆ ತಾಯಿ ಕಾಣಿಸುತ್ತಿದ್ದಳಂತೆ. ಅವರು ಆ ರಾಗವನ್ನು ಹಾಡಿದಾಗ ಕೇಳಿದವರಿಗೂ ಹಾಗೇ ಭಾಸವಾಗುತ್ತಿತ್ತಂತೆ. ಅದರ ಮೇಲೆ ವೆಂಕಟಸುಬ್ಬಯ್ಯನವರು 'ಭೈರವಿ ವೆಂಕಟಸುಬ್ಬಯ್ಯ'ನವರೆಂದು ಪ್ರಖ್ಯಾತರಾದರು; ಸಾಧಕರು ಸಿದ್ಧರಾದರು!"

## ೧೪

"ಹಾಗೇ ದಿನದಿನಕ್ಕೆ ಅವರ ಜೀವನ ಏರುತ್ತಾ ಹೋಯಿತು–" ಎಂದು ಹೇಳಿ, ತಾನು ಹೇಳುತ್ತಿದ್ದ ಕಥೆಯನ್ನು ಮುಗಿಸಿದ, ಚಿನ್ನಪ್ಪ, ಅದನ್ನು ಕೇಳಿದ ನಾನು ವಿಸ್ಮಯಮೂಕನಾಗಿದ್ದೆ.

"ನೀನೇ ಹೇಳಿ ಸ್ವಾಮಿ, ಈ ಕಾಲದಲ್ಲಿ ಅವರ ಹಾಗೆ ಸಂಗೀತ ಸಾಧಿಸೋರು ಯಾರಿದಾರೆ? ಯಾರಿಗೆ ಬೇಕಾಗಿದೆ ? ಎಲ್ಲಾ ನನ್ನ ಹಾಗೇ ಹೊಟ್ಟೆ ಪಾಡಿಗೆ ಹಾಡೋ ಕಿಂದರಿಜೋಗಿಗಳು. ಬದುಕಿದ ಬಾಳಲ್ಲ ಸತ್ತ ಸಾವಲ್ಲ. ಲೆಕ್ಕಕ್ಕೆನಾವೂ ಇದೀವಿ – ಅಷ್ಟೇ."

"ನಿಮ್ಮಂಥವರು ಹತ್ತು ಜನ ಕಲೆತು, ಸಂಗೀತಕಲೆಯನ್ನು ಮೇಲೆತ್ತಬೇಕು ಚಿನ್ನಪ್ಪ, ನಿರಾಶರಾದರೆ ಹೇಗೆ ? ವೆಂಕಟಸುಬ್ಬಯ್ಯವಂಥವರು ಹುಟ್ಟಿದ ಸೀಮೆಯಲ್ಲಿ ಸಂಗೀತಕ್ಕೆ ಈ ದುರವಸ್ಥೆ ಬರಬೇಕೆ?"

– ಚಿನ್ನಪ್ಪನ ನಿರಾಶೆಯ ನುಡಿಯನ್ನು ಕೇಳಿನೊಂದು ಹೇಳಿದೆ ನಾನು.

“ಆ ಕಾಲ ಈಗಿಲ್ಲಾ, ಸ್ವಾಮಿ ಸಂಗೀತಗಾರರನ್ನು ಅಂದೇನು ಫಲ? ಅವರ ಹಾಗೆ ಜನ್ಮದುದ್ದಕ್ಕೂ ಒಂದು ರಾಗ ಸಾಧಿಸ್ತೀನಿ ಅಂತ ಕೂತರೆ ಹೊಟ್ಟೇಗೆ ಹಾಕೋರು ಯಾರು ? ಆ ಕಾಲದಲ್ಲಿರಾಗ ಒತ್ತೆ ಇಟ್ಟರೆ ಸಾವಿರ ಹೊನ್ನು ಕೊಟ್ಟರಂತೆ. ಈಗ ರಾಗ ಇರಲಿ, ನನ್ನನ್ನೇ ಒತ್ತೆ ಇಟ್ಟುಕೊಂಡರೂ, ಬೀಡಿಗೆ ಮೂರು ಕಾಸು ಕೊಡೊಲ್ಲ – ‘ಮುಂದೆ ಹೋಗಿ ಬಾರೋ ದಾಸಯ್ಯ’ ಅನ್ತಾರೆ. ಶ್ರೀಮಂತರಿಗೆ ದುಡ್ಡು ಮಾಡೋ ದಾಹ, ಹಣ ಇಲ್ದೋರಿಗೆ ಹೊಟ್ಟೆ ಆತುರ. ಇದರಲ್ಲಿ ನಮ್ಮನ್ನು ಕೇಳೋರು ಯಾರು? ಬಡತನ ಹೋಗೋ ವರ್ಗ್ಗೂ ಸಂಗೀತಾನೂ ಬದುಕೊಲ್ಲ, ನಾವೂ ಬದುಕೊಲ್ಲ. ಎಲ್ಲಾ ಅಳ್ತಾ ಇರ್ಬೇಕು” ಎಂದ ಚಿನ್ನಪ್ಪ.

“ಅದು ಹೋಗಲಿ. ಅವರು ತಮ್ಮ ನಾಲಗೆ ಕತ್ತರಿಸಿಕೊಂಡದ್ದೇಕೆ ಅಂತ ನಿನಗೇನಾದರೂ ಗೊತ್ತೆ, ಚಿನ್ನಪ್ಪ ?”

“ಉಹೂ, ನನಗೆ ಗೊತ್ತಿಲ್ಲ. ತೊರೆಯೂರಿನಲ್ಲಿ ಅವರ ವಂಶದೋರು ಇದಾರಂತೆ. ಹಾಗಂತ ಕೇಳಿದೀನಿ. ಅಲ್ಲಿ ವಿಚಾರಿಸಿದ್ರೆ ಏನಾದ್ರೂ ಗೊತ್ತಾಗ್ಬೋದು.”

“ಇಲ್ಲೇ ಹೇಳುವಂಥವರು ಇನ್ನಾರೂ ಇಲ್ಲವೇ ?”

“ನನಗೆ ತಿಳಿದ್ದಂಗೆ ಯಾರೂ ಇಲ್ಲ.”

“ಅಂತೂ ನಿನ್ನಿಂದ ನನಗೆ ತುಂಬಾ ಉಪಕಾರವಾಯಿತು, ಚಿನ್ನಪ್ಪ.”

“ಏನೋ ಆಯ್ತು, ಹೋಯ್ತು, ನಮಗೂ ಹಿರೇರ ಹೆಸ್ರು ಗ್ನಾಪ್ಕ ಮಾಡ್ಕಂಡಂಗಾಯ್ತು, ನಾನಿನ್ನು ಬರ್ತೀನಿ. ಹೊತ್ತಾಯ್ತು. ಇನ್ನು ಇವತ್ತು ಕ್ಯಾದಿಗ್ಗೆರೇಗೆ ಬೇರೆ ಹೋಗ್ಬರ್ಬೇಕು.”

“ಏಕೆ?”

“ಅಲ್ಲಿ ಆಟ ಆಡ್ಸಿ, ಆರು ತಿಂಗ್ಳಾಯ್ತು, ಕೊಡ್ತಿನೀಂದ ಕಾಸ್ನೂಕೊಡ್ದೆ ಸತಾಯಿಸ್ತಾ ಅವ್ರೆ. ಹೋಗಿ ಏನಾರ ಸಿಕ್ರೆ ಎಬ್ಕೊಂಡು ಬರ್ತೀನಿ. ಹೀಗೇ ನೋಡಿ ನಮ್ಮ ಬಾಳು, ನಮಗೆ ಸಿಗೋ ಮರ್ಯಾದೆ!” – ಎಂದ ಚಿನ್ನಪ್ಪ. ನನ್ನಿಂದ ಆತನ ಒಂದು ದಿನವೆಲ್ಲಾ ವ್ಯರ್ಥವಾಗಿತ್ತು. ಅವನಿಗೆ ಹಣದ ಅಗತ್ಯವಿತ್ತೆಂದು ಆತನ ಬಾಯಿಂದಲೇ ತಿಳಿದಿತ್ತು. ಅದಕ್ಕಾಗಿ ಆತನ ಖರ್ಚಿಗೆಂದು ನಾನು ಕೊಡಲು ಹೋದ ಹಣವನ್ನು ಚಿನ್ನಪ್ಪ ಮುಟ್ಟಲಿಲ್ಲ.

“ಹಿರೇರ ಹೆಸ್ರು ಹೇಳಿ ಕಾಸು ತಗೋಬಾರ್ದು. ಅವರಿಗೆ ಗೌರವ ಅಲ್ಲ. ವಿಶ್ವಾಸಾ ಇರ್ಲಿ. ಅದೇ ಕೋಟಿ ಹಣ!” ಎಂದು ಹೇಳಿ ಚಿನ್ನಪ್ಪ ಹೊರಟು ಹೋದ. ಆತನ ಚಿಂದಿಕೋಟು, ಅಲ್ಲಲ್ಲಿ ಹರಿದ ಕಡೆ ಗಂಟುಹಾಕಿದ ಪಂಚೆ,



ಮುಳ್ಳುಹಂದಿಯಂತೆ ಕೆದರಿದ ತಲೆಗೂದಲು, ಪಾದರಕ್ಷೆಯಿಲ್ಲದೆ, ಧೂಳು ತುಳಿದು ಬಿರಿದ ಬರಿಗಾಲು– ಎಲ್ಲವನ್ನೂ ನೋಡಿ ಕರುಳು ಕಿವುಚಿದಂತಾಯಿತು. ಈ ಜನಕ್ಕೆ ಈ ಬವಣೆಯಿಂದ ಎಂದು ಮುಕ್ತಿ, ಎನಿಸಿತು. ನಿಷ್ಫಲವಾದ ನಿಟ್ಟುಸಿರು ಬಿಟ್ಟು ಸುಮ್ಮನಾದೆ.

ಅದುವರೆಗಿನ ವೆಂಕಟಸುಬ್ಬಯ್ಯನವರ ಕಥೆ ಕೇಳಿ, ಅದರ ಕೊನೆಯನ್ನರಿಯಬೇಕೆಂಬ ಬಯಕೆ ಉರಿಯಾಗಿತ್ತು, ನನ್ನ ಎದೆಯಲ್ಲಿ. ಆದರೆ ಉಳಿದುದನ್ನು ಯಾರಿಂದ ಅರಿಯುವುದು? ಯಾರು ಅದನ್ನು ನೆನಪಿಟ್ಟುಕೊಂಡು ಹೇಳಬಲ್ಲಂಥವರು ? ಎಲ್ಲರೂ ತೊರೆಯೂರಿನಲ್ಲಿ ಅವರ ವಂಶದವರೊಬ್ಬರು ಇದಾರೆಂದು ಹೇಳಿದ್ದರು. ಮೊದಲು ಅಲ್ಲಿ ಪ್ರಯತ್ನ ಮಾಡಿ. ಅಲ್ಲಿ ಏನು ತಿಳಿಯುವುದೋ ಅರಿತುಕೊಂಡು, ನಂತರ ಬೇರೆ ಕಡೆಗೆ ಹುಡುಕುವುದು ಎಂದು ನಿರ್ಧಾರ ಮಾಡಿ, ಆ ದಿನ ಮಧ್ಯಾಹ್ನವೇ ಹಿರಿಯೂರಿಗೆ ಹೊರಟೆ. ಆ ಸಂಜೆ ಅಲ್ಲೇ ಆಯಿತು.

ತೊರೆಯೂರು, ಹಿರಿಯೂರು–ಧರ್ಮಪುರ ರಸ್ತೆಯಲ್ಲಿರುವ ಸಣ್ಣ ಹಳ್ಳಿ. ಅಲ್ಲಿಗೆ ಬಸ್ಸಿನ ಸಂಪರ್ಕವಿಲ್ಲ; ಕಾಲುನಡಗೆಯಲ್ಲಿ ಸವೆಸಬಹುದಾದ ದೂರವಲ್ಲ. ಹೋಗಬೇಕೆಂದರೆ ವಾಹನವೊಂದು ಬೇಕೇ ಬೇಕು. ಅಲ್ಲದೆ ಕುರುಮರಡಿಯಲ್ಲಾದ ಉಪವಾಸ ವನವಾಸ ನನಗೆ ಚೆನ್ನಾಗಿ ಬುದ್ಧಿಗಲಿಸಿತ್ತು. ಆದುದರಿಂದ ತೊರೆಯೂರಿಗೆ ಹೋಗಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡು ಹಿರಿಯೂರಿನಲ್ಲಿದ್ದ ನೆಂಟರ ಎತ್ತಿನ ಗಾಡಿ ಕಟ್ಟಿಕೊಂಡು, ಬೆಳಗಿನ ಜಾವ ಅಲ್ಲಿಂದ ಹೊರಟು ಬೆಳಿಗ್ಗೆ ಹತ್ತು ಗಂಟೆಯ ವೇಳೆಗೆ ತೊರೆಯೂರು ಸೇರಿದೆ.

ವೇದಾವತಿನದಿಯ ದಡದಲ್ಲಿದೆ ತೊರೆಯೂರು. ನದಿಯನ್ನು ಅತ್ತ ಕಡೆ ಜನ ತೊರೆಯೆನ್ನುತ್ತಾರೆ. ಆದುದರಿಂದಲೇ ಆ ಊರಿಗೆ ಆ ಹೆಸರು. ಒಂದು ಕಾಲಕ್ಕೆ ತೊರೆಯೂರು ಹೆಸರುವಾಸಿಯಾದ ಅಗ್ರಹಾರವಾಗಿತ್ತಂತೆ. ಈಗ ಅಲ್ಲಿ ಬಾಳೆಯನ್ನು ಬೆಳೆಯಲು ಬಂದು ಕೊಯಮತ್ತೂರಿನ ಕಡೆಯ ತಮಿಳು ಮಾತನಾಡುವ ಜನ ಊರ ತುಂಬ ಸೇರಿಕೊಂಡು, ಅದು ಪುಟ್ಟ ಸೇಲಂ ಆಗಿದೆ. ಊರು ಹಿಂದೆ ಇದ್ದಿರಬಹುದಾದ ಸ್ಥಿತಿಯಲಿಲ್ಲ. ಆಕಾರ ಕಳೆದುಕೊಂಡರೂ, ಆಸ್ತಿ ಕಳೆದುಕೊಂಡು ಹೆಸರು ಉಳಿಸಿಕೊಂಡವರಂತೆ ಇದೆಯೆಂದರೆ ಇದೆ; ಅಷ್ಟೆ. ಊರ ಮಧ್ಯೆ ಸಣ್ಣದಾದರೂ ಸುಂದರವಾದ ಒಂದು ಅಮ್ಮನವರ ಗುಡಿ ಇದೆ. ಆ ದೇವಾಲಯದ ಅರ್ಚಕರು ಶ್ರೀಕಂಠಶಾಸ್ತ್ರಿಗಳ ಮನೆಗೆ ಹೋಗಿ, ಹಿರಿಯೂರಿನ ನೆಂಟರಿಂದ ತಂದ ಪರಿಚಯಪತ್ರ ಒಪ್ಪಿಸಿದ.

ಶ್ರೀಕಂಠಶಾಸ್ತ್ರಿಗಳಿಗೆ ನಾನು ಅಲ್ಲಿಗೆ ಬಂದ ಕಾರಣವನ್ನರಿತು ತುಂಬ ಸಂತೋಷವಾಯಿತು.

"ಈ ಕಾಲದ ಜನ ಹಿಂದಿನವರ ವಿಷಯ ತಿಳಿದುಕೊಳ್ಳಲು ಇಷ್ಟು ಮುತುವರ್ಜಿ ವಹಿಸುವುದು ತುಂಬಾ ಅಪರೂಪ. ನನ್ನಿಂದ ಆದಷ್ಟು ಸಹಾಯವನ್ನು ನಿರ್ವಂಚನೆಯಾಗಿ ಮಾಡುತ್ತೇನೆ; ತಿಳಿದಷ್ಟನ್ನು ಅಗತ್ಯವಾಗಿ ಹೇಳುತ್ತೇನೆ. ಆದರೆ ತಾವು ಒಂದು ಕೆಲಸ ಮಾಡಬೇಕು."

"ಏನು ಹೇಳಿ ?"

"ಗೋವಿಂದಯ್ಯನವರ ಮನೆಗೆ ಮಾತ್ರ ನೀವೇ ಹೋಗಿ, ಅವರಿಂದ ವಿಷಯ ಸಂಗ್ರಹ ಮಾಡಿಕೊಳ್ಳಬೇಕು. ಆ ಕೆಲಸದಲ್ಲಿ ಮಾತ್ರ ನನ್ನಿಂದೇನೂ ಸಹಾಯವಾಗದು!"

"ಗೋವಿಂದಯ್ಯ ಯಾರು ?"

"ಅವರೇ ವೆಂಕಟಸುಬ್ಬಯ್ಯನೋರ ವಂಶದವರು. ನಮಗೂ ಅವರಿಗೂ ಅಷ್ಟಕ್ಕಷ್ಟೆ. ನಮ್ಮ ಮುಖ ಕಂಡರೆ ಅವರಿಗೆ ಆಗೋಲ್ಲ."

"ಏಕೆ ?"

"ನೀವು ಅಮ್ಮನೋರ ಗುಡಿ ನೋಡಿದಿರಲ್ಲಾ, ಅದು ವೆಂಕಟಸುಬ್ಬಯ್ಯನವರು ಕಟ್ಟಿಸಿದ್ದು. ಆ ಕಾಲದಿಂದ ಪೂಜಾಧಿಕಾರ ನಮಗೇ ಸೇರಿದೆ. ಅದಕ್ಕಾಗಿ ನಮಗಷ್ಟು ಜಮೀನು ಬಿಟ್ಟಿದ್ದರು, ವೆಂಕಟಸುಬ್ಬಯ್ಯನವರು. ಅವರ ವಂಶಕ್ಕೆ ಸೇರಿದ ಇವರು, ಇದ್ದದ್ದನ್ನೆಲ್ಲಾ ಮಾರಿಕೊಂಡು, ದೇವಾಲಯದ ಜಮೀನಿನ ಮೇಲೂ ಅಧಿಕಾರ ಸ್ಥಾಪಿಸಲು ಯತ್ನಿಸಿದರು. ಅದು ಕೇಸಾಗಿ ನಮ್ಮಂತೆ ತೀರ್ಮಾನವಾಯಿತು. ಆ ಕಾಲದಿಂದ ನಮಗೂ ಅವರಿಗೂ ಎಣ್ಣೆ – ಸೀಗೇಕಾಯಿ. ಆದ್ದರಿಂದ ಅವರನ್ನು ನೀವೇ ನೋಡಿಕೊಂಡು ಬನ್ನಿ. ನಾನು ಕಳಿಸಿದೆ ಅಂತ ಕೂಡಾ ಹೇಳಬೇಡಿ"– ಎಂದರು.

ಹಾಗೇ ಆಗಲೆಂದು ಹೇಳಿ ನಾನು, ಸ್ನಾನ ಮುಗಿಸಿ ಗೋವಿಂದಯ್ಯನವರ ಮನೆಗೆ ಹೋದೆ. ಅವರನ್ನು ನೋಡಿದಾಗಲೇ ನನಗೆ ಅವರನ್ನು ಮಾತನಾಡಿಸಲು ಬೇಸರವಾಯಿತು. ಅವರು ಹುಟ್ಟಿನಿಂದ ಬ್ರಾಹ್ಮಣರಾದರೂ, ಮುಖದಲ್ಲಿ ಬ್ರಾಹ್ಮಣ ಲಕ್ಷಣ ಕೊಂಚವಾದರೂ ಇರಲಿಲ್ಲ. ಆ ಬಟ್ಟೆಯೋ, ಆಕಾರವೋ, ಎಂಥವರ ವಂಶದಲ್ಲಿ ಹುಟ್ಟಿದವರು ಹೇಗಿದಾರೆ ಎಂದು ವ್ಯಥೆಯಾಯಿತು. ಆದರೆ ಕಾರ್ಯವಾಸಿ ಕತ್ತೆಕಾಲು ಕಟ್ಟು ಎನ್ನುತ್ತಾರೆ. ನನ್ನ ಪರಿಸ್ಥಿತಿ ಹಾಗೇ ಇತ್ತು. ಆದ್ದರಿಂದ ಮನಸ್ಸಿಗಾದ ಬೇಸರವನ್ನು ಮರೆಮಾಚಿ, ನಮಸ್ಕಾರ ಹೇಳಿ, ನಾನು



ಬಂದ ಕಾರಣವನ್ನು ವಿವರಿಸಿದೆ. ಆ ಮಾತು ಕೇಳಿ ಕೂಡಲೇ ಆತ ಕೆಣಕಿದ ಶ್ವಾನದಂತೆ ಗುರ್ರೆನ್ನುತ್ತ, ಮಾತನಾಡಿಸಿದ ನನ್ನ ಮೇಲೆ ಬೀಳಲೇ ಬಂದ.

"ಸುಳ್ಳಾಕ್ತಿ ಹೇಳ್ತೀರಾ? ಶ್ರೀಕಂಠನ ಮನೆ ಹತ್ರ ನಮ್ಮ ಹುಡುಗಿ ನಿಮ್ಮನ್ನು ನೋಡಿದಳಂತೆ. ವೆಂಕಟಸುಬ್ಬಯ್ಯನೋರ ಆಸ್ತಿ ಅನುಭವಿಸೋಕೆ ಅವನು; ಅವರ ಕಥೆ ಹೇಳೋಕೆ, ಪುಗಸಟ್ಟೆ ಪುರಾಣ ಓದೋಕೆ ನಾನೋ? ಅವನನ್ನೇ ಕೇಳ್ರಿ."

"ಸ್ವಾಮಿ, ತಾವು ಸಿಟ್ಟಾಗಬಾರದು. ತಮತಮಗೆ ಮನಸ್ತಾಪವಿರಬಹುದು. ಆದರೆ ನಾನು ಏನೂ ತಿಳಿಯದವನು; ಪರಸ್ಥಳದವನು. ಅಷ್ಟು ದೂರದಿಂದ ವೆಂಕಟಸುಬ್ಬಯ್ಯನೋರ ವಿಷಯ ತಿಳಿದುಕೋಬೇಕೂಂತ ಬಂದಿದ್ದೀನಿ. ದಯವಿಟ್ಟು ಹೇಳಬೇಕು."

"ಹೇಳಬೇಕು, ನಿಜ. ಆದರೆ ಅದರಲ್ಲೇನು ಫಾಯಿದೆ ?"– ನನ್ನನ್ನು ವಿಚಿತ್ರವಾಗಿ ನೋಡುತ್ತಾ, ನನ್ನದು ನಿಃಸ್ವಾರ್ಥಕುತೂಹಲವಲ್ಲ, ಏನೋ ಉದ್ದೇಶಪೂರಿತವಾದ ಸ್ವಾರ್ಥ ಎಂಬಂತೆ ಕೇಳಿದ ಗೋವಿಂದಯ್ಯ.

ಆತನ ಮಾತು ಕೇಳಿ ನನಗೆ ಆಶ್ಚರ್ಯವಾಯಿತು; ಬೇಸರವೂ ಆಯಿತು.

"ನನಗೆ ಇದರಲ್ಲೇನೂ ಲಾಭವಿಲ್ಲ. ತಮ್ಮಿಂದ ಕತೆ ಕೇಳಿ ಲಾಭ ಮಾಡಿಕೊಳ್ಳುವ ದುರುದ್ದೇಶದಿಂದ ಬಂದವನಲ್ಲ, ನಾನು. ವೆಂಕಟಸುಬ್ಬಯ್ಯನವರ ವಿಚಾರ ಅಲ್ಲಲ್ಲಿ ಕೇಳಿದೆ. ಕೇಳಿದಷ್ಟರಿಂದ ಅವರ ಮೇಲೆ ಭಕ್ತಿ ಹುಟ್ಟಿತು. ಆದ್ದರಿಂದ ತಮಗೇನಾದರೂ ಗೊತ್ತಿದ್ದರೆ ತಿಳಿದುಕೊಳ್ಳಬೇಕು, ಅವರ ವಂಶದವರಾದ ನಿಮ್ಮನ್ನು ಕಂಡು ಹೋಗಬೇಕು ಎಂತ ಬಂದೆ, ಅಷ್ಟೇ."

"ಅದೆಲ್ಲಾ ನಂಬೋರು ಯಾರ್ರೀ? ನನಗೆ ಮಂಕುಬೂದಿ ಹಾಕೋಕೆ ಬರಬ್ಯಾಡ್ರಿ. ಸುಮ್ಮನೆ ಕಥೆ ಕೇಳಲಿಕ್ಕೆಂದು ಇಷ್ಟು ದೂರ, ಇಷ್ಟು ಖರ್ಚು ಮಾಡಿಕೊಂಡು ಬರಲಿಕ್ಕೆ, ನಿಮಗೇನು ಹುಚ್ಚೇ? ಏನೋ ಇದೆ. ಅದಕ್ಕೇ ಬಂದಿದೀರಿ. ನಿಮಗೆ ಬರೋದನ್ನೆಲ್ಲಾ ನನಗೆ ಕೊಡಿ ಅಂತ ಕೇಳೋಲ್ಲ. ನನಗೂ ಏನಾದರೂ ಅಷ್ಟು ಕೊಟ್ಟರೆ ಹೇಳುತ್ತೇನೆ. ಇಲ್ಲವಾದರೆ ನನ್ನ ದಾರಿ ನನಗೆ, ನಿಮ್ಮ ದಾರಿ ನಿಮಗೆ. ವೆಂಕಟಸುಬ್ಬಯ್ಯನೋರು ನಾಲಗೆ ಕತ್ತರಿಸಿಕೊಂಡದ್ದೇಕೆ ಅಂತ ಶ್ರೀಕಂಠನಿಗಲ್ಲ, ಅವರಪ್ಪನಿಗೂ ಗೊತ್ತಿಲ್ಲ. ಬೇಕಾದರೆ ಕೇಳಿ ನೋಡಿ."

"ಆ ವಿಚಾರ ನಿಮ್ಮೊಬ್ಬರಿಗೇನೇ ಗೊತ್ತಿರೋದು ?"

"ಹೌದು. ಆದಿದ್ದ ಕಾಗದಪತ್ರ ಎಲ್ಲಾ ನಮ್ಮಪ್ಪನ ಕಾಲಕ್ಕೆ ಬೆಂಕಿ ಪಾಲಾಗಿಹೋಯ್ತು. ಈಗ ಈ ವಿಷಯ ನನಗಲ್ಲದೆ ಬೇರೆ ಯಾರಿಗೂ ತಿಳಿಯದು

– ಈಗ ಏನು ಹೇಳುತ್ತೀರ ಹೇಳಿ. ಸುಮ್ಮನೆ ಉಸಿರು ದಂಡ ಮಾಡಬೇಡಿ. ಕಥೆ ಬೇಕೋ ಬೇಡವೋ ?"

– ಹಸಿದವರಿಗೆ ಅಭಾವಕಾಲದಲ್ಲಿ ತನ್ನ ಬಳಿಯಲ್ಲಿ ಮಾತ್ರವೇ ಇದ್ದ ಅಕ್ಕಿಯನ್ನು ತೋರಿಸಿ, ಕೇಳಿದ ಬೆಲೆ ಕೊಟ್ಟರೆ ಕೊಡುತ್ತೇನೆ ಎನ್ನುವ ಕಾಳ ಸಂತೆಯ ಕದೀಮನಂತೆ ಮಾತನಾಡಿದ, ಗೋವಿಂದಯ್ಯ.

ಆತನ ಕೈಲಿ ಹೆಚ್ಚು ಮಾತಾಡಿ ಉಪಯೋಗವಿಲ್ಲವೆನಿಸಿತು. ಜೇಬಿನಲ್ಲಿ ಇದ್ದ ಹಣದಲ್ಲಿ ಐದು ರೂಪಾಯಿನ ನೋಟು ತೆಗೆದು ಆತನ ಮುಂದಿಟ್ಟು– "ನಿಮಗೆ ಗೊತ್ತಿರೋದನ್ನ ಹೇಳಿ ಉದ್ಧಾರ ಮಾಡಬೇಕು" ಎಂದೆ. ಆತ ನೋಟನ್ನೇ ನಂಬದವನಂತೆ ಹತ್ತಾರು ಸಲ ಹಾಗೆ ಹೀಗೆ ತಿರುಗಿಸಿ ನೋಡಿ, ಸೊಂಟಕ್ಕೆ ಸಿಕ್ಕಿಸಿಕೊಂಡು, ಬಾಳೆಪಟ್ಟೆಯಲ್ಲಿದ್ದ ನಶ್ಯವನ್ನು ಮೂಗಿಗೆ ಏರಿಸಿ, ವೆಂಕಟಸುಬ್ಬಯ್ಯನವರು ನಾಲಗೆ ಕತ್ತರಿಸಿಕೊಂಡ ವಿಚಾರ ಹೇಳತೊಡಗಿದ;

## ೧೫

"ವೆಂಕಟಸುಬ್ಬಯ್ಯನೋರು ನಾಲಗೆ ಕತ್ತರಿಸಿಕೊಂಡಾಗ ಅವರಿಗೆ ಅರವತ್ತರ ಮೇಲೆ ವಯಸ್ಸು. ಆ ವಯಸ್ಸಿನಲ್ಲೂ ಭೈರವಿ ವೆಂಕಟಸುಬ್ಬಯ್ಯ ಎಂದರೆ," ಅವರ ಹಾಗೆ ಹಾಡೋ ಯೋಗ್ಯತೆ ಇದ್ದವರೇ ಇರಲಿಲ್ಲವಂತೆ, ಈ ಸೀಮೆಯಲ್ಲಿ. ದೇಶದೇಶಾಂತರದಿಂದ ಜನ, ಅವರ ಹೆಸರು ಕೇಳಿ, ದುರ್ಗಕ್ಕೆ ಬಂದು ಅವರ ಹಾಡು ಕೇಳಿ ಸಂತೋಷಪಟ್ಟು ಹೋಗುತ್ತಿದ್ದರಂತೆ. ಯಾರು ಬರಲಿ, ಬೇಕಾದವರು ಕೇಳಬೇಕೆನ್ನಲಿ, ಶುಕ್ರವಾರ–ಮಂಗಳವಾರ ಅಮ್ಮನವರ ಗುಡೀಲಿ ಕೇಳಬೇಕು, ಇಲ್ಲದೆ ಹೋದರೆ ಅವರ ಮನೇಲಿ ಕೇಳಬೇಕು; ಅದೂ ಸಂಜೆ, ಪೂಜೆಯ ಹೊತ್ತಿನಲ್ಲಿ ಕೇಳಬೇಕೆಂದರೆ ಬೆಳಗಿನ ಜಾವದವರೆಗೂ ಎದ್ದು ಕುಳಿತಿರಬೇಕು. ಪಾಳೆಯಗಾರರಿಗೂ ಅವರಿಗೂ ಏಕೋ ಮನಸ್ತಾಪವಾಗಿ, ಅರಮನೆಯಲ್ಲಿ ಕೂಡ ಅವರು ಹಾಡುತ್ತಿರಲಿಲ್ಲವಂತೆ. ಬೇರೆಯವರ ಹಾಗೆ ಪಾಳೆಯಗಾರರೂ ಇವರ ಮನೆಗೋ, ಅಮ್ಮನವರ ಗುಡಿಗೋ ಬಂದು ಕೇಳಿಕೊಂಡು ಹೋಗುತ್ತಿದ್ದರಂತೆ.

"ಹೀಗಿರುವಾಗ ದುರ್ಗಕ್ಕೆ ವಿಪತ್ತು ಬಂತು. ಶ್ರೀರಂಗಪಟ್ಟಣದ ಹೈದರ್ ಆಲಿಗೆ ಚಿತ್ರದುರ್ಗದ ಕೋಟೆ ಮೇಲೆ ಮೊದಲಿನಿಂದಲೂ ಕಣ್ಣು. ಅದನ್ನು ವಶಪಡಿಸಿಕೊಳ್ಳಬೇಕೆಂದು ಏನೇನೋ ಪ್ರಯತ್ನಪಟ್ಟ. ಲಡಾಯಿಗೆ ಕೋಟೆ ಇರಲಿ, ಕೋಟೆಯ ಕಲ್ಲು ಕೂಡ ಅಲುಗುವ ಹಾಗಿರಲಿಲ್ಲ. ನಾಲ್ಕೈದು ಬಾರಿ ಪ್ರಯತ್ನಪಟ್ಟು



ವಿಫಲನಾಗಿದ್ದ. ಕೊನೆಗೆ ಕೋಟೆಯನ್ನು ಗೆಲ್ಲಲು ಬೇರಾವ ದಾರಿಯೂ ಇಲ್ಲದೆ ದುರ್ಗದ ಒಳಗಿದ್ದ ಮುಸಲ್ಮಾನರೊಂದಿಗೆ ಪಿತೂರಿ ಮಾಡಿದ. ಅವರ ದ್ರೋಹದಿಂದ ಕೋಟೆ ಬಿತ್ತು. ಕಡೆ ಪಾಳೆಯಗಾರ ಮದಕರಿನಾಯಕರು ಕೋಟೆಯು ಉಳಿಯುವುದಿಲ್ಲವೆಂದು ತಿಳಿದಾಗ, ರಾಣೀ ವಾಸದ ಹೆಂಗಸರನ್ನೆಲ್ಲಾ ಕೈಯಾರ ಕತ್ತರಿಸಿ, ತಾವೂ ಲಡಾಯಿ ಮಾಡುತ್ತ ಸತ್ತರು. ಅವರೊಂದಿಗೆ ಚಿತ್ರದುರ್ಗದ ಕಥೆ ಮುಗಿದುಹೋಯಿತು!

"ಕೋಟೆ ಬಿದ್ದ ಮೇಲೆ ಹೈದರನ ಮಗ ಟೀಪುಸುಲ್ತಾನ್ ಕೆಲವು ದಿನ ದುರ್ಗದಲ್ಲೇ ಇದ್ದು, ಅಧಿಕಾರ ನೋಡುತ್ತಿದ್ದ. ಆಗ ನಡೆದದ್ದು ಇದು:

"ದೇಶದೇಶಾಂತರದಲ್ಲಿ ವ್ಯಾಪಿಸಿದ, ವೆಂಕಟಸುಬ್ಬಯ್ಯನವರ ಹಾಡುಗಾರಿಕೆಯ ಕೀರ್ತಿ ಟೀಪುಸುಲ್ತಾನನ ಜನಾನಕ್ಕೂ ತಿಳಿದಿತ್ತು. ಒಂದು ದಿನ ಸುಲ್ತಾನರ ಬೇಗಂ–

"ದುರ್ಗದ ವೆಂಕಟಸುಬ್ಬಯ್ಯನವರ ಹೆಸರು ತುಂಬಾ ಕೇಳಿದ್ದೇವೆ. ಭೈರವೀರಾಗ ಅವರ ಹಾಗೆ ಯಾರೂ ಹಾಡುವುದಿಲ್ಲವಂತೆ. ಕೇಳಬೇಕಾಗಿತ್ತು"– ಎಂದರು, ಕೇಳಬೇಕೋ ಬೇಡವೋ ಎಂದು ಸಂಕೋಚಪಡುತ್ತಾ.

"ಅದೇನು ದೊಡ್ಡದು. ಅದನ್ನು ಕೇಳಲು ಇಷ್ಟೊಂದು ಸಂಕೋಚಪಡಬೇಕೆ? ಆಗಲಿ. ಏರ್ಪಾಟುಮಾಡಿದರಾಯಿತು. ಇವೊತ್ತೇ ಭಕ್ಷಿಯವರಿಗೆ ಹೇಳುತ್ತೇನೆ" ಎಂದ ಚಿಕ್ಕ ನವಾಬ.

"ಅವರು ದೇವಸ್ಥಾನದಲ್ಲಲ್ಲದೆ ಬೇರೆಲ್ಲೂ ಹಾಡುವುದಿಲ್ಲವಂತೆ, ಹಾಗಂತ ಕೇಳಿದೇವೆ."

"ಅದೆಲ್ಲಾ ಬಡಾಯಿ ! ನಾವೇ ಕೇಳಿದರೆ ಇಲ್ಲ ಎಂದೆನ್ನುವ ಧೈರ್ಯ ಯಾರಿಗೆ? ನಿಮ್ಮ ಮನಸ್ಸಿನ ಬಯಕೆಯನ್ನು ತೀರಿಸುತ್ತೇವೆ" ಎಂದು ತಮ್ಮ ಬೇಗಂಗೆ ಮಾತು ಕೊಟ್ಟ ಟೀಪುಸುಲ್ತಾನ್.

"ಅದರಂತೆ ಮರುದಿನ ಪ್ರಾತಃಕಾಲವೇ ಭಕ್ಷಿಯವರಿಗೆ ಹೇಳಿದ– 'ವೆಂಕಟಸುಬ್ಬಯ್ಯನವರನ್ನು ಕರೆಸಿ' ಎಂತ. ಆ ದಿನವೇ ಬೆಳ್ಳಿ ಕಟ್ಟಿಗೆಯ ಆಳು ಬಂದು ವೆಂಕಟಸುಬ್ಬಯ್ಯನವರಿಗೆ ಸುಲ್ತಾನರ ಅಪ್ಪಣೆಯನ್ನು ತಿಳಿಸಿದ. ಅದರಂತೆಯೇ ವೆಂಕಟಸುಬ್ಬಯ್ಯನವರು ಟೀಪುವನ್ನು ನೋಡಲು ಹೊರಟರು.

"ದುರ್ಗವನ್ನು ಗೆದ್ದ ಟೀಪುಸುಲ್ತಾನನಿಗೆ ಎಲ್ಲರಿಗೂ ತಾನೀಗ ದುರ್ಗದ ದೊರೆ ಎಂದು ತೋರಿಸುವ ಚಪಲ. ಹಿಂದಿನ ಪಾಳೆಯಗಾರರು ನವರಾತ್ರಿ ಓಲಗ ನಡೆಸುತ್ತಿದ್ದ ಬಣ್ಣದ ಚಾವಡಿಯಲ್ಲಿ, ಟೀಪು ಪ್ರತಿದಿನವೂ ಓಲಗ ನಡೆಸುತ್ತಿದ್ದ;

ಯಾರನ್ನು ನೋಡಬೇಕಾದರೂ ಅಲ್ಲೇ. ವೆಂಕಟಸುಬ್ಬಯ್ಯನವರು ಅಲ್ಲೇ ಟೀಪುವನ್ನು ನೋಡಿದರು. ಟೀಪುವನ್ನು ಕಾಣುವವರು ಮೂರುಮೂರು ಬಾರಿ ಕುರ್ನಿಸಾತ್ ಮಾಡಿ, ನಜರ್ ಒಪ್ಪಿಸಿ, ಭಕ್ಷಿಯವರ ಮೂಲಕ ಮಾತನಾಡಿಸಬೇಕಾಗಿತ್ತು. ಆದರ ವೆಂಕಟಸುಬ್ಬಯ್ಯನವರು ಅದಾವುದನ್ನೂ ಮಾಡಲಿಲ್ಲ. ಕಟ್ಟಿಗೆಯವರ ಕೈಲಿ ತಾವು ಬಂದಿರುವ ಸುದ್ದಿ ತಿಳಿಸಿ, ಕರೆಸಿದಾಗ ಒಳಗೆ ಹೋದರು. ಮುಜರೆ–ನಜರು ಯಾವುದನ್ನೂ ಒಪ್ಪಿಸದೆ, ನೇರವಾಗಿ ಸುಲ್ತಾನರ ಮುಂದೆ ನಿಂತು 'ಏನೋ ನೋಡಬೇಕೆಂದು ಹೇಳಿಕಳಿಸಿದಿರಂತೆ, ಏಕೆ?' ಎಂದು ಕೇಳಿದರು ವೆಂಕಟಸುಬ್ಬಯ್ಯನವರು. ತನ್ನ ಸಭಾ ಮರ್ಯಾದೆಯನ್ನು ಭಂಗ ಮಾಡಿದ್ದಕ್ಕಾಗಿ ಟೀಪುವಿಗೆ ಮೊದಲೇ ಅವರ ಮೇಲೆ ಸಿಟ್ಟು ಬಂತು, ಮುಖ ಬಿಗಿಯಿತು. ಕುಡಿಮೀಸೆಯನ್ನು ಕಡಿಯುತ್ತಾ–

"ಭಕ್ಷಿಗಳೇ, ದುರ್ಗದ ನವಾಬರ ಇಚ್ಛೆಯನ್ನು ಅವರಿಗೆ ತಿಳಿಸಿ, ಹಾಗೇ ನಮ್ಮದು ಕಾಡುಕುರುಬರ ಚಾವಡಿಯಲ್ಲ, ನವಾಬರ ಓಲಗ, ಎಂದು ಹೇಳಿ" ಎಂದ. ಮುಳ್ಳಿನಂತಿತ್ತು, ಸುಲ್ತಾನ್ ಒಗರಿನಿಂದ ಆಡಿದ ಮಾತು. ಆ ಮಾತು ಕೇಳಿ ವೆಂಕಟಸುಬ್ಬಯ್ಯನ ಮೈ ಸೆಟೆದಿತು.

"ಮೂರ್ಖರಿಗೆ ಹೇಳುವಂತೆ ಹೇಳಲಾಗುತ್ತಿದೆ. ಸಭಾಮರ್ಯಾದೆ ಕಲಿಸಲೆಂದು ಕರೆಸಿದ್ದರೆ, ನಮಗೆ ವೇಳೆಯಿಲ್ಲವೆಂದು ನಿಮ್ಮ ನವಾಬರಿಗೆ ತಿಳಿಸಿ" ಎಂದರು, ವೆಂಕಟಸುಬ್ಬಯ್ಯ ಅಲ್ಲಿಂದ ಹೊರಗೆ ಹೋಗಲು ಸಿದ್ಧರಾಗಿ. ಭಕ್ಷಿ ಇಬ್ಬರ ಮಾತನ್ನೂ ಕೇಳಿ ಗಾಬರಿಯಾದ. ಪಿಸುದನಿಯಲ್ಲಿ "ನವಾಬರನ್ನು ರೇಗಿಸಬೇಡಿ. ಮರ್ಯಾದೆಯಿಂದ ನಡೆದುಕೊಳ್ಳಿ" ಎಂದ, ವೆಂಕಟಸುಬ್ಬಯ್ಯನವರಿಗೆ. ಅವನ ಮಾತು ಕೇಳಿ ನಸುನಗುತ್ತಾ ವೆಂಕಟಸುಬ್ಬಯ್ಯನವರು ಹೇಳಿದರು:

"ನಿಮ್ಮ ನವಾಬರಿಗೆ ತಾವು ದುರ್ಗದ ದೊರೆಗಳೆಂಬುದನ್ನು ನಮಗೆ ತೋರಿಸಬೇಕು, ನಮ್ಮಿಂದ ಆ ಮರ್‍ಯಾದೆ ಪಡೆಯಬೇಕು ಎಂಬ ಚಪಲ. ಆದರೆ ಅದು ಸಾಧ್ಯವಿಲ್ಲ. ನಾವು ಒಬ್ಬ ದೇವರು, ಒಬ್ಬ ದೊರೆಗೆ ತಲೆಬಾಗುವುದನ್ನು ಕಲಿತ ಜನ. ಇದ್ದರೂ ಅಷ್ಟೇ, ಸತ್ತರೂ ಅಷ್ಟೇ. ಆದ್ದರಿಂದ ಹಿಂದಿನ ದೊರೆಗಳಿಗೆ ಬಾಗಿಸಿದ ತಲೆಯನ್ನು ಇವರಿಗೆ ಬಾಗಿಸಲು ಸಾಧ್ಯವಿಲ್ಲ. ಅಲ್ಲದೆ ನಿಮ್ಮ ಸುಲ್ತಾನರಿಗೆ ಪರಾಕ್ರಮದಿಂದ ಪಡೆಯದೆ, ದ್ರೋಹದಿಂದ ಪಡೆದ ದೌಲತ್ತನ್ನು ಮೆರೆಸಲು ಇಷ್ಟು ಚಪಲವಿರಬಾರದು. ದ್ರೋಹದಿಂದ ಪಡೆದ ರಾಜ್ಯ, ದ್ರೋಹದಿಂದಲೇ ಹೋಗಬಹುದು. ಈ ಮಾತನ್ನು ನಿಮ್ಮ ನವಾಬರಿಗೆ ನೆನಪು ಮಾಡಿಕೊಡಿ."



"ಆ ಮಾತು ಕೇಳಿ ಮುಂಗೋಪಸ್ವಭಾವದ ಟೀಪುವಿಗೆ ಮೈಯುರಿಯಿತು. ಆದರೆ ಹೆಂಡತಿಗೆ ಕೊಟ್ಟ ಮಾತು ನೆನಪಾಗಿ ತತ್ಕಾಲಕ್ಕೆ ಸಿಟ್ಟು ಮರೆತು ಅವರ ಮಾತನ್ನು ಕೇಳಿಯೂ ಕೇಳಿಸದವನಂತೆ ತಾನೇ ನೇರವಾಗಿ ಅವರಿಗೆ ಹೇಳಿದ:

"ನಿಮ್ಮಿಂದ ಮಾತಾಡಲು, ಮರ್ಯಾದೆ, ವಿನಯ ಕಲಿಯಲು ನಿಮ್ಮನ್ನು ಇಲ್ಲಿಗೆ ಕರೆಸಿಲ್ಲ, ವೆಂಕಟಸುಬ್ಬಯ್ಯ. ನಮ್ಮ ಜನಾನಾ ನಿಮ್ಮ ಹಾಡು ಕೇಳಬಯಸಿದೆ. ಆ ವಿಷಯ ತಿಳಿಸಲು ಕರೆಸಿದೆ. ಎಂದು ಹಾಡುವಿರೆಂದು ತಿಳಿಸಿದರೆ ಭಕ್ಷಿಯವರು ಮುಂದಿನ ಏರ್ಪಾಟುಮಾಡುತ್ತಾರೆ."

"ತಮ್ಮ ರಾಣೀವಾಸದವರಿಗೆ ನಮ್ಮ ಸಂಗೀತದ ಮೇಲೆ ಪ್ರೀತಿ ಉಂಟಾದುದು ನಮ್ಮ ಭಾಗ್ಯ. ಎಂದು ಬಡವರ ಮನೆಗೆ ದಯಮಾಡಿಸುವಿರೆಂದು ತಿಳಿಸಿದರೆ ಮುಂದಿನ ಏರ್ಪಾಟುಮಾಡುತ್ತೇವೆ."

"ನಮ್ಮ ಅರಮನೆಯಲ್ಲೇ ತಮ್ಮ ಸಂಗೀತವಾಗಬೇಕು."

"ಅದು ಸಾಧ್ಯವಿಲ್ಲದ ಮಾತು."

"ಯಾವುದು ಸಾಧ್ಯವಿಲ್ಲ? ಏಕೆ ಸಾಧ್ಯವಿಲ್ಲ?"

"ತಾವು ಹೇಳಿದುದು ಆಗದ ಮಾತು."

"ಯಾವುದು–ತಾವು ಇಲ್ಲಿ ಹಾಡುವುದೇ, ಅಥವಾ ನೀವು ಹಾಡುವುದನ್ನು ನಾವು ಕೇಳುವುದೇ? ನಿಮ್ಮ ಹಾಡುಗಾರಿಗೆ ಜನಾನಾ ಕೇಳುವುದಕ್ಕೆ ಯೋಗ್ಯವಾದುದಲ್ಲವೆಂಬ ಸಂದೇಹವಿದ್ದರೆ, ತಿಳಿಸಬಹುದು."

"ನಮ್ಮ ಯೋಗ್ಯತೆಯ ವಿಷಯದಲ್ಲಿ ನಮಗೆ ಸಂದೇಹವಿಲ್ಲ. ತಮ್ಮ ಯೋಗ್ಯತೆಯ ವಿಷಯ ತಾವು ಆಡಬಹುದು. ನಮ್ಮ ಮಾತಿನ ಅರ್ಥ ಇಷ್ಟೇ–ನವಾಬರ ಅಂತಃಪುರದಲ್ಲಿ ನಾವು ಹಾಡುವುದು ಸಾಧ್ಯವಿಲ್ಲ."

"ನಮ್ಮ ಅಪೇಕ್ಷೆ, ಅಪ್ಪಣೆ ಎರಡಕ್ಕೂ ಒಂದೇ ಅರ್ಥ–ಬಲ್ಲಿರಾ?"

"ಬಲ್ಲೆ."

"ಆದರೂ ಇಲ್ಲವೆನ್ನುತ್ತೀರಾ?"

"ಅಹುದು."

"ಇದು ಉದ್ಧಟತನ. ನಮ್ಮ ಅಪ್ಪಣೆ ಪಾಲಿಸದವರಿಗೆ ಉಳಿಗಾಲವಿಲ್ಲ!"

"ನವಾಬರು ಸಿಟ್ಟಾಗಬಾರದು, ಒಂದು ಮಾತು ಹೇಳುತ್ತೇನೆ. ಸಹನೆಯಿಂದ ಕೇಳಬೇಕು. ನವಾಬರು ನಮ್ಮಂಥ ನೂರಾರು ಜನರ ಸಂಗೀತ ಕೇಳಿರಬಹುದು. ತಮಗೆ ಬೇಕಾದಾಗ ಹಾಡು ಕೇಳಲು ಅವರಿಗೆ ತಾವು ಅಪ್ಪಣೆಯನ್ನು ಮಾಡಿರಬಹದು. ಅವರೆಲ್ಲರೂ ತಮ್ಮ ಇಚ್ಛಾನುಸಾರವಾಗಿ ವರ್ತಿಸಿರಬಹುದು.

ನಿಮ್ಮ ಇಚ್ಛೆಗೆ ಅನುಸಾರವಾಗಿ ನಡೆಯದವರ ಉಳಿಗಾಲವಿಲ್ಲವೆಂದಿರಿ. ಆ ಮಾತೂ ನಿಜ. ದುರದೃಷ್ಟವಶದಿಂದ ಈ ಮೈ ನಿಮ್ಮ ಅಧೀನವಾಗಿದೆ. ಅದರ ಮೇಲೆ ನಿಮ್ಮ ಅಧಿಕಾರ ನಡೆಯಬಹುದೋ ಏನೋ, ಆದರೆ ನನ್ನ ವಿದ್ಯೆ ಯಾರ ಪ್ರಜೆಯೂ ಅಲ್ಲ; ಯಾರ ಆಳೂ ಅಲ್ಲ. ಅದು ನನ್ನ ದೇವರಿಗೆ ಮೀಸಲು. ನವಾಬರ ದೃಷ್ಟಿಯಲ್ಲಿ ನಮ್ಮಂಥ ಸಾಮಾನ್ಯ ಜನರ ವಿದ್ಯೆ, ನವಾಬರು ಬಯಸಿದಾಗ, ಬಯಸಿದಲ್ಲಿಗೆ ತಮ್ಮ ಭೋಗಕ್ಕೆ ಬರುವ ಬೆಲೆವೆಣ್ಣು ಎಂದಿರಬಹುದು; ಆದರೆ ನಮ್ಮ ದೃಷ್ಟಿಯಲ್ಲಿಲ್ಲ. ಅದು ನಮ್ಮ ತಾಯಿ, ದೇವರು ಅಲ್ಲಾನ ದರ್ಶನಕ್ಕೆ ನವಾಬರು ಮಸೀದಿಗೇ ಹೋಗಬೇಕಾದಂತೆ, ನಮ್ಮ ತಾಯ ದರ್ಶನಕ್ಕೆ ಆಕೆಯ ಮಂದಿರಕ್ಕೇ, ಭಕ್ತರಾಗಿ ಕೈಮುಗಿದು ಬರಬೇಕು. ಅದು ವಿನಾ ನವಾಬರು ಬೆದರಿಸುವುದಿರಲಿ, ಸಾರ್ವಭೌಮ ಪದವಿ ಕೊಡುತ್ತೇನೆಂದರೆ ನಿಮ್ಮ ಭೋಗತೃಪ್ತಿಯ ಪಾಪ ಪಂಕವಾದ ಜನಾನಾದಲ್ಲಿ ನಮ್ಮ ತಾಯಿಯ ನರ್ತನ ಏರ್ಪಡಿಸಲಾರೆ. ಹಾಗೆ ನಾವು ಮಾಡುವುದಿರಲಿ, ಹಾಗೆ ಮಾಡಿರೆಂದು ನೀವು ಕೇಳುವುದೂ ಆಕೆಗೆ ಅಪಮಾನ."

"ಟೀಪು ಮೊದಲೇ ಬೆಂಕಿನವಾಬ! ವೆಂಕಟಸುಬ್ಬಯ್ಯನವರ ಮಾತು ಕೇಳಿ ಉರಿಯುವ ಬೆಂಕಿಗೆ ಗಾಳಿ ಬೀಸಿದಂತಾಯಿತು. ಕ್ರೋಧದಿಂದ ನಿಶಿತವಾದ ಧ್ವನಿಯಲ್ಲಿ ಹೇಳಿದ:

"ನಿಮ್ಮ ಮಾತು ನಮಗೆ, ನಮ್ಮ ನವಾಬಗಿರಿಗೇ ಅಪಮಾನ! ಈ ಮಾತಾಡಿದವರ ನಾಲಿಗೆ ಸೀಳಬಲ್ಲ ಶಕ್ತಿ ನಮಗಿದೆ."

"ನವಾಬರ ಶಕ್ತಿಯನ್ನು ನಾವು ಬಲ್ಲೆವು, ಇಲ್ಲವೆಂದವರನ್ನು ಕೊಲ್ಲುತ್ತೀರ. ಅಷ್ಟಕ್ಕಿಂತ ಹೆಚ್ಚೇನೂ ಆಗದು ತಮ್ಮಿಂದ."

"ಈಗಲೂ ಹೇಳುತ್ತೇನೆ ಕೇಳಿ. ಈ ಛಲ ಬೇಡ."

"ನಾವು ಅನುಗ್ರಹಕ್ಕೆ ಸೋಲದೆ, ಆಗ್ರಹಕ್ಕೆ ಮಾತ್ರ ಹೆದರುವ ಹೇಡಿಗಳು ಎಂದು ನವಾಬರು ಭಾವಿಸಿರುವಂತಿದೆ. ಸಂಗೀತದ ವಿಷಯದಲ್ಲಿ ನಮಗೆ ಎರಡು ನಾಲಗೆಯಿಲ್ಲ. ನವಾಬರು ತಮ್ಮ ಇಚ್ಛೆಯಿದ್ದಂತೆ ನಡೆಯಬಹುದು."

"ನಾಳೆ ಈ ವೇಳೆಯವರೆಗೂ ತಮಗೆ ಅವಕಾಶ ಕೊಟ್ಟಿದ್ದೇವೆ, ಮನಸ್ಸು ಬದಲಾಯಿಸಿದರೆ ಸರಿ. ಇಲ್ಲವಾದರೆ, ನಾಲಗೆ ಸೀಳಿಸಿ ಮತ್ತೆ ಹಾಡದಂತೆ ಮಾಡುತ್ತೇವೆ. ಇದು ನಮ್ಮ ಆಜ್ಞೆ, ಭಕ್ಷಿಗಳೇ, ಅದನ್ನು ಜಾರಿಮಾಡಲು ಸಿದ್ಧತೆ ಮಾಡಿ."



"ನಮಗೇನೂ ಅವಕಾಶ ಬೇಡ; ನವಾಬರು ತಮಗೆ ಬೇಕಾದರೆ ಅವಕಾಶ ತೆಗೆದುಕೊಳ್ಳಬಹುದು. ಆಯಿತು, ನಾವಿನ್ನು ಬರಬಹುದೇ?" ಎಂದು ಹೇಳಿ ವೆಂಕಟಸುಬ್ಬಯ್ಯ ಟೀಪುವಿನತ್ತ ಬೆನ್ನು ಮಾಡಿ ಹೊರಬಂದರು. ಆ ಮಾತು ಕೇಳಿ, ಆ ನಡತೆಯನ್ನು ಕಣ್ಣಾರೆ ನೋಡಿದ ಟೀಪು ಕೆಣಕಿದ ಸರ್ಪವಾದ.

"ಮಧ್ಯಾಹ್ನದ ವೇಳೆಗೆ ಈ ಸುದ್ದಿ ಕಿವಿಯಿಂದ ಕಿವಿಗೆ, ಬಾಯಿಂದ ಬಾಯಿಗೆ ದಾಟಿ ಊರಲ್ಲೆಲ್ಲಾ ಹರಡಿತು. ಜನ ಗುಂಪುಗುಂಪಾಗಿ ಬಂದು ವೆಂಕಟಸುಬ್ಬಯ್ಯನವರನ್ನು ಕಂಡುಹೋದರು. ಎಲ್ಲರಿಗೂ ಗಾಬರಿ, ಏನೋ ತಹತಹ. ಆದರೆ ಯಾರು ಏನು ಹೇಳಬೇಕು? ಹೀಗೇಕೆ ಮಾಡಿದಿರಿ? ಹೀಗಲ್ಲ ಹೀಗೆ ಮಾಡಬೇಕಾಗಿತ್ತು ಎಂದು ವೆಂಕಟಸುಬ್ಬಯ್ಯನವರಿಗೆ ಹೇಳುವ ಧೈರ್ಯ ಯಾರಿಗೂ ಇಲ್ಲ. ಅವರಲ್ಲಿ ಕೊಂಚ ಸಲಿಗೆಯಿಂದ ಮಾತನಾಡುತ್ತಿದ್ದವರನು ಅವರ ಹಾಡಿಗೆ ಮದ್ದಲೆ ನುಡಿಸುವ ದಾಸಪ್ಪ ಒಬ್ಬನೇ. ಆತ ಆ ಸುದ್ದಿ ಕೇಳಿ ಅಳುತ್ತಲೇ ಬಂದ.

"ಏನು ಯಜಮಾನ್ರೇ, ಹೀಗಾಗೋಯ್ತು?" ಎಂದ.

"ಏನೂ ಆಗಲಿಲ್ಲ, ದಾಸಪ್ಪ. ಇಷ್ಟು ದಿನ ಒಲಿದ ತಾಯಿ ಈಗ ನನ್ನ ಪರೀಕ್ಷೆ ಮಾಡಲಿಕ್ಕೆ ಬಂದಿದ್ದಾಳೆ."

"ತಾಯಿ ಪರೀಕ್ಷೆಮಾಡೋಕೂ ಈ ನವಾಬನ ಹುಚ್ಚು ದೌಲತ್ತಿಗೂ ಏನು ಸಂಬಂಧ?"

"ಯಾವ ಹೊತ್ತಿನಲ್ಲಿ ತಾಯಿ ಯಾವ ರೂಪದಲ್ಲಿ ಬರಬಹುದೆಂದು ಹೇಳಬಲ್ಲವರಾರು, ದಾಸಪ್ಪ? ತಾಯಿ ತಾಯಿಯಾಗಿ ಬಂದು ಆಡಿಸಬಹುದು– ಮಗುವಾಗಿ ಬಂದು ತೊಡೆಯಲ್ಲಿ ಆಡಬಹುದು. ಆಕೆಯೇ ಈಗ ನನ್ನ ಯೋಗ್ಯತೆ ಪರೀಕ್ಷಿಸೋಕೆ ನವಾಬನಾಗಿ ಬಂದಿದ್ದಾಳೆ."–ನಿಶ್ಚಿಂತೆಯ ಧ್ವನಿಯಲ್ಲಿ ಹೇಳಿದರು ವೆಂಕಟಸುಬ್ಬಯ್ಯ. ನವಾಬನ ಹೆಸರು ಕೇಳಿಯೇ ದಾಸಪ್ಪನಿಗೆ ಸಿಟ್ಟುಬಂದಿತು. ಸಿಟ್ಟಿನಲ್ಲೇ ಕಹಿಯಾಗಿ ಹೇಳಿದ:

""ಈ ನವಾಬನಿಗಷ್ಟು ಬೆಂಕಿ ಬೀಳ! ನಿಮ್ಮ ಮೇಲಾ ದೌಲತ್ತು ತೋರಿಸೋದು?"

"ಛೆ ! ಹಾಗನ್ನಬಾರದು. ಆತನದೇನೂ ತಪ್ಪಿಲ್ಲ, ದಾಸಪ್ಪ. ನನ್ನ ಬಾಯಲ್ಲಿ ಹಾಡು ಹೇಳಿಸುವ ತಾಯಿ, ಆತನ ಬಾಯಲ್ಲಿ ಈ ಮಾತಾಡಿಸಿದಳು."

"ಎಲ್ಲಿ ತಾಯಿ? ಬಿಡಿ ಯಜಮಾನರೇ, ಇದು ತುರುಕ ಬುದ್ಧಿ."

"ಛಿ ! ಆ ಮಾತಾಡಬಾರದು. ಜಾತಿಗೂ ಅದಕ್ಕೂ ಏನು ಸಂಬಂಧ? ಮನುಷ್ಯನ ಸಣ್ಣತನಕ್ಕೆ ಜಾತಿ ಏನು ಮಾಡುತ್ತದೆ? ಈಗ ನಮ್ಮ ಪರೀಕ್ಷೆಗೆ ಬಂದಿದೆ. ನಡೆದುಹೋಗಲಿ."

"ಹಾಗೆಂದೋರುಂಟಾ? ಇದು ಬೆಂಕಿ ಕೈಲಿ ಸರಸ. ಯಜಮಾನ್ರೇ, ನಾನು ಇಷ್ಟು ವರ್ಷ ನಿಮ್ಮ ಸೇವೆ ಮಾಡಿದೀನಿ. ಇವತ್ತು ಒಂದು ಮಾತು ಬೇಡ್ಕೋತೀನಿ– ಲಾಲಿಸಬೇಕು."

"ಏನು ಹೇಳು?"

"ಒಂದ್ಸಲ ಹೋಗಿ ಹಾಡ್ಬಂದ್ಬಿಡಿ. ಕೇಳಿ ಅವನ ಮನೆ ಹಾಳಾಗಲಿ!"

"ಅದು ಸಾಧ್ಯವಿಲ್ಲದ ಮಾತು, ದಾಸಪ್ಪ."

"ಎಂಥ ವಿಶ್ವಾಮಿತ್ರ ವಸಿಷ್ಠರ ತಪಸ್ಸೇ ಕೆಟ್ಟು ಹೋಗುತ್ತಂತೆ, ಒಂದೊಂದ್ಸಲ. ಅಂಥಾದ್ದರಲ್ಲಿ ನಮ್ಮ ನಿಮ್ಮದೇನು. ನನ್ನ ಮಾತು ಕೇಳಿ."

"ಅದಾಗದು. ನನ್ನ ನಾಲಗೆಯ ಭೀತಿಗೆ, ತಾಯಿಯನ್ನು ಸುಲ್ತಾನನ ಭೋಗದ ಹೆಣ್ಣಾಗಿ ಮಾಡಲೇ? ಅಂಥ ಮಗ ಇದ್ದರೆಷ್ಟು ಸತ್ತರೆಷ್ಟು? ತಾಯಿಯ ಮಾನ ಹೋದಮೇಲೆ ಉಳಿದದ್ದೇನು? ಈ ಘಟ ಉರುಳಿದರೂ ಸರಿಯೆ. ಅದು ಸಾಧ್ಯವಿಲ್ಲ."

"ದಾಸಪ್ಪ ಏನೇನೋ ಹೇಳಿದ; ಅತ್ತ, ಸಿಟ್ಟಾದ, ಬೈದ; ಏನೆಂದರೂ ವೆಂಕಟಸುಬ್ಬಯ್ಯನವರ ನಿರ್ಧಾರ ಕದಲಲಿಲ್ಲ. ಕಡೆಗೆ–

"ದಾಸಪ್ಪ, ಇವತ್ತು ಸಂಜೆಗೆ ಪೂಜೆಯಿದೆ. ಬಾ, ನಾನು ಸ್ನಾನ ಮಾಡಬೇಕು" ಎಂದು ಹೇಳಿ ಎದ್ದು ಹೋದರು, ವೆಂಕಟಸುಬ್ಬಯ್ಯ.

"ವೆಂಕಟಸುಬ್ಬಯ್ಯನವರ ಮನೆಯಲ್ಲಿ ಈಗ ಅನಂತಯ್ಯನ ಮಗ, ಸೊಸೆ ಇದ್ದರು. ಬೇರಾರೂ ನೆಂಟರು ಇರಲಿಲ್ಲ ಅವರಿಗೆ; ಅನಂತಯ್ಯನವರ ಮಗ ವೆಂಕಟೇಶನಿಗೆ 'ಊರೊಳಗೆ ಹೋಗಿ ಒಂಬತ್ತು ಗಂಟೆ ಹೊತ್ತಿಗೆ ಮಂಗಳಾರತಿಗೆ ಬರಬೇಕಂತೆ ಎಂದು ಹೇಳಿ ಬಾ' ಎಂದು, 'ಗಂಗಾ, ಪೂಜೆಗೆ ಸಿದ್ಧ ಮಾಡು' ಎಂದು ಆತನ ಹೆಂಡತಿಗೆ ಹೇಳಿ, ತಾವು ಸ್ನಾನಕ್ಕೆ ಇಳಿದರು, ವೆಂಕಟಸುಬ್ಬಯ್ಯ. ನೂರಾರು ಕೊಡ ನೀರು ಹೊಯಿದುಕೊಂಡರಂತೆ ಅವರು ಆ ದಿನ. ಸ್ನಾನ ಮಾಡಿದವರೇ ಬಂದು ಮಡಿಯುಟ್ಟು ದೇವರ ಮನೆ ಸೇರಿಬಿಟ್ಟರು. ಅಮ್ಮನವರಿಗೆ ಕುಂಕುಮಾರ್ಚನೆ, ಸಹಸ್ರನಾಮ, ಅಷ್ಟೋತ್ತರಪೂಜೆ ಎಲ್ಲವನ್ನೂ ಕ್ರಮವಾಗಿ ಮಾಡಿ, ತಮ್ಮೊಂದಿಗೆ ಮಡಿಯುಟ್ಟುಕೊಂಡಿದ್ದ ವೆಂಕಟೇಶನನ್ನು ಕರೆದು–'ನೀನೇ ಮಂಗಳಾರತಿ ಮಾಡಿ ಹೋಗುವವರಿಗೆ ಪ್ರಸಾದ ಕೊಟ್ಟು ಕಳಿಸಿಬಿಡು. ನನ್ನ



ಹಾಡು ಮುಗಿಯುವುದಕ್ಕಾಗಿ ಯಾರೂ ಕಾಯುವುದು ಬೇಡ' ಎಂದು ಹೇಳಿ ತಂಬೂರಿ ತೆಗೆದುಕೊಂಡು ಹಾಡಲಾರಂಭಿಸಿದರು. ನವಾಬರ ಸಿಟ್ಟಿನ ಸಮಾಚಾರ ತಿಳಿದ ನೂರಾರು ಜನ ಬಂದು ಅವರನ್ನು ಕಂಡು, ನಮಸ್ಕಾರ ಮಾಡಿ, ಪ್ರಸಾದ ತೆಗೆದುಕೊಂಡು ಹೋದರು. ಯಾರಿಗೂ ಅವರನ್ನು ಮಾತನಾಡಿಸುವ ಧೈರ್ಯವಾಗಲಿಲ್ಲ. ಏಕೋ ಆ ದಿನ ಅವರ ಮುಖ, ನೋಡಿದವರು ಹೆದರುವಷ್ಟು ರುದ್ರವಾಗಿತ್ತು. ಬಂದವರು ಬಂದರು, ಹೋದವರು ಹೋದರು. ಕಣ್ಣು ಮುಚ್ಚಿ ಹಾಡುತ್ತಾ ಕುಳಿತ ವೆಂಕಟಸುಬ್ಬಯ್ಯನವರಿಗೆ ಯಾವುದರ ಅರಿವೂ ಇರಲಿಲ್ಲ. ಮನುಷ್ಯರಿರಲಿ, ಹೊತ್ತಿನ ಅರಿವು ಕೂಡ ಮರೆತು ಹಾಡುತ್ತಿದ್ದರು ವೆಂಕಟಸುಬ್ಬಯ್ಯ.

"ಅತ್ತ, ವೆಂಕಟಸುಬ್ಬಯ್ಯನವರ ಮೇಲೆ ಅಬ್ಬರಿಸಿಹೋದ ನವಾಬನಿಗೂ ಮನಸ್ಸಿಗೆ ಸಮಾಧಾನವಿರಲಿಲಲ. ಅವನ ಹೃದಯಾಂತರಾಳದಲ್ಲೂ ಏನೋ ಅರ್ಥವಾಗದ ತಹತಹ. ಉಂಡ ಊಟವೂ ರುಚಿಯಾಗಲಿಲ್ಲ. ಮನಸ್ಸು ಸುಮ್ಮನೆ ಕಿಡಿಯಾಡುತ್ತಿತ್ತು. ಯಾರ ಕೈಯಲ್ಲೂ ಮಾತನಾಡುವುದು ಬೇಕಾಗಲಿಲ್ಲ. ನಿದ್ರೆಯ ನೆಪ ಮಾಡಿಕೊಂಡು, ಹಾಸಿಗೆಯಲ್ಲಿ ಮಲಗಿದ್ದರೂ ಕಣ್ಣಿಗೆ ನಿದ್ದೆ ಹತ್ತಲಿಲ್ಲ. ಕಾವಳದ ಇರುಳಿನ ತಂಗಾಳಿಯೂ ಅವನ ಮೈಗೆ ತಂಪಾಗಿರಲಿಲ್ಲ. ಹೃದಯದ ಉದ್ವೇಗದಿಂದ, ಕಣ್ಣು ಬೆಂಕಿ ಹೊತ್ತಿದಂತೆ ಉರಿಯುತ್ತಿತ್ತು.

"ಬೇಹುಗಾರನಿಂದ ಅವನಿಗೆ ವೆಂಕಟಸುಬ್ಬಯ್ಯನವರು ಆ ದಿನ, ಮರುದಿನ ನವಾಬ ಕೊಡುವ ಶಿಕ್ಷೆಗೆ ಸಿದ್ಧರಾಗಲು ಕೊನೆಯ ಪೂಜೆ ಮಾಡುತ್ತಿರುವುದೂ, ಅವರ ಹಾಡು ಕೇಳಲು ನೂರಾರು ಜನ ನೆರೆದಿರುವುದೂ ತಿಳಿದಿತ್ತು. ತನ್ನ ಕಟ್ಟಾಜ್ಞೆಗೆ ಹೆದರಿ ಕಂಗಾಲಾಗುವವರನ್ನು ಕಂಡಿದ್ದ–ಟೀಪು. ಹೀಗೆ ನಿರ್ಭಯವಾಗಿ, ನಿಶ್ಚಿಂತೆಯಿಂದ ಅವನು ಕೊಟ್ಟ ಶಿಕ್ಷೆಯನ್ನು ಅನುಭವಿಸಲು ಸಿದ್ಧವಾಗುವವರನ್ನು ಎಂದೂ ಕಂಡಿರಲಿಲ್ಲ. ಅದೂ ಅವನ ಮನಸ್ಸಿನಲ್ಲಿ, ಹೃದಯದಲ್ಲಿ ಗೊಂದಲವನ್ನುಂಟುಮಾಡಿತ್ತು. ಹೀಗೂ ಉಂಟೇ?

"ದುರ್ಗದ ಕೋಟೆಯನ್ನು ಗೆಲ್ಲಲೆಂದು ಏಳು ವರ್ಷಗಳ ಕಾಲ ಪಟ್ಟಣದ ಸೇನೆ ಬಿಟ್ಟೂಬಿಡದೆ, ದುರ್ಗದ ಮೇಲೆ ದಾಳಿ ಮಾಡುತ್ತಿದ್ದ ಕಾಲದಲ್ಲಿ ಟೀಪುವೂ ವೆಂಕಟಸುಬ್ಬಯ್ಯನವರ ಹಾಡುಗಾರಿಕೆಯ ಬಗ್ಗೆ ಸಾವಿರ ಕಥೆ ಕೇಳಿದ್ದ. ಅವರು ಹಾಡುವಾಗ ಶಿಲಾಮೂರ್ತಿ ಕಂಬನಿಗರೆಯುವುದು, ದೇವಿ ಅವರ ಹಾಡನ್ನು ಕೇಳುತ್ತ ಕೂತಿರುವುದು ಕಾಣುವುದು–ಹೀಗೇ ನೂರು ಕಥೆ. ಕಥೆಗಳನ್ನು ಅವನು ನಂಬದೆ ಹೋದರೂ, ಆ ಕಥೆಗಳನ್ನು ಕೇಳಿ ಕುತೂಹಲ ಕೆರಳಿ, ಆತನಿಗೂ ಅವರು ಹೇಗೆ ಹಾಡುತ್ತಾರೋ ಕೇಳಬೇಕು ಎನಿಸಿತ್ತು. ಹೆಂಡತಿಗೂ ಅವರ

ಕೈಲಿ ಜನಾನಾದಲ್ಲಿ ಹಾಡಿಸುವುದಾಗಿ ಮಾತು ಕೊಟ್ಟಿದ್ದ. ಆದರೆ ಈಗ....

"ಯಾರ ಬಯಕೆಯೂ ನೆರವೇರುವಂತಿಲ್ಲ. ತಾನಿಲ್ಲಿ ಅಸ್ಪಷ್ಟ ತೀವ್ರ ಯಾತನೆಯ ಶರಶಯ್ಯೆಯಲ್ಲಿ ಹೊರಳುತ್ತಿರುವಾಗ, ಅಲ್ಲಿ ವೆಂಕಟಸುಬ್ಬಯ್ಯ ಕಡೆಯ ಬಾರಿಗೆಂದು ಹಾಡುತ್ತಿದ್ದಾರೆ. ಆ ದಿನ ಮುಗಿದರೆ, ರಾತ್ರಿ ಕಳೆದು ಬೆಳಕು ಹರಿದರೆ, ಮತ್ತಾರಿಗೂ ಅದನ್ನು ಕೇಳವ ಯೋಗವಿಲ್ಲ.

"ನಿಜವಾಗಿಯೂ ಅಷ್ಟು ಅದ್ವಿತೀಯವಾದುದೇ ಅವರ ಸಂಗೀತ ಕೌಶಲ? ಜನರ ಮಾತನ್ನು ನಂಬಬಹುದೇ? ಜನರ ಮಾತಿನಂತೆ ಇರದೆ ಅದು ಬರೀ ಅತಿಶಯೋಕ್ತಿಯ ಮೂಟೆಯಾಗಿದ್ದರೆ...? ಹಾಗಲ್ಲದೆ ಒಂದು ವೇಳೆ ಅದು ನಿಜವೇ ಆಗಿದ್ದರೆ....? ಆದರೆ ಏನಾದರೂ ಈ ರಾತ್ರಿ ಕಳೆದು ಹೋದರೆ ಮತ್ತೆ ಯಾವ ಮಾತು ಪರೀಕ್ಷಿಸಲೂ ಅವಕಾಶವೆಲ್ಲಿ?

"ಆ ಭಾವನೆ ಬಂದಕೂಡಲೇ ಟೀಪುವಿನ ಹೃದಯದಲ್ಲಿ ಹೊಗೆಯಾಡುತ್ತಿದ್ದ ಕ್ರೋಧದ ಅಡಿಯಲ್ಲಿ ಹುದುಗಿದ ಬಯಕೆ, ಕುತೂಹಲ ತಟಕ್ಕನೆ ತಲೆದೋರಿತು. ನೂರಾರು ಜನ ಅವರ ಹಾಡನ್ನು ಕೇಳುತ್ತಿದ್ದಾರೆ. ತಾನೂ ಅದನ್ನು ಕೇಳಬಾರದೇಕೆ? ಆಗ ಜನರ ಮಾತು ಎಷ್ಟು ನಿಜವೋ, ಎಷ್ಟು ಸುಳ್ಳೋ ತಾನೇ ಗೊತ್ತಾಗುತ್ತದೆ...ಒಂದು ವೇಳೆ ಜನರ ಮಾತು ನಿಜವಾಗಿದ್ದರೆ....? ಮುಂದೆ....? ಆ ಭಾವನೆಯನ್ನು ಬಂದ ಹಾಗೇ ತುಳಿದುಬಿಟ್ಟ. ಆದರೆ ಕೇಳುವ ಕುತೂಹಲ ಮಾತ್ರ ಅಡಗಲಿಲ್ಲ.

"ಆ ವೇಳೆಗೆ ಕಹಳೆಬತೇರಿಯಿಂದ ನಡುರಾತ್ರಿಯ ಕಹಳೆ ಕೇಳಿಬಂತು. ಆ ಸದ್ದು ಕೇಳಿದ ಕೂಡಲೇ ಟೀಪು ಉಳಿದೆಲ್ಲ ಭಾವನೆಗಳನ್ನೂ ಬದಿಗೆ ಸರಿಸಿ, ಹೊತ್ತಾದರೆ ಸಂಗೀತ ಮುಗಿದುಹೋಗಬಹುದೆಂದು ಹೆದರಿ, ಕೂಡಲೆ ಎದ್ದು ಸೈನಿಕರ ನಿಲುವಂಗಿಯಲ್ಲಿ, ರಾಜಪೋಷಾಕನ್ನು ಮರೆಸಿ, ಅಂಗರಕ್ಷಕನೊಬ್ಬನನ್ನು ಜೊತೆಗಿಟ್ಟುಕೊಂಡು ವೇಗವಾಗಿ ನಗರದೊಳಗೆ ನಡೆದ.

"ಅವರಿಬ್ಬರೂ ವೆಂಕಟಸುಬ್ಬಯ್ಯನವರ ಮನೆಯಿದ್ದ ಅಗ್ರಹಾರದ ಬಳಿಗೆ ಬಂದಾಗಲೇ, ನಗರವನ್ನಾವರಿಸಿದ ನಡುರಾತ್ರಿಯ ನೀರವತೆಯಲ್ಲಿ ತಂಗಾಳಿಯ ಅಲೆಗಳ ಮೇಲೆ ತೇಲುತ್ತಿರುವ, ಅವರ ಹಾಡಿನ ಮಧುರ ಗಂಭೀರ ಧ್ವನಿ ಕೇಳಿಸಿತು. ಆ ಧ್ವನಿಯನ್ನು ಹಿಂಬಾಲಿಸಿ, ವೆಂಕಟಸುಬ್ಬಯ್ಯನವರ ಮನೆಯನ್ನು ಸೇರಿ, ಬೆಂಗಾವಲವನಿಗೆ ಸದ್ದುಮಾಡದಂತೆ ಹೇಳಿ, ಟೀಪು ಮನೆಯ ಮುಂಭಾಗದ ಕೈಸಾಲೆಯ ಕತ್ತಲು ಕವಿದ ಜಗಲಿಯ ಮೇಲೆ ಹತ್ತಿ ಸಂಗೀತವನ್ನು ಕೇಳುತ್ತಾ ನಿಂತ.



"ಪೂಜೆಗೆ ಬಂದ ಜನರೆಲ್ಲರೂ ಹೊರಟು ಹೋದುದರಿಂದ ಮನೆಯೊಳಗೆ ಏನೂ ಗದ್ದಲವಿರಲಿಲ್ಲ. ಎಲ್ಲೆಡೆಯೂ ಸದ್ದಡಗಿದ, ನಿಶೆಯ ರಂಗಸ್ಥಳದಲ್ಲಿ ತಂಬೂರಿಯ ಝೇಂಕಾರದೊಂದಿಗೆ ಮೇಳವಿಸಿದ ವೆಂಕಟಸುಬ್ಬಯ್ಯನವರ ಕಂಠನಾದ ದೇವನದಿಯಂತೆ ತೆರೆತೂಗಿ ಲಾಸ್ಯವಾಡುತ್ತಿತ್ತು. ಒಂದು ಗಳಿಗೆ ಹಾಗೇ ಕಿವಿಗೊಟ್ಟು ಕೇಳಿದ, ಟೀಪು. ಕೇಳುತ್ತಿದ್ದಹಾಗೆ ಆತನಿಗೆ ಏನೋ ಮೋಡಿ ಮಾಡಿದಂತಾಯಿತು. ಹಿಂದೆಂದೂ ಅವನು ಕೇಳಿ ಅನುಭವಿಸದ, ಅಪೂರ್ವ ರಸಮಾಧುರ್ಯ, ಧ್ವನಿಗರ್ಭದಿಂದ ಮಿಂಚಿನಂತೆ ಮೂಡಿ ಚೆಲ್ಲಾಡುತ್ತಾ ಬಂದು ಅವನ ಹೃದಯವನ್ನು ಸೆರೆಹಿಡಿದಿತ್ತು. ಮೈಮರೆತು ಗಾನವನ್ನಾಲಿಸಿದ ಟೀಪು.

"ಒಳಗೆ–ಮುಂಗಾರಿನ ಮೇಘದಂತೆ ಗಂಭೀರವಾಗಿ ಘೋಷಿಸಿ, ಪ್ರವಾಹದಂತೆ ಭೋರ್ಗರೆದು, ಜಲಪಾತದಂತೆ ಭೋರೆಂದು ಧುಮುಕಿ, ಮುಗಿಲಾಳದಲ್ಲಿ ರೆಕ್ಕೆ ಚಲಿಸದೆ ಹಾರುವ ಹದ್ದಿನಂತೆ ತೇಲುತ್ತಾ, ಹಾಡು ಹರಿಯುತ್ತಿತ್ತು. ತನ್ನ ಕರೆಗೆ ದೇವ ಓಗೊಡಲಿಲ್ಲವೆಂದು ಭಕ್ತನ ಹೃದಯವೇದನೆಯ ಹಾಡಾಗಿ ಹೊರಹೊಮ್ಮುತ್ತಿತ್ತು. ಭಕ್ತನ ವಿರಹವೇದನೆ, ನಿರಾಶೆ, ಎದೆಯಾಳದ ಪ್ರೇಮದಲ್ಲಿ ತೊಯ್ದು ಸ್ನಿಗ್ಧವಾದ ಕ್ರೋಧ, ಮತ್ತೆ ಮತ್ತೆ ಮಿಡುಕುವ, ಕುದಿಯುವ ಕಂಬನಿಯಾಗಿ, ತುಳುಕುವ ನೋವು, ವಜ್ರಸ್ತಂಭದಂತೆ ನಿಂತ ಭರವಸೆ, ಗಾಳಿಗೆ ಸಿಕ್ಕ ದೀಪದ ಕುಡಿಯಂತೆ ಹೊಯ್ದಾಡುವ ಆಸೆಯ ಚಂಚಲತೆ, ಆತುರ, ಕಾತುರ, ಬಯಕೆ, ಬೇಸರ–ದೇವದರ್ಶನಾತುರನಾದ ಭಕ್ತನ ಹೃದಯದಲ್ಲಿ ಮೂಡಿ ದಾಂಡುಗಿಯಿಡುವ ಅನಂತ ಭಾವನೆಗಳು ಹಾಡಿನಲ್ಲಿ ರೂಪತಾಳಿ, ಮಸುಕಾದ ಗಾಳಿಚಿತ್ರದಂತೆ ಕಣ್ಣಮುಂದೆ ಸಂಚರಿಸಿ ಹೋದವು–ಆ ಹಾಡನ್ನು ಕೇಳುವಾಗ ಟೀಪುವಿನ ಮನೋನೇತ್ರದ ಮುಂದೆ.

"ಅದನ್ನು ಕೇಳಕೇಳುತ್ತಾ, ಎಷ್ಟು ಬೇಡವೆಂದರೂ ಟೀಪುವಿನ ಕಣ್ಣೊ ಒದ್ದೆಯಾಯಿತು. ಅವನ ಕ್ರೋಧ, ಸೇಡು, ಕಠೋರತೆ ಎಲ್ಲವೂ ಮಾಂತ್ರಿಕ ಸ್ಪರ್ಶಕ್ಕೆ ಸಿಲುಕಿದಂತೆ ಮಾಯವಾಗಿ, ಕೋಮಲತೆ ಮೂಡಿತು. ಭಾವಲೋಕದ ಗಂಧರ್ವವಾಯಿತು ಅವನ ಮನಸ್ಸು. ಕಮಲದ ಕೊಳದ ಮೇಲೆ ಹರಿದುಬಂದ ಸುವಾಸಿತ ತಂಗಾಳಿ ಸೋಕಿದಂತೆ, ಅವನ ಮೈ ತಂಪಾಯಿತು. ಮಗುವಿನ ನಗುವಿನಂತೆ ಹೊಳೆವ ಬೆಳಕು ಸುತ್ತಲೂ ಹರಡಿದಂತೆ ತೋರಿತು. ಬೆಳದಿಂಗಳ ಬೆಳಕಿಗೆ ಕರಗುವ ಅಮೃತಶಿಲೆಯಾಯಿತು, ಟೀಪುವಿನ ಹೃದಯ. ಒಳಗೆ ಹೋಗಿ, ಹಾಡುತ್ತಿರುವವರ ಕಾಲು ಹಿಡಿದು, ತಪ್ಪಯಿತೆಂದು ಬೇಡ ಬೇಕೆನಿಸಿತು. ಆದರೆ

ನಡುವೆ ಹೋಗಲು ಮನಸ್ಸಾಗದೆ, ಅದು ಮುಗಿಯಲಿ ಎಂದುಕೊಂಡು, ಸಂಗೀತವನ್ನು ಕೇಳುತ್ತಾ, ಮೈಮರೆತು ನಿಂತಿದ್ದ. ಬೆಳಗಿನ ಜಾವದ ಕೋಳಿ ಕೂಗಿದುದೂ ಅವನಿಗೆ ಕೇಳಿಸಲಿಲ್ಲ; ನಿಂತೇ ಇದ್ದ, ಹಾಗೇ ಕನಸಿನಂತೆ ಕರಗಿಹೋಯಿತು ಹಾಡು. ಅದರದೂ ಎಚ್ಚರವಿರಲಿಲ್ಲ ಆತನಿಗೆ. ಹಾಗೇ ನಿಂತಿದಾನೆ....

"ಇದ್ದಕ್ಕಿದ್ದಂತೆಯೇ ಮನೆಯೊಳಗಿನಿಂದ ಹೆಣ್ಣೊಬ್ಬಳು ಚೀಟಾರನೆ ಚೀರಿದ ಸದ್ದು ಕೇಳಿ ಟೀಪು ತತ್ತರಿಸಿಹೋದ! ಏನು ಮಾಡುತ್ತಿರುವೆನೆಂದು ತಿಳಿಯದೆಯೇ ಮುಂದೆ ಹಾಕಿದ ಬಾಗಿಲನ್ನು ಕಾಲಲ್ಲಿ ಒದ್ದು, ಮುರಿದು ಒಳಗೆ ಓಡಿದ. ಮನೆಯನ್ನು ಪ್ರವೇಶಿಸಿ, ಬೆಳಕು ಬರುತ್ತಿದ್ದ ಬಾಗಿಲ ಕಡೆ ಓಡಿ, ಬಾಗಿಲಲ್ಲಿ ನಿಂತು ನೋಡಿದ–

"ನೋಡಿದ–ಅದು ದೇವರ ಮನೆ. ಹೂವಿನ ಪರಿಮಳ, ಗಂಧದ ಕಡ್ಡಿಯ ಮಧುರಧೂಮ ಕವಿದಿದೆ, ಇರುಳು ಹಗಲಾಗುವಷ್ಟು ಬೆಳಕುಬಿದ್ದಿದೆ. ಹೊತ್ತಿಸಿದ ನೂರಾರು ದೀವಿಗೆಗಳಿಂದ ಕರಿಯ ಮರದ ಮಂಟಪದಲ್ಲಿ ಅಳೆತ್ತರದ ನಂದಾದೀವಿಗೆಗಳ ನಡುವೆ ಮಂಡಿಸಿದ ದೊಡ್ಡದಾದ ದೇವಿಯ ಸ್ವರ್ಣಮೂರ್ತಿ ಬೆಳಕಿನುಂಡೆಯಂತೆ ಹೊಳೆಯುತ್ತಿದೆ. ಅದರ ಇದಿರು ವೆಂಕಟಸುಬ್ಬಯ್ಯ ಪ್ರಜ್ಞೆ ತಪ್ಪಿ ಮಲಗಿದ್ದಾರೆ. ಅವರ ಬಾಯಿಂದ ರಕ್ತ ಚಿಲುಮೆಯಾಗಿ ಚಿಮ್ಮುತ್ತಿದೆ. ಅವರಿಗೆ ಅಷ್ಟು ದೂರದಲ್ಲಿ ಒಂದು ಕಡೆ ಅವರ ಸೊಸೆ ಗಂಗಾ ಮೂರ್ಛೆಬಿದ್ದಿದ್ದಾಳೆ; ಇನ್ನೊಂದು ಕಡೆ ತಂಬೂರಿ ಹಿಡಿದ ವೆಂಕಟೇಶ ಗರಹೊಡೆದವನಂತೆ ಬಿಟ್ಟ ಕಣ್ಣು ಕದಲಿಸದೆ ಕೂತಿದಾನೆ. ರಕ್ತಸಿಕ್ತವಾದ ಕಠಾರಿ ಇನ್ನೂ ಹಾಗೇ ಇದೆ. ವೆಂಕಟಸುಬ್ಬಯ್ಯನವರ ಕೈಯಲ್ಲಿ. ದೇವಿಯ ಇದುರಿನಲ್ಲಿ ಥಳಥಳಿಸುವ ದೊಡ್ಡ ಬಂಗಾರದ ತಟ್ಟೆಯಲ್ಲಿ ರಕ್ತದ ಮುದ್ದೆಯಂತೆ ಬಿದ್ದಿದೆ–ಕತ್ತರಿಸಿದ ನಾಲಗೆ!

"ಆ ದೃಶ್ಯವನ್ನು ನೋಡಿ, ನೂರಾರು ಯುದ್ಧ, ರಕ್ತಪಾತವನ್ನು ನೋಡಿದ ಟೀಪುವೂ ಹೆದರಿ ಗಡಗಡ ನಡುಗಿದ. ಒಂದು ಗಳಿಗೆ ಏನು ಮಾಡಬೇಕೆಂದು ಆತನಿಗೂ ತೋಚಲಿಲ್ಲ. ಪ್ರಜ್ಞೆತಪ್ಪಿ ಮಲಗಿದ ವೆಂಕಟಸುಬ್ಬಯ್ಯನವರನ್ನು ಉಪಚರಿಸಬೇಕೆಂದರೂ, ದೇವರ ಮನೆಯಲ್ಲಿ ಕಾಲಿಡಲು ಧೈರ್ಯ ಬರಲಿಲ್ಲ. ಆಮೇಲೆ ಮೈಕೊಡವಿಕೊಂಡು, ಹಿಂದೆ ಬಂದ ಬೆಂಗಾವಲ ಭಟನನ್ನು, ತನ್ನ ಖಾಸಾ ಹಕೀಮರನ್ನು ಕೂಡಲೇ ಕರೆತರುವಂತೆ ಓಡಿಸಿ, ಸದ್ದಡಗಿದ ಮನೆಯಲ್ಲಿ ಎಳೆಯ ಮಗುವಿನಂತೆ ಬಿಕ್ಕಿಬಿಕ್ಕಿ ಅಳುತ್ತಾ ಕುಳಿತ.

"ಆಗ ಹಗಲು ಹರಿವ ಹೊತ್ತು. ಒಂದು ಗಳಿಗೆಯಲ್ಲಿ ಹೇಗೋ ಈ



ಸುದ್ದಿ ಊರಿನಲ್ಲೆಲ್ಲಾ ಹರಡಿ, ಆ ಕೌತುಕವನ್ನು ನೋಡಲು ಸಾವಿರಾರು ಜನ ಸೇರಿದರು, ವೆಂಕಟಸುಬ್ಬಯ್ಯನವರ ಮನೆಯ ಮುಂದೆ. ವೈದ್ಯರು ಬಂದು ರಕ್ತ ಹರಿವ ವೆಂಕಟಸುಬ್ಬಯ್ಯನವರ ಬಾಯಿಗೆ ಪೂಜೆಯ ಕುಂಕುಮ ಒತ್ತಿ, ರಕ್ತ ನಿಲ್ಲಿಸಿ, ದೇವರ ಮನೆಯಿಂದ ಹೊರಗೆ ತಂದರು. ಶೈತ್ಯೋಪಚಾರ ನಡೆದ ಎಷ್ಟೋ ಹೊತ್ತಿನ ಮೇಲೆ ಅವರಿಗೆ ಎಚ್ಚರ ಬಂದು, ಕಣ್ಣುಬಿಟ್ಟರು. ವೆಂಕಟಸುಬ್ಬಯ್ಯನವರು ಕಣ್ಣುಬಿಟ್ಟಿದ್ದನ್ನು ಕಂಡ ಟೀಪುವಿಗೆ ಹೋದ ಜೀವ ಮರಳಿದಂತಾಯಿತು. ಕೂಡಲೇ ತಾನು ನವಾಬನೆಂಬುದನ್ನೂ ಮರೆತು ಅವರ ಕಾಲಮೇಲೆ ಬಿದ್ದು, ತಂದೆಯನ್ನು ಕಳೆದುಕೊಂಡ ಮಗುವಿನಂತೆ ರೋದಿಸಿದ. ಮಾತಾಡಲಾಗದ ವೆಂಕಟಸುಬ್ಬಯ್ಯ, ಅವನ ತಲೆಯನ್ನು ನೇವರಿಸಿ, ತಮ್ಮ ಪ್ರೀತಿಯನ್ನು ಸೂಚಿಸಿದರು.

"ಹೀಗೇಕೆ ಮಾಡಿದಿರಿ? ಈ ಪಾಪಿಯ ಮನಸ್ಸು ಬದಲಾಯಿಸಲು ಅವಕಾಶ ಕೊಡಬಾರದಾಗಿತ್ತೆ, ದಾದಾ?" ಎಂದು ಅಳುತ್ತಾ ಕೇಳಿದ ಟೀಪು. ಆ ಮಾತಿಗೆ ಉತ್ತರ ಕೊಡಲು ಬಾಯಿಲ್ಲದ ವೆಂಕಟಸುಬ್ಬಯ್ಯನವರು ಹಲಗೆ ಬಳಪ ತರಿಸಿಕೊಂಡು ಬರೆದರು:

"ದುಃಖಿಸಬೇಡ. ದೇವಿಯ ಇಚ್ಛೆ ನೆರವೇರಿತು."

"ಹಗಲಾಗುವವರೆಗೂ ಕಾಯಲಿಲ್ಲವೇಕೆ, ದಾದಾ? ಈ ನರಾಧಮನ ಬೆದರಿಕೆಗೆ ಅಷ್ಟು ಹೆದರಿದಿರಾ?"

"ನಿನ್ನದಲ್ಲ, ನನ್ನದೇ ನನಗೆ ಹೆದರಿಕೆಯಾಯಿತು. ಅದಕ್ಕಾಗಿ ಹೀಗೆ ಮಾಡಿದೆ."

"ಏಕೆ?"

"ಹಗಲಾದರೆ ನೀನು ಮನಸ್ಸು ಬದಲಾಯಿಸಬಹುದು, ಬಿಡಬಹುದು. ನಿನ್ನ ಭಯವಲ್ಲ ನನಗೆ. ಆದರೆ ನಾನೇ ಜೀವಭಯದಿಂದ ಸೋತು ನನ್ನಿಂದ, ನನ್ನ ದುರ್ಬಲಚಿತ್ತದಿಂದಾಗಿ ತಾಯಿಗೆ ಅಪಮಾನವಾದರೆ–ಅದಕ್ಕೇ ನನ್ನ ಮನಸ್ಸು ಕದಲಲು ಅವಕಾಶ ಕೊಡಲಿಲ್ಲ."

"ಅವರು ಬರೆದುದನ್ನು ಓದಿ ಟೀಪು ಮೂಕನಾದ. ನೋಡಿದ ಬಳಿಕ ವೆಂಕಟಸುಬ್ಬಯ್ಯನವರ ವಿಷಯದಲ್ಲಿ ಅವನಿಗಿದ್ದ ಗೌರವ, ಇಮ್ಮಡಿ ಮುಮ್ಮಡಿಯಾಗಿ ಹೆಚ್ಚಿತು. ಗೌರವ ಹೆಚ್ಚಿದಂತೆಯೇ, ಅಪೂರ್ವ ವಸ್ತುವೊಂದರ ನಾಶಕ್ಕೆ ತಾನು, ತನ್ನ ಹಟ ಕಾರಣವಾಯಿತಲ್ಲ ಎಂಬ ದುಃಖವೂ ಹೆಚ್ಚಿತು. ಒಬ್ಬನ ಹಟಕ್ಕಾಗಿ ಇಡೀ ಜಗತ್ತಿಗೆ ವೆಂಕಟಸುಬ್ಬಯ್ಯನವರ ಹಾಡುಗಾರಿಕೆಯನ್ನು ಕೇಳಿ ಹರ್ಷಪಡುವ ಅವಕಾಶ ತಪ್ಪಿತಲ್ಲಾ ಎಂಬ ಭಾವನೆ ಮೂಡಿ, ಆ ಲೋಕಕ್ಕೆ ತನ್ನ ಮುಖ ಹೇಗೆ

ತೋರಿಸುವುದು ಎನಿಸಿತು. ಆ ಮಾತನ್ನೇ ಕೇಳಿದ:

"ನಿಮ್ಮ ಈ ಸ್ಥಿತಿಗೆ ಕಾರಣನಾಗಿ ನಾನು ಜಗತ್ತಿನಲ್ಲಿ ಹೇಗೆ ಮುಖ ತೋರಿಸಲಿ, ದಾದಾ?"

"ಇದಕ್ಕಾಗಿ ನೀನು ಕೊರಗಬೇಡ. ಇಂದಾದುದಕ್ಕೆ ನೀನು ನಿಮಿತ್ತ ಮಾತ್ರ. ತಾಯಿಗೆ ನಾನು ಹಾಡುವುದು ಸಾಕು ಎನಿಸಿತು. ನನಗೆ ನಿನಗೆ ಇಬ್ಬರಿಗೂ ಹೀಗೆ ಪ್ರೇರೇಪಣೆ ಮಾಡಿದಳು. ಈ ಲೋಕದಲ್ಲಿ ಹುಟ್ಟಿದುದೆಲ್ಲವೂ ನಶ್ವರವಾದುದು; ಯಾವುದೂ ಶಾಶ್ವತವಲ್ಲ. ಮಾನವ ಜೀವನ ಹೇಗೆ ಪರಿಮಿತವೋ, ಕಲೆಯೂ ಹಾಗೇ ಪರಿಮಿತ. ಅದೂ ಒಂದು ದಿನ ಕೊನೆಗಾಣಬೇಕು. ನನ್ನದು ಹೀಗೆ ಕೊನೆಗಾಣಬೇಕೆಂದು ದೈವೇಚ್ಛೆ ಇತ್ತು. ಅದಕ್ಕೆ ನೀನು ನಿಮಿತ್ತವಾಗಿ ಒದಗಿಬಂದೆ. ನನಗಾದುದಕ್ಕೆ ನನಗೂ ದುಃಖವಿಲ್ಲ; ನೀನೂ ದುಃಖಪಡಬೇಡ."

"ವೆಂಕಟಸುಬ್ಬಯ್ಯನವರು ಬರೆದ ಮಾತನ್ನು ಓದಿ ಟೀಪು ದಿಙ್ಮೂಢನಾದ. ಬೇರೆಯವರು ತನ್ನ ಮೇಲೆ ಸಿಟ್ಟಾಗಬಹುದಾದ, ಹಗೆ ತೀರಿಸಲೆತ್ನಿಸಬಹುದಾದ ಸಂದರ್ಭದಲ್ಲಿ ಇವರ ಬಾಯಿಂದ ಈ ಮಾತು ! ಸರ್ವನಾಶವಾದ ಸಮಯದಲ್ಲೂ ಈ ಶಾಂತಿ! ಎಲ್ಲವನ್ನೂ ಪ್ರಸಾದವೆಂದು ಸ್ವೀಕರಿಸುವ, ವಿನಾಶವನ್ನು ಉಡುಗೊರೆಯಂತೆ ಸ್ವೀಕರಿಸುವ ಪ್ರಚಂಡ ಮನೋಬಲವನ್ನಿತ್ತ ಭಕ್ತಿಯ ಇದಿರು ಟೀಪು ಭಕ್ತನಾಗಿ ತಲೆಬಾಗಿದ; ಅವರ ಕಾಲು ಹಿಡಿದು ಬೇಡಿದ:

"ದಾದಾ–ಎಷ್ಟೋ ಜನ ನಿಮ್ಮನ್ನೇ ದೇವರೆಂದು ಭಾವಿಸಿ, ಪೂಜಿಸಿ, ಕೃತಾರ್ಥರಾದರು. ನನ್ನಿಂದ ಏನಾಗಬೇಕೋ, ಅಪ್ಪಣೆ ಮಾಡಿ, ದಾದಾ? ಇಂದು ನೀವು ಏನು ಕೋರಿದರೂ ಅದು ನಿಮ್ಮದು."

"ತಾಯಿ ಕೊಡಲಾರದುದನ್ನು ನೀನೇನು ಕೊಡಬಲ್ಲೆ? ಕೊಡಬೇಕು ಎನ್ನುವ ನಿನ್ನ ಬಯಕೆಯೇ ಸಾಕು."

"ಹಾಗೆನ್ನಬೇಡಿ, ದಾದ. ನೀನು ಕೊಡಬಹುದಾದಂತಹುದು ಏನೂ ಇಲ್ಲವೆಂದು ನನ್ನನ್ನು ಕೊಲ್ಲಬೇಡಿ. ಏನೂ ಬೇಡವಾದರೆ, ಒಂದು ಹುಲ್ಲು ಕಡ್ಡಿಯನ್ನಾದರೂ ನನ್ನಿಂದ ತೆಗೆದುಕೊಂಡು, ಹರಸಿ ಹೋಗಿ, ದಾದಾ. ಅಷ್ಟುಮಟ್ಟಿಗಾದರೂ ನನ್ನ ಬಾಳು ಕೃತಾರ್ಥವಾಗಲಿ."

"ಏನನ್ನಾದರೂ ನೀಡಿ ಕೃತಾರ್ಥನಾಗಬೇಕೆನ್ನುವ ಟೀಪುವಿನ ಕಾತರತೆಯನ್ನು ಕಂಡು ವೆಂಕಟಸುಬ್ಬಯ್ಯನವರ ಕಣ್ಣಲ್ಲಿ ನೀರು ತುಂಬಿತು.

"ನೀನಿಷ್ಟು ಹೇಳುವಾಗ ನಾನು ಹೇಗೆ ಬೇಡ ಎನ್ನಲಿ. ಆದರೆ ನನಗಾಗಿ ನಾನು ಕೇಳುವುದು ಏನೂ ಇಲ್ಲ. ಆದರೂ ಕೊಡುವ ಇಚ್ಛೆಯಿದ್ದರೆ, ನಾನು



ಇರುವಷ್ಟು ದಿನ ತಾಯಿಯ ಪೂಜೆಗೆ ಅನುಕೂಲ ಮಾಡಿಕೊಡು"

–ಎಂದರು ವೆಂಕಟಸುಬ್ಬಯ್ಯ.

"ಆ ಬಳಿಕ ಟೀಪು ವೆಂಟಕಸುಬ್ಬಯ್ಯನವರ ಅಪೇಕ್ಷೆಯಂತೆ ಅವರನ್ನು, ಅವರ ತಾಯಿಯ ಊರಾದ ತೊರೆಯೂರಿಗೆ, ಸಕಲ ಮಾನ, ಮರ್ಯಾದೆಯೊಡನೆ, ರಾಜವೈಭವದೊಡನೆ ಕಳಿಸಿಕೊಟ್ಟ. ಅವರಿಗೆಂದು ಬೇಕಾದಷ್ಟು ಜಮೀನು, ಮಾನ್ಯ ಕೊಟ್ಟ. ಅವರ ದೇವರಿಗೆ ಸಕಲ ಆಭರಣಗಳನ್ನೂ ಕೊಟ್ಟು ಪ್ರತಿವರ್ಷವೂ ನವರಾತ್ರಿಯಲ್ಲಿ, ದುರ್ಗಾಷ್ಟಮಿಯ ದಿನ, ವಿಶೇಷ ಪೂಜೆ ಮಾಡಲು ಅದಕ್ಕಾಗಿಯೇ ಭೂಮಿ ಕೊಟ್ಟ. ದುರ್ಗ ಟೀಪುವಿನ ವಶದಲ್ಲಿದ್ದಷ್ಟು ದಿನವೂ ದುರ್ಗಾಷ್ಟಮಿಯ ದಿನ ಅಮ್ಮನವರ ಪೂಜೆಗೆಂದು, ದುರ್ಗದಿಂದ ರಾಜಮರ್ಯಾದೆಗಳೆಲ್ಲಾ ಬರುತ್ತಿದ್ದವು.

"ದುರ್ಗದಿಂದ ಬಂದ ವೆಂಕಟಸುಬ್ಬಯ್ಯನವರು ತೊರೆಯೂರಿನಲ್ಲಿದ್ದ ಅನಂತಯ್ಯನ ಮನೆಯಲ್ಲಿ ನೆಲೆಸಿದರು. ಅಲ್ಲಿ ಟೀಪು ಕೊಟ್ಟ ಹಣದಿಂದ ಅಮ್ಮನವರ ದೇವಾಲಯ ಕಟ್ಟಿಸಿ, ಅಲ್ಲಿಯ ಪೂಜೆ ಅಖಂಡವಾಗಿ ನಡೆಯಲೆಂದು ಬೇಕಾದಷ್ಟು ಆಸ್ತಿ ಬಿಟ್ಟರು. ಗುಡಿಯಲ್ಲೇ ಮೂರು ಹೊತ್ತೂ ಇರುತ್ತಿದ್ದರು. ಅವರು ಇದ್ದಷ್ಟು ದಿನ ಗುಡಿಯೇ ಅವರಿಗೆ ಮನೆಯಾಗಿತ್ತು.

"ಕಡೆಗೊಂದು ದಿನ ಹಗಲು ಹರಿಯುತ್ತಿರುವಾಗ, ಅಮ್ಮನವರ ಗುಡಿಯಲ್ಲೇ ಅವರ ಪ್ರಾಣಪಕ್ಷಿ ಹಾರಿಹೋಯಿತು. ಆಗ, ಅವರ ಬಳಿಯಲ್ಲಿದ್ದವರು ನೋಡಿದರಂತೆ....ಅವರ ಮೈಯೊಳಗಿಂದ ಬೆಳಕೊಂದು ಹುಟ್ಟಿ ಹಾಗೇ ಚಿಮ್ಮಿ ಅಮ್ಮನವರ ಎದೆಯ ವಜ್ರದ ಪದಕದಲ್ಲಿ ಸೇರಿಹೋಯಿತಂತೆ!"

## ೧೬

ಗೋವಿಂದಯ್ಯ ಹೇಳುತ್ತಿದ್ದ ಭವ್ಯಕಥೆ ನಿಟ್ಟುಸಿರಿನೊಂದಿಗೆ ಮುಕ್ತಾಯ ವಾಯಿತು. ನಾನೂ ಅಷ್ಟುಹೊತ್ತು ಮಾತನಾಡಲಾಗದೆ ಸ್ವಲ್ಪಹೊತ್ತು ಮೌನವಾಗಿ ಕುಳಿತಿದ್ದು ಹೇಳಿದೆ: "ಅವರು ನಾಲಿಗೆ ಕತ್ತರಿಸಿಕೊಂಡ ಬಳಿಕ ಟೀಪು, ಏನು ಸಂಪತ್ತು ಕೊಟ್ಟರೆ ತಾನೇ ಏನಾದಹಾಗಾಯಿತು. ಅವರ ಪಕ್ವಜೀವನದ ಪರಿಶುದ್ಧ ಸಂಗೀತ ಕೇಳುವ ಭಾಗ್ಯ ಲೋಕಕ್ಕೆ ತಪ್ಪಿಹೋಯಿತು. ಎಂಥ ಘೋರ ಅನ್ಯಾಯ ಅದು!"

"ಹಾಡೆಲ್ಲಿ ಬಿಟ್ಟಿದ್ದರು? ಬಾಯಿ ಹೋದರೂ ಮೂಗಿನಲ್ಲೇ ಹಾಡುತ್ತಿದ್ದರಂತೆ.

ಅವರ ಶ್ವಾಸೋಚ್ಛ್ವಾಸವೂ ಸಂಗೀತದ ಹಾಗೇ ಇರುತ್ತಿತ್ತಂತೆ.”

ಆ ಮಾತು ಕೇಳಿ ನಾನು ಚಕಿತನಾದೆ. ರಾಜಹಂಸಪಕ್ಷಿ ಸಾಯುವಾಗ ಒಂಟಿಯಾಗಿ ಕೊಳದಲ್ಲಿ ತೇಲುತ್ತಾ, ನಿರ್ಜನಪ್ರದೇಶವನ್ನು ಸೇರಿ ಹಾಡು ಹಾಡುತ್ತಲೇ ಕೊನೆಯುಸಿರೆಳೆಯುತ್ತದೆಯಂತೆ. ಹಾಗೆಂದು ಓದಿದ್ದೆ ನಾನು, ಕಾವ್ಯವೊಂದರಲ್ಲಿ. ಈ ಜೀವಹಂಸದ ಬಾಳ ಮುಕ್ತಾಯವೂ ಅಂತೇ–ಹಾಡಿನಲ್ಲಿ ಹುಟ್ಟಿ, ಹಾಡಿನಲ್ಲಿ ಬೆಳೆದು, ಹಾಡಿನಲ್ಲೇ ಕರಗಿಹೋಯಿತು. ಓ! ಎಂಥ ಮುಕ್ತಾಯ !

ಆ ಕಥೆ ಹೇಳಿದುದಕ್ಕಾಗಿ ಗೋವಿಂದಯ್ಯನನ್ನು ವಂದಿಸಿ, ಶ್ರೀಕಂಠ ಶಾಸ್ತ್ರಿಗಳ ಮನೆಗೆ ಹೋಗಿ ಸ್ನಾನ ಮುಗಿಸಿ, ಅಮ್ಮನವರ ದರ್ಶನಕ್ಕಾಗಿ ದೇವಾಲಯಕ್ಕೆ ಹೋದೆ. ದೇವಾಲಯ ಅಷ್ಟು ದೊಡ್ಡದೇನೂ ಅಲ್ಲ. ನಾನು ನೋಡಿದಾಗ ಅದರಲ್ಲಿ ಕಣ್ಣು ಸೆಳೆಯುವಂಥ ಕಲಾಸೌಂದರ್ಯವೂ ಕಾಣಲಿಲ್ಲ. ಆದರೆ ಒಂದು ಕಾಲಕ್ಕೆ ಬಹಳ ಮುದ್ದಾಗಿರಬೇಕು ದೇವಾಲಯ.

ದೇವಾಲಯದ ಸುತ್ತಲೂ ಆಳು ಎತ್ತರದ ಕಲ್ಲಿನ ಪೌಳಿ ಇತ್ತು. ಪೌಳಿಯ ಒಳಗೆ, ಮಧ್ಯದಲ್ಲಿ ಅಮ್ಮನವರ ದೇವಾಲಯ; ಅದರ ಪಕ್ಕದಲ್ಲೇ ಈಶ್ವರಾಲಯ. ದೇವಾಲಯದ ಸುತ್ತಲೂ ಪ್ರದಕ್ಷಿಣೆ ಮಾಡಲು ಅನುಕೂಲವಾಗುವಂತೆ ನೆಲಕ್ಕೆ ಕಲ್ಲುತುಂಡುಗಳನ್ನು ಜೋಡಿಸಿದ್ದರು. ದೇವಾಲಯದ ಪ್ರಾಕಾರದೊಳಗೆ ಅಲ್ಲಲ್ಲಿ ಪಾರಿಜಾತ, ಕಣಗಿಲು, ದೇವಗಣಗಿಲೆ, ಬಿಲ್ವವೃಕ್ಷಗಳು ಬೆಳೆದಿದ್ದವು. ಹತ್ತಿರದಲ್ಲೇ ಒಂದು ಸಣ್ಣ ಪುಷ್ಕರಿಣಿ. ದೇವಾಲಯದ ಮೇಲುಭಾಗದಲ್ಲಿ ಗೋಪುರದ ಸುತ್ತಲೂ ಗಾರೆಯ ಗೂಡುಗಳನ್ನು ಕಟ್ಟಿ, ಗಾರೆಯಲ್ಲೇ, ದೇವಿಯ ನಾನಾ ರೂಪಗಳ, ಲೀಲೆಗಳ ವಿಗ್ರಹಗಳನ್ನು ಕೆತ್ತಿದ್ದರು. ಗೋಪುರವೂ ಗಾರೆಯದೇ. ಅದರಲ್ಲೂ ನಾನಾ ದೇವತಾವಿಗ್ರಹಗಳನ್ನು ಬಿಡಿಸಿದ್ದರು. ದೇವಾಲಯದ ಒಳಗೆ ಮೂರು ಗರ್ಭಗುಡಿಗಳಿದ್ದವು. ಇಬ್ಬದಿಯಲ್ಲಿ ಗಾಯತ್ರಿ, ದುರ್ಗಾದೇವಿಯವರ ಮಂದಿರ, ಮಧ್ಯದಲ್ಲಿ ರಾಜರಾಜೇಶ್ವರಿಯ ಆಲಯ.

ದೇವಾಲಯದ ಕಟ್ಟಡದಲ್ಲಿ ಕಾಣದ ಅಪೂರ್ವ ಕಲಾಕೌಶಲ್ಯ ದೇವಿಯರ ವಿಗ್ರಹಗಳಲ್ಲಿ ಕಾಣುತ್ತಿತ್ತು. ನೋಡಿದರೆ ಕಣ್ಣು ತುಂಬುವ ಪುರುಷ ಪ್ರಮಾಣದ ವಿಗ್ರಹಗಳು. ರಾಜರಾಜೇಶ್ವರಿ ವಿಗ್ರಹವಂತೂ ಎಂಥವರಲ್ಲೂ ಭಕ್ತಿಯನ್ನು ಮೂಡಿಸುವಂತಿತ್ತು.

ಅಮ್ಮನವರ ಪೀಠ ಶ್ರೀಚಕ್ರಾಕಾರದಲ್ಲಿದೆ. ಅಮ್ಮನವರ ವಿಗ್ರಹವೂ ಅಷ್ಟೆ–ಧ್ಯಾನಶ್ಲೋಕಕ್ಕೇ ಅನುಸಾರವಾಗಿದೆ. ಅಮ್ಮನವರನ್ನು ಕಣ್ಣು ತುಂಬ ನೋಡಿದರೆ–



ಬಾಲಾರ್ಕಾಯುತ ತೇಜಸಾಂ ತ್ರಿಣಯನಾಂ ರಕ್ತಾಂಬರೋಲ್ಲಾಸಿನೀಂ
ನಾನಾಲಂಕೃತ ರಾಜಮಾನವಪುಷ್ಪಂ ಬಾಲೋಡುರಾಟ್ ಶೇಖರಾಂ ।
ಹಸ್ತೈರಿಕ್ಷುಧನಸ್ಸೃಣೀಂ ಸುಮಶರಂ ಪಾಶಂ ಮುದ್ರಾಬಿಭ್ರತೀಂ
ಶ್ರೀಚಕ್ರಸ್ಥಿತ ಸುಂದರೀಂ ತ್ರಿಜಗತಾಮಾಧಾರಭೂತಾಂ ಸ್ಮರೇತ್ ॥

–ಧ್ಯಾನಶ್ಲೋಕ ತಾನೇತಾನಾಗಿ ನೆನಪಾಗುತ್ತದೆ. ವೆಂಕಟಸುಬ್ಬಯ್ಯನವರೇ ಎದುರಿಗೆ ನಿಂತು ಮಾಡಿಸಿದುದಂತೆ ಈ ವಿಗ್ರಹ. “ನಾನೂ ಎಷ್ಟೋ ಕಡೆ ಅಮ್ಮನವರ ವಿಗ್ರಹಗಳನ್ನು ನೋಡಿದ್ದೇನೆ. ಆದರೆ ಇಷ್ಟು ಸುಂದರವಾದುದನ್ನು ನಾನೆಲ್ಲೂ ನೋಡಲಿಲ್ಲ”–ಎಂದರು, ದೇವಾಲಯವನ್ನು ತೋರಿಸಲು ನನ್ನೊಂದಿಗೆ ಬಂದ ಶ್ರೀಕಂಠಶಾಸ್ತ್ರಿಗಳು. ಅಮ್ಮನವರ ಪೀಠದ ಬಳಿಯಿದ್ದ ಸಣ್ಣ ಲೋಹದ ಮೂರ್ತಿಯನ್ನು ತೋರಿಸಿ–

“ಅದೇ ವೆಂಕಟಸುಬ್ಬಯ್ಯನವರು, ಅವರ ವಂಶದವರು ಪೂಜಿಸಿದ ಅಮ್ಮನವರ ಸ್ವರ್ಣವಿಗ್ರಹ. ಆಕೆಗೇ ವೆಂಕಟಸುಬ್ಬಯ್ಯನವರು ತಮ್ಮ ನಾಲಗೆಯನ್ನು ಅರ್ಪಿಸಿದರು!”–ಎಂದರು.

ಅವರು ಹೇಳಿದುದನ್ನು ಕೇಳಿ ಆ ವಿಗ್ರಹವನ್ನು ನೋಡಿದೆ. ನೋಡಿ ಮೈ ರೋಮಾಂಚನವಾಯಿತು. ಈ ದರ್ಶನದಿಂದ ನನ್ನ ಬಾಳು ಪುನೀತವಾದಂತೆ ತೋರಿ, ಹಾಗೇ ದೇವಿಗೆ ಅಡ್ಡಬಿದ್ದೆ.

ಬಳಿಕ ಶ್ರೀಕಂಠಶಾಸ್ತ್ರಿಗಳು ಅಮ್ಮನವರಿಗೆ ಪೂಜೆ, ಅಭಿಷೇಕ ಮಾಡಿ, ಲಲಿತಾಸಹಸ್ರನಾಮ ಹೇಳಿ ಸಹಸ್ರನಾಮಪೂಜೆ ಮಾಡಿ, ಮಂಗಳಾರತಿ ಎತ್ತಿ, ತೀರ್ಥಪ್ರಸಾದ ಕೊಟ್ಟರು. ಪೂಜೆ ಮುಗಿದರೂ ನನಗೆ ದೇವಾಲಯವನ್ನು ಬಿಟ್ಟು ಹೊರಬರಲು ಮನಸ್ಸಿರಲಿಲ್ಲ. ಗುಡಿಯಲ್ಲಿರುವಷ್ಟು ಹೊತ್ತೂ ನನ್ನ ಮನಸ್ಸು ನನ್ನ ಸ್ವಾಧೀನದಲ್ಲಿರಲಿಲ್ಲ. ವೆಂಕಟಸುಬ್ಬಯ್ಯನವರು ಮಲಗಿದೆಡೆಯಲ್ಲಿ ಮಲಗಿ ದೇವಿಗೆ ನಮಸ್ಕಾರಮಾಡಿದೆ. ಆ ಪುಣ್ಯಶಿಲೆಯ ಸೋಂಕಿಗೆ ಮೈ ಪುಲಕಿತವಾಯಿತು. ಕಾಲಗರ್ಭದಲ್ಲಿ ಎಂದೋ ಕರಗಿಹೋದ ನಾದದ ಸುಳಿ ಮತ್ತೆ ನನ್ನ ಮಿದುಳಿನಲ್ಲಿ ಮೊರೆಯಿತು. ಮಂಗಳಾರತಿಯ ಗಂಟೆಯ ಓಂಕಾರನಾದದಲ್ಲಿ ಮೈ ತೇಲಾಡಿತು. ಕನಸು ಕಾಣುತ್ತಾ ದೇವಾಲಯದಿಂದ ಹೊರಬಂದೆ. ಹೊರಬಂದು ಮತ್ತೊಮ್ಮೆ ದೇವಾಲಯದ ಮೇಲೆ ಕಣ್ಣಾಡಿಸಿದೆ. ಅದನ್ನು ನೋಡನೋಡುತ್ತಾ, ಮನಸ್ಸಿನಲ್ಲೊಂದು ಯೋಚನೆ ಮೂಡಿತು. ಇಲ್ಲೊಂದು ವೆಂಕಟಸುಬ್ಬಯ್ಯನವರ ವೃಂದಾವನವಾಗಿ, ಈ ದೇವಾಲಯ ಸಂಗೀತಭಕ್ತರ ಯಾತ್ರಾಸ್ಥಳವಾದರೆ ಎಷ್ಟು

ಸೊಗಸು, ಎನಿಸಿತು. ಪಾಶ್ಚಾತ್ಯ ದೇಶಗಳಲ್ಲಿ ಬಿಠೋವೆನ್, ಮೊಝಾರ್ಟ್, ವ್ಯಾಗ್ನರ್ ಮೊದಲಾದ ನಾದೋಪಾಸಕರ ಸಮಾಧಿಗಳು ಅಂಥ ಯಾತ್ರಾ ಸ್ಥಳವಾಗಿವೆ ಎಂದು ಕೇಳಿದ್ದೆ. ಆದರೆ ನಮ್ಮ ದೇಶದಲ್ಲಿ ಅದೆಲ್ಲಾ ಎಲ್ಲಿ? ದೇವಾಲಯ ಬಿದ್ದುಹೋದ ಪೌಳಿಯಲ್ಲಿ ನಿರಾತಂಕವಾಗಿ ಮೇಯುತ್ತಿದ್ದ ಕತ್ತೆ, ಏನೋ ಕನಸು ಕಾಣುತ್ತಿದ್ದ ನನ್ನನ್ನು ಕಂಡು ಅಣಕಿಸಿತು....

ಊಟದ ಶಾಸ್ತ್ರ ಮುಗಿಸಿ, ಇನ್ನೂ ಬಿಸಿಲಿರುವಾಗಲೇ ಮತ್ತೆ ಗಾಡಿ ಕಟ್ಟಿಸಿ, ಬಿಡಲಾರದೆ ತೊರೆಯೂರನ್ನು ಬಿಟ್ಟು ಹಿರಿಯೂರಿಗೆ ಹೊರಟೆ. ಹಳ್ಳಿಯನ್ನು ಬಿಟ್ಟ ಗಾಡಿ ಅಷ್ಟುದೂರ ಹೋದಮೇಲೆ, ಯಾರೋ ಕೂಗಿದಂತೆ ಕೇಳಿಸಿ, ತಿರುಗಿ ನೋಡಿದೆ. ಕೈಯಲ್ಲಿ ಏನೋ ಹಿಡಿದ ಗೋವಿಂದಯ್ಯ ನನ್ನ ಕಡೆಯೇ ಓಡುತ್ತಾ ಬಂದು–

"ನೋಡಿ. ಇದು ವೆಂಕಟಸುಬ್ಬಯ್ಯನೋರ ಚಿತ್ರ" ಎಂದರು.

ಆ ಮಾತು ಕೇಳಿಯೇ ಮಣ್ಣಿನಲ್ಲಿ ಆಡುತ್ತಿರುವಾಗ ಬಂಗಾರದ ಗಿಣಿ ಕಂಡಂತಾಯಿತು ನನಗೆ. ನಡುಗುವ ಕೈಗಳಿಂದ ಅದನ್ನು ಹಿಡಿದು, ಅದಕ್ಕೆ ಸುತ್ತಿದ ಕಾಗದವನ್ನು ಸರಿಸಿ ನೋಡಿದೆ.

ಹಲಗೆಯ ಮೇಲೆ ಬರೆದ ಹಳೆಯ ಕಾಲದ ತೈಲಚಿತ್ರ. ಬಹು ಹಳೆಯದೆಂದು ನೋಡಿದ ಕೂಡಲೇ ಕಾಣುತ್ತಿತ್ತು. ಅಲ್ಲಲ್ಲಿ ಗೆದ್ದಲು ತಿಂದ ಗುರುತು ಇತ್ತು. ಅದಕ್ಕೆ ಕಟ್ಟಿದ ಜಾಡದ ಪೊರೆಯನ್ನೂ ಒರೆಸಿರಲಿಲ್ಲ.

ದಟ್ಟ ಕೆಂಪುಬಣ್ಣದ ಹಿನ್ನೆಲೆಯ ಮೇಲೆ ಚಿತ್ರ ಬಿಡಿಸಿದ್ದರು. ಭವ್ಯ ವ್ಯಕ್ತಿ, ತೇಜಃಪುಂಜವಾದ ಕಣ್ಣುಗಳು, ಅಗಲವಾದ ಮುಖ, ದಟ್ಟವಾದ ಹುಬ್ಬು, ನೀಳವಾದ ಚೂಪಾದ ಮೂಗು, ದಟ್ಟವಾದ ಗಿರಿಜಾ ಮೀಸೆಯ ಮರೆಯಲ್ಲಿ ಕಾಣುವ ತುಂಬುತುಟಿ. ಹಸಿರು ಜರತಾರಿಯ ರುಮಾಲು ಇಟ್ಟು, ಜರತಾರಿಯ ಹೂಗೆಲಸ ಮಾಡಿದ ಬಿಳಿಯ ಬಗಲುಕಸೆ ಅಂಗಿ ತೊಟ್ಟು ಪದ್ಮಾಸನಹಾಕಿ ಕುಳಿತಿದಾನೆ. ಮುಂದೆ ತಾಂಬೂಲದ ತಟ್ಟೆ. ಆತನ ಹಿಂಬದಿಯಲ್ಲಿ ಒಬ್ಬ ಹುಡುಗನಂಥವನು ತಂಬೂರಿ ಹಿಡಿದು ಕುಳಿತಿದ್ದಾನೆ. ಆ ಚಿತ್ರದ ಕೆಳಗೆ, ಹಳೆಯ ಕಾಲದ ಮೋಡಿ ಅಕ್ಷರದಲ್ಲಿ 'ಭೈರವಿ ವೆಂಕಟಸುಬ್ಬಯ್ಯ' ಎಂದು ಬರೆದಿತ್ತು. ಅದರ ಇದಿರುಬದಿಯಲ್ಲಿ ಪಾಳೆಯಗಾರ ಮದಕರಿನಾಯಕರು. ತಲೆಯಲ್ಲಿ ಮುತ್ತಿನ ತುರಾಯಿ ಹಾಕಿದ ಮುಕುಟವಿಟ್ಟು, ನೀಲಿ ಜರತಾರಿಯ ಅಂಗರೇಖಿ ಧರಿಸಿ, ಸೊಂಟದಲ್ಲಿ ಕರ್ನಾಟಕ ಬಾಕು ಇಟ್ಟುಕೊಂಡು, ವೀರಮಂಡಿಯಲ್ಲಿ ಕುಳಿತಿದ್ದಾರೆ ಪಾಳೆಯಗಾರರು. ಅವರ ಕಣ್ಣು ಅರೆಮುಚ್ಚಿದ್ದರೂ ಗಲ್ಲಾ ಮೀಸೆ ನೋಡುವವರಿಗೆ ಭಯವನ್ನುಂಟು



ಮಾಡುವಂತಿದೆ. ಅವರ ಬೆನ್ನು ಬದಿಯಲ್ಲಿ ಚಾಮರಧಾರಿಯಾದ ದಾಸಿ. ಛಾವಣಿಯಿಂದ ಗುಳೋಪು ದೀಪವೊಂದು ತೂಗಾಡುತ್ತಿದೆ. ಇವರಿಬ್ಬರ ನಡುವೆ ಹಿನ್ನೆಲೆಯಲ್ಲಿ ದಟ್ಟವಾದ ಕೆಂಪಿನ ಬಂಗಾರದ ಬಣ್ಣದ ಅಂಚು ಕಟ್ಟಿದ್ದಾರೆ. ಸುಂದರವಾದ ಚಿತ್ರ ಅದು.

ಅದನ್ನು ನೋಡಿ ಗೋವಿಂದಯ್ಯನಿಗೆ, "ವೆಂಕಟಸುಬ್ಬಯ್ಯನವರ ಕಥೆ ಹೇಳಿ ಕಿವಿಯನ್ನು ಸಂತೋಷಪಡಿಸಿದ್ದೇ ಅಲ್ಲದೆ, ಅವರನ್ನೇ ತೋರಿಸಿ ಕಣ್ಣನ್ನು ಪುನೀತಮಾಡಿದಿರಿ, ಸ್ವಾಮಿ. ನಿಮಗೆ ನಾನು ಎಷ್ಟು ಕೃತಜ್ಞತೆಯನ್ನರ್ಪಿಸಿದರೂ ಸಾಲದು. ಇವತ್ತು ನನಗೆ ದೇವರನ್ನೇ ತೋರಿಸಿದ ಪುಣ್ಯ ಬಂತು ನಿಮಗೆ" ಎಂದೆ.

"ಅದೇ, ನೀವು ಅವರ ಕಥೆ ಕೇಳಬೇಕೂಂತಲೇ ಇಲ್ಲೀವರೆಗೂ ಬಂದ್ರಿ. ಈ ಚಿತ್ರಾನೂ ನಿಮಗೆ ಬೇಕೇನೋ, ಕೊಡೋಣಾಂತ ತಂದೆ. ಮನೇಲಿದ್ದು ಗೆದ್ದಲು ಪಾಲಾಗೋಕಿಂತ, ನಿಮ್ಮಂಥೋರ ಹತ್ತಿರ ಇದ್ದರೆ ಒಳ್ಳೇದು–ಚೆನ್ನಾಗಿ ಇಟ್ಟುಕೋತೀರಿ. ಬೇಕೇನು?"

ಆ ಮಾತನ್ನು ಕೇಳಿ ನನಗೆ ನನ್ನ ಕಿವಿಯನ್ನೇ ನಂಬುವುದು ಅಸಾಧ್ಯವಾಯಿತು. ಎಲ್ಲೋ ಕನಸಿನಲ್ಲಿ ಆ ಪ್ರಶ್ನೆ ಕೇಳಿದಂತಾಯಿತು. ಆ ಚಿತ್ರವನ್ನು ಆತ ನನಗೆ ಕೊಡುವುದು ನಿಜವೇ? ಅದನ್ನು ಪಡೆಯುವ ಭಾಗ್ಯವಿದೆಯೇ ನನಗೆ? ಉತ್ತರ ಕೊಡಲು ಮಾತು ತೋಚದೆ, ತಲೆಹಾಕಿ ಬೇಕೆಂದು ಸೂಚಿಸಿದೆ.

"ಹಾಗಾದರೆ, ಇದಕ್ಕೆ ಎಷ್ಟು ಕೊಡ್ತೀರಿ?"

ಆ ಚಿತ್ರದ ವಿಷಯದಲ್ಲಿ ವ್ಯಾಪಾರದ ಮಾತು ಕೇಳಿ ನನ್ನ ಕರುಳು ಕೊಯ್ದಂತಾಯಿತು. ಇದಕ್ಕೆ ಬೆಲೆ ಕಟ್ಟಲು ಶಕ್ತನೇ ನಾನು?

"ನೀವೇ ಹೇಳಿ ಎಷ್ಟು ಕೊಡಬೇಕು?" ನೂರು ಕೇಳುವನೋ, ಐವತ್ತು ಕೇಳುವನೋ ಎಂದು ಗಾಬರಿಯಾದರೂ ಕೇಳಿದೆ.

"ಕಥೆಗೆ ಐದು ಕೊಟ್ರಿ. ಇದಕ್ಕೆ ಹತ್ತು ಕೊಡಿ."

ಜೇಬಿನಲ್ಲಿ ಕೈಹಾಕಿ ಇದ್ದಷ್ಟು ಹಣ ತೆಗೆದು ಎಣಿಸಿದೆ. ಎರಡು ರೂಪಾಯಿ ಚಿಲ್ಲರೆ ಇತ್ತು.

"ಅಷ್ಟು ಹಣ ನನ್ನಲ್ಲಿಲ್ಲ. ಚಿತ್ರ ನಿಮ್ಮಲ್ಲಿರಲಿ. ಹಣ ಕಳಿಸಿ ತರಿಸಿಕೊಳ್ಳುತ್ತೇನೆ" ಎಂದೆ. ಆದರೆ ನನ್ನ ಮಾತು ಆತನಿಗೆ ನಂಬಿಕೆಯಾಗಲಿಲ್ಲ. ಸಂಶಯದಿಂದ ನನ್ನ ಮುಖ ನೋಡಿದ. ಚಿತ್ರಕ್ಕೆ ಹಣ ಕೊಡಲು ಮನಸ್ಸಿಲ್ಲದೆ ಆ ಮಾತು ಹೇಳಿದೆನೇನೋ ಎಂದು ಆತನಿಗೆ ಅನುಮಾನವಾಗಿರಬೇಕು.

"ಈಗೆಷ್ಟಿದೆ ನಿಮ್ಮ ಹತ್ತಿರ?"

"ಎರಡು ರೂಪಾಯಿ ಚಿಲ್ಲರೆ."

"ಅದನ್ನಿಲ್ಲಿ ಕೊಡಿ" ಎಂದ. ಇದ್ದ ಹಣವನ್ನು ಆತನ ಕೈಯಲ್ಲಿ ಹಾಕಿದೆ. ರೂಪಾಯಿ, ಆಣೆ, ಮೂರುಕಾಸನ್ನು ಒಂದೊಂದಾಗಿ ಎಣಿಸಿಕೊಂಡು "ಇಷ್ಟೇನೆ ಇರೋದು?" ಎಂದ. ಮತ್ತೆ ಜೇಬಿನಲ್ಲಿ ತಡಕಾಡಿದೆ. ಎಲ್ಲೋ ಸೇರಿಕೊಂಡಿದ್ದ ಮೂರುಕಾಸು ಸಿಕ್ಕಿತು. ಅದನ್ನೂ ಆತ ಬಿಡಲಿಲ್ಲ. ಕೈಯಿಂದಲೇ ಕಸಿದುಕೊಂಡು–

"ಇಷ್ಟಕ್ಕೇ ಆಗಲೇಳಿ. ಮತ್ತೆ ಅದು ನನಗೆ ಬೇಡ ಅಂತ ಬಂದರೆ ಹಣ ವಾಪಸ್ಸು ಹುಟ್ಟೊಲ್ಲ, ನಮಸ್ಕಾರ" ಎಂದು ಹೇಳಿ, ನಿಧಾನವಾಗಿ ಹೋದರೆ ಮತ್ತೆ ನಾನು ಮನಸ್ಸು ಬದಲಾಯಿಸಿ 'ಹಣ ಕೊಡಿ' ಎಂದು ಹಿಂದಕ್ಕೆಲ್ಲಿ ಕರೆಯುತ್ತೇನೋ ಎಂಬ ಗಾಬರಿಯಿಂದಲೆಂಬಂತೆ ಹಳ್ಳಿಯ ಕಡೆ ಓಡಿದ.

ಬಾಳೆಯ ತೋಟಗಳ ನಡುವೆ ಗಡಗಡ ಸದ್ದು ಮಾಡುತ್ತಾ ಗಾಡಿ ಮುಂದೆ ನಡೆಯಿತು. ತೋಟದ ಸಾಲಿನ ತಿರುವು ರಸ್ತೆಯಲ್ಲಿ ಗಾಡಿ ತಿರುಗಿ ಊರು ಕಣ್ಣುಮರೆಯಾಯಿತು. ಮಬ್ಬಾದ ಬೆಳಕಿನಲ್ಲಿ ಚಿತ್ರವನ್ನು ದಿಟ್ಟಿಸಿ ನೋಡಿದೆ.

'ನಿಮ್ಮ ಬಾಳಿಗೆ ನಾವು ಕೊಡುವ ಬೆಲೆ ಇಷ್ಟೇನೆ?' ಎನಿಸಿತು.

ನಿಟ್ಟುಸಿರಂತೆ ಗಾಳಿ ಭಾರವಾಗಿ ಸುಳಿಯಿತು, ಹಗಲು ಮುಗಿದು ಇರುಳ ಹೆಜ್ಜೆಯಿಡುವ ಮುಗಿಲಿನಲ್ಲಿ.

## ೧೭

ಚಿತ್ರದುರ್ಗವನ್ನು ಸೇರಿ ರಾಘವೇಂದ್ರರಾಯರನ್ನು ಕಂಡು, ನಾನು ಸಂಗ್ರಹಿಸಿದ ವೆಂಕಟಸುಬ್ಬಯ್ಯನವರ ಕಥೆಯನ್ನು ಹೇಳಿ, ತೊರೆಯೂರಿನಿಂದ ತಂದ ವೆಂಕಟಸುಬ್ಬಯ್ಯನವರ ಚಿತ್ರವನ್ನು ಅವರಿಗೆ ಒಪ್ಪಿಸಿದೆ.

ನಾನು ಹೇಳಿದುದನ್ನು ಕೇಳಿ ರಾಘವೇಂದ್ರರಾಯರ ಕಣ್ಣಿನಲ್ಲಿ ನೀರು ಹರಿಯಿತು. ಸ್ವಲ್ಪಹೊತ್ತು ಸುಮ್ಮನಿದ್ದು ತೇವವಾದ ಕಣ್ಣನ್ನು ಒರೆಸಿಕೊಂಡು ಗಾರಾದ ಧ್ವನಿಯಲ್ಲಿ ಹೇಳಿದರು:

"ನೀನು ಕೇಳಿದ್ದನ್ನೆಲ್ಲ ಒಂದು ಕಥೆಯಾಗಿ ಬರೆದುಬಿಡು, ಸುಬ್ರಹ್ಮಣ್ಯ–ನಿನಗೆ ಬರೆಯುವ ಶಕ್ತಿ ಇರುವುದು ಸಾರ್ಥಕವಾಗುತ್ತದೆ."

ಆ ಮಾತು ಕೇಳಿ ನನಗೆ, ಬೆಟ್ಟವನ್ನು ಹೊತ್ತುಕೋ ಎಂದು ಹೇಳಿದಷ್ಟು ಗಾಬರಿಯಾಯಿತು.

"ನನಗೆ ಅಷ್ಟು ಶಕ್ತಿಯಿದೆಯೇ?"



"ಇದೆಯೋ ಇಲ್ಲವೋ? ವೆಂಕಟಸುಬ್ಬಯ್ಯನವರ ಹೆಸರು ಸ್ಮರಿಸಿ ಬರಿ. ಅವರ ಶಕ್ತಿ ನಿನ್ನಿಂದ ಬರೆಸುತ್ತೆ"–ಎಂದರು.

"ಹಾಗೇ ಆಗಲಿ" ಎಂದು, ಮನೆಗೆ ಬಂದವನು, ವೆಂಕಟಸುಬ್ಬಯ್ಯನವರ ಭವ್ಯಭಾವೋದ್ರೇಕ ಹೃದಯದಲ್ಲಿನ್ನೂ ಹಸಿಯಾಗಿರುವಾಗಲೇ ಬರೆಯಲು ಕುಳಿತೆ–ಆದದ್ದಾಗಲಿ ಎಂದು.

ಅದೇ ನೀವು ಇದುವರೆಗೂ ಓದಿದ ಕಥೆ–

ನನ್ನ ಬರಡು ಲೇಖಣಿ ಮೂಡಿಸಿದ ವೆಂಕಟಸುಬ್ಬಯ್ಯನವರ ಭವ್ಯಬಾಳಿನ ದಿವ್ಯಗೀತೆ.

ಬರೆದಾಗ ನಾನು ಮಾಡಿದ ಹಾಗೆ, ಓದಿದ ನಿಮ್ಮ ಕಣ್ಣಿನಿಂದಲೂ ಒಂದು ಹನಿ ಉರುಳಿದರೆ–ಅದೇ ದರಿದ್ರ ವರ್ತಮಾನಕಾಲ, ಭವ್ಯ ಗತಕಾಲಕ್ಕೆ ನೀಡುವ ಅಣಿಮುತ್ತಿನ ಕಾಣಿಕೆ, ಅದಕ್ಕಿಂತ ಹೆಚ್ಚು ಅವರು ಬಯಸುವುದಿಲ್ಲ; ಅದಕ್ಕಿಂತ ಹೆಚ್ಚು ಕೊಡುವ ಶಕ್ತಿಯೂ ನಮಗಿಲ್ಲ.

●